ಬುಧವಾರ, ಮೇ 10, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಲೈಯಿಂಗ್ ಕಿಸ್...
ದೆಹಲಿಯಲ್ಲಿ 'ಮ್ಯೂಸಿಕ್ ಸ್ಕೂಲ್' ಸಿನಿಮಾ ಪ್ರಚಾರದ ವೇಳೆ ಬಾಲಿವುಡ್ ನಟಿ ಶ್ರಿಯಾ ಸರಣ್ ಫ್ಲೈಯಿಂಗ್ ಕಿಸ್ ಮಾಡಿದರು



ಚುನಾವಣಾ ಆಯೋಗದ ನಡೆಗೆ ಅಸಮಾಧಾನ • ಓಆರ್‌ಎಸ್ ವಿತರಣೆ ಸೇರಿ ವಿವಿಧ ಜವಾಬ್ದಾರಿ

ಚುನಾವಣೆ: 'ಆಶಾ'ಗಳಿಗಿಲ್ಲ ಗೌರವಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆ ಕರ್ತವ್ಯಕ್ಕೆ ನಿಯೋಜಿಸಿಕೊಂಡಿರುವ ಕರ್ನಾಟಕ ರಾಜ್ಯ ಚುನಾವಣಾ ಆಯೋಗ, ತಮಗೆ ಗೌರವಧನ ನಿಗದಿಪಡಿಸಿಲ್ಲ ಎಂದು 'ಆಶಾ' ಕಾರ್ಯಕರ್ತೆಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವಿಧಾನಸಭೆ ಚುನಾವಣೆ ಪ್ರಯುಕ್ತ ಎಲ್ಲ ಇಲಾಖೆಗಳ ನೌಕರರು, ಶಿಕ್ಷಕರು, ಶುಶ್ರೂಷಕರು ಸೇರಿದಂತೆ ಸಿಬ್ಬಂದಿಯನ್ನು ಚುನಾವಣೆ ಕರ್ತವ್ಯಕ್ಕೆ ನಿಯೋಜಿಸಿ, ಗೌರವಧನ ನಿಗದಿಪಡಿಸಲಾಗಿದೆ.

ರಾಜ್ಯದಲ್ಲಿ 42 ಸಾವಿರ ಆಶಾ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಿದ್ದು, ಇವರನ್ನು ಮತದಾನ ಕೇಂದ್ರಗಳಲ್ಲಿ ಆರೋಗ್ಯ ಸಹಾಯಕರನ್ನಾಗಿ ನೇಮಿಸಿಕೊಳ್ಳಲಾಗಿದೆ. ಬೆಳಿಗ್ಗೆ 6ರಿಂದ ಸಂಜೆ 6 ಗಂಟೆಯವರೆಗೆ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದೆ. ತಮ್ಮ ವ್ಯಾಪ್ತಿಯಲ್ಲಿ ಮತಗಟ್ಟೆ ಇಲ್ಲದಿದ್ದರೆ ಸಮೀಪದ ಮತಗಟ್ಟೆಯಲ್ಲಿ ಕರ್ತವ್ಯ ನಿರ್ವಹಿಸುವಂತೆ ಆದೇಶಿಸಲಾಗಿದೆ.

ಆಶಾ ಕಾರ್ಯಕರ್ತೆಯರನ್ನು ಚುನಾವಣೆ ಕರ್ತವ್ಯಕ್ಕೆ ನಿಯೋಜಿಸಿಕೊಳ್ಳುವ ಬಗ್ಗೆ ಜಿಲ್ಲಾ ಆರೋಗ್ಯಾಧಿಕಾರಿಗಳೂ ಆದೇಶ ಹೊರಡಿಸಿದ್ದಾರೆ. ಮತಗಟ್ಟೆ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುವ ಅವರಿಗೆ, ಅನಾರೋಗ್ಯ ಸಮಸ್ಯೆ ಇರುವವರಿಗೆ ಓಆರ್‌ಎಸ್ ವಿತರಣೆ ಸೇರಿ ವಿವಿಧ ಜವಾಬ್ದಾರಿ ನೀಡಲಾಗಿದೆ.

ಗೌರವಧನಕ್ಕೆ ಸಂಬಂಧಿಸಿ ಪಟ್ಟಿ ಮಾಡಲಾದ ಸಿಬ್ಬಂದಿಯಲ್ಲಿ ಆಶಾ ಕಾರ್ಯಕರ್ತೆಯರನ್ನು ಆಯೋಗ ಸೇರಿಸಿಲ್ಲ. ಈ ಬಗ್ಗೆ ಅಸಮಾಧಾನಗೊಂಡ ಅವರು, ಮುಖ್ಯ ಚುನಾವಣಾಧಿಕಾರಿಗೆ ಪತ್ರ ಬರೆದಿದ್ದರು.

ಸೇವೆ ಕಡೆಗಣನೆ: 'ಈ ಹಿಂದೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಚುನಾವಣೆ ಕರ್ತವ್ಯಕ್ಕೆ ₹ 700 ನಿಗದಿಪಡಿಸಲಾಗಿತ್ತು. ಈ ಬಾರಿ, ಯಾವುದೇ ಗೌರವಧನ ನೀಡುತ್ತಿಲ್ಲ. ಈ ಬಗ್ಗೆ ಚುನಾವಣಾ ಅಧಿಕಾರಿಗೆ ಪತ್ರ ಬರೆದರೂ ಸ್ಪಂದಿಸಿಲ್ಲ' ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ ಬೇಸರ ವ್ಯಕ್ತಪಡಿಸಿದರು.

'ಮತದಾನದ ದಿನ ಬೆಳಿಗ್ಗೆ 6 ಗಂಟೆಗೆ ಮತಗಟ್ಟೆಯಲ್ಲಿ ಹಾಜರಿರುವಂತೆ ಆರೋಗ್ಯಾಧಿಕಾರಿಗಳು ಸೂಚಿಸಿದ್ದಾರೆ. ಗೌರವಧನದ ಬಗ್ಗೆ ಕೇಳಿದರೆ ಕೆಲಸದಿಂದ ವಜಾ ಮಾಡುವುದಾಗಿ ಬೆದರಿಕೆ ಹಾಕುತ್ತಾರೆ' ಎಂದು ತಿಳಿಸಿದರು.

ದಿನಭತ್ಯೆ, ಸಾರಿಗೆ ವೆಚ್ಚಕ್ಕೆ ಸೂಚನೆ

ಆಶಾ ಕಾರ್ಯಕರ್ತೆಯರ ಕಾರ್ಯನಿರ್ವಹಣೆಯನ್ನು ಸೀಮಿತಗೊಳಿಸುವ ಬಗ್ಗೆ ಈ ಹಿಂದೆ ಆರೋಗ್ಯ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದರು. ಆಶಾ ಕಾರ್ಯಕರ್ತೆಯರನ್ನು ಅವರ ಕಾರ್ಯಕ್ಷೇತ್ರ ಹೊರತುಪಡಿಸಿ, ಬೇರೆ ಕ್ಷೇತ್ರಗಳಿಗೆ ನಿಯೋಜಿಸಬಾರದು ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದ್ದರು.

ಆದರೆ, ಈಗ ಬೇರೆ ಕ್ಷೇತ್ರಗಳಿಗೂ ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಯಾವುದಾದರೂ ಆರೋಗ್ಯ ಸಂಬಂಧಿ ಸೃಜನಶೀಲ ಚಟುವಟಿಕೆಗಳನ್ನು ರೂಪಿಸಿದಾಗ, ಆ ಚಟುವಟಿಕೆಗಳಿಗೆ ಆಶಾ ಕಾರ್ಯಕರ್ತೆಯರನ್ನು ನಿಯೋಜಿಸಿದರೆ ದಿನಭತ್ಯೆ, ಸಾರಿಗೆ ವೆಚ್ಚ ನೀಡಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿತ್ತು. ಆದರೆ, ಈಗ ಚುನಾವಣೆ ಕರ್ತವ್ಯಕ್ಕೆ ಗೌರವಧನ ನೀಡದಿರುವುದು ಆಕ್ರೋಶಕ್ಕೆ ಕಾರಣವಾಗಿದೆ.



ಆಶಾ ಕಾರ್ಯಕರ್ತೆಯರು



ಆಶಾ ಕಾರ್ಯಕರ್ತೆಯರಿಗೆ ಗೌರವಧನ ಒದಗಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೇವೆ. ನಿಯಮದ ಪ್ರಕಾರ ಅವರಿಗೆ ಸಂದಾಯವಾಗಲಿದೆ

ಮನೋಜ್ ಕುಮಾರ್ ಮೀನಾ
ಮುಖ್ಯ ಚುನಾವಣಾಧಿಕಾರಿ

ಮತದಾರರಿಗೆ ಕೋಳಿ ಹಂಚಿಕೆ

ಪ್ರಜಾವಾಣಿ ವಾರ್ತೆ

ವಿಜಯಪುರ (ದೇವನಹಳ್ಳಿ): ವಿಧಾನಸಭೆ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ತೆರೆ ಬಿದ್ದಿರುವ ಬೆನ್ನಲ್ಲೇ ಮತದಾರರ ಮನವೊಲಿಕೆಗೆ ಮನೆ, ಮನೆಗೆ ತೆರಳುತ್ತಿರುವ ವಿವಿಧ ರಾಜಕೀಯ ಪಕ್ಷಗಳ ಕಾರ್ಯಕರ್ತರು, ಬೆಂಬಲಿಗರು ಕರಪತ್ರಗಳ ಜೊತೆಗೆ ಕೋಳಿಗಳನ್ನು ವಿತರಿಸುತ್ತಿದ್ದಾರೆ.

ಮತ ಹಾಕಿದ ನಂತರ ಕೋಳಿ, ಕುರಿ ಮಾಂಸ ಖರೀದಿಸಲು ಕೆಲವರು ಮನೆ, ಮನೆಗೆ ಮುಂಗಡವಾಗಿ ಟೋಕನ್ ವಿತರಿಸುತ್ತಿದ್ದಾರೆ. ಇನ್ನೂ ಕೆಲವೆಡೆ ಮಹಿಳಾ ಮತದಾರರಿಗೆ ರಹಸ್ಯವಾಗಿ ಮೂಗುತಿ, ಓಲೆ ವಿತರಿಸುತ್ತಿರುವ ಸುದ್ದಿಗಳಿವೆ.

ಉಡುಗೊರೆ ವಿತರಿಸಿದ ನಂತರ ಮತದಾರರಿಂದ ಭಾಷೆ ಪಡೆಯಲು ಪಕ್ಷದ ಕಾರ್ಯಕರ್ತರು ಎಲೆ, ಅಡಿಕೆ ಹಾಗೂ ಹಾಲಿನ ಮೇಲೆ ಪ್ರಮಾಣ ಮಾಡಿಸಿಕೊಳ್ಳುತ್ತಿದ್ದಾರೆ.



ಬುಧವಾರ ಮಳೆಯಾಗುವ ಸಾಧ್ಯತೆ ಇರುವುದರಿಂದ ಮತದಾರರನ್ನು ಮತಗಟ್ಟೆಗೆ ಕರೆದುಕೊಂಡು ಬರಲು ವಾಹನಗಳ ವ್ಯವಸ್ಥೆ ಮಾಡಲಾಗುತ್ತಿದೆ.

ಇಷ್ಟು ದಿನ ಬಹಿರಂಗ ಪ್ರಚಾರ, ಸಭೆ, ಸಮಾರಂಭಗಳಲ್ಲಿ ನಿರತರಾಗಿದ್ದ ಅಭ್ಯರ್ಥಿಗಳು ಮತ್ತು ಅವರ ಬೆಂಬಲಿಗರು ಮಂಗಳವಾರ ಬೆಳಿಗ್ಗೆನಿಂದಲೇ ವಿವಿಧ ದೇವಾಲಯಗಳ ಮೊರೆ ಹೋದರು. ದೇವಾಲಯಗಳಿಗೆ ತೆರಳಿ ಪಕ್ಷದ ಪ್ರಣಾಳಿಕೆ, ಕರಪತ್ರ ಇಟ್ಟು ಗೆಲುವಿಗಾಗಿ ಪೂಜೆ, ಮಂತ್ರ ಪಠಣದಲ್ಲಿ ನಿರತರಾಗಿದ್ದರು.

ಚಾಮುಂಡಿ ಪೂಜೆಗೆ ಖಾಸಗಿ ಕಂಪನಿ ತುಪ್ಪ: ಟೀಕೆ

ಪ್ರಜಾವಾಣಿ ವಾರ್ತೆ

ಮೈಸೂರು: ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು, ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಲು ನೀಡಿದ ಸಾಮಗ್ರಿಗಳಲ್ಲಿ ಖಾಸಗಿ ಕಂಪನಿಯ ತುಪ್ಪದ ಬಾಟಲಿ ಸೇರಿರುವುದು ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಯಾಗುತ್ತಿದೆ.

ಚಾಮುಂಡಿ ಬೆಟ್ಟಕ್ಕೆ ಮಂಗಳವಾರ ಭೇಟಿ ನೀಡಿದ್ದ ಇಬ್ಬರೂ, ಕಾಂಗ್ರೆಸ್‌ನ 'ಗ್ಯಾರಂಟಿ' ಕಾರ್ಡ್‌ಗಳನ್ನು ಮಲ್ಲಿಗೆ, ಕನಕಾಂಬರ ಹೂವಿನ ಹಾರ, ಹಣ್ಣು, ಹಾಗೂ ಸೀರೆಯೊಂದಿಗೆ ತುಪ್ಪವನ್ನು ಪೂಜಾ ತಟ್ಟೆಯಲ್ಲಿರಿಸಿದ್ದರು.

'ಯಾಕೆ ಜಿಆರ್‌ಬಿ ತುಪ್ಪ? ನಂದಿನಿ ತುಪ್ಪ ಯಾಕಿಲ್ಲ. ನಂದಿನಿ ಉಳಿಸಿ ಅಭಿಯಾನ ಕೊನೆಗೊಂಡಿತೇ' ಎಂದು 'ಸಂಭವಾಮಿ ಯುಗೇ ಯುಗೇ' ಎಂಬ ಖಾತೆದಾರರು ಟ್ವೀಟ್ ಮಾಡಿ ಟೀಕಿಸಿದ್ದಾರೆ. ಅದಕ್ಕೆ ಹಲವು ನೆಟ್ಟಿಗರು ಪ್ರತಿಕ್ರಿಯಿಸಿದ್ದಾರೆ.

ಬಿಜೆಪಿ ಅಭ್ಯರ್ಥಿಗೆ ಕಲ್ಲೇಟು; ಸುಳ್ಳು ಎಂದ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ವಿಜಯಪುರ: ತಿಕೋಟಾದಿಂದ ವಿಜಯಪುರಕ್ಕೆ ಸೋಮವಾರ ರಾತ್ರಿ ಕಾರಿನಲ್ಲಿ ಬರುವಾಗ ವಿರೋಧಿಗಳು ಕಲ್ಲೆಸೆದು, ಗಾಯಗೊಳಿಸಿದ್ದಾರೆ ಎಂದು ಬಬಲೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿಜುಗೌಡ ಪಾಟೀಲ ಆರೋಪಿಸಿದ್ದಾರೆ.

ತಲೆಗೆ ಬ್ಯಾಂಡೇಜ್ ಹಾಕಿರುವ ಹಾಗೂ ರಕ್ತಸಿಕ್ತ ಅಂಗಿಯಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಚಿತ್ರಗಳನ್ನು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡು, ಬಬಲೇಶ್ವರ ಜನರ ಆಶೀರ್ವಾದದಿಂದ ಸದ್ಯಕ್ಕೆ ಆರಾಮಗಿದ್ದೇನೆ ಎಂದು ಬರೆದುಕೊಂಡಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಬಿಜೆಪಿ ಮುಖಂಡರು, ಕಾರ್ಯಕರ್ತರು ವಿಜುಗೌಡ ಅವರನ್ನು ವಿಜಯಪುರದ ಅವರ ಮನೆಯಲ್ಲಿ ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ಬಳಿಕ ವಿಜುಗೌಡ ಅವರು ರಕ್ತಸಿಕ್ತ ಅಂಗಿ ಹಾಗೂ ತಲೆಗೆ ಹಾಕಿರುವ ಬ್ಯಾಂಡೇಜ್‌ನಲ್ಲೇ ಕ್ಷೇತ್ರದಲ್ಲಿ ಮನೆ, ಮನೆಗೆ ತೆರಳಿ ಮತಯಾಚಿಸಿದರು. ಜೊತೆಗೆ ಅಪಾರ ಸಂಖ್ಯೆಯಲ್ಲಿ ಜನರನ್ನು ಸೇರಿಸಿ, ಪ್ರಚಾರ ಸಭೆಗಳನ್ನು ನಡೆಸಿದರು.

ತನಿಖೆಗೆ ಆಗ್ರಹ: 'ಬಿಜೆಪಿ ಅಭ್ಯರ್ಥಿಯ ತಲೆಗೆ ಆಗಿರುವ ಗಾಯ, ರಕ್ತ ಸೋರುವಿಕೆ, ಚಿಕಿತ್ಸೆ ಕುರಿತು ಎಡಿಜಿಪಿ ಮಟ್ಟದ ಅಧಿಕಾರಿಗಳಿಂದ ತಕ್ಷಣ ತನಿಖೆ ನಡೆಸಿ, ನೈಜ ಆರೋಪಿಗಳನ್ನು ಪತ್ತೆ ಹಚ್ಚಬೇಕು' ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ, ಬಬಲೇಶ್ವರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಬಿ.ಪಾಟೀಲ ಅವರು ಚುನಾವಣಾ ಆಯೋಗಕ್ಕೆ ಪತ್ರ ಬರೆದು ಆಗ್ರಹಿಸಿದ್ದಾರೆ.

'ಚುನಾವಣೆ ಸಂದರ್ಭದಲ್ಲಿ ತಮ್ಮ ಪಕ್ಷದ ಕಾರ್ಯಕರ್ತರಲ್ಲಿ, ಮತದಾರರಲ್ಲಿ ಅನುಕಂಪ ಸೃಷ್ಟಿಸುವ ಉದ್ದೇಶದಿಂದ ಬಿಜೆಪಿ ಅಭ್ಯರ್ಥಿ ತಾವಾಗಿಯೇ ಮಾಡಿಕೊಂಡ ಗಾಯ ಎಂಬ ಅನುಮಾನ ಇದೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ವಿವರವಾದ ತನಿಖೆ ನಡೆಸಿ, ಸತ್ಯಾಸತ್ಯತೆ ಬಹಿರಂಗಪಡಿಸಬೇಕು' ಎಂದು ಒತ್ತಾಯಿಸಿದರು.

ತಿಕೋಟಾ, ಬಬಲೇಶ್ವರ ಪಟ್ಟಣದಲ್ಲಿ ವಿಜುಗೌಡ ಅವರು ನೂರಾರು ಸಂಖ್ಯೆಯಲ್ಲಿ ಜನರನ್ನು ಸೇರಿಸಿ, ಪ್ರಚಾರ ನಡೆಸುವ ಮೂಲಕ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ. ಬಹಿರಂಗ ಸಭೆ ತಡೆಯಲು ಹೋದ ವಿಜಯಪುರ ಗ್ರಾಮೀಣ ಡಿಎಸ್‌ಪಿ ಗಿರಿಮಲ್ಲಪ್ಪ ತಳಕಟ್ಟಿ ಅವರ ಮೇಲೆ ಬಿಜೆಪಿ ಮುಖಂಡರು ಹಲ್ಲೆ ನಡೆಸಿದ್ದಾರೆ. ಅವರ ವಿರುದ್ಧ ಚುನಾವಣಾ ಆಯೋಗ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಎಂ.ಬಿ. ಪಾಟೀಲ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಗೆ ನಿರ್ಬಂಧ: ಪ್ರಕರಣದ ಕುರಿತು ಮಾಧ್ಯಮಗಳಿಗೆ ವಿವರಣೆ ನೀಡಲು ಬಿಜೆಪಿ ಅಭ್ಯರ್ಥಿ ವಿಜುಗೌಡ ಪಾಟೀಲ ಹಾಗೂ ಈ ಬಗ್ಗೆ ಸ್ಪಷ್ಟನೆ ನೀಡಲು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಪ್ರತ್ಯೇಕ ಸುದ್ದಿಗೋಷ್ಠಿ ಆಯೋಜಿಸಿದ್ದರು. ವಿಷಯ ತಿಳಿದ ಜಿಲ್ಲಾ ಚುನಾವಣಾಧಿಕಾರಿ ವಿಜಯ ಮಹಾಂತೇಶ ಅವರು, 'ಚುನಾವಣಾ ನೀತಿ ಸಂಹಿತೆ ಅನ್ವಯ ಮತದಾನದ ಹಿಂದಿನ ದಿನ ಸುದ್ದಿಗೋಷ್ಠಿ ನಡೆಸಲು ಅವಕಾಶವಿಲ್ಲ' ಎಂದು ನಿರ್ಬಂಧ ವಿಧಿಸಿದರು. ಬಳಿಕ ಇಬ್ಬರೂ ಮುಖಂಡರು ಸುದ್ದಿಗೋಷ್ಠಿ ರದ್ದುಗೊಳಿಸಿದರು.



ವಿಜಯಪುರ ನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಿಜೆಪಿ ಅಭ್ಯರ್ಥಿ ವಿಜುಗೌಡ ಪಾಟೀಲ

ಮತ ಹಾಕಲು ಊರಿನತ್ತ ವಲಸೆ ಕಾರ್ಮಿಕರು

• ಪ್ರವೀಣ ಕುಮಾರ್ ಪಿ.ವಿ

ಮಂಗಳೂರು: ನಗರಕ್ಕೆ ನೀರು ಉಣಿಸುವ ತುಂಬೆ ಜಲಾಶಯದಲ್ಲಿ ನೀರಿನ ಸಂಗ್ರಹ ಕಡಿಮೆಯಾಗುತ್ತಿದ್ದಂತೆಯೇ ಮಹಾನಗರ ಪಾಲಿಕೆಯು ನಿರ್ಮಾಣ ಕಾಮಗಾರಿಗಳಿಗೆ ಕುಡಿಯುವ ನೀರು ಬಳಸುವುದಕ್ಕೆ ನಿರ್ಬಂಧ ಹೇರಿದೆ. ನಿರ್ಮಾಣ ಚಟುವಟಿಕೆ ಕಡಿಮೆಯಾಗಿದ್ದರಿಂದ ಹಾಗೂ ವಿಧಾನಸಭಾ ಚುನಾವಣೆಯೂ ಇರುವುದರಿಂದ, ಇಲ್ಲಿ ನೆಲೆಸಿದ್ದ ಬಹುತೇಕ ವಲಸೆ ಕಾರ್ಮಿಕರು ಊರಿನತ್ತ ಮುಖಮಾಡಿದ್ದಾರೆ.

ನಗರ ಹೊರವಲಯದ ಕಾವೂರಿನ ಜ್ಯೋತಿನಗರ, ಕುಂಜತ್ತಬೈಲ್, ಪಂಜಿಮೊಗರು, ಕೊಂಚಾಡಿ, ಬಸವನಗರ, ಮೂಡುಶೆಡ್ಡೆ, ವಾಮಂಜೂರು ಪ್ರದೇಶಗಳಲ್ಲಿ ವಲಸೆ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದು, ಅನೇಕರು ವಾರದಿಂದ ಈಚೆಗೆ ಊರಿಗೆ ಮರಳಿದ್ದಾರೆ.

'ಇಲ್ಲಿ ನಾವು ನಿರೀಕ್ಷೆ ಮಾಡಿದಷ್ಟು ಕೆಲಸ ಸಿಗುತ್ತಿಲ್ಲ. ಇಲ್ಲಿ ಜೀವನ ನಿರ್ವಹಣೆಯೂ ದುಬಾರಿ. ಮತದಾನಕ್ಕೆ ಬರುವಂತೆ ಊರಿನ ಕೆಲ ಮುಖಂಡರು ಒತ್ತಾಯಿಸುತ್ತಿದ್ದಾರೆ. ಹಾಗಾಗಿ ಊರಿಗೆ ಹೋಗುತ್ತೇವೆ. ಈಗಲಾದರೆ, ರಾಜಕೀಯ ಪಕ್ಷದವರೇ ಪ್ರಯಾಣಕ್ಕೆ ವ್ಯವಸ್ಥೆ ಮಾಡುತ್ತಾರೆ. ಕೆಲಸ ಇಲ್ಲ ಎಂದು ನಾವಾಗಿ ಊರಿಗೆ ಹೋಗಿ ಬರುವುದಾದರೆ ಏನಿಲ್ಲವೆಂದರೂ ಐದಾರು ಸಾವಿರ ಖರ್ಚಾಗುತ್ತದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ವಿಜಯಪುರ ಜಿಲ್ಲೆಯ ವಲಸೆ ಕಾರ್ಮಿಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಇಲ್ಲಿ ನೆಲೆಸಿರುವ ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಜಿಲ್ಲೆಗಳ ವಲಸೆ ಕಾರ್ಮಿಕರಲ್ಲಿ ಅನೇಕರು ಇಲ್ಲಿನ ಮತದಾರರ ಚೀಟಿಯಲ್ಲಿ ಹೆಸರು ನೋಂದಾಯಿಸಿಲ್ಲ. ಹಾಗಾಗಿ ಹೆಚ್ಚಿನವರು ಚುನಾವಣೆ ಸಂದರ್ಭದಲ್ಲಿ ಊರಿಗೆ ಮರಳುತ್ತಾರೆ. ಇಲ್ಲಿ ಕೆಲಸವೂ ಕಡಿಮೆ ಆಗಿರುವುದರಿಂದ ನಾಲ್ಕೈದು ದಿನಗಳಿಂದ ಈಚೆಗೆ ಅನೇಕರು ಊರಿಗೆ ಮರಳಿದ್ದಾರೆ' ಎಂದು ಕಲಬುರಗಿಯ ಶರಣಪ್ಪ ಹೇಳಿದರು.

'ಇಲ್ಲಿನ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸದ ಕಾರ್ಮಿಕರು ಮತದಾನಕ್ಕಾಗಿ ಊರಿಗೆ ಮರಳುತ್ತಿದ್ದು, ಒಂದು ವಾರದಿಂದ ಈಚೆಗೆ ಬಸ್‌ಗಳಲ್ಲಿ ಸೀಟೂ ಸಿಗುತ್ತಿಲ್ಲ' ಎಂದು ಬಾದಾಮಿಯ ರಂಗಪ್ಪ ತಿಳಿಸಿದರು.

ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮಂಗಳೂರು ವಿಭಾಗದಿಂದ ನಿತ್ಯ 70ಕ್ಕೂ ಅಧಿಕ ಬಸ್‌ಗಳು ಹಾಗೂ ವಾಯವ್ಯ ಕರ್ನಾಟಕ ಸಾರಿಗೆ ನಿಗಮದ 30ಕ್ಕೂ ಹೆಚ್ಚು ಬಸ್‌ಗಳು ಇಲ್ಲಿಂದ ಸಂಚರಿಸುತ್ತವೆ.

'ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಹೋಗುವ ಬಸ್‌ಗಳಲ್ಲಿ ನಮಗೆ ನಿತ್ಯ ಶೇ 70ರಷ್ಟು ಸೀಟುಗಳು ಭರ್ತಿಯಾಗುತ್ತಿರಲಿಲ್ಲ. ಆದರೆ ವಾರದಿಂದ ಈಚೆಗೆ ಬಹುತೇಕ ಎಲ್ಲ ಬಸ್‌ಗಳ ಸೀಟುಗಳೂ ಭರ್ತಿಯಾಗಿವೆ. ನಿಂತುಕೊಂಡೇ ಜನ ಪ್ರಯಾಣಿಸಿದ್ದಾರೆ' ಎಂದು ಕೆಎಸ್‌ಆರ್‌ಟಿಸಿ ಮಂಗಳೂರು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ರಾಜೇಶ್ ಶೆಟ್ಟಿ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.



ಮಂಗಳೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಬಸ್ ಏರಲು ಪ್ರಯಾಣಿಕರು ಮುಗಿಬಿದ್ದಿರುವುದು ಮಂಗಳವಾರ ಕಂಡುಬಂತು

ನಿರ್ಮಾಣ ಚಟುವಟಿಕೆ ಶೇ 50ರಷ್ಟು ಸ್ಥಗಿತ

'ಕುಡಿಯುವ ನೀರನ್ನು ನಿರ್ಮಾಣ ಚಟುವಟಿಕೆಗೆ ಬಳಸುವುದನ್ನು ನಿರ್ಬಂಧಿಸಿದ ಬಳಿಕ ಮಂಗಳೂರು ನಗರದಲ್ಲಿ ಕಟ್ಟಡ ನಿರ್ಮಾಣ ಚಟುವಟಿಕೆ ಶೇ 50ರಷ್ಟು ಸ್ಥಗಿತಗೊಂಡಿದೆ' ಎಂದು ರಿಯಲ್ ಎಸ್ಟೇಟ್ ಅಭಿವೃದ್ಧಿ ಸಂಘಟನೆಗಳ ಒಕ್ಕೂಟದ (ಕ್ರೆಡಾಯ್) ಮಂಗಳೂರು ಘಟಕದ ಚೇರ್‌ಮನ್ ಪುಷ್ಪರಾಜ್ ಜೈನ್ 'ಪ್ರಜಾವಾಣಿ'ಗೆ ತಿಳಿಸಿದರು.

'ಲಭ್ಯ ಇರುವ ನೀರನ್ನು ಜತನದಿಂದ ಬಳಸಬೇಕಿದೆ. ನಮ್ಮ ಸಂಘಟನೆಯ ಸದಸ್ಯರಿಗೂ ನಾವು ಕುಡಿಯುವ ನೀರನ್ನು ನಿರ್ಮಾಣ ಚಟುವಟಿಕೆಗೆ ಬಳಸಬಾರದು ಎಂದು ಸೂಚನೆ ನೀಡಿದ್ದೇವೆ' ಎಂದು ಅವರು ಹೇಳಿದರು.

'ಪಾಲಿಕೆಯು ನಿರ್ಮಾಣ ಚಟುವಟಿಕೆಗೆ ನೀರು ಪೂರೈಕೆ ಸ್ಥಗಿತಗೊಳಿಸಿರುವುದರಿಂದ ಕಟ್ಟಡ ನಿರ್ಮಾಣಕ್ಕೆ ಟ್ಯಾಂಕರ್ ನೀರನ್ನು ಅಥವಾ ಕೊಳವೆಬಾವಿಯ ನೀರನ್ನು ಬಳಸಬೇಕಾದ ಸ್ಥಿತಿ ಇದೆ. ಬೇಸಿಗೆಯಲ್ಲಿ ಬಹುತೇಕ ಕೊಳವೆಬಾವಿಗಳಲ್ಲಿ ಸಾಕಷ್ಟು ನೀರು ಸಿಗದು. ಟ್ಯಾಂಕರ್ ನೀರಿಗೆ ₹ 4 ಸಾವಿರಕ್ಕೂ ಹೆಚ್ಚು ದರ ವಿಧಿಸುತ್ತಾರೆ. ಅಷ್ಟು ದುಬಾರಿ ದರದ ನೀರು ತರಿಸಿ, ಕಟ್ಟಡ ಕಾಮಗಾರಿ ಮುಂದುವರಿಸಿದರೆ ನಷ್ಟ ಉಂಟಾಗುತ್ತದೆ' ಎಂದು ಗುತ್ತಿಗೆದಾರ ರಾಜೇಶ್ ತಿಳಿಸಿದರು.

'ಗುತ್ತಿಗೆದಾರರಲ್ಲಿ ಅನೇಕರು ಕಾರ್ಮಿಕರಿಗೆ ರಜೆ ನೀಡಿದ್ದಾರೆ. ನೀರಿನ ಬಳಕೆಯ ಅಗತ್ಯವಿರದ ಕೆಲಸಗಳನ್ನು ಮಾತ್ರ ಈಗ ನಿರ್ವಹಿಸಲಾಗುತ್ತಿದೆ. ರಾಜ್ಯದಲ್ಲಿ ಚುನಾವಣೆಯೂ ನಡೆಯುತ್ತಿರುವುದರಿಂದ ಉತ್ತರ ಕರ್ನಾಟಕದ ಜಿಲ್ಲೆಗಳಿಂದ ಬಂದಿರುವ ವಲಸೆ ಕಾರ್ಮಿಕರು ಊರಿಗೆ ಮರಳಿದ್ದಾರೆ' ಎಂದರು.

₹ 379 ಕೋಟಿ ಮೌಲ್ಯದ ಸ್ವತ್ತು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ನೀತಿ ಸಂಹಿತೆ ಜಾರಿಯಾಗಿದ್ದ ಮಾರ್ಚ್ 29ರಿಂದ ಮೇ 9ರ ಸಂಜೆಯವರೆಗೆ ಅಕ್ರಮ ತಡೆಗೆ ನಡೆಸಿದ ಕಾರ್ಯಾಚರಣೆಗಳಲ್ಲಿ ₹ 379.36 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಜಾಗೃತ ದಳಗಳು, ತನಿಖಾ ಠಾಣೆಗಳು ಮತ್ತು ಆದಾಯ ತೆರಿಗೆ ಇಲಾಖೆ ಅಧಿಕಾರಿ ಅಧಿಕಾರಿಗಳು ನಡೆಸಿದ ಶೋಧ ಕಾರ್ಯಾಚರಣೆಗಳಲ್ಲಿ ₹ 150.05 ಕೋಟಿ ನಗದು, ₹ 24.23 ಕೋಟಿ ಮೌಲ್ಯದ ಉಚಿತ ಕೊಡುಗೆಗಳು, ₹ 84.62 ಕೋಟಿ ಮೌಲ್ಯದ 22.57 ಲಕ್ಷ ಲೀಟರ್ ಮದ್ಯ, ₹ 23.84 ಕೋಟಿ ಮೌಲ್ಯದ 1,972.29 ಕೆ.ಜಿ. ಮಾದಕ ವಸ್ತುಗಳು, ₹ 91.96 ಕೋಟಿ ಮೌಲ್ಯದ 179.82 ಕೆ.ಜಿ. ಚಿನ್ನ ಮತ್ತು ₹ 4.63 ಕೋಟಿ ಮೌಲ್ಯದ 669.41 ಕೆ.ಜಿ. ಬೆಳ್ಳಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಚುನಾವಣಾ ಅಕ್ರಮಕ್ಕೆ ಸಂಬಂಧಿಸಿದಂತೆ ಈವರೆಗೆ 2,970 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಅಬಕಾರಿ ಕಾಯ್ದೆ ಉಲ್ಲಂಘನೆ ಆರೋಪದಡಿ 43,622 ಹಾಗೂ ಮಾದಕಸ್ತು ನಿಯಂತ್ರಣ ಕಾಯ್ದೆ ಉಲ್ಲಂಘನೆ ಆರೋಪದಡಿ 103 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಎಂ-ಸ್ಯಾಂಡ್‌ನಲ್ಲಿ ಬಚ್ಚಿಟ್ಟಿದ್ದ ₹ 50 ಲಕ್ಷ ವಶ

ಎಚ್.ಡಿ.ಕೋಟೆ: ತಾಲ್ಲೂಕಿನ ಸವ್ವೆ ಬಳಿಯ ತೋಟದ ಮನೆಯಲ್ಲಿದ್ದ ಲಾರಿಯಲ್ಲಿ ತುಂಬಿದ್ದ ಎಂ-ಸ್ಯಾಂಡ್‌ನಲ್ಲಿ ಮುಚ್ಚಿಟ್ಟಿದ್ದ ₹ 50 ಲಕ್ಷ ನಗದನ್ನು ಸಹಾಯಕ ಚುನಾವಣಾ ಅಧಿಕಾರಿ ಕುಮುದಾ ಶರತ್ ನೇತೃತ್ವದಲ್ಲಿ ಅಧಿಕಾರಿಗಳು ಮಂಗಳವಾರ ವಶಪಡಿಸಿಕೊಂಡರು.

'ಚುನಾವಣೆಗೆ ಹಂಚಲು ಹಣವನ್ನು ಸಂಗ್ರಹಿಸಲಾಗಿದೆ ಎಂಬ ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆದು ತಾಲ್ಲೂಕು ಖಜಾನೆಗೆ ಒಪ್ಪಿಸಲಾಗಿದೆ' ಎಂದು ಅವರು ತಿಳಿಸಿದರು. ತಹಶೀಲ್ದಾರ್ ಪಿ.ಎನ್. ಮಹೇಶ್ ಇದ್ದರು. ಸ್ಥಳದಲ್ಲಿ ಅಕ್ಕಪಕ್ಕದ ಗ್ರಾಮಸ್ಥರು ನೆರೆದಿದ್ದರಿಂದ ಬಿಗುವಿನ ವಾತಾವರಣ ಉಂಟಾಗಿತ್ತು.

ಬೆಂಗಳೂರಿನಲ್ಲಿ ₹ 1.90 ಕೋಟಿ ಜಪ್ತಿ

ಬೆಂಗಳೂರು: ಅಕ್ಕಿಪೇಟೆ ಮುಖ್ಯರಸ್ತೆ ಪವನ್ ಪ್ಲಾಜಾ ಕಟ್ಟಡದಲ್ಲಿರುವ ಪದ್ಮಶ್ರೀ ಫಾರ್ಮಾ ಮಳಿಗೆ ಮೇಲೆ ಸಿಸಿಬಿ ಪೊಲೀಸರು, ಚುನಾವಣಾಧಿಕಾರಿಗಳು ದಾಳಿ ಮಾಡಿದ್ದು, ₹ 1.90 ಕೋಟಿ ಜಪ್ತಿ ಮಾಡಿದ್ದಾರೆ.

'ಕಾಟನ್‌ಪೇಟೆ ಠಾಣೆ ವ್ಯಾಪ್ತಿಯ ಮಳಿಗೆಯಲ್ಲಿ ಹಣವನ್ನು ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಬಗ್ಗೆ ಮಾಹಿತಿ ಬಂದಿತ್ತು. ಗಾಂಧಿನಗರ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ತಂಡದ ಜೊತೆ ಸೇರಿ ಮಂಗಳವಾರ ಜಂಟಿ ಕಾರ್ಯಾಚರಣೆ ನಡೆಸಿ ಹಣ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ಈ ಸಂಬಂಧ ಮೂವರನ್ನು ವಶಕ್ಕೆ ಪಡೆಯಲಾಗಿದೆ. ಜಪ್ತಿ ಮಾಡಿರುವ ನಗದು ಹೆಚ್ಚಿರುವುದರಿಂದ ನಿಯಮದ ಪ್ರಕಾರ ಪ್ರಕರಣದ ತನಿಖೆಯನ್ನು ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು ನಡೆಸಲಿದ್ದಾರೆ. ಜಪ್ತಿ ಮಾಡಿರುವ ಹಣ ಹಾಗೂ ವಶಕ್ಕೆ ಪಡೆದ ಆರೋಪಿಗಳನ್ನು ಐ.ಟಿ. ಅಧಿಕಾರಿಗಳ ಸುಪರ್ದಿಗೆ ಒಪ್ಪಿಸಲಾಗಿದೆ. ಅವರೇ ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ' ಎಂದು ತಿಳಿಸಿದರು. 'ಉದ್ಯಮಿಯೊಬ್ಬರಿಗೆ ಸೇರಿದ್ದ ಹಣವೆಂದು ಗೊತ್ತಾಗಿದೆ. ಸಂಬಂಧಪಟ್ಟ ಉದ್ಯಮಿ ಹಾಗೂ ಇತರರಿಗೆ ಐ.ಟಿ ಅಧಿಕಾರಿಗಳು ನೋಟಿಸ್ ನೀಡಿ ವಿಚಾರಣೆ ನಡೆಸಲಿದ್ದಾರೆ' ಎಂದರು.

ಜೆಡಿಎಸ್ ಅಭ್ಯರ್ಥಿ ಪತ್ನಿ, ಸೊಸೆ ಐಟಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಧರ್ಮಪುರ (ಚಿತ್ರದುರ್ಗ): ಹಿರಿಯೂರು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಂ. ರವೀಂದ್ರಪ್ಪ ಅವರ ಪತ್ನಿ ಜಿ.ಪಿ. ಲತಾ ಹಾಗೂ ಸೊಸೆ ಶ್ವೇತಾ ಅವರನ್ನು ಆದಾಯ ತೆರಿಗೆ ಇಲಾಖೆ (ಐಟಿ) ಅಧಿಕಾರಿಗಳು ಮಂಗಳವಾರ ವಶಕ್ಕೆ ಪಡೆದು ವಿಚಾರಣೆಗೆ ಕರೆದೊಯ್ದಿದ್ದಾರೆ.



ಜಿ.ಪಿ.ಲತಾ

ಧರ್ಮಪುರ ಹೋಬಳಿಯ ಮುಂಗುಸುವಳ್ಳಿಯ ಮನೆಯ ಮೇಲೆ ಆರು ಅಧಿಕಾರಿಗಳ ತಂಡ ಮಧ್ಯಾಹ್ನ 2ಕ್ಕೆ ದಾಳಿ ನಡೆಸಿದೆ. ಈ ವೇಳೆ ರವೀಂದ್ರಪ್ಪ ಹಾಗೂ ಅವರ ಪುತ್ರ ಡಾ.ಸತ್ಯನಾರಾಯಣ ಮತಯಾಚನೆ ನಿಮಿತ್ತ ಹೊರ ಹೋಗಿದ್ದರು. ಮನೆ ಪರಿಶೀಲಿಸಿದ ಅಧಿಕಾರಿಗಳು ಹೆಚ್ಚಿನ ವಿಚಾರಣೆಗೆ ಲತಾ ಹಾಗೂ ಶ್ವೇತಾ ಅವರನ್ನು ಬೆಂಗಳೂರಿಗೆ ಕರೆದೊಯ್ದಿದ್ದಾರೆ.

ಏ.21ರಂದು ಜೆಡಿಎಸ್ ಅಭ್ಯರ್ಥಿ ಮನೆಯ ಮೇಲೆ ಐಟಿ ಅಧಿಕಾರಿಗಳ ತಂಡ ದಾಳಿ ನಡೆಸಿತ್ತು. ಮನೆ, ತೋಟ, ತಿಪ್ಪೆ, ಜಮೀನಿನಲ್ಲಿಯೂ ಪರಿಶೀಲನೆ ನಡೆಸಿತ್ತು. ವಿಚಾರಣೆಗೆ ಹಾಜರಾಗುವಂತೆ ಆದಾಯ ತೆರಿಗೆ ಇಲಾಖೆ ಲತಾ ಅವರಿಗೆ ನೋಟಿಸ್ ಜಾರಿ ಮಾಡಿತ್ತು. ವಿಚಾರಣೆಗೆ ಹಾಜರಾಗದಿರುವುದರಿಂದ ವಶಕ್ಕೆ ಪಡೆದಿದೆ ಎನ್ನಲಾಗಿದೆ.

ಗುಂಪು ಕಟ್ಟಿಕೊಂಡು ಆನಂದ್ ಸಿಂಗ್ ಪ್ರಚಾರ

ಹೊಸಪೇಟೆ (ವಿಜಯನಗರ): ಬಹಿರಂಗ ಪ್ರಚಾರಕ್ಕೆ ಸೋಮವಾರವೇ ತೆರೆಬಿದ್ದಿದೆ. ಆದರೆ ಸಚಿವ ಆನಂದ್ ಸಿಂಗ್ ಅವರು ತಮ್ಮ ಮಗ, ವಿಜಯನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಿದ್ಧಾರ್ಥ ಸಿಂಗ್ ಅವರೊಂದಿಗೆ ಗುಂಪು ಕಟ್ಟಿಕೊಂಡು ಮಂಗಳವಾರ ಗ್ರಾಮೀಣ ಭಾಗಗಳಲ್ಲಿ ಪ್ರಚಾರ ನಡೆಸಿದ್ದಾರೆ.

ತಾಲ್ಲೂಕಿನ ಇಪ್ಪಿತ್ತೇರಿ ಮಾಗಾಣಿ, ಕಮಲಾಪುರ ಸೇರಿದಂತೆ ಇತರೆ ಹಳ್ಳಿಗಳಲ್ಲಿ ಮಗನನ್ನು ತಮ್ಮ ಸ್ಕೂಟಿಯ ಹಿಂಬದಿಯಲ್ಲಿ ಕೂರಿಸಿಕೊಂಡು ಎಲ್ಲೆಡೆ ಓಡಾಡಿ, ಮತದಾರರನ್ನು ಭೇಟಿಯಾಗಿದ್ದಾರೆ. ಅವರೊಂದಿಗೆ ಅವರ ಅನೇಕ ಜನ ಬೆಂಬಲಿಗರು ಬೈಕ್ ನಲ್ಲಿ ಜೊತೆಗಿದ್ದರು. ಅದರ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ಸಾರ್ವಜನಿಕರಿಂದ ತೀವ್ರ ಟೀಕೆ ವ್ಯಕ್ತವಾಗಿದೆ. ಈ ಕುರಿತು ಜಿಲ್ಲಾ ಚುನಾವಣಾಧಿಕಾರಿ ಆದ ಜಿಲ್ಲಾಧಿಕಾರಿ ವೆಂಕಟೇಶ್ ಟಿ. ಅವರನ್ನು 'ಪ್ರಜಾವಾಣಿ' ಸಂಪರ್ಕಿಸಿದಾಗ, 'ವಿಷಯ ನನ್ನ ಗಮನಕ್ಕೆ ಬಂದಿದೆ. ನಮ್ಮ ಸಿಬ್ಬಂದಿಯನ್ನು ಸ್ಥಳಕ್ಕೆ ಕಳುಹಿಸಿ ತಡೆಯಲಾಗಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.



ಮಕ್ಕಳಿಗೆ ಈಗ ಬೇಸಿಗೆ ರಜೆ. ರಜಾ ಮಜಾವನ್ನು ಆನಂದದಿಂದ ಅನುಭವಿಸುತ್ತಿದ್ದಾರೆ. ಕೋವಿಡ್ ಭಯವೂ ಇಲ್ಲ. ಹೀಗಾಗಿ ಪಾಲಕರು ತಮ್ಮ ಮಕ್ಕಳನ್ನು ಬೀದಿಯಲ್ಲಿ ಮುಕ್ತವಾಗಿ ಆಟವಾಡಲು ಬಿಡುತ್ತಿದ್ದಾರೆ. ದಿನಬೆಳಗಾದರೆ ಮನೆಯ ಅಂಗಳ, ಬೀದಿಯಲ್ಲಿ ಆಟವಾಡುತ್ತ ಕಾಲ ಕಳೆಯುತ್ತಾರೆ. ಅವರ ಕ್ರಿಯಾತ್ಮಕ ಚಟುವಟಿಕೆಗಳನ್ನು ನೋಡುವುದೇ ಚೆಂದ. ಕಣ್ಣಿಗೆ ಹಬ್ಬ ಉಂಟು ಮಾಡುತ್ತದೆ. ಮಳೆಯಲ್ಲಿ ನೆನೆಯುವುದು, ನೀರಾಟ, ತೆಂಗಿನ ಗರಿಯಲ್ಲಿ ಕುಳಿತು ಎಳೆಯುವುದು ಹೀಗೆ ಹತ್ತು ಹಲವು ಚಟುವಟಿಕೆಗಳಲ್ಲಿ ಮಕ್ಕಳು ಬೇಸಿಗೆ ಕಳೆಯುತ್ತಿದ್ದಾರೆ. ಇಂಥ ಸನ್ನಿವೇಶಗಳು ಸೆರೆಯಾಗಿದ್ದು ಬಿಸಿಲ ನಗರಿ ಕಲಬುರಗಿಯಲ್ಲಿ.....

ಪ್ರಜಾವಾಣಿ ಚಿತ್ರಗಳು/ ತಾಜುದ್ದೀನ್ ಆಜಾದ್

ಅಡುಗೆ ಅನಿಲ ಸಿಲಿಂಡರ್‌ಗೆ ಡಿಕೆಶಿ ಪೂಜೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಡುಗೆ ಅನಿಲದ ಸಿಲಿಂಡರ್‌ಗೆ ಹೂಹಾರ ಹಾಕಿ, ಗಂಧದ ಕಡ್ಡಿ, ಕರ್ಪೂರ ಹಚ್ಚಿ ಮಂಗಳವಾರ ಪೂಜೆ ಮಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮತ ಚಲಾಯಿಸಲು ಬುಧವಾರ ಮತಗಟ್ಟೆಗೆ ತೆರಳುವ ವೇಳೆ ಅಡುಗೆ ಅನಿಲ ಬೆಲೆ ಏರಿಕೆ ನೆನಪಿರಲಿ ಎಂದು ಪರೋಕ್ಷವಾಗಿ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಸಿಲಿಂಡರ್‌ಗೆ ಪೂಜೆ ಸಲ್ಲಿಸಿದ ಅವರು, 2014ರ ಲೋಕಸಭಾ ಚುನಾವಣೆ ವೇಳೆ ಮತದಾನಕ್ಕೂ ಮೊದಲು ಅಡುಗೆ ಅನಿಲ ಸಿಲಿಂಡರ್‌ಗೆ ಪೂಜೆ ಸಲ್ಲಿಸಿ ತೆರಳುವಂತೆ ನರೇಂದ್ರ ಮೋದಿ ಕರೆ ನೀಡಿದ್ದನ್ನು ನೆನಪಿಸಿದರು.

ಪೂಜೆ ಸಲ್ಲಿಸಿದ ಬಳಿಕ ಪಕ್ಷದ ಮುಖಂಡರಿಗೆ ತೀರ್ಥ ನೀಡಿ ಮಾತನಾಡಿದ ಶಿವಕುಮಾರ್, 'ಪ್ರಧಾನಿಯ ಮಾರ್ಗದರ್ಶನದಂತೆ ನಾನು ಕೂಡ ರಾಜ್ಯದ ಪಕ್ಷದ ಕಾರ್ಯಕರ್ತರು ಹಾಗೂ ಜನರಿಗೆ ಈ ಸಂದೇಶ ರವಾನಿಸುತ್ತಿದ್ದೇನೆ' ಎಂದರು.

'ಕೋವಿಡ್ ಸಮಯದಲ್ಲಿ ಚಪ್ಪಾಳೆ ತಟ್ಟಿ, ಜಾಗಟೆ ಬಾರಿಸಿ ಎಂದು ಪ್ರಧಾನಿ ಹೇಳಿದ್ದರು. ಎಲ್ಲರೂ ಅದನ್ನು ಪಾಲಿಸಿದ್ದರು. 2014ರ ಚುನಾವಣೆ ಸಮಯದಲ್ಲಿ ಮೋದಿ ಅವರು ಮತದಾನಕ್ಕೆ ಮೊದಲು ಅಡುಗೆ ಅನಿಲ ಸಿಲಿಂಡರ್‌ಗೆ ನಮಿಸಿ ಮತದಾನ ಮಾಡಲು ಕರೆ ನೀಡಿದ್ದರು. ಪ್ರಧಾನಿ ಮಾತಿಗೆ ಬೆಲೆ ಕೊಟ್ಟು, ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ ಜನ ಎಲ್ಲ ಬೂತ್‌ಗಳ ಬಳಿ ಇರುವ ಪಕ್ಷದ ಕ್ಯಾಂಪ್ ಕೇಂದ್ರಗಳಲ್ಲಿ ಖಾಲಿ ಸಿಲಿಂಡರ್ ಇಟ್ಟು ನಮಿಸಿ ಮತದಾನ ಮಾಡಿ ಎಂದು ನಮ್ಮ ಕಾರ್ಯಕರ್ತರಿಗೆ ಕರೆ ನೀಡುತ್ತೇನೆ' ಎಂದರು.



ಅಡುಗೆ ಅನಿಲ ಸಿಲಿಂಡರ್‌ಗೆ ಡಿ.ಕೆ. ಶಿವಕುಮಾರ್ ಪೂಜೆ ಸಲ್ಲಿಸಿದರು

'ದ್ವೇಷ ಬೆಳೆಸಲು ಮುಸ್ಲಿಂ ಮೀಸಲಾತಿ ಹಂಚಿದ ಬಿಜೆಪಿ'

ಬೆಂಗಳೂರು: 'ರಾಜ್ಯ ಬಿಜೆಪಿ ಸರ್ಕಾರ ಮುಸ್ಲಿಂ ಮೀಸಲಾತಿ ರದ್ದುಗೊಳಿಸಿ, ಆ ಪಾಲನ್ನು ಲಿಂಗಾಯತರು ಮತ್ತು ಒಕ್ಕಲಿಗರಿಗೆ ಹಂಚಿರುವುದು ಪರಸ್ಪರ ವೈರತ್ವ-ದ್ವೇಷ ಬೆಳೆಸುವ ದುರುದ್ದೇಶದಿಂದ ಹೊರತು, ಇದಕ್ಕೆ ಯಾವ ಸದುದ್ದೇಶವೂ ಇಲ್ಲ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ರಾಜ್ಯ ಬಿಜೆಪಿ ಸರ್ಕಾರದ ಮುಸ್ಲಿಂ ಮೀಸಲಾತಿ ರದ್ದತಿ ಆದೇಶದ ಬಗ್ಗೆ ನೀಡಿರುವ ಬೇಜವಾಬ್ದಾರಿ ಹೇಳಿಕೆಗಾಗಿ ಸುಪ್ರೀಂ ಕೋರ್ಟ್ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ತಪರಾಕಿ ನೀಡಿದೆ. ಪ್ರಕರಣ ವಿಚಾರಣೆಯಲ್ಲಿರುವಾಗ ನ್ಯಾಯಾಲಯದ ಪಾವಿತ್ರ್ಯತೆಯನ್ನು ಪಾಲಿಸಬೇಕಾಗುತ್ತದೆ. ಈ ರೀತಿಯ ರಾಜಕೀಯ ಹೇಳಿಕೆ ಸಲ್ಲದು ಎಂದು ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು ಹೇಳಿರುವುದು ಸರಿಯಾಗಿದೆ' ಎಂದೂ ಅವರು ಹೇಳಿದ್ದಾರೆ. 'ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿರುವಾಗ ಸಾಲಿಸಿಟರ್ ಜನರಲ್ ಇಲ್ಲವೇ ವಕೀಲರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲಿ, ಮೂರನೇ ವ್ಯಕ್ತಿ ಇದಕ್ಕೆ ಯಾಕೆ ಪ್ರತಿಕ್ರಿಯಿಸಬೇಕು ಎಂದು ನ್ಯಾಯಮೂರ್ತಿ ನಾಗರತ್ನ ಕೇಳಿದ್ದಾರೆ. ಕೇಂದ್ರ ಗೃಹ ಸಚಿವರು ಇನ್ನು ಮುಂದೆಯಾದರೂ ಎಚ್ಚರಿಕೆಯಿಂದ ಹೇಳಿಕೆ ನೀಡುತ್ತಾರೆಂದು ಭಾವಿಸಿದ್ದೇನೆ' ಎಂದೂ ಸಿದ್ದರಾಮಯ್ಯ ಕುಟುಕಿದ್ದಾರೆ.

ಬುಧವಾರ, ಮೇ 10, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 129 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ರಾಜ್ಯದ ವಿವಿಧೆಡೆ ಭಾರಿ ಮಳೆ: ಸಿಡಿಲು ಬಡಿದು ಇಬ್ಬರು ಸಾವು 4

ಸಲಿಂಗ ಮದುವೆಗೆ ಮಾನ್ಯತೆ: ಸಂಪೂರ್ಣ ಹಕ್ಕು ಎಂಬುದೇ ಇಲ್ಲ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,761 ▼	18,265 ▲	₹63,120 (ಬೆಂಗಳೂರು) ▲	₹78,500 (ಬೆಂಗಳೂರು) ▼	82.06 ▼

ಜನತಂತ್ರದ ಹಬ್ಬ: ಸಂಭ್ರಮದಿಂದ ಕಾಯುತ್ತಿವೆ ಮತಗಟ್ಟೆಗಳು • ರಾಜಕೀಯ ನೇತಾರರ ಭವಿಷ್ಯ ನಿರ್ಣಯ ಇಂದು

ಜನರ ಮತ ನಾಡಿಗೆ ತರಲಿ ಹಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ನಾಡು, ನಾಡಿನವರ ಐದು ವರ್ಷದ ಭವಿಷ್ಯ ನಿರ್ಧರಿಸುವ ಗಳಿಗೆ ಬಂದಿದೆ. ವಿವೇಚನಾಪೂರ್ವಕವಾಗಿ ಹಾಕುವ ಪ್ರತಿಯೊಂದು ಮತವೂ ನಾಡಿಗೆ ಹಿತ ತರಲಿದೆ. ಮತದಾನದ ದಿನ ಮೈಮರೆತು ಕೂರುವ ಬದಲು ಮತಗಟ್ಟೆಗೆ ಬನ್ನಿ, ನಾಡಿಗೆ ಹಿತ ತನ್ನಿ ಎಂಬುದು ಈ ಕಾಲದ ಕರೆಯಾಗಿದೆ.

ಬುಧವಾರ ಬೆಳಿಗ್ಗೆ 7ರಿಂದ ಸಂಜೆ 6ಗಂಟೆಯವರೆಗೆ ಮತದಾನ ನಿಗದಿಯಾಗಿದೆ. 224 ಕ್ಷೇತ್ರಗಳಲ್ಲಿ ಮತದಾರರನ್ನು ಎದುರುಗೊಳ್ಳಲು 58,545 ಮತಗಟ್ಟೆಗಳು ಸಂಭ್ರಮದಿಂದ ಕಾಯುತ್ತಿವೆ. ಜನತಂತ್ರದ ಹಬ್ಬದಲ್ಲಿ ಪಾಲ್ಗೊಳ್ಳುವುದು ಪ್ರಜಾಪ್ರಭುತ್ವದ ದೊಡ್ಡ ಗೆಲುವು. ಚುನಾವಣೆ ಆಯೋಗ ಅದಕ್ಕಾಗಿ ಎಲ್ಲ ರೀತಿಯ ತಯಾರಿಯನ್ನೂ ಮಾಡಿಕೊಂಡಿದೆ.

ಗೆಲ್ಲಲೇಬೇಕು ಎಂಬ ಹುಮ್ಮಸ್ಸು ಅಭ್ಯರ್ಥಿಗಳಲ್ಲಿ ಇರುವಂತೆಯೇ ಪ್ರಜಾತಂತ್ರವನ್ನು ಸೋಲಿಸದೇ ಗೆಲ್ಲಿಸಬೇಕಾದ ಹೊಣೆಯೂ ಒಂದು ದಿನವಾದರೂ 'ಪ್ರಭು'ಗಳಾದ ನಾಡ ಪ್ರಜೆಗಳದೇ ಆಗಿದೆ. ರಾಜ್ಯದ ಭವಿತವ್ಯವನ್ನು ತೀರ್ಮಾನಿಸುವ ಈ ದಿನ ಮತದಾರರಿಗೆ ಮಾತ್ರ ನಿರ್ಣಾಯಕವಲ್ಲ; ಅಧಿಕಾರ ಹಿಡಿದೇ ತೀರಬೇಕೆಂಬ ಹಟಕ್ಕೆ ಬಿದ್ದಿರುವ ಮೂರು ಪಕ್ಷಗಳ ನಾಯಕರ ಪ್ರತಿಷ್ಠೆಗೆ ಸವಾಲೂ ಆಗಿದೆ. ರಾಜ್ಯದ ನಾನಾ ರಾಜಕಾರಣಿಗಳ ಹಣೆಬರಹವನ್ನೂ ಬರೆಯಲಿದೆ.

5ನೇ ಪುಟ ನೋಡಿ

- 11,71,558 ಯುವ ಮತದಾರರು
- 5,71,281 ಅಂಗವಿಕಲ ಮತದಾರರು
- 12,15,920 80 ವರ್ಷ ಮೇಲ್ಪಟ್ಟವರು
- 58,545 ಒಟ್ಟು ಮತಗಟ್ಟೆಗಳು
- 4 ಲಕ್ಷ, ಒಟ್ಟು ಮತಗಟ್ಟೆ ಸಿಬ್ಬಂದಿ

ಮತದಾನದ ಸಮಯ
ಬೆಳಿಗ್ಗೆ 7ರಿಂದ ಸಂಜೆ 6

- 5,31,33,054 ಒಟ್ಟು ಮತದಾರರು
- 2,67,28,053 ಪುರುಷರು
- 2,64,00,074 ಮಹಿಳೆಯರು
- 4,927 ಲೈಂಗಿಕ ಅಲ್ಪಸಂಖ್ಯಾತರು
- 47,488 ಸೇವಾ ಮತದಾರರು
- 94,931 ಈಗಾಗಲೇ ಚಲಾಯಿಸಿರುವ ಮತ

ವಿದ್ಯುನ್ಮಾನ ಮತ ಯಂತ್ರಗಳು

- 75,603 ಬ್ಯಾಲೆಟ್ ಯೂನಿಟ್
- 70,300 ಕಂಟ್ರೋಲ್ ಯೂನಿಟ್
- 76,202 ವಿವಿಪ್ಯಾಟ್

ಭದ್ರತಾ ವ್ಯವಸ್ಥೆ

- 84,119 ರಾಜ್ಯ ಪೊಲೀಸರು
- 58,500 ಕೇಂದ್ರೀಯ ಅರೆ ಸೇನಾಪಡೆ ಪೊಲೀಸರು

2,615 ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳು
2,430 ಪುರುಷರು
184 ಮಹಿಳೆಯರು
1 ಲೈಂಗಿಕ ಅಲ್ಪಸಂಖ್ಯಾತರು

ಕುತೂಹಲಕರ ಕ್ಷೇತ್ರಗಳು

ಕ್ಷೇತ್ರ	ಅಭ್ಯರ್ಥಿಗಳು
ವರುಣ	ಸಿದ್ದರಾಮಯ್ಯ/ ವಿ. ಸೋಮಣ್ಣ/ ಭಾರತೀ ಶಂಕರ್
ಹು–ಧಾ ಸೆಂಟ್ರಲ್	ಜಗದೀಶ ಶೆಟ್ಟರ್/ಮಹೇಶ ಟೆಂಗಿನಕಾಯಿ
ಶಿಗ್ಗಾವಿ	ಬಸವರಾಜ ಬೊಮ್ಮಾಯಿ/ಯಾಸಿರ್ ಖಾನ್ ಪಠಾಣ್
ಅಥಣಿ	ಲಕ್ಷ್ಮಣ ಸವದಿ/ ಮಹೇಶ ಕುಮಠಳ್ಳಿ
ಚನ್ನಪಟ್ಟಣ	ಎಚ್‌.ಡಿ. ಕುಮಾರಸ್ವಾಮಿ/ ಸಿ.ಪಿ. ಯೋಗೇಶ್ವರ್
ಪುತ್ತೂರು	ಆಶಾ ತಿಮ್ಮಪ್ಪಗೌಡ/ಅರುಣಕುಮಾರ ಪುತ್ತಿಲ/ ಅಶೋಕಕುಮಾರ್ ರೈ
ಕಾರ್ಕಳ	ವಿ. ಸುನೀಲ್ ಕುಮಾರ್/ ಪ್ರಮೋದ ಮುತಾಲಿಕ್/ ಉದಯಕುಮಾರ್ ಶೆಟ್ಟಿ
ಶಿಕಾರಿಪುರ	ಬಿ.ವೈ. ವಿಜಯೇಂದ್ರ/ ನಾಗರಾಜಗೌಡ/ ಜಿ. ಮಾಲತೇಶ್
ಚಿಕ್ಕಮಗಳೂರು	ಸಿ.ಟಿ. ರವಿ/ ತಮ್ಮಯ್ಯ
ಹಾಸನ	ಪ್ರೀತಂಗೌಡ/ ಸ್ವರೂಪ್ ಕೆ.ಪಿ.
ಗಂಗಾವತಿ	ಪರಣ್ಣ ಮುನವಳ್ಳಿ/ ಜನಾರ್ದನ ರೆಡ್ಡಿ/ ಇಕ್ಬಾಲ್ ಅನ್ಸಾರಿ
ಬಳ್ಳಾರಿ ನಗರ	ಜಿ. ಸೋಮಶೇಖರ ರೆಡ್ಡಿ/ ಅರುಣಾ ಲಕ್ಷ್ಮೀ/ ನಾರಾ ಭರತ್ ರೆಡ್ಡಿ
ಸೊರಬ	ಕುಮಾರ್ ಬಂಗಾರಪ್ಪ/ಮಧುಬಂಗಾರಪ್ಪ
ಕೊರಟಗೆರೆ	ಜಿ. ಪರಮೇಶ್ವರ/ ಸುಧಾಕರ ಲಾಲ್/ ಬಿ.ಎಚ್. ಅನಿಲ್‌ಕುಮಾರ್

ಪರ್ಯಾಯ ದಾಖಲೆಗಳು

ಮತದಾರರ ಪಟ್ಟಿಯಲ್ಲಿ ಹೆಸರಿದ್ದರೆ ಮತದಾರರ ಗುರುತಿನ ಚೀಟಿ ಇಲ್ಲದಿದ್ದರೂ ಮತ ಚಲಾಯಿಸಬಹುದು. 12 ಪರ್ಯಾಯ ದಾಖಲೆಗಳ ಪೈಕಿ ಒಂದನ್ನು ಹಾಜರುಪಡಿಸಿದರೆ ಸಾಕು.

- ಆಧಾರ್ ಕಾರ್ಡ್
- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಗುರುತಿನ ಚೀಟಿ
- ಅಂಚೆ ಕಚೇರಿ ಮತ್ತು ಬ್ಯಾಂಕ್‌ನ ಭಾವಚಿತ್ರ ಇರುವ ಪಾಸ್ ಪುಸ್ತಕ
- ಕಾರ್ಮಿಕ ಇಲಾಖೆಯಿಂದ ನೀಡಿರುವ ಆರೋಗ್ಯ ವಿಮೆ ಸ್ಮಾರ್ಟ್ ಕಾರ್ಡ್
- ವಾಹನ ಚಾಲನಾ ಪರವಾನಗಿ (ಡಿ.ಎಲ್)
- ಪ್ಯಾನ್ ಕಾರ್ಡ್
- ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ (ಆರ್‌ಜಿಐ) ಮತ್ತು ರಾಷ್ಟ್ರೀಯ ಜನಸಂಖ್ಯಾ ದಾಖಲೆ (ಎನ್‌ಪಿಆರ್) ಮೂಲಕ ನೀಡಿರುವ ಸ್ಮಾರ್ಟ್ ಕಾರ್ಡ್
- ಭಾರತದ ಪಾಸ್‌ಪೋರ್ಟ್
- ಭಾವಚಿತ್ರ ಹೊಂದಿರುವ ಪಿಂಚಣಿ ಕಾರ್ಡ್
- ಕೇಂದ್ರ /ರಾಜ್ಯ ಸರ್ಕಾರ/ಸಾರ್ವಜನಿಕ ಉದ್ದಿಮೆಗಳು/ ಪಬ್ಲಿಕ್ ಲಿಮಿಟೆಡ್ ಕಂಪನಿಗಳ ಭಾವಚಿತ್ರ ಇರುವ ಗುರುತಿನ ಚೀಟಿ
- ಅಂಗವಿಕಲರ ಗುರುತಿನ ಚೀಟಿ

ಮತಗಟ್ಟೆ ಮಾಹಿತಿಗೆ

ಕೇಂದ್ರ ಚುನಾವಣಾ ಆಯೋಗವು ರೂಪಿಸಿರುವ 'ಚುನಾವಣಾ' ಆ್ಯಪ್‌ನಲ್ಲಿ ಮತಗಟ್ಟೆ ಇರುವ ಸ್ಥಳ, ಮತದಾರರು ತಲುಪುವ ಮಾರ್ಗ ಸೇರಿದಂತೆ ಹಲವು ಮಾಹಿತಿಗಳನ್ನು ಪಡೆಯಬಹುದು

ಮತಗಟ್ಟೆಯಲ್ಲಿನ ಆ ಕ್ಷಣದ ಸರದಿಯ ವಿವರ, ಸಮೀಪದಲ್ಲಿರುವ ವಾಹನ ನಿಲುಗಡೆ ಸ್ಥಳ, ತಲುಪುವ ಮಾರ್ಗದ ಮಾಹಿತಿಯೂ ಆ್ಯಪ್‌ನಲ್ಲಿ ಸಿಗಲಿದೆ

ಬೆಳಿಗ್ಗೆ ₹ 20 ನೋಟು, ರಾತ್ರಿ ಕೈಗೆ ₹ 2,000

ಆಮಿಷ: ನಾಲ್ವರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಪರ ಮತ ಚಲಾಯಿಸುವಂತೆ ಆಮಿಷವೊಡ್ಡಿ ಬೆಳಿಗ್ಗೆ ₹ 20 ನೋಟು ಕೊಟ್ಟು, ಆ ನೋಟು ತರುತ್ತಿದ್ದ ಮತದಾರರಿಗೆ ರಾತ್ರಿ ₹ 2,000 ನೀಡುತ್ತಿದ್ದ ಆರೋಪದಡಿ ಮೂವರನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಸೋಮವಾರ ವಶಕ್ಕೆ ಪಡೆದಿದ್ದಾರೆ.

'ಸ್ಥಳೀಯ ನಿವಾಸಿಗಳಾದ ಚಂದ್ರಶೇಖರ್, ಎಂ. ವೆಂಕಟೇಶ್ ಹಾಗೂ ವಸಂತಕುಮಾರ್ ಅವರು ಗಾಂಧಿನಗರ ವಿಧಾನಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಕೃಷ್ಣಯ್ಯ ಶೆಟ್ಟಿ ಪರ ಪ್ರಚಾರ ಮಾಡುತ್ತಿದ್ದರು. ಕಾಟನ್‌ಪೇಟೆ ಮುಖ್ಯರಸ್ತೆಯ ಮನೆಗಳಿಗೆ ಹೋಗಿ ₹20 ನೋಟು ಹಂಚುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಚುನಾವಣಾಧಿಕಾರಿ ತಂಡದ ಜತೆ ಜಂಟಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ವಶಕ್ಕೆ ಪಡೆಯಲಾಯಿತು' ಎಂದು ಪೊಲೀಸರು ಹೇಳಿದರು.

'ಮೂವರು ಆರೋಪಿಗಳ ಬಳಿ ₹ 20 ನೋಟುಗಳನ್ನು ಜಪ್ತಿ ಮಾಡಲಾಗಿದೆ. ಮೂವರನ್ನು ವಿಚಾರಣೆ ನಡೆಸಿ, ಬಿಟ್ಟು ಕಳುಹಿಸಲಾಗಿದೆ. ಈ ಮೂವರ ಜೊತೆ, ಅಭ್ಯರ್ಥಿ ಕೃಷ್ಣಯ್ಯ ಶೆಟ್ಟಿ ವಿರುದ್ಧವೂ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ನಾಲ್ವರಿಗೂ ನೋಟಿಸ್ ನೀಡಿ ಪುನಃ ವಿಚಾರಣೆ ನಡೆಸಲಾಗುವುದು' ಎಂದು ತಿಳಿಸಿದರು.

ಚುನಾವಣಾಧಿಕಾರಿ ಕಣ್ತಪ್ಪಿಸಲು ಕೃತ್ಯ

'ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ ಮನೆ ಮನೆಗೆ ತೆರಳುತ್ತಿದ್ದ ಆರೋಪಿಗಳು, ಕೃಷ್ಣಯ್ಯ ಶೆಟ್ಟಿ ಅವರಿಗೆ ಮತ ಹಾಕುವಂತೆ ಕೋರುತ್ತಿದ್ದರು. ನೇರವಾಗಿ ಹೆಚ್ಚು ಹಣ ನೀಡಿದರೆ, ಚುನಾವಣಾಧಿಕಾರಿಗಳು ದಾಳಿ ಮಾಡುವ ಭಯ ಅವರಿಗಿತ್ತು. ಹೀಗಾಗಿ, ಮತದಾರರಿಗೆ ಮುಂಗಡವಾಗಿ ₹ 20 ನೋಟು ಮಾತ್ರ ನೀಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಮತದಾರರ ಪಟ್ಟಿ ಪರಿಶೀಲಿಸಿ ₹ 20 ನೋಟು ನೀಡುತ್ತಿದ್ದ ಆರೋಪಿಗಳು, 'ರಾತ್ರಿ ನಿಗದಿತ ಸ್ಥಳಕ್ಕೆ ಹೋಗಿ ₹ 2 ಸಾವಿರ ಪಡೆಯಿರಿ ಅಥವಾ ನಿಮಗೆ ಇಷ್ಟವಾದ ಉಡುಗೊರೆ ತೆಗೆದುಕೊಳ್ಳಿ' ಎಂದು ಹೇಳುತ್ತಿದ್ದರು. ಇದೇ ರೀತಿಯಲ್ಲಿ ಆರೋಪಿಗಳು, ಹಲವರಿಗೆ ₹ 20 ನೋಟು ನೀಡಿರುವ ಮಾಹಿತಿ ಇದೆ' ಎಂದು ತಿಳಿಸಿದರು.

ಓದುಗರ ಗಮನಕ್ಕೆ
ಇಂದಿನ ಸಂಚಿಕೆಯು ಎರಡು ಭಾಗಗಳಲ್ಲಿ ಪ್ರಕಟವಾಗಿದೆ.

'ಕ್ರೆಡಿಟ್ ಕಾರ್ಡ್ ಬಳಕೆ ಬೇಡ'

ಬೆಂಗಳೂರು: ವಿಮಾ ಪಾಲಿಸಿ ಆಧರಿಸಿ ಸಾಲ ಪಡೆದವರಿಗೆ ಇನ್ನು ಮುಂದೆ, ಸಾಲದ ಕಂತು ಕಟ್ಟಲು ಕ್ರೆಡಿಟ್ ಕಾರ್ಡ್ ಬಳಕೆಗೆ ಅವಕಾಶ ಸಿಗುವ ಸಾಧ್ಯತೆ ಕಡಿಮೆ. 6

ಶ್ರದ್ಧಾ ವಾಲ್ಕರ್ ಹತ್ಯೆ: ದೋಷಾರೋಪ ನಿಗದಿ

ನವದೆಹಲಿ (ಪಿಟಿಐ): ಕಾಲ್‌ಸೆಂಟರ್ ಉದ್ಯೋಗಿ ಶ್ರದ್ಧಾ ವಾಲ್ಕರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಆರೋಪಿ ಅಫ್ತಾಬ್ ಅಮಿನ್ ಪೂನಾವಾಲ ವಿರುದ್ಧ ದೆಹಲಿಯ ನ್ಯಾಯಾಲಯವೊಂದು ಮಂಗಳವಾರ ದೋಷಾರೋಪ ನಿಗದಿಪಡಿಸಿತು. ಮೇಲ್ನೋಟಕ್ಕೆ ಈ ಮೊಕದ್ದಮೆಯು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 302 (ಕೊಲೆ) ಮತ್ತು 201 (ಅಪರಾಧದ ಸಾಕ್ಷ್ಯನಾಶ) ಅಡಿ ಬರುತ್ತವೆ. 7

ಚಿನಕುರಳಿ
ಪ್ರಕಾಶ್ ಶೆಟ್ಟಿ



ಮುಸ್ಲಿಮರ ಮೀಸಲು: ಜುಲೈ 25ರವರೆಗೆ ಯಥಾಸ್ಥಿತಿ

ಶಾ ಹೇಳಿಕೆಗೆ 'ಸುಪ್ರೀಂ' ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಂದುಳಿದ ವರ್ಗಗಳ ಕೋಟಾದಲ್ಲಿ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮುಸ್ಲಿಮರಿಗೆ ನೀಡಿದ್ದ ಶೇ 4ರಷ್ಟು ಮೀಸಲಾತಿಯನ್ನು ಕರ್ನಾಟಕ ಸರ್ಕಾರ ಹಿಂಪಡೆದಿರುವ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಾರ್ವಜನಿಕ ಹೇಳಿಕೆ ಹಾಗೂ ಮೀಸಲಾತಿ ವಿಷಯವನ್ನು ರಾಜಕೀಯಗೊಳಿಸುವಿಕೆ ಕುರಿತು ಸುಪ್ರೀಂ ಕೋರ್ಟ್ ಮಂಗಳವಾರ ಆಕ್ಷೇಪ ವ್ಯಕ್ತಪಡಿಸಿದೆ.



'ನಾವು ಪ್ರಕರಣದ ವಿಚಾರಣೆಗೆ ಸಿದ್ಧ ಇರುವಾಗ ಈ ರೀತಿ ರಾಜಕೀಯಕರಣ ಮಾಡುವುದಕ್ಕೆ ಅನುಮತಿ ನೀಡುವುದಿಲ್ಲ' ಎಂದು ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್, ಬಿ.ವಿ.ನಾಗರತ್ನ ಹಾಗೂ ಅಹ್ಸಾನುದ್ದೀನ್ ಅಮಾನುಲ್ಲಾ ಅವರನ್ನು ಒಳಗೊಂಡ ಪೀಠ ಹೇಳಿತು.

'ಈ ವಿಷಯವು ನ್ಯಾಯಾಲಯದ ಮುಂದೆ ವಿಚಾರಣೆಗೆ ಬಾಕಿ ಇರುವಾಗ ಹಾಗೂ ನ್ಯಾಯಾಲಯದ ಆದೇಶ ಇರುವಾಗ, ಇದರ ಬಗ್ಗೆ ಯಾವುದೇ ರಾಜಕೀಯ ಹೇಳಿಕೆ ನೀಡಬಾರದು. ಇದು ಸೂಕ್ತವಲ್ಲ. ಸ್ವಲ್ಪ ಪಾವಿತ್ರ್ಯ ಕಾಪಾಡಿಕೊಳ್ಳಬೇಕು' ಎಂದು ಪೀಠ ಮೌಖಿಕ ನಿರ್ದೇಶನ ನೀಡಿತು.

ಅರ್ಜಿದಾರರ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ದುಷ್ಯಂತ್ ದವೆ, 'ಮುಸ್ಲಿಮರ ಶೇ 4 ಮೀಸಲಾತಿಯನ್ನು ಹಿಂಪಡೆದಿದ್ದೇವೆ ಎಂದು ಅಮಿತ್ ಶಾ ಅವರು ಕರ್ನಾಟಕದಲ್ಲಿ ಪ್ರತಿದಿನ ಹೆಮ್ಮೆಯಿಂದ ಹೇಳುತ್ತಿದ್ದಾರೆ. ಅವರು ಇಂತಹ ಹೇಳಿಕೆಗಳನ್ನು ನೀಡಬಹುದೇ' ಎಂದು ಪ್ರಶ್ನಿಸಿದರು. 'ಇದು ನ್ಯಾಯಾಂಗದ ನಿಂದನೆ. ಅವರು ಸರ್ಕಾರವನ್ನು ಪ್ರತಿನಿಧಿಸುತ್ತಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿ ಸರ್ಕಾರವಿದೆ' ಎಂದೂ ಅವರು ಗಮನ ಸೆಳೆದರು.

'ನೀವು ಹೇಳುತ್ತಿರುವುದು ನಿಜವಾಗಿದ್ದರೆ, ನ್ಯಾಯಾಲಯದ ಮುಂದೆ ಪ್ರಕರಣ ಇರುವಾಗ ಯಾರಾದರೂ ಹೇಳಿಕೆಗಳನ್ನು ಏಕೆ ನೀಡಬೇಕು' ಎಂದು ನ್ಯಾಯಮೂರ್ತಿ ನಾಗರತ್ನ ಪ್ರಶ್ನೆ ಮಾಡಿದರು.

ಕರ್ನಾಟಕ ಸರ್ಕಾರದ ಪರವಾಗಿ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಅಂತಹ ಹೇಳಿಕೆಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ' ಎಂದು ಸ್ಪಷ್ಟಪಡಿಸಿದರು. 'ಯಾವುದೇ ಧರ್ಮ ಆಧಾರಿತ ಮೀಸಲಾತಿ ಅಸಂವಿಧಾನಿಕ. ಇಂತಹ ಮೀಸಲಾತಿಯನ್ನು ಟೀಕಿಸುವುದು ತಪ್ಪಲ್ಲ' ಎಂದೂ ಅಭಿಪ್ರಾಯಪಟ್ಟರು.

'ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಾಲಯದ ಹೊರಗೆ ಹೇಳಿಕೆ ನೀಡುವುದು ಸೂಕ್ತವಲ್ಲ. ಪ್ರಕರಣವೊಂದು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವಾಗಲೇ ಅದರ ಕುರಿತು 1971ರಲ್ಲಿ ಪಶ್ಚಿಮ ಬಂಗಾಳದ ರಾಜಕೀಯ ನಾಯಕರೊಬ್ಬರು ಪತ್ರಿಕಾಗೋಷ್ಠಿ ನಡೆಸಿದ್ದರು. ಅವರು ನ್ಯಾಯಾಂಗ ನಿಂದನೆಗೆ ಗುರಿಯಾಗಿದ್ದರು' ಎಂದು ನ್ಯಾಯಮೂರ್ತಿ ಜೋಸೆಫ್ ತಿಳಿಸಿದರು.

5ನೇ ಪುಟ ನೋಡಿ

'ರೊಟ್ಟಿಯನ್ನು ತಿನಿಸಿದ ಆನೆಯ ಮೇಲೆ ದಿಬ್ಬಣದ ಹೊರೆಯೇ?'

• ಚಂದ್ರಕಾಂತ ಮಸಾನಿ

ಬೀದರ್: 'ಆನೆಗೆ ಹಸಿರು ಮೇವು, ಬೆಲ್ಲದಂತಹ ಪೌಷ್ಟಿಕ ಆಹಾರ ಕೊಡುವ ಬದಲು ರೊಟ್ಟಿ, ಅನ್ನ ಕೊಟ್ಟಿದ್ದಾರೆ. ಅದರ ಜೊತೆಗೆ ವಾಣಿಜ್ಯ ಉದ್ದೇಶದಿಂದ ದಿಬ್ಬಣದ ಹೊರೆಯನ್ನು ಹೊರಲೂ ಅದನ್ನು ಕರೆ ತಂದಿದ್ದಾರೆ. ಇದು ಸರಿಯೇ'

ಅರಣ್ಯ ಇಲಾಖೆಯ ಅಧಿಕಾರಿಗಳ ಈ ಪ್ರಶ್ನೆಯಿಂದ ಮದುವೆಗೆ ತಂದಿದ್ದ ಆನೆಯು ಇಲಾಖೆಯ ಕಚೇರಿಗೆ ಬರುವಂತಾಯಿತು. ವಿಷಯ ಕೋರ್ಟ್ ಮೆಟ್ಟಿಲೇರಿ, ಆನೆಯ ಮಾಲೀಕರಿಗೆ ಬುದ್ಧಿವಾದ ಹೇಳಿ, ಕೋರ್ಟ್ ಆ ಆನೆಯನ್ನು ಬಿಡುಗಡೆ ಮಾಡಿಸಿದ್ದೂ ಆಯಿತು.

ಏನಿದು ಘಟನೆ: 'ದೋಷ ನಿವಾರಣೆಗೆ ಮದುಮಗನನ್ನು ಆನೆ ಮೇಲೆಯೇ ಕರೆ ತರಬೇಕು' ಎಂದು ಜ್ಯೋತಿಷಿ ಹೇಳಿದ್ದಕ್ಕೆ ಮದುವೆ ಮನೆಯವರು ಕಲಬುರಗಿ ಜಿಲ್ಲೆಯ ಕಡಗಂಚಿ ಮಠದ 38 ವರ್ಷದ ಹೆಣ್ಣಾನೆಯನ್ನು ಬೀದರ್‌ಗೆ ಲಾರಿಯಲ್ಲಿ ಕರೆತಂದಿದ್ದರು. ವಿಷಯ ಗೊತ್ತಾಗುತ್ತಿದ್ದಂತೆಯೇ ಅರಣ್ಯ ಇಲಾಖೆಯು ಆ ಆನೆಯನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿತು. ನಂತರ ಕೋರ್ಟ್ ಆದೇಶದ ಬಳಿಕ ಮಂಗಳವಾರ ಬಿಡುಗಡೆ ಮಾಡಿತು.



ಬೀದರ್‌ನ ಆರಣ್ಯ ಇಲಾಖೆಯ ಆವರಣದಲ್ಲಿರುವ ಮರಕ್ಕೆ ಕಟ್ಟಿ ಹಾಕಿದ್ದ ಆಳಂದ ತಾಲ್ಲೂಕಿನ ಕಡಗಂಚಿ ಮಠದ ಆನೆ

> **ಆನೆಯನ್ನು ಲಾರಿಯಲ್ಲಿ ಕಲಬುರಗಿಯಿಂದ ಬೀದರ್‌ವರೆಗೆ ಅವೈಜ್ಞಾನಿಕವಾಗಿ ಸಾಗಿಸಲಾಗಿದೆ. ಅದರ ಆರೋಗ್ಯ ತಪಾಸಣೆ ಸರಿಯಾಗಿ ಆಗುತ್ತಿಲ್ಲ**
> **ಎಂ.ಎಂ.ವಾನತಿ,** ಡಿಸಿಎಫ್, ಬೀದರ್

'ಕಡಗಂಚಿ ಮಠದವರಿಗೆ ಆನೆ ಸಾಕಲು ಪರವಾನಗಿ ಇದೆ. ಆದರೆ, ಸಾಕಣೆಯಲ್ಲಿ ಸಾಕಷ್ಟು ಲೋಪಗಳು ಆಗಿವೆ. ಹಸಿರು ಮೇವು, ಬೆಲ್ಲ, ಕಾಳು ಸೇರಿ ಪೋಷಕಾಂಶವುಳ್ಳ ಆಹಾರದ ಬದಲು ರೊಟ್ಟಿ, ಅನ್ನ ಜೊತೆಗೆ ಮನುಷ್ಯರು ಸೇವಿಸುವ ಆಹಾರ ಕೊಟ್ಟಿದ್ದಾರೆ. ಅದೇ ಆಹಾರ ಪದ್ಧತಿ ರೂಢಿ ಮಾಡಿಸಿದ್ದಾರೆ. ಇದರಿಂದ ಆನೆಗೆ ಮಧುಮೇಹ ಬರುವ ಸಾಧ್ಯತೆ ಇದೆ' ಎಂದು ಬೀದರ್‌ನ ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಎಂ.ಎಂ ವಾನತಿ 'ಪ್ರಜಾವಾಣಿ'ಗೆ ತಿಳಿಸಿದರು.

5ನೇ ಪುಟ ನೋಡಿ

ಸಿಸಿಬಿ ದಾಳಿ: ಇಬ್ಬರು ಕೈದಿಗಳ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅಕ್ರಮವಾಗಿ ಮೊಬೈಲ್ ಬಳಸುತ್ತಿದ್ದ ಆರೋಪದಡಿ ಇಬ್ಬರು ವಿಚಾರಣಾಧೀನ ಕೈದಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಮತದಾರರಿಗೆ ಕೈದಿಗಳು ಬೆದರಿಕೆಯೊಡ್ಡುವ ಸಾಧ್ಯತೆ ಇದ್ದಿದ್ದರಿಂದ ಸಿಸಿಬಿ ಪೊಲೀಸರು ಕಾರಾಗೃಹದ ಮೇಲೆ ಸೋಮವಾರ ಬೆಳಿಗ್ಗೆ ದಾಳಿ ಮಾಡಿದ್ದರು. ಅದೇ ಸಂದರ್ಭದಲ್ಲಿ ವಿಚಾರಣಾಧೀನ ಕೈದಿಗಳಾದ ರೋಷನ್ ಹಾಗೂ ವಿಜಯ್‌ಕುಮಾರ್ ಬಳಿ ಮೊಬೈಲ್, ಸಿಮ್‌ಕಾರ್ಡ್, ಚಾರ್ಜರ್ ಪತ್ತೆಯಾಗಿದ್ದವು. ಊಟದ ಪ್ಲೇಟ್‌ನಿಂದ ತಯಾರಿಸಿದ್ದ ಚಾಕು ಹಾಗೂ 5 ಚಾಕು, 5 ಕತ್ತರಿ ಸಿಕ್ಕಿದ್ದವು.

'ಕೈದಿಗಳ ಬಳಿ ಮೊಬೈಲ್ ಪತ್ತೆಯಾದ ಬಗ್ಗೆ ಜೈಲಿನ ಅಧಿಕಾರಿಗಳು ದೂರು ನೀಡಿದ್ದಾರೆ. ರೋಶನ್ ಹಾಗೂ ವಿಜಯ್‌ಕುಮಾರ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಹೊರಗಿನ ವ್ಯಕ್ತಿಗಳಿಗೆ ಬೆದರಿಕೆಯೊಡ್ಡುವುದಕ್ಕಾಗಿ ಕೈದಿಗಳು ಮೊಬೈಲ್ ಬಳಸುತ್ತಿದ್ದ ಮಾಹಿತಿ ಇದೆ' ಎಂದು ಪೊಲೀಸರು ಹೇಳಿದರು.

ನಿಧನ ವಾರ್ತೆ

ಟಿ.ಎನ್.ಕೃಷ್ಣೇಗೌಡ



ನೆಲಮಂಗಲ: ತಾಲ್ಲೂಕಿನ ತಡಶೀಘಟ್ಟದ ಪಟೇಲರಾಗಿದ್ದ ಟಿ.ಎನ್. ಕೃಷ್ಣೇಗೌಡ (92) ಅವರು ಮಂಗಳವಾರ ಮುಂಜಾನೆ ನಿಧನರಾದರು.

ಮೃತರಿಗೆ ವಿಶಾಲ್ ಶಾಲೆ ಸಂಸ್ಥಾಪಕ ಟಿ.ಕೆ. ನರಸೇಗೌಡ ಸೇರಿ ಇಬ್ಬರು ಪುತ್ರರು, ಮೂವರು ಪುತ್ರಿಯರು ಇದ್ದಾರೆ. ಮಂಗಳವಾರ ಸಂಜೆ ತಡಶೀಘಟ್ಟದಲ್ಲಿ ಅಂತ್ಯಸಂಸ್ಕಾರ ನೆರವೇರಿತು.

ಬಸ್–ಗೋಡೆ ನಡುವೆ ಸಿಲುಕಿ ನಿರ್ವಾಹಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಯಲಹಂಕ ಡಿಪೊ– 30ರಲ್ಲಿ ಎಲೆಕ್ಟ್ರಿಕ್ ಬಸ್ ಗೋಡೆಗೆ ಡಿಕ್ಕಿ ಹೊಡೆದಿದ್ದು, ಬಸ್–ಗೋಡೆ ಮಧ್ಯೆ ಸಿಲುಕಿ ನಿರ್ವಾಹಕ ಸೋಮಶೇಖರಯ್ಯ (59) ಮೃತಪಟ್ಟಿದ್ದಾರೆ.

'ಮೃತ ಸೋಮಶೇಖರಯ್ಯ, ಯಲಹಂಕ ಡಿಪೊದಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಮಂಗಳವಾರ ಕರ್ತವ್ಯ ಮುಗಿಸಿ ಡಿಪೊಗೆ ಬಂದಿದ್ದ ಅವರು, ಕಚೇರಿಯಲ್ಲಿ ಟಿಕೆಟ್ ಹಣ ಜಮೆ ಮಾಡಿ ವಾಪಸು ಹೋಗುತ್ತಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಯಲಹಂಕ ಸಂಚಾರ ಪೊಲೀಸರು ಹೇಳಿದರು.

ಕೆಲ ತಿಂಗಳಿನಲ್ಲಿ ನಿವೃತ್ತಿ

'ನಿರ್ವಾಹಕ ಸೋಮಶೇಖರಯ್ಯ ಅವರು ಕೆಲ ತಿಂಗಳಿನಲ್ಲೇ ನಿವೃತ್ತಿ ಆಗಬೇಕಿತ್ತು. ಅಷ್ಟರಲ್ಲೇ ಈ ಅವಘಡ ಸಂಭವಿಸಿದೆ' ಎಂದು ಸಹೋದ್ಯೋಗಿಯೊಬ್ಬರು ಹೇಳಿದರು.

'ಡಿಪೊದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಎಲೆಕ್ಟ್ರಿಕ್ ಬಸ್‌ಗಳಿವೆ. ಎಲ್ಲವೂ ಆಟೊಮೇಟಿಕ್ ಗೇರ್ ಹೊಂದಿದೆ. ಚಾಲಕನೊಬ್ಬ ಎಲೆಕ್ಟ್ರಿಕ್ ಬಸ್ ಚಲಾಯಿಸಿಕೊಂಡು ಬಂದಿದ್ದ. ಬಸ್ ನಿಲ್ಲಿಸಲು ಬ್ರೇಕ್ ಒತ್ತುವ ಬದಲು, ಆ್ಯಕ್ಸಲರೇಟರ್ ಒತ್ತಿದ್ದ.'

'ಸೋಮಶೇಖರಯ್ಯ ಅವರಿಗೆ ಗುದ್ದಿಕೊಂಡು ಮುಂದಕ್ಕೆ ಹೋಗಿದ್ದ ಬಸ್, ಗೋಡೆಗೆ ಡಿಕ್ಕಿ ಹೊಡೆದಿತ್ತು. ಬಸ್ ಹಾಗೂ ಗೋಡೆ ನಡುವೆ ಸಿಲುಕಿ ಸೋಮಶೇಖರಯ್ಯ ದೇಹ ಜಜ್ಜಿತ್ತು. ದೇಹದೊಳಗಿನ ಹೃದಯ ಹಾಗೂ ಇತರೆ ಅಂಗಾಂಗಗಳು ಹೊರಗೆ ಬಂದಿದ್ದವು. ಇದರಿಂದಾಗಿ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಅಪಘಾತದ ಬಳಿಕ ಚಾಲಕ ಪರಾರಿಯಾಗಿದ್ದಾನೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.

ಅನಕೃ ಹಾಕಿಕೊಟ್ಟ ಹಾದಿಯಲ್ಲಿ ಪರಿಷತ್ತು: ಮಹೇಶ ಜೋಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಣಿಪಾಲದಲ್ಲಿ ನಡೆದ 42ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಅನಕೃ (ಅ.ನ.ಕೃಷ್ಣರಾಯ), ತಮ್ಮ ಭಾಷಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಹೇಗಿರಬೇಕು ಎನ್ನುವ ಮಾರ್ಗಸೂಚಿಯನ್ನು ನೀಡಿದ್ದರು. ಅವರು ಹಾಕಿಕೊಟ್ಟ ಹಾದಿಯಲ್ಲಿ ಪರಿಷತ್ತು ಮುನ್ನಡೆದುಕೊಂಡು ಬಂದಿದೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

ಅನಕೃ ಅವರ 115ನೇ ಜನ್ಮದಿನದ ಪ್ರಯುಕ್ತ ಪರಿಷತ್ತು ನಗರದಲ್ಲಿ ಮಂಗಳವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕನ್ನಡ ಚಳವಳಿಗಳ ನೇತಾರರಾಗಿದ್ದ ಅನಕೃ ಅವರು ಕನ್ನಡಿಗರಲ್ಲಿ ಭಾಷಾಭಿಮಾನ ಮೂಡಿಸಿದರು. ಬರಹವನ್ನೇ ನಂಬಿ ಬದುಕನ್ನು ಕಟ್ಟಿಕೊಂಡ ಅವರು, ಪತ್ರಿಕಾ ರಂಗದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಬಿ.ಎಂ. ಶ್ರೀಕಂಠಯ್ಯ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಆರಂಭಿಸಿದ 'ಕನ್ನಡ ನುಡಿ' ಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದರು. ಅವರ ಮೊದಲ ಕಾದಂಬರಿ 'ಗೃಹಲಕ್ಷ್ಮಿ' ಅಕ್ಷರ ಪ್ರೇಮಿಗಳ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದುಕೊಂಡಿದೆ' ಎಂದು ಹೇಳಿದರು.



ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷ ಬಿ.ಎಮ್. ಪಟೇಲ್‌ಪಾಂಡು, ಅಧ್ಯಕ್ಷ ಮಹೇಶ ಜೋಶಿ, ಗೌರವ ಕಾರ್ಯದರ್ಶಿಗಳಾದ ಪದ್ಮಿನಿ ನಾಗರಾಜು ಹಾಗೂ ನೇ.ಭ. ರಾಮಲಿಂಗ ಶೆಟ್ಟಿ ಅವರು ಅನ್ನಕೃ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

'ಸಾಹಿತ್ಯ, ಸಂಗೀತ, ಚಿತ್ರಕಲೆ, ನಾಟ್ಯ, ನಾಟಕ ಸೇರಿ ವಿವಿಧ ಕಲೆಗಳಲ್ಲಿ ಅಪಾರ ಒಲವು ಹೊಂದಿದ್ದ ಅನಕೃ, ಕಾದಂಬರಿ, ಕಥೆ ಸಂಕಲನ, ನಾಟಕ, ವಿಮರ್ಶೆ ಸೇರಿ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಬೆಂಗಳೂರಿನಲ್ಲಿ ಕನ್ನಡ ಉಳಿಸಿ ಬೆಳೆಸುವುದಕ್ಕಾಗಿ ನಿರಂತರ ಹೋರಾಟ ನಡೆಸಿದ ಅವರು, ಕೋಟೆ ರಾಮೋತ್ಸವದಲ್ಲಿ ದಕ್ಷಿಣ ಭಾರತದ ಖ್ಯಾತ ಗಾಯಕಿ ಎಮ್.ಎಸ್. ಸುಬ್ಬುಲಕ್ಷ್ಮಿ ಅವರು ಕನ್ನಡ ಗೀತೆಗಳನ್ನು ಹಾಡದೆ ಇರುವುದನ್ನು ಖಂಡಿಸಿ ಪ್ರತಿಭಟನೆ ನಡೆಸಿದ್ದರು. ಖ್ಯಾತ ಗಾಯಕಿಯ ಕಾರ್ಯಕ್ರಮ ನಿಲ್ಲಿಸುವುದು ಸರಿಯೇ ಎಂದು ಬರಹಗಾರ ತೀ.ತಾ. ಶರ್ಮ ಆಕ್ಷೇಪ ವ್ಯಕ್ತಪಡಿಸಿದಾಗ, 'ಕನ್ನಡಕ್ಕೆ ನನ್ನಂಥವರು ಅನೇಕರು ಇರಬಹುದು. ಆದರೆ, ನನಗೆ ಕನ್ನಡ ಒಂದೇ' ಎಂದು ಹೇಳಿದ್ದರು' ಎಂದು ಸ್ಮರಿಸಿಕೊಂಡರು.

ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕ ಪ್ರೊ.ಎನ್.ಎಸ್. ಶ್ರೀಧರಮೂರ್ತಿ, 'ಕನ್ನಡ ಚಿತ್ರರಂಗಕ್ಕೆ ಸ್ವಂತಿಕೆ ತಂದುಕೊಡುವಲ್ಲಿ ಅನಕೃ ಪ್ರಮುಖ ಪಾತ್ರ ವಹಿಸಿದ್ದರು. ಮಣಿಪಾಲ ಸಾಹಿತ್ಯ ಸಮ್ಮೇಳನದಲ್ಲಿ ಅವರು ಆಡಿದ ಮಾತುಗಳು ಕನ್ನಡ ಚಿತ್ರರಂಗಕ್ಕೆ ಜೀವಂತಿಕೆ ನೀಡುವಲ್ಲಿ ಮುಖ್ಯಪಾತ್ರ ವಹಿಸಿವೆ. ಬೆಂಗಳೂರಿನಲ್ಲಿ ಕನ್ನಡ ಚಳವಳಿ ಹುಟ್ಟುವಲ್ಲಿ, ಕನ್ನಡಿಗರಿಗೆ ಸ್ವಾಭಿಮಾನ ತುಂಬುವಲ್ಲಿ ಅವರ ಮಾತುಗಳು ಪ್ರೇರಣೆಯಾಗಿದ್ದವು. ಕನ್ನಡ ಸಾಹಿತ್ಯ ಎಲ್ಲ ವರ್ಗದವರನ್ನು ತಲುಪುವುದರಲ್ಲಿ ಅವರ ಕೊಡುಗೆ ದೊಡ್ಡದು' ಎಂದು ಹೇಳಿದರು.

ನಗರದಲ್ಲಿ ಇಂದು

ಏಕವ್ಯಕ್ತಿ ನೃತ್ಯ ಪ್ರದರ್ಶನ: ಶೈವಿ ಗುರುರಾಜ್, ಮುಖ್ಯ ಅತಿಥಿ: ಯಮುನಾ ಶ್ರೀನಿಧಿ, ಗೌರವ ಅತಿಥಿಗಳು: ಪ್ರಶಾಂತ್ ಶಾಸ್ತ್ರಿ, ಹೇಮಾ ಪ್ರಭಾತ್, ಆಯೋಜನೆ: ಶ್ರೀ ನಾಟ್ಯ ಶಾಲೆ, ಸ್ಥಳ: ಶ್ರೀ ಕೃಷ್ಣದೇವರಾಯ ಕಲಾಮಂದಿರ, ಮಲ್ಲೇಶ್ವರ, ಸಂಜೆ 6.30



ಶೈವಿ



ಅ.ನ.ಕೃಷ್ಣರಾಯರ ಜನ್ಮದಿನದ ಪ್ರಯುಕ್ತ ಸಜ್ಜನರಾವ್ ವೃತ್ತದಲ್ಲಿರುವ ಅನಕೃ ಅವರ ಪ್ರತಿಮೆಗೆ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ, ಮಾವಳ್ಳಿ ಕರ್ನಾಟಕ ಸಂಘದ ಅಧ್ಯಕ್ಷ ಕೊ.ನ.ನಾಗರಾಜ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಾದ ಎಲ್.ಹರ್ಷ, ವಿಜಯಲಕ್ಷ್ಮಿ ಸತ್ಯಮೂರ್ತಿ, ಇಂದಿರಾ ಶರಣ್ ಜಮ್ಮಲದಿನ್ನಿ, ವೆಂಕಟೇಶ್, ರಾಜೇಶ್ ಕೃಷ್ಣಪ್ಪ, ಸೌರಭ ಸಂಸ್ಥೆಯ ಬಾಲಾಜಿ ಮಾಲಾರ್ಪಣೆ ಮಾಡಿದರು.

ಮತಗಟ್ಟೆಯಲ್ಲಿ ಮುಳಬಾಗಿಲು ದೋಸೆ, ಕೋಟಿ ಲಿಂಗ, ಚಿನ್ನದ ಗಣಿ

ಆಕರ್ಷಕ ಮತಗಟ್ಟೆ: ವಿಭಿನ್ನ ಪ್ರಯೋಗ!

• ಕೆ.ಓಂಕಾರ ಮೂರ್ತಿ

ಕೋಲಾರ: ಗೋಡೆಗಳ ತುಂಬಾ ಬಣ್ಣದ ಚಿತ್ತಾರ, ಜೊತೆಗೆ ಸಾಂಸ್ಕೃತಿಕ ವೈಭವ, ಸಾಧನೆಗಳ ಪ್ರತಿಬಿಂಬ. ಹೀಗೆ, ಮತಗಟ್ಟೆ ಕೇಂದ್ರಗಳನ್ನು ವೈವಿಧ್ಯಮಯವಾಗಿ ಅಲಂಕರಿಸುವ ಮೂಲಕ ಮತದಾನ ಮಾಡುವಂತೆ ಕೋಲಾರ ಜಿಲ್ಲಾಡಳಿತ ಹಾಗೂ ಸ್ವೀಪ್ ಸಮಿತಿ ವಿವಿಧ ವರ್ಗದ ಮತದಾರರನ್ನು ಹುರಿದುಂಬಿಸುತ್ತಿವೆ. ಅದಕ್ಕಾಗಿ ವಿಭಿನ್ನ ಪ್ರಯೋಗ ಕೈಗೊಂಡಿವೆ.

14 ಸಖಿ ಮತಗಟ್ಟೆ ಅಲ್ಲದೇ, ಅಂಗವಿಕಲ ಸ್ನೇಹಿ, ಹೊಸ ಮತದಾರರ ಸ್ನೇಹಿ ಜೊತೆಗೆ ಸಾಂಪ್ರದಾಯಿಕ ಮತಗಟ್ಟೆ ಸ್ಥಾಪಿಸಲಾಗಿದೆ. ಸ್ಥಳೀಯ ವಿಶೇಷಗಳ ಜೊತೆಗೆ ಪ್ರವಾಸೋದ್ಯಮ ತಾಣಗಳು ಹಾಗೂ ಸಾಧಕ ವ್ಯಕ್ತಿಗಳನ್ನು ಮತಗಟ್ಟೆ ಕೇಂದ್ರಗಳಲ್ಲಿ ಚಿತ್ರಿಸಲಾಗಿದೆ.

ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳಲ್ಲಿರುವ ಒಟ್ಟು 1,597 ಮತಗಟ್ಟೆಗಳ ಪೈಕಿ 46 ಮತಗಟ್ಟೆಗಳನ್ನು ಈ ರೀತಿ ವೈವಿಧ್ಯಮಯವಾಗಿ ಸಿಂಗರಿಸಲಾಗಿದೆ.

ಮಾಲೂರು ಪಟ್ಟಣ ಹೆಂಚು ಹಾಗೂ ಇಟ್ಟಿಗೆ ತಯಾರಿಕಾ ಉದ್ಯಮಕ್ಕೆ ಪ್ರಸಿದ್ಧಿ. ಈ ನಿಟ್ಟಿನಲ್ಲಿ ಒಂದು ಮತಗಟ್ಟೆಗೆ ಆ ಮಾದರಿಯಲ್ಲಿ ಪೇಂಟ್ ಮಾಡಲಾಗಿದೆ. ಶಿವಾರಪಟ್ಟಣ


ಶಿವಾರಪಟ್ಟಣದಲ್ಲಿ ಶಿಲ್ಪಕಲೆಯ ಮತಗಟ್ಟೆ

ಶಿಲ್ಪಕಲೆಗೆ ಪ್ರಸಿದ್ಧಿ. ಹೀಗಾಗಿ, ಒಂದು ಮತಗಟ್ಟೆ ಮುಂಭಾಗವನ್ನು ಶಿಲ್ಪಕಲೆ ಮಾದರಿಯಲ್ಲಿ ನಿರ್ಮಿಸಲಾಗಿದೆ.

ಜಿಲ್ಲೆಯು ಹೈನುಗಾರಿಕೆಗೆಯಲ್ಲಿ ಮುಂಚೂಣಿಯಲ್ಲಿದ್ದು, ಒಂದು ಮತಗಟ್ಟೆಯಲ್ಲಿ 'ನಂದಿನಿ' ಚಿತ್ರಣ ಕಟ್ಟಿಕೊಡಲಾಗಿದೆ. ಪ್ರಸಿದ್ಧ 'ಮುಳಬಾಗಿಲು ದೋಸೆ' ಸವಿ ಸಾರುವ ಚಿತ್ರ ಬರೆದು ಮಾದರಿ ಮತಗಟ್ಟೆ ಸ್ಥಾಪಿಸಲಾಗಿದೆ. ಮಂಕುತಿಮ್ಮನ ಕಗ್ಗ ಖ್ಯಾತಿಯ 'ನಮ್ಮೂರ ಅಜ್ಜ ಡಿ.ವಿ.ಗುಂಡಪ್ಪ', ಕುಸ್ತಿ, ಮೂಡಣ ಬಾಗಿಲು, ದನಗಳ ಜಾತ್ರೆ, ಟೊಮೆಟೊ ಚಿತ್ರ ಬಿಡಿಸಲಾಗಿದೆ.

ಕೆಜಿಎಫ್‌ನ ಚಿನ್ನದ ಗಣಿ, ಪ್ರೇಕ್ಷಣೀಯ ಸ್ಥಳಗಳಾದ ಆವನಿ ಬೆಟ್ಟ, ಕೋಟಿ ಲಿಂಗೇಶ್ವರ ಚಿತ್ರ ಸಮೇತ ಮಾಹಿತಿ ನೀಡಲಾಗಿದೆ. ಜೊತೆಗೆ ಜಾನಪದ ಚಿತ್ತಾರ ಹಾಗೂ ವೈವಿಧ್ಯಮಯ ವರ್ಣಚಿತ್ರ ಬಿಡಿಸಲಾಗಿದೆ.

ಮೇ 10ರಂದು ನಡೆಯಲಿರುವ ಮತದಾನ ನಿಟ್ಟಿನಲ್ಲಿ ಮಹಿಳೆಯರನ್ನು ಸೆಳೆಯಲು ಪ್ರತಿ ಕ್ಷೇತ್ರದಲ್ಲಿ ಐದರಂತೆ ಒಟ್ಟು 14 ಸಖಿ ಮತಗಟ್ಟೆ ಸ್ಥಾಪಿಸಲಾಗಿದೆ. ಸೂಲಗಿತ್ತಿ ನರಸಮ್ಮ, ಸಾಲುಮರದ ತಿಮ್ಮಕ್ಕ ಅವರ ಚಿತ್ರ ಮುದಗೊಳಿಸುತ್ತವೆ. ಮತದಾನ ದಿನದಂದು ಈ ಮತಗಟ್ಟೆಯಲ್ಲಿ ಅಧಿಕಾರಿಗಳು, ಸಿಬ್ಬಂದಿ ಮಹಿಳೆಯರೇ ಇರುತ್ತಾರೆ.

ಅಂಗವಿಕಲರಿಗೆ ಈಗಾಗಲೇ ಮನೆಯಿಂದಲೇ ಮತದಾನದ ಅವಕಾಶ ನೀಡಲಾಗಿತ್ತು. ಕೆಲವರು ಮತಗಟ್ಟೆಗೇ ಬಂದು ಮತದಾನ ಮಾಡುವುದಾಗಿ ಹೇಳಿದ್ದರು. ಅಂಥವರಿಗೆ ತಮ್ಮ ಹಕ್ಕು ಚಲಾಯಿಸಲು ಅನುಕೂಲವಾಗುವಂತೆ ಹಾಗೂ ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ಆರು ಕ್ಷೇತ್ರಗಳಲ್ಲಿ ಒಂದೊಂದು ಕಡೆ ಅಂಗವಿಕಲ ಸ್ನೇಹಿ ಮತಗಟ್ಟೆ ನಿರ್ಮಿಸಲಾಗಿದೆ.

> ಮತದಾನ ಪ್ರಮಾಣ ಹೆಚ್ಚಿಸುವ ಜೊತೆಗೆ ಜಿಲ್ಲೆಯ ಮಹತ್ವ ಸಾರಬೇಕು. ಜಿಲ್ಲೆಯಲ್ಲಿ ಶೇ 85ಕ್ಕೂ ಹೆಚ್ಚು ಮತದಾನ ನಡೆಯಬೇಕು. ಈ ನಿಟ್ಟಿನಲ್ಲಿ ಈ ಪ್ರಯೋಗ
>
> **ಯುಕೇಶ್ ಕುಮಾರ್**
> ಅಧ್ಯಕ್ಷ, ಕೋಲಾರ ಜಿಲ್ಲಾ ಸ್ವೀಪ್ ಸಮಿತಿ

ಮೊದಲ ಬಾರಿ ಮತದಾನ ಮಾಡುತ್ತಿರುವ ಹೊಸಬರಿಗೆ ಮತದಾನವನ್ನು ಸ್ಮರಣೀಯವಾಗಿಸಲು ಒಂದು ಮತಗಟ್ಟೆಯನ್ನು ವಿಶೇಷವಾಗಿ ಸಜ್ಜುಗೊಳಿಸಲಾಗಿದೆ. ಮತಗಟ್ಟೆಗಳ ಗೋಡೆ ಮೇಲೆ 'ನಿಮ್ಮ ಮತವೇ ನಿಮ್ಮ ಭವಿಷ್ಯ' ಎಂಬ ಘೋಷವಾಕ್ಯ ಜೊತೆಗೆ ನಾನಾ ರೀತಿಯ ಪ್ರೇರಣದಾಯಕ ಚಿತ್ರಬರಹ ಹಾಕಲಾಗಿದೆ.

'ಹೊಸ ಮತದಾರರು, ಯುವ ಜನತೆ, ಅಂಗವಿಕಲರು ಹಾಗೂ ಮಹಿಳಾ ಮತದಾರರನ್ನು ಹುರಿದುಂಬಿಸಲು ಮತಗಟ್ಟೆ ಕೇಂದ್ರಗಳನ್ನು ಆಕರ್ಷಕವಾಗಿಸಿದ್ದೇವೆ. ಮತದಾರರ ಪಟ್ಟಿಯಲ್ಲಿರುವ ಯಾರೊಬ್ಬರೂ ಹೊರಗುಳಿಯಬಾರದು' ಎಂದು ಎಂದು ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರೂ ಆಗಿರುವ ಜಿಲ್ಲಾ ಪಂಚಾಯಿತಿ ಸಿಇಒ ಯುಕೇಶ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಮೋದಿ ರೋಡ್ ಶೋ: ಬಿಜೆಪಿ ಫ್ಲೆಕ್ಸ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೇ 6ರಂದು ನಗರದಲ್ಲಿ ರೋಡ್ ಶೋ ನಡೆಸಿದ್ದ ವೇಳೆ ಅಕ್ರಮವಾಗಿ ಫ್ಲೆಕ್ಸ್ ಹಾಗೂ ಬ್ಯಾನರ್ ಅಳವಡಿಸಿದ್ದ ಆರೋಪದಡಿ ಎಫ್‌ಐಆರ್ ದಾಖಲಾಗಿದೆ.

'ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಚುನಾವಣೆ ಅಧಿಕಾರಿಗಳು ದೂರು ನೀಡಿದ್ದಾರೆ. ಫ್ಲೆಕ್ಸ್ ಹಾಗೂ ಬ್ಯಾನರ್ ಅಳವಡಿಸಿದ್ದ ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ರೋಡ್ ಶೋ ಸಂದರ್ಭದಲ್ಲಿ ಅನುಮತಿ ಪಡೆದಿದ್ದ ಬಿಜೆಪಿ ಮುಖಂಡರಿಗೆ ನೋಟಿಸ್ ನೀಡಿ, ಮಾಹಿತಿ ಪಡೆಯಲಾಗುವುದು' ಎಂದು ಬಸವೇಶ್ವರ ನಗರ ಠಾಣೆಯ ಪೊಲೀಸ್ ಮೂಲಗಳು ಹೇಳಿವೆ.

'ಮೋದಿ ಅವರು ಜೆ.ಪಿ.ನಗರದಿಂದ ಮಲ್ಲೇಶ್ವರ 18ನೇ ಅಡ್ಡರಸ್ತೆಯವರೆಗೆ ಮೇ 6ರಂದು ರೋಡ್ ಶೋ ನಡೆಸಿದ್ದರು. ಜಯನಗರ, ಬಸವನಗುಡಿ, ಮಾಗಡಿ ರಸ್ತೆ, ಗೋವಿಂದ ರಾಜನಗರ, ಬಸವೇಶ್ವರನಗರ, ರಾಜಾಜಿನಗರ ಮಾರ್ಗದಲ್ಲಿ ರೋಡ್ ಶೋ ನಡೆದಿತ್ತು' ಎಂದು ತಿಳಿಸಿವೆ.

'ಬಸವೇಶ್ವರನಗರ ಠಾಣೆ ವ್ಯಾಪ್ತಿಯ ಪವಿತ್ರಾ ಪ್ಯಾರಡೈಸ್ ವೃತ್ತದಿಂದ ಮೋದಿ ಜಂಕ್ಷನ್‌ವರೆಗೆ ಬಿಜೆಪಿಯವರು ಫ್ಲೆಕ್ಸ್ ಹಾಗೂ ಬ್ಯಾನರ್ ಅಳವಡಿಸಿದ್ದರು. ಆದರೆ, ಅದಕ್ಕೆ ಚುನಾವಣಾಧಿಕಾರಿಯಿಂದ ಅನುಮತಿ ಪಡೆದಿರಲಿಲ್ಲ. ಇದೇ ರಸ್ತೆಯಲ್ಲಿ ಗಸ್ತಿನಲ್ಲಿದ್ದ ಚುನಾವಣಾಧಿಕಾರಿ ತಂಡ, ಫ್ಲೆಕ್ಸ್ ಹಾಗೂ ಬ್ಯಾನರ್ ಬಗ್ಗೆ ಪರಿಶೀಲನೆ ನಡೆಸಿತ್ತು. ಫ್ಲೆಕ್ಸ್ ಹಾಗೂ ಬ್ಯಾನರ್ ಅಕ್ರಮವಾಗಿ ಅಳವಡಿಸಿದ್ದು ಗೊತ್ತಾಗುತ್ತಿದ್ದಂತೆ, ಠಾಣೆಗೆ ದೂರು ನೀಡಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಿಜೆಪಿ ಮುಖಂಡರ ಭಾವಚಿತ್ರವುಳ್ಳ ಬ್ಯಾನರ್ ಹಾಗೂ ಫ್ಲೆಕ್ಸ್ ಅಳವಡಿಸಲಾಗಿತ್ತು. ಬಿಜೆಪಿ ಬಾವುಟಗಳನ್ನು ದಾರಿಯುದ್ದಕ್ಕೂ ಪ್ರದರ್ಶಿಸಲಾಗಿತ್ತು. ಈ ಮೂಲಕ ನಗರದ ಸೌಂದರ್ಯಕ್ಕೆ ಧಕ್ಕೆ ಉಂಟಾಗಿರುವುದಾಗಿ ದೂರುದಾರರು ಹೇಳಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಬಿಜೆಪಿ ಹೆಸರು ಸೇರಿಸಲು ಹಿಂದೇಟು'

'ಬಿಜೆಪಿ ವತಿಯಿಂದ ಫ್ಲೆಕ್ಸ್ ಹಾಗೂ ಬ್ಯಾನರ್ ಅಳವಡಿಸಲಾಗಿದೆ ಎಂಬುದಾಗಿ ಚುನಾವಣಾ ಅಧಿಕಾರಿಗಳು ದೂರು ನೀಡಿದ್ದಾರೆ. ಆದರೆ, ಪೊಲೀಸರು ಆರೋಪಿಗಳ ಪಟ್ಟಿಯಲ್ಲಿ ಬಿಜೆಪಿ ಹೆಸರು ಸೇರಿಸಿಲ್ಲ. ಅಪರಿಚಿತರು ಎಂಬುದಾಗಿ ಮಾತ್ರ ನಮೂದಿಸಿದ್ದಾರೆ' ಎಂದು ಸ್ಥಳೀಯರು ದೂರಿದ್ದಾರೆ.

ಮರದ ಬಳಿ ಬಿಸಾಕಿದ್ದ ₹ 4.92 ಲಕ್ಷ ನಗದು ಜಪ್ತಿ

ಬೆಂಗಳೂರು: ಸುಬ್ರಹ್ಮಣ್ಯಪುರ ಠಾಣೆ ವ್ಯಾಪ್ತಿಯ ಮರವೊಂದರ ಬುಡದಲ್ಲಿ ಬಿಸಾಕಿದ್ದ ₹ 4.92 ಲಕ್ಷ ಹಣವನ್ನು ಪೊಲೀಸರು ಜಪ್ತಿ ಮಾಡಿದ್ದು, ಮತದಾರರಿಗೆ ಆಮಿಷವೊಡ್ಡುತ್ತಿದ್ದ ಆರೋಪದಡಿ 13 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ.

'ತಮಿಳುನಾಡಿನಿಂದ ನಗರಕ್ಕೆ ಬಂದಿದ್ದ ಕೆಲ ಯುವಕರು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಕೆಲ ಮನೆಗಳಿಗೆ ತೆರಳಿ ಸೋಮವಾರ ಹಣ ಹಂಚುತ್ತಿದ್ದರು. ಮಾಹಿತಿ ಬರುತ್ತಿದ್ದಂತೆ ಚುನಾವಣಾಧಿಕಾರಿ ತಂಡದ ಜೊತೆ ಜಂಟಿ ಕಾರ್ಯಾಚರಣೆ ನಡೆಸಲಾಯಿತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಣ ಹಂಚುತ್ತಿದ್ದ 13 ಮಂದಿ ಕೈಗೆ ಸಿಕ್ಕಿಬಿದ್ದರು. ಕೆಲವರು ಸ್ಥಳದಿಂದ ತಪ್ಪಿಸಿಕೊಂಡು ಓಡಿ ಹೋದರು. ಅವರು ತಮ್ಮ ಬಳಿಯ ಬ್ಯಾಗ್‌ವೊಂದನ್ನು ಮರದ ಬುಡದಲ್ಲಿ ಎಸೆದು ಹೋಗಿದ್ದರು. ಸ್ಥಳದಲ್ಲಿ ಪರಿಶೀಲನೆ ನಡೆಸಿದಾಗ, ಬ್ಯಾಗ್ ಪತ್ತೆಯಾಯಿತು. ಅದರಲ್ಲಿದ್ದ ಹಣವನ್ನು ಜಪ್ತಿ ಮಾಡಲಾಯಿತು' ಎಂದು ತಿಳಿಸಿವೆ.

'ವಶಕ್ಕೆ ಪಡೆದಿರುವ ಆರೋಪಿಗಳು, ಕಾಂಗ್ರೆಸ್ ಅಭ್ಯರ್ಥಿ ಆರ್.ಕೆ. ರಮೇಶ್ ಪರ ಮತ ಚಲಾಯಿಸುವಂತೆ ಹಣ ಹಂಚುತ್ತಿದ್ದರೆಂದು ಗೊತ್ತಾಗಿದೆ. ಎಲ್ಲರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿವೆ.

ಮಹಿಳಾ ಮತದಾರರಲ್ಲಿ ಅರಿವಿಗೆ ಪಿಂಕಥಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಸಂವಿಧಾನ ನೀಡಿರುವಂತಹ ಮತದಾನದ ಅಧಿಕಾರವನ್ನು ಚಲಾಯಿಸಬೇಕು. ಜೊತೆಗೆ ಎಲ್ಲರನ್ನೂ ಮತದಾನ ಮಾಡಲು ಪ್ರೇರೇಪಿಸಬೇಕು ಎಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೋಮವಾರ ಹೇಳಿದರು.

ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಮತದಾನದ ಪ್ರಮಾಣ ಹೆಚ್ಚುವಂತೆ ಮಾಡುವ ಉದ್ದೇಶದಿಂದ ಮಹಿಳಾ ಮತದಾರರಲ್ಲಿ ಅರಿವು ಮೂಡಿಸಲು ಪುರಭವನದಲ್ಲಿ ಆಯೋಜಿಸಿದ್ದ ಪಿಂಕಥಾನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನಗರದಲ್ಲಿ ಎಲ್ಲಾ ಮಹಿಳೆಯರು ಮತಗಟ್ಟೆಗಳಿಗೆ ಬಂದು ತಪ್ಪದೆ ಮತದಾನ ಮಾಡುವ ಸಲುವಾಗಿ ಪಿಂಕ್ ಬೂತ್ ವ್ಯವಸ್ಥೆ ಮಾಡಲಾಗಿದ್ದು, ಎಲ್ಲರೂ ತಪ್ಪದೆ ಮತ ಚಲಾಯಿಸಬೇಕು ಎಂದರು.

ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಮಾತನಾಡಿ, ನಗರದಲ್ಲಿ ಈಗಾಗಲೇ ಎಲ್ಲರಿಗೂ ಮತದಾರರ ಗುರುತಿನ ಚೀಟಿ ವಿತರಣೆ ಮಾಡಿದ್ದು, ಅದರಲ್ಲಿ ಎಲ್ಲಾ ಮಾಹಿತಿಯೂ ಲಭ್ಯವಿರಲಿದೆ ಎಂದು ಹೇಳಿದರು.

ಮತದಾನದ ದಿನ ವೇತನಸಹಿತ ರಜೆಯಿರಲಿದೆ. ಮಹಿಳೆಯರಿಗಾಗಿ ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿಯೂ 5 ಪಿಂಕ್‌ಬೂತ್‌ಗಳ ವ್ಯವಸ್ಥೆ ಮಾಡಲಾಗಿದೆ. ಎಲ್ಲಾ ಪಿಂಕ್‌ಬೂತ್‌ಗಳಲ್ಲಿ ಮಹಿಳಾ ಅಧಿಕಾರಿ/ ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ. ಮಹಿಳೆಯರನ್ನು ಆಕರ್ಷಿಸುವ ರೀತಿ ಮತಗಟ್ಟೆಗಳನ್ನು ಸಿದ್ದಪಡಿಸಲಾಗುವುದು ಎಂದು ಹೇಳಿದರು. ಪಿಂಕ್ ಮತಗಟ್ಟೆಗಳು ಮಾತ್ರವಲ್ಲದೆ ವಿವಿಧ ಥೀಮ್ ಆಧರಿತ ಮತಗಟ್ಟೆಗಳನ್ನು ಮಾಡಲಾಗುತ್ತಿದ್ದು, ಅಂಗವಿಕಲರ ಮತಗಟ್ಟೆ, ತೃತೀಯ ಲಿಂಗಿ ಮತಗಟ್ಟೆ, ತಂತ್ರಜ್ಞಾನ ಮತಗಟ್ಟೆ, ಪರಿಸರ (ಹಸಿರು ಬಣ್ಣದ) ಮತಗಟ್ಟೆ, ಸೈನಿಕ ಮತಗಟ್ಟೆ, ಕ್ರೀಡಾ ಮತಗಟ್ಟೆ, ಯುವ ಮತದಾರರ ಮತಗಟ್ಟೆ, ಸಂಸ್ಕೃತಿ ಮತಗಟ್ಟೆ, ಸೈನಿಕರ ವಿಶೇಷ ಮತಗಟ್ಟೆಗಳಿರಲಿವೆ ಎಂದರು.

ಮತದಾನದ ದಿನ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅಂಬುಲೆನ್ಸ್ ಗಳ ವ್ಯವಸ್ಥೆ ಮಾಡಲಾಗುತ್ತಿದೆ. ಯಾವುದಾದರು ಮತಗಟ್ಟೆಗಳ ಬಳಿ ತುರ್ತು ಸಂದರ್ಭ ಬಂದಲ್ಲಿ, ಅಂಬುಲೆನ್ಸ್ ಮೂಲಕ ವೈದ್ಯರ ಸೇವೆ ಒದಗಿಸಲಾಗುವುದು ಎಂದು ಹೇಳಿದರು.

ಪ್ರತಿಜ್ಞೆ ವಿಧಿ ಬೋಧನೆ: ವಿವಿಧ ರಂಗಗಳ ಮಹಿಳಾ ಪ್ರತಿನಿಧಿಗಳು ಪಿಂಕಥಾನ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಡ್ಡಾಯವಾಗಿ ಮತದಾನ ಮಾಡುವ ಪ್ರತಿಜ್ಞೆ ವಿಧಿ ಸ್ವೀಕರಿಸಿದರು.

ವೋಟ್-ಎ-ಥಾನ್ ವಿಜೇತರಿಗೆ ಪ್ರಶಸ್ತಿ: ವಿಧಾನಸಭೆ ಚುನಾವಣೆ-2023ರಲ್ಲಿ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಮತದಾನವಾಗುವಂತೆ ಮಾಡಲು ಆಯೋಜಿಸಿದ್ದ ವೋಟ್-ಎ-ಥಾನ್ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನ ಹಾಗೂ ಸ್ಮರಣಿಕೆಯನ್ನು ವಿತರಿಸಲಾಯಿತು.

ಪೋಸ್ಟರ್ ಸ್ಪರ್ಧೆ: ನಾಮದೇವ ಕಾಗದಗಾರ - ಪ್ರಥಮ, ವಿ.ಆರ್.ಸಿ ಶೇಖರ್ - ದ್ವಿತೀಯ.

ರೀಲ್ಸ್ ಸ್ಪರ್ಧೆ: ಎಸ್.ಎನ್.ಕ್ರಿಯೇಷನ್ಸ್ (ಎನ್. ಚಂದ್ರಶೇಖರ)– ಪ್ರಥಮ.

ಸ್ಲೋಗನ್ ಸ್ಪರ್ಧೆ: ಪ್ರಶಾಂತ್ ಮೊಟಗಿ - ಪ್ರಥಮ, ಶ್ರೀನಿವಾಸ್ - ದ್ವಿತೀಯ.



ಅಳಿಸಲಾಗದ ಶಾಯಿ

1.20 ಲಕ್ಷ ಶೀಶೆ ಶಾಯಿ ಪೂರೈಕೆ

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯ ವಿಧಾನಸಭೆ ಚುನಾವಣೆಗೆ ಚುನಾವಣಾ ಆಯೋಗವು ಮತದಾರರ ಕೈಬೆರಳಿಗೆ ಹಚ್ಚಲಾಗುವ ಅಳಿಸಲಾಗದ ಶಾಯಿಯನ್ನು ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆಯಿಂದ (ಮೈಲ್ಯಾಕ್) ಪಡೆದಿದೆ.

ಕಾರ್ಖಾನೆಯು 10 ಎಂ.ಎಲ್.ನ 1.20 ಲಕ್ಷ ಶೀಶೆ, ಮತಯಂತ್ರಗಳ ಪ್ಯಾಕಿಂಗ್ ವೇಳೆ ಅಂಟಿಸಲು 90 ಸಾವಿರ ಅರಗು ಸ್ಟಿಕ್ ಪೂರೈಸಿದೆ.

ಕಳೆದ ಚುನಾವಣೆಯಲ್ಲಿ ಇಲ್ಲಿಂದ 1.32 ಲಕ್ಷ ಬಾಟಲಿ ಅಳಿಸಲಾಗದ ಶಾಯಿಯನ್ನು ಚುನಾವಣಾ ಆಯೋಗ ಪಡೆದುಕೊಂಡಿತ್ತು.

ಅಧಿಕಾರಿ ಉದ್ಧಟತನ: ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆ ತರಬೇತಿ ಪಡೆಯುವ ಕೇಂದ್ರದಲ್ಲಿ ಉದ್ಧಟತನ ಹಾಗೂ ಬೇಜವಾಬ್ದಾರಿ ತೋರಿದ ಮಾಪನಶಾಸ್ತ್ರ ಇಲಾಖೆಯ ನಿರೀಕ್ಷಕಿ ಭವ್ಯ ಎಸ್.ಎಸ್. ಅವರನ್ನು ಅಮಾನತುಗೊಳಿಸಿ ಜಿಲ್ಲಾ ಚುನಾವಣಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಗೋವಿಂದರಾಜನಗರ ವಿಧಾನ ಸಭೆ ಕ್ಷೇತ್ರದಲ್ಲಿನ ಡಾ. ಬಿ.ಆರ್. ಅಂಬೇಡ್ಕರ್ ವಿಶ್ವವಿದ್ಯಾಲಯದಲ್ಲಿ ತರಬೇತಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ ಭಾಗವಹಿಸಬೇಕಿದ್ದ ಭವ್ಯ ಹಾಜರಾಗಿ, ಹಿಂದಿನ ಸಾಲಿನಲ್ಲಿ ದಿನಪತ್ರಿಕೆ ಓದುವುದರಲ್ಲಿ ನಿರತರಾಗಿದ್ದರು.

ಆ ಸಮಯದಲ್ಲಿ ಎಂಸಿಸಿ ನೋಡಲ್ ಅಧಿಕಾರಿ ಮತ್ತು ಸೆಕ್ಟರ್ ಅಧಿಕಾರಿಗಳು ಪ್ರಶ್ನಿಸಿದಾಗ, 'ನಾನು ಮಾಡುತ್ತಿರುವುದು ಸರಿ. ತರಬೇತಿ ಕೊಡುವುದು ನಿಮ್ಮ ಕೆಲಸ. ತರಬೇತಿ ಪಡೆಯುವುದು ಬಿಡುವುದು ನನಗೆ ಬಿಟ್ಟಿದ್ದು. ನೀವು ಹೇಳಿದೆಲ್ಲವನ್ನು ಕೇಳುವುದಕ್ಕೆ ನನ್ನನ್ನು ಪ್ರಶ್ನಿಸುವ ಅಧಿಕಾರ ನಿಮಗಿರುವುದಿಲ್ಲ. ನನ್ನ ಕೆಲಸ ನನಗೆ ಗೊತ್ತಿದೆ. ನಿಮ್ಮ ಕೆಲಸ ನೀವು ಮಾಡಿ, ನಾನು ನಿಮ್ಮ ಇಲಾಖೆ ನೌಕರಳಲ್ಲ. ನಿಮ್ಮ ಎಲ್ಲ ವಿಷಯಗಳನ್ನು ಕೇಳಲು, ಪಾಲಿಸಲು ಆಗುವುದಿಲ್ಲ. ಈ ರೀತಿ ತರಬೇತಿ ಉಪಯೋಗಕ್ಕೆ ಬಾರದು. ನೀವು ಏನು ಬೇಕಾದರೂ ಮಾಡಿಕೊಳ್ಳಿ. ಯಾರಿಗಾದರೂ ವರದಿ ಮಾಡಿ. ನನಗೇನೂ ಮಾಡಲಾಗುವುದಿಲ್ಲ' ಎಂದು ಉದ್ಧಟನದಿಂದ ವರ್ತಿಸಿದ್ದಾರೆ.

ಈ ವರ್ತನೆ ಸರ್ಕಾರಿ ನೌಕರರಿಗೆ ತರವಲ್ಲದ್ದಾಗಿದ್ದು, ರಾಷ್ಟ್ರೀಯ ಕಾರ್ಯಕ್ರಮದಂತಹ ಚುನಾವಣೆ ಕಾರ್ಯಕ್ಕೆ ಅಡಚಣೆ ಉಂಟು ಮಾಡಿರುವುದನ್ನು ಉದ್ಧಟನ ಹಾಗೂ ಬೇಜವಾಬ್ದಾರಿಯನ್ನು ಗಂಭೀರವಾಗಿ ಪರಿಗಣಿಸಿರುವ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ಭವ್ಯ ಅವರನ್ನು ಮೇ 8ರಿಂದ ಜಾರಿಯಾಗುವಂತೆ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಅನ್ಯ ಕ್ಷೇತ್ರಗಳಲ್ಲಿ ಆನೇಕಲ್ ರಾಜಕಾರಣಿಗಳು!

ಪ್ರಜಾವಾಣಿ ವಾರ್ತೆ

ಆನೇಕಲ್: ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ ಆನೇಕಲ್ ತಾಲ್ಲೂಕಿನ ನಾಲ್ವರು ರಾಜ್ಯದ ಬೇರೆ ಬೇರೆ ಕಡೆ ನಾಲ್ಕು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದಾರೆ.

ಗದಗ ಜಿಲ್ಲೆಯ ರೋಣ ವಿಧಾನಸಭಾ ಕ್ಷೇತ್ರದಿಂದ ಆನೇಕಲ್‌ನ ದೊಡ್ಡಯ್ಯ ಅವರು ಎಎಪಿ ಅಭ್ಯರ್ಥಿಯಾಗಿ ಅಖಾಡಕ್ಕಿಳಿದಿದ್ದಾರೆ.

ಬಾಗೇಪಲ್ಲಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ತಾಲ್ಲೂಕಿನ ಸರ್ಜಾಪುರದ ಸಿ. ಮುನಿರಾಜು ಸ್ಪರ್ಧೆಯಲ್ಲಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ತಾಲ್ಲೂಕಿನ ಜಿಗಣಿಯ ಕೃಷ್ಣಪ್ಪ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ಸಕಲೇಶಪುರ ವಿಧಾನಸಭಾ ಕ್ಷೇತ್ರದಲ್ಲಿ ಜಿಗಣಿಯ ಮುರಳಿ ಕಾಂಗ್ರೆಸ್ ಪಕ್ಷದಿಂದ ಕಣಕ್ಕಿಳಿದಿದ್ದಾರೆ. ರೋಣ ಕ್ಷೇತ್ರದ ಎಎಪಿ ಅಭ್ಯರ್ಥಿ ಆನೇಕಲ್ ದೊಡ್ಡಯ್ಯ ಸಂಗೊಳ್ಳಿ ರಾಯಣ್ಣ ಬ್ರಿಗೇಡ್‌ನ ಕಾರ್ಯಾಧ್ಯಕ್ಷರಾಗಿದ್ದರು. ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿದ್ದ ಸಿ. ಮುನಿರಾಜು ಪ್ರಸ್ತುತ ಎಸ್‌ಟಿಆರ್‌ಆರ್ ಅಧ್ಯಕ್ಷರಾಗಿದ್ದಾರೆ. ಜಿಗಣಿಯ ಜಿ.ಕೃಷ್ಣಪ್ಪ ಯುವ ಕಾಂಗ್ರೆಸ್, ಕೆಪಿಸಿಸಿ ಸದಸ್ಯರಾಗಿ ಕಾರ್ಯನಿರ್ವಹಿಸಿ ಅದೃಷ್ಟ ಪರೀಕ್ಷೆಗಾಗಿ ಸುಳ್ಯ ಕ್ಷೇತ್ರದತ್ತ ತೆರಳಿದ್ದಾರೆ. ಐದಾರು ವರ್ಷಗಳಿಂದ ಸಕಲೇಶಪುರದಲ್ಲಿ ಸಂಘಟನೆಯಲ್ಲಿ ತೊಡಗಿದ್ದ ಜಿಗಣಿಯ ಮುರಳಿ ಸಕಲೇಶಪುರ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ.

ಕಾಂಗ್ರೆಸ್ ಸಭೆ: ಶಾಲೆ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸಿದ್ದ ಆರೋಪದಡಿ ಮಂಜುನಾಥನಗರದ 11ನೇ ಮುಖ್ಯರಸ್ತೆಯಲ್ಲಿರುವ ರಸನಾ ಇಂಗ್ಲಿಷ್ ಪ್ರೌಢಶಾಲೆ ಆಡಳಿತ ಮಂಡಳಿ ವಿರುದ್ಧ ಬಸವೇಶ್ವರನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮೇ 4ರಂದು ರಾತ್ರಿ ಶಾಲೆಯೊಳಗೆ ಅಕ್ರಮವಾಗಿ ಕಾಂಗ್ರೆಸ್ ಕಾರ್ಯಕರ್ತರ ಸಭೆ ನಡೆಸಲಾಗುತ್ತಿತ್ತು. ಮಾಹಿತಿ ಬರುತ್ತಿದ್ದಂತೆ ಚುನಾವಣಾಧಿಕಾರಿಗಳ ತಂಡ ದಾಳಿ ಮಾಡಿತ್ತು. ತಂಡದ ಅಧಿಕಾರಿ ನೀಡಿರುವ ದೂರು ಆಧರಿಸಿ ಶಾಲೆ ಆಡಳಿತ ಮಂಡಳಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ನೋಟಿಸ್ ನೀಡಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.


ಬೆಂಗಳೂರಿನ ಚಾಮರಾಜಪೇಟೆಯ 1ನೇ ಮುಖ್ಯರಸ್ತೆಯ 7ನೇ ಕ್ರಾಸ್‌ನಲ್ಲಿ ಮಂಗಳವಾರ ದೊಡ್ಡ ಮರವೊಂದು ಬುಡಸಹಿತ ಬಿದ್ದ ಪರಿಣಾಮ ಕಾರು ಮತ್ತು ಆಟೊ ಜಖಂಗೊಂಡಿತ್ತು. ಸಂಜೆ ರಾಜಾಜಿನಗರ, ಯಶವಂತಪುರ, ಮೆಜೆಸ್ಟಿಕ್ ಸುತ್ತಮುತ್ತ ಜಿಟಿಜಿಟಿ ಮಳೆಯಾಗಿದೆ ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಕೋಲಾರದಲ್ಲಿ ಜೋರು ಮಳೆ

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲೆಯ ನಗರ ಹಾಗೂ ಗ್ರಾಮಾಂತರ ಪ್ರದೇಶದ ವಿವಿಧೆಡೆ ಮಂಗಳವಾರ ಮಧ್ಯಾಹ್ನ ಬಿರುಸಿನ ಮಳೆಯಾಯಿತು.

ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನ ಸಿಡಿಲು ಗುಡುಗಿನಿಂದ ಕೂಡಿ ಒಂದು ತಾಸು ಜೋರು ಮಳೆ ಸುರಿಯಿತು. ಕಳೆದ ಐದು ದಿನಗಳಿಂದ ಜಿಲ್ಲೆಯಲ್ಲಿ ಮಳೆಯಾಗುತ್ತಿದೆ. ಬುಧವಾರ ಮತದಾನ ನಡೆಯಲಿದ್ದು, ಮಳೆ ಅಡ್ಡಿ ಆತಂಕ ವ್ಯಕ್ತವಾಗಿದೆ.

ಸಲ್ಮಾನ್‌ಗೆ ಬೆದರಿಕೆ: ಆರೋಪಿ ವಿರುದ್ಧ ಲುಕ್ ಔಟ್ ನೋಟಿಸ್

ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್‌ಗೆ ಬೆದರಿಕೆಯ ಇ-ಮೇಲ್ ರವಾನಿಸುತ್ತಿದ್ದ ಬ್ರಿಟನ್‌ನಲ್ಲಿನ ಭಾರತದ ವಿದ್ಯಾರ್ಥಿಯ ವಿರುದ್ಧ ಮುಂಬೈ ಪೊಲೀಸರು ಲುಕ್ ಔಟ್ ನೋಟಿಸ್ ಜಾರಿಗೊಳಿಸಿದ್ದಾರೆ.

'ಬ್ರಿಟನ್‌ನಲ್ಲಿ ವೈದ್ಯಕೀಯ ವ್ಯಾಸಂಗ ನಡೆಸುತ್ತಿರುವ ಈ ವಿದ್ಯಾರ್ಥಿಯು ಹರಿಯಾಣದವನಾಗಿದ್ದು, ಜೈಲಿನಲ್ಲಿರುವ ಪಾತಕಿ ಗೋಲ್ಡಿ ಬ್ರಾರ್ ಹೆಸರಿನಲ್ಲಿ ಬೆದರಿಕೆ ಒಡ್ಡಿದ್ದ' ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

2 ಶಾಲೆಗೆ ಹುಸಿ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಎರಡು ಖಾಸಗಿ ಶಾಲೆಗಳಿಗೆ ಮಂಗಳವಾರ ಹುಸಿ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ತಾಲ್ಲೂಕಿನ ಹುಸ್ಕೂರು ಸಮೀಪದ ಎಬಿನೇಜರ್ ಶಾಲೆಗೆ ಬಾಂಬ್ ಇಟ್ಟಿರುವುದಾಗಿ ಮಂಗಳವಾರ ಬೆಳಗ್ಗೆ ಶಾಲೆಯ ಇ-ಮೇಲ್‌ಗೆ ಸಂದೇಶ ಬಂದಿದೆ. ತಕ್ಷಣ ಶಾಲೆಯ ಆಡಳಿತ ಮಂಡಳಿಯು ಪ್ರವೇಶ ಪ್ರಕ್ರಿಯೆ ಸ್ಥಗಿತಗೊಳಿಸಿ, ಸಿಬ್ಬಂದಿಯನ್ನು ಶಾಲಾ ಆವರಣದಿಂದ ಹೊರ ಕಳುಹಿಸಿತು.

ಸ್ಥಳಕ್ಕೆ ಬಂದ ಹೆಬ್ಬಗೋಡಿ ಪೊಲೀಸರು, ಶ್ವಾನದಳ ಮತ್ತು ಬಾಂಬ್ ನಿಷ್ಕ್ರಿಯದಳದ ಸಿಬ್ಬಂದಿ ತಪಾಸಣೆ ನಡೆಸಿದ ಬಳಿಕ ಇದೊಂದು


ಆನೇಕಲ್ ತಾಲ್ಲೂಕಿನ ಸಿಂಗೇನ ಅಗ್ರಹಾರದ ಎಬಿನೇಜರ್ ಶಾಲೆಗೆ ಬಾಂಬ್ ಸಂದೇಶ ಬಂದಿದ್ದರಿಂದ ಪೊಲೀಸರು ತಪಾಸಣೆ ನಡೆಸಿದರು

ಹುಸಿ ಬಾಂಬ್ ಬೆದರಿಕೆ ಎಂದು ತಿಳಿದುಬಂದಿದೆ.

ಬನ್ನೇರುಘಟ್ಟ ಸಮೀಪದ ಹುಲ್ಲಹಳ್ಳಿಯ ಬಾಲವಿದ್ಯಾ ಮಂದಿರ ಶಾಲೆಗೂ ಹುಸಿ ಬಾಂಬ್ ಕರೆ ಬಂದಿತ್ತು. ಪೊಲೀಸರು, ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ತಪಾಸಣೆ ನಡೆಸಿ ಇದೊಂದು ಹುಸಿ ಬಾಂಬ್ ಬೆದರಿಕೆ ಎಂಬುದಾಗಿ ಸ್ಪಷ್ಟಪಡಿಸಿದರು. ಈ ಸಂಬಂಧ ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. 2022ರ ಏಪ್ರಿಲ್ 8ರಂದು ತಾಲ್ಲೂಕಿನ ಐದು ಶಾಲೆಗಳಿಗೆ ಹುಸಿ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು.

ನ್ಯೂ ಸೆಂಚುರಿ ಶಾಲೆಗೆ ಉತ್ತಮ ಫಲಿತಾಂಶ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಪಟ್ಟಣದ ನ್ಯೂ ಸೆಂಚುರಿ ಶಾಲೆಯ ವಿದ್ಯಾರ್ಥಿ ಎನ್.ಎಸ್. ನಿಶಾಂತ್ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 624 ಅಂಕ (ಶೇ 99.8) ಗಳಿಸುವ ಮೂಲಕ ರಾಜ್ಯಕ್ಕೆ ದ್ವಿತೀಯ ಸ್ಥಾನ ಗಳಿಸಿದ್ದಾನೆ.


ನಿಶಾಂತ್

ಶಾಲೆಯು ಶೇ 100 ಫಲಿತಾಂಶ ಪಡೆದಿದೆ. 37 ಡಿಸ್ಟಿಂಕ್ಷನ್, 29 ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಪ್ರಾಂಶುಪಾಲರಾದ ಅಕ್ಷತಾ. ಎನ್.ಕಾರ್ಣಿಕ್ ಅವರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಇಮ್ರಾನ್ ಬಂಧನ ಎತ್ತಿಹಿಡಿದ ಹೈಕೋರ್ಟ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಬಂಧಿಸಿರುವ ರಾಷ್ಟ್ರೀಯ ಭ್ರಷ್ಟಾಚಾರ ನಿಗ್ರಹ ಮಂಡಳಿಯ ಕ್ರಮವನ್ನು ಇಸ್ಲಾಮಾಬಾದ್ ಹೈಕೋರ್ಟ್ ಮಂಗಳವಾರ ಎತ್ತಿಹಿಡಿದಿದೆ.

'ಕಾನೂನಿನ ಅನುಸಾರವಾಗಿಯೇ ಇಮ್ರಾನ್ ಅವರನ್ನು ಬಂಧಿಸಲಾಗಿದೆ' ಎಂದು ಹೈಕೋರ್ಟ್ ಹೇಳಿದೆ.

'ಬಂಧನವು ಕಾನೂನಿಗೆ ವಿರುದ್ಧವಾಗಿದೆ. ಹೀಗಾಗಿ ಇಮ್ರಾನ್ ಅವರನ್ನು ಬಿಡುಗಡೆಗೊಳಿಸುವಂತೆ ನ್ಯಾಯಾಲಯವು ಅಧಿಕಾರಿಗಳಿಗೆ ನಿರ್ದೇಶಿಸಬೇಕು' ಎಂದು ಪಾಕಿಸ್ತಾನ್ ತೆಹ್ರೀಕ್–ಇ–ಇನ್ಸಾಫ್ (ಪಿಟಿಐ) ಪಕ್ಷವು ಕೋರಿತ್ತು.

ಮಾಫಿ ಸಾಕ್ಷಿಯಾಗಲು ನಿರಾಕರಿಸಿದ ಮಾನೆ

ಮುಂಬೈ (ಪಿಟಿಐ): ರಿಲಯನ್ಸ್ ಸಮೂಹದ ಅಧ್ಯಕ್ಷ ಮುಕೇಶ್ ಅಂಬಾನಿ ಅವರ ಐಷಾರಾಮಿ ಮನೆ 'ಆಂಟಿಲಿಯಾ' ಬಳಿ ಅನುಮಾನಾಸ್ಪದವಾಗಿ ನಿಂತಿದ್ದ ಸ್ಕಾರ್ಪಿಯೊ ಕಾರಿನಲ್ಲಿ ಸ್ಫೋಟಕ ಪತ್ತೆಯಾಗಿದ್ದ ಹಾಗೂ ಆಟೊಮೊಬೈಲ್ ಬಿಡಿಭಾಗಗಳ ಡೀಲರ್ ಮನ್‌ಸುಖ್ ಹಿರಾನಿ ಅವರ ನಿಗೂಢ ಸಾವು ಪ್ರಕರಣದ ಆರೋಪಿಯಾಗಿರುವ ಪೊಲೀಸ್ ಇಲಾಖೆಯ ಮಾಜಿ ಸಿಬ್ಬಂದಿ ಸುನೀಲ್ ಮಾನೆ, ಈ ಪ್ರಕರಣದ ಮಾಫಿ ಸಾಕ್ಷಿಯಾಗಲು ನಿರಾಕರಿಸಿದ್ದಾರೆ.

ಈ ಸಂಬಂಧ ಅವರು ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಅರ್ಜಿಯನ್ನು ಮಂಗಳವಾರ ಹಿಂದಕ್ಕೆ ಪಡೆದಿದ್ದಾರೆ.

'ನಾನು ಈ ಹಿಂದೆ ಸಲ್ಲಿಸಿದ್ದ ಅರ್ಜಿಯನ್ನು ಹಿಂಪಡೆಯಲು ಬಯಸುತ್ತೇನೆ' ಎಂದು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

NEW FLORENCE English School, 8th main, Shivanagar, Rajajinagar, Bengaluru-10, requires lady teachers to handle Nursery, Higher Primary (English, Science, Social), High school (Social, English), Ayahs: 9620396782 /9845346754

Mirambika School For New Age (CBSE)
Sri Aurobindo Marg, 1st Phase, J.P. Nagar, Bengaluru- 560078
Ph: 080-26640562, 42015077,
Email: msfna.info@gmail.com

INVITES APPLICATIONS FOR

1. High School Co-ordinator
Qualification: M.A.(English), B.Ed. Age: 35 to 45 yrs.
Minimum teaching experience - 10 years in CBSE institutions (Sub: English and Social Science for High School) and 5 years experience as Co-ordinator with excellent communication skill and knowledge of CBSE norms.

2. Front Office Executive/Receptionist (Female Candidates only)
Qualification: Graduation Age: 25 to 35 yrs.
5 years of relevant experience with excellent communication skill in English, Kannada and Hindi and knowledge of computer.

Candidates with relevant experience are required to submit their resume with recent passport photograph to The Principal within 7 days from the date of Advertisement to the above email ID.

MOUNT CARMEL PU COLLEGE #58, Palace Road, Bengaluru-52. mountcarmelpucollege @yahoo.co.in Phone-22370404, requires Lecturers Post Graduates in Library Science & Commerce (with B.Ed.) Apply before 13/05/2023

REQUIRED EXPERIENCED & Trained Teachers to handle Primary & High School classes. A) English- Qualification: B.A/M.A.,B.Ed/M.Ed (B)P.E.Teachers (C)DTP Operator. Interested candidates contact Max Muller Public School, Mahalakshmi Layout, Bangalore-96. Ph:23376050. E-mail: maxmullerpublicschool .mlayout@gmail.com

WANTED TEACHERS with B.Ed Subjects: English, Science, Maths, Social, Computer and kindergarten, Teachers. Contact. 9844421155.

GOODWILL ENGLISH High School, Yelahanka Oldtown Urgently requires Computer, Physical Education Teachers for High School.Walkin: 10th to 13th April 2023 between: 10am to 1pm. Contact: 9448620241

MARIAN PRIMARY AND MIDDLE SCHOOL (State Syllabus) #3, Miller's Road, Vasanthnagar, Bangalore-560052. Email: marianprischool@gmail.com, Require Trained TEACHERS BA/ B.Ed, B.Sc/ B.Ed, BPEd (PUC/ D.Ed), Maths/ Science/ Hindi/ Computer. Contact: 080- 22201321, 9108640154, 7090455092.

FRANK PUBLIC SCHOOL JP.Nagar 6th Phase, Requires HIGH SCHOOL ENGLISH, HINDI TEACHERS. rumysud@gmail.com WhatsApp7019301626

WANTED PRIMARY and HIGH SCHOOL TEACHERS for immediate appointment Subjects: MATHS,ENGLISH, SOCIAL COMPUTER and PE St.YASH PUBLIC SCHOOL, Kempegowdanagar, Magadi Main-road, Bangalore-91 Phone:7204347583, 7204347584

REQD TEACHERS all subjects, computer, Physical, music instructors, Warden for girls, boys hostel for high school walk-in on 13/05/2023 Saturday 10:30 AM Venue: The KWAB No. 69 1st Main Road, Seshadripuram Bengaluru-20. Contact : 9741122706, 6363497093

URGENTLY REQUIRED KG Classes, Primary & Higher Primary TEACHERS to teach all subjects and Hindi kannada teachers for High school. P.E Teacher for school. NEW PRIYADARSHINI SCHOOL, Kempapura Hebbal Bangalore-24 Contact: 9886855684, 6361986064

GURUKULA INTERNATIONAL SCHOOL Requires, NURSERY, NTT, English, Maths, EVS, Kannada and Computer Teachers for Primary and Lady Accountant with Kannada Typing. 9th Cross, Near Magadi Road Metro Station, Bangalore-23. 7829338292 7676676629

ANJANA VIDYAKENDRA NGO-run Gurukul HighSchool off-Whitefield/ Sarjapur Bengaluru requires Graduate/B.Ed Math Science Teachers. Good salary & Lunch, Accommodation. 9448584569, 7760409784, 6361243095. info@brahmi.org

PRAGYAA PRESCHOOL & Daycare, Kathriguppe, BSK III Stage is looking for Experienced & Trained NTT /MTT /ECCE Preschool Teachers to handle Playgroup, Nursery, LKG & UKG Classes. Good English Skills preferred. Contact: 9886774737, email: pragyaa.schools @gmail.com

MOUNT CARMEL ENGLISH SCHOOL
C.A. Site No.3, 12th Cross, 1st Stage, Ideal Homes, Rajarajeshwarinagar, Bangalore-98.
Required PRT, TGT, PGT'S for High School Computer, Mathematics, Science, Sanskrit and Physical Education with excellent English Communication and teaching experience is preferred for the academicyear2023-24.
Eligible candidates may mail your application with updated resume to Email: mountcarmel.rrnagar@gmail.com
Contact: 080-28602294/95
Walk-in interview with your original documents and CV on 13/05/2023 Saturday, between 10.00am to 1.00pm in the School Premises.

REQUIRED EXPERIENCED Teachers Hindi (primary), Yoga and Music. Contact: Royal Public School,Ullal, Bangalore. 9035033560, 8867569333

ENGLISH & MATH TEACHERS needed for CHITRAKOOTA CBSE School in Nagarbhavi, Kengeri Ring Road, with High Salary Immediately or for the academic year. Call: 7829647333.

WANTED TEACHERS, B.Ed (Maths, Science,Hindi), Vijayanagar, Bengaluru. Contact:23388262/ 9611625663. E-mail: stpeterenglishschool@ gmail.com

General

LADY MANAGER required to handle multiple roles. Meeting, Quotation, billing, payments. WhatsApp CV to 9019043325. location: Bangalore. Salary: 20k+. Kannada English must.

MEDANI GROUP looking for office administrators office boys and driver call 9148454022 email medani metro land @gmail.com

Engg/ Production Technical

S.L.V POWER CORPORATION Requires Dealers across Karnataka, Sales &Service Engineers Karnataka. Cooper- SLV Genset Manufacturers looking for the above. Contact: 9844040347/ 8310574132. slvpowercorporation@ yahoo.co.in

Marketing & Sales

MARKETING & Sales Wanted experienced Sales Officers in Industrial Chemicals with two wheeler. Contact. 9845123740/ 8884599855

AUTOMOTIVE

Four Wheelers Selling

Benz

DAMAGED BY FLOODED WATER PY01CG6162 MERCEDES C220CDI 2014 at`Sundaram Motors`Kasturba Road`for`sale`with or`without`RC Quote`after inspection within`seven days SampatSurveyor 9900182098

MORE Classifieds Ads on Subsequent Pages

REAL ESTATE SELLING

Residential/ Commercial

Sadashiva Nagar

PRIME RESIDENTIAL VACANT PLOT 45X60 OPPOSITE PARK ACROSS SADASHIVANAGAR SWIMMING POOL SOUTH FACING CONTACT OWNER, 98440 18823

Sites

Hesaraghatta

30X40 SITE sale (2 side road) Kirloskar layout, Hesaraghata main road, opposite Sapthagiri college. 9620480363.

BUSINESS

Business to Business

Business

NEW MINERAL WATER PLANT working in fully Swing at Dabaspet is floated FOR RENT. Latest Machine of 90BPM. with Blowing Machine. 9449835744/ 9535691743.

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189


EDUCATION CORNER

EAST WEST PUBLIC SCHOOL
EAST WEST
C.M. Nagaraj Road, Subramanyanagar, Bangalore – 560010

Management, Staff and Students Congratulate
DISTINCTION HOLDERS IN S.S.L.C 2022 - 2023 EXAM



YASHASWINI R BHAT 97%



VASUKI YADAV V 93% | MANYA S 92% | NAGESHWARI L 92% | VISHRUTH S HIREMATH 91%
JEEVAN J 88% | SUKHITHA S 88% | DAKSHATH GOWDA J 87% | TARUN S 87%
MANJUNATH 85% | HEMSAGAR GOWDA C 85%

ADMISSIONS OPEN FOR THE ACADEMIC YEAR 2023-2024

EDUCATION CORNER ಕ್ಲಾಸಿಫೈಡ್ಸ್

R.E.S. POLYTECHNIC
Estd: 1986 - Recognised by Govt. of Karnataka & AICTE
Visit us for ADMISSIONS & CAREER GUIDANCE
JOIN DIPLOMA IN: ♦ Computer Science ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-23401

GOODWILL CHRISTIAN COLLEGE FOR WOMEN
No.10, Promenade Road, Frazer Town (Opp. Coles Park) Bengaluru - 560 005
CSI Karnataka Central Diocese
Affiliated to Bengaluru North University
NAAC ACCREDITED
Phone: 080 - 41516793, 41100422, 7022905576
Website: www.goodwillchristiancollege.com
E-mail: goodwillchristiancollege@gmail.com
Instagram: goodwillchristiancollege
ADMISSIONS OPEN 2023 - 2024
COURSES OFFERED
B.Com | BBA | BCA | B.Sc | B.A.
ROUNAQH



ADMISSIONS ARE OPEN
Placement Assistance provided
Limited seats only



Karnataka Rank Holders
Diploma in Aeronautical Engineering
1st Rank Sumantha Upadhyaya K. S. | 3rd Rank Darshan S.

Diploma in Engineering Courses
- Aeronautical Engineering
- Automobile Engineering
- Mechanical Engineering
- Computer Science and Engineering

Minimum Eligibility: 10th Pass

HEA POLYTECHNIC
BANGALORE, KARNATAKA
(Approved by DTE & AICTE)
P. B.No. 3776, Ashwathanagar, Marathahalli, Bangalore-560037 Ph: 080-25238650, 25232217
M: 8971404357, 9740037853 Toll free: 18004258650
Email: admissions@hindustanacademy.edu.in
80504 61016
www.hindustanacademy.edu.in
See more details

MAX MULLER PUBLIC SCHOOL
BEML Layout, Basaveshwaranagar, Bengaluru-560 079. Ph.: 080-23233455



SMT. HEMALATHA HEAD MISTRESS

TOPPERS OF SSLC EXAMINATION 2022-23



THARIKA V. 97.12%	BHOOMIKA R.Y. 96.8%	ANIRUDH JAYANTH R. 96.32%	C. KRISHNATEJA 94.56%	SHREYA G.S. 92.8%	YASHWANTH GOWDA N. 92.48%
AMRUTHAVALLI M.R. 91.84%	VANDANA V. 91.52%	YATHIKSHA B. 91.36%	STEVEN ANTHONY 91.04%	VAJIHA MOHAMED NOAMAN 90.88%	ANANYA T. 90.72%
CHAITANYA S. 90.72%	SADHANA R. 90.08%	SHRIYA SAMEER VISARIYA 89.92%	NAVYA M. 89.28%	NANDINI R. 88.96%	MAHESHWARI J. 88.8%
PURVI R. SARAWAD 88.16%	BINDUSHRI D. 88%	DHANUSH G. 87.68%	BINDUSHREE M.R. 87.2%	ABHILASH S. 86.24%	RAJATH T. 85.92%	JEEVITHA N. 85.76%
KIRTI M. JAIN 85.28%	CHINMAYI R. 85.12%	NITHYA SHREE V. 85.12%	KUSUMA H.P. 84.64%	UDAY H.L. 84.32%	DHANUSH M. 84%	HARSHITHA J. 83.84%

C.B. BHANDARI JAIN COLLEGE
(Affiliated to Bengaluru City University & Recognised by the Govt. of Karnataka)
Managed By : SHREE MAHAVEER JAIN SHIKSHAN SANGH, BENGALURU
84, K.R. Road, Shankarpuram, Bangalore - 560 004. Ph: 080 2661 1924, 080 4160 0090
Email : cbbhandarijaincollege@gmail.com Website: www.cbbhandarijaincollege.ac.in

ADMISSIONS OPEN FOR
PUC : ABES / ABECS
DEGREE :
B.Com / B.Com - Accounting & Finance / B.B.A / B.C.A / M.Com
B.A - Economics, Psychology, Journalism & Mass Communication
II PUC TOPPERS 2022-23



MONISHA S 98.3% | ANISHA M JAIN 98.1% | SYEDA FATHIMA 97.8% | MISBAH TAJ 96.8% | CHANDRIKA N 96.1% | ARNAV R AITHAL 95.5%

FREE Value Added Certificate Courses | AVAIL MERIT SCHOLARSHIPS

Vijaynagar Educational Trust (R)
St. JOHN'S HIGH SCHOOL
EAST WEST St. John's High School
[A Unit of East West Group of Institutions]
Vijayanagar, Bangalore-104.

Management, Staff and Students Congratulate

100% Result | SSLC TOPPERS OF 2022-2023 | 100% Result



TISHA A RAJPUROHIT 94.88% Total Marks 587

D A BHAVANA 93.92% Total Marks 587 | PAYAL S. 93.92% Total Marks 587 | TEJASWI C, 93.92% Total Marks 587 | SUJAL PARMAR 92.96% Total Marks 581
THANMYE A SHETTY 92.48% Total Marks 578 | HEMASHRI S. 91.38% Total Marks 573 | LANKESH U.B. 91.36% Total Marks 571 | YUKTHI P. 91.04% Total Marks 569
ABHISHEK V. 90.75% Total Marks 567 | GREESHAM NAGARATHNA 88.16% Total Marks 551 | MARY SHAROON S. 88% Total Marks 550 | HAAMID HASSAN 86.08% Total Marks 538 | PREKSHA .S. 86.08% Total Marks 538

ADMISSIONS OPEN FOR THE ACADEMIC YEAR 2023-2024

DH ಪ್ರಜಾವಾಣಿ
Classifieds
Education Special



SPECIAL RATES FOR
- Admission Notice
- Education Success
- Congratulation Ads

For More Details Contact:
9731810277 | 9901641752 | 9845114560
9886213331 | 080- 45557163 | 45557164
Email : dhclassifieds@deccanherald.co.in







1. ಬೆಂಗಳೂರಿನ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಬಿಎಸ್‌ಎಫ್ ಯೋಧರು ಸೂಕ್ಷ್ಮ ಮತಗಟ್ಟೆ ಪ್ರದೇಶಕ್ಕೆ ತೆರಳಲು ಸಿದ್ಧರಾಗಿದ್ದು ಮಂಗಳವಾರ ಕಂಡುಬಂತು 2. ಬೆಂಗಳೂರಿನ ಗೃಹ ವಿಜ್ಞಾನ ಕಾಲೇಜಿನ ಆವರಣದಿಂದ ಇವಿಎಂ ಹೊತ್ತ ಚುನಾವಣಾ ಸಿಬ್ಬಂದಿ ಮತಗಟ್ಟೆಗಳಿಗೆ ತೆರಳಿದರು 3. ವಿಧಾನಸಭಾ ಚುನಾವಣೆಗೆ ಮುನ್ನ ದಿನವಾದ ಮಂಗಳವಾರ ಬೆಂಗಳೂರಿನ ಹೆಬ್ಬಾಳದಲ್ಲಿರುವ ಪಶು ವೈದ್ಯಕೀಯ ಕಾಲೇಜಿನ ಆವರಣದಲ್ಲಿ ಚುನಾವಣಾ ಸಿಬ್ಬಂದಿ ಮತಗಟ್ಟೆಗಳಿಗೆ ತೆರಳುವ ಮುನ್ನ ಇವಿಎಂ ಯಂತ್ರ ಪರಿಶೀಲಿಸಿದರು –ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌ಜಿ., ರಂಜು ಪಿ

28 ಕ್ಷೇತ್ರಗಳಲ್ಲಿ 97 ಲಕ್ಷ ಮತದಾರರು • ನಿರಂತರ ಜಾಗೃತಿ ಕಾರ್ಯಕ್ರಮ • ಎಲ್ಲರಿಗೂ ರಜೆ ಘೋಷಣೆ • ಗರಿಷ್ಠ ಮತದಾನದ ನಿರೀಕ್ಷೆ

389 ಅಭ್ಯರ್ಥಿಗಳ ಭವಿಷ್ಯ ಇಂದು ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ವಿಧಾನಸಭೆ ಚುನಾವಣೆ ಮತದಾನಕ್ಕೆ ಸರ್ವ ಸಿದ್ಧತೆಯಾಗಿದೆ.

ಮತದಾನದ ಪ್ರಮಾಣ ಹೆಚ್ಚಿಸಲು ಚುನಾವಣಾ ಆಯೋಗ, ಜಿಲ್ಲಾಡಳಿತ ಒಂದು ತಿಂಗಳಿಂದ ನಡೆಸಿದ ಕಸರತ್ತಿನ ಪ್ರತಿಫಲ ಬುಧವಾರ ಗೊತ್ತಾಗಲಿದೆ. ಈ ಬಾರಿ ಗರಿಷ್ಠ ಮತದಾನವಾಗಬಹುದು ಎಂದು ನಿರೀಕ್ಷಿಸಲಾಗಿದೆ.

ಬೆಂಗಳೂರಿನ 28 ವಿಧಾನಸಭೆ ಕ್ಷೇತ್ರಗಳಲ್ಲಿ 97 ಲಕ್ಷ ಮತದಾರರಿದ್ದು, 8,802 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಮತದಾರರನ್ನು ಮತಗಟ್ಟೆಗೆ ಆಕರ್ಷಿಸಲು ಚುನಾವಣೆ ಆಯೋಗ, ಬಿಬಿಎಂಪಿ ವತಿಯಿಂದ ಸ್ವೀಪ್ ಕಾರ್ಯಕ್ರಮದಡಿ ರ‍್ಯಾಲಿ, ಜಾಥಾ, ಬೀದಿ ನಾಟಕ, ಪ್ರತಿಜ್ಞಾ ವಿಧಿ ಬೋಧನೆ ಸೇರಿದಂತೆ ಕಾರ್ಖಾನೆಗಳಲ್ಲಿ ಮತದಾನದ ಅರಿವು ಮೂಡಿಸಲಾಗಿತ್ತು. ಕಳೆದ ಎರಡು ಚುನಾವಣೆಗಳಲ್ಲಿ ಅಂದರೆ 2013ರಲ್ಲಿ ಶೇ 57.82, 2018ರಲ್ಲಿ ಶೇ 55.12ರಷ್ಟು ಮತದಾನವಾಗಿತ್ತು. ಇದನ್ನು ಕನಿಷ್ಠ ಶೇ 75ಕ್ಕೆ ಹೆಚ್ಚಿಸಬೇಕೆಂಬ ಗುರಿ ಹೊಂದಿ, ಜಾಗೃತಿ ಕಾರ್ಯಕ್ರಮಗಳನ್ನು ರೂಪಿಸಲಾಗಿತ್ತು.

ನಗರದಲ್ಲಿ ಮತದಾನದ ಪ್ರಮಾಣ ಕಡಿಮೆಯಾಗುತ್ತಿರುವ ಬಗ್ಗೆ ಚುನಾವಣೆ ಆಯೋಗ ಆತಂಕ ವ್ಯಕ್ತಪಡಿಸಿತ್ತು. ಹೀಗಾಗಿ ಸ್ವೀಪ್ ಕಾರ್ಯಕ್ರಮಗಳನ್ನು ಈ ಬಾರಿ ಹೆಚ್ಚು ಮಾಡಲಾಗಿತ್ತು. ಐಟಿ–ಬಿಟಿ ಕಂಪನಿಗಳು, ಗಾರ್ಮೆಂಟ್ಸ್, ಕಾಸಿಯಾ ಸೇರಿದಂತೆ ಎಲ್ಲ ರೀತಿಯ ಕಂಪನಿ, ಕಾರ್ಖಾನೆಗಳ ಮಾಲೀಕರು, ಉದ್ಯೋಗಿಗಳಿಗೆ ಮತದಾನದ ಅರಿವು ಮೂಡಿಸಲಾಗಿದೆ. ಮತದಾನದ ದಿನ ತುರ್ತು ಕೆಲಸಗಳಲ್ಲಿ ನಿರತರಾದವರಿಗೆ ಹೊರತಾಗಿ ಎಲ್ಲರಿಗೂ ರಜೆಯನ್ನೂ ಘೋಷಿಸಲಾಗಿದೆ. ಇಷ್ಟೆಲ್ಲ ಕಸರತ್ತು ಮುಗಿಸಿದ ಮೇಲೆ ಬಿಬಿಎಂಪಿ ಅಧಿಕಾರಿಗಳು ಹೆಚ್ಚಿನ ಪ್ರಮಾಣದಲ್ಲಿ ಮತದಾನವಾಗುವ ನಿರೀಕ್ಷೆಯಲ್ಲಿದ್ದಾರೆ. ಬುಧವಾರ ಸಂಜೆ ಮತದಾರರು ಸ್ಪಂದಿಸಿದ ಶೇಕಡವಾರು ಪ್ರಮಾಣ ಹೊರಬೀಳಲಿದೆ.

389 ಅಭ್ಯರ್ಥಿಗಳು: 28 ವಿಧಾನಸಭೆ ಕ್ಷೇತ್ರಗಳಲ್ಲಿ 389 ಅಭ್ಯರ್ಥಿಗಳು ಕಣದಲ್ಲಿದ್ದು, ಬಿಜೆಪಿ, ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಾರ್ಟಿಯ ಅಭ್ಯರ್ಥಿಗಳು ಎಲ್ಲ ಕ್ಷೇತ್ರದಲ್ಲಿದ್ದಾರೆ. ಯಲಹಂಕ, ರಾಜಾಜಿನಗರ, ಬ್ಯಾಟರಾಯನಪುರ ವಿಧಾನಸಭೆಯಲ್ಲಿ 16ಕ್ಕಿಂತ ಹೆಚ್ಚು ಅಭ್ಯರ್ಥಿಗಳಿದ್ದು, ಇಲ್ಲಿ ಎರಡು ಮತಯಂತ್ರಗಳು ಬಳಕೆಯಾಗುತ್ತಿವೆ.

ಬೆಂಗಳೂರು ದಕ್ಷಿಣದಲ್ಲಿ ಅತಿಹೆಚ್ಚು ಮತದಾರರಿದ್ದು, 583 ಮತಗಟ್ಟೆಗಳಿದ್ದು, ಇದರಲ್ಲಿ 184 ಸೂಕ್ಷ್ಮ ಮತಗಟ್ಟೆಗಳಾಗಿವೆ. ಯಶವಂತಪುರದಲ್ಲಿ 517, ಮಹದೇವಪುರದಲ್ಲಿ– 516, ಕೆ.ಆರ್. ಪುರದಲ್ಲಿ 454, ಬ್ಯಾಟರಾಯನಪುರದಲ್ಲಿ 419, ದಾಸರಹಳ್ಳಿಯಲ್ಲಿ 412, ರಾಜರಾಜೇಶ್ವರಿನಗರದಲ್ಲಿ 409 ಮತಗಟ್ಟೆಗಳಿವೆ. ಬ್ಯಾಟರಾಯನಪುರದಲ್ಲಿ 134, ರಾಜರಾಜೇಶ್ವರಿನಗರದಲ್ಲಿ 132, ಯಶವಂತಪುರದಲ್ಲಿ 129, ಯಲಹಂಕದಲ್ಲಿ 125 ಸೂಕ್ಷ್ಮ ಮತಗಟ್ಟೆಗಳಿವೆ.

ಸಂಜೆ 7ರ ವೇಳೆಗೆ ಸಂಗ್ರಹ ತಾಣಕ್ಕೆ: ಮತದಾನ ಪ್ರಕ್ರಿಯೆ ಮುಗಿದ ನಂತರ ಪ್ರತಿ ವಿಧಾನಸಭೆ ಕ್ಷೇತ್ರಗಳ ಮತಯಂತ್ರಗಳನ್ನು ಸಂಜೆ 7ರ ವೇಳೆಗೆ ನಿರ್ದಿಷ್ಟ ಮಸ್ಟರಿಂಗ್, ಸಂಗ್ರಹ ತಾಣಗಳಿಗೆ ತಲುಪಿಸಲಾಗುತ್ತದೆ. ಅಲ್ಲಿ ಡಿಮಸ್ಟರಿಂಗ್ ಕಾರ್ಯ ನಡೆದು, ಗುರುವಾರ ಎಣಿಕೆ ಕೇಂದ್ರಗಳಿಗೆ ಮತಯಂತ್ರಗಳು ರವಾನೆಯಾಗಲಿವೆ.



ಬೆಂಗಳೂರಿನ ರಾಜಾಜಿನಗರದ ವಿದ್ಯಾವರ್ಧಕ ಕಾಲೇಜಿನಲ್ಲಿ ಚುನಾವಣಾ ಸಿಬ್ಬಂದಿ ಮತಗಟ್ಟೆಗಳಿಗೆ ತೆರಳುವ ಮುನ್ನ ಅಂಚೆ ಮತದಾನ ಮಾಡಿದರು –ಪ್ರಜಾವಾಣಿ ಚಿತ್ರ

42 ಸಾವಿರ ಸಿಬ್ಬಂದಿ ನೇಮಕ

‘ನಗರದಲ್ಲಿ ಚುನಾವಣೆ ಕೆಲಸಕ್ಕಾಗಿ 42 ಸಾವಿರ ಸಿಬ್ಬಂದಿಯನ್ನು ನೇಮಿಸಲಾಗಿದೆ. ಚುನಾವಣೆ ಸಾಮಗ್ರಿಗಳನ್ನು ತೆಗೆದುಕೊಂಡು ಮತಗಟ್ಟೆಗೆ ಮಂಗಳವಾರ ಸಂಜೆ ತಲುಪಲಿದ್ದಾರೆ. ಅಲ್ಲಿ ಅವರಿಗೆ ತಂಗುವ, ಊಟದ ವ್ಯವಸ್ಥೆ ಮಾಡಲಾಗಿದೆ. ಬುಧವಾರ ಬೆಳಿಗ್ಗೆ 5.30ಕ್ಕೆ ಅಣಕು ಮತದಾನ ನಡೆಯಲಿದೆ. ಏನಾದರೂ ತೊಂದರೆ ಕಂಡುಬಂದರೆ ಕೂಡಲೇ ಸರಿಪಡಿಸಲಾಗುವುದು’ ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ತಿಳಿಸಿದರು.

ಮತಯಂತ್ರದಲ್ಲಿ ಯಾವುದಾದರೂ ಸಮಸ್ಯೆ ಕಂಡುಬಂದರೆ 30 ನಿಮಿಷದಲ್ಲಿ ಅದನ್ನು ಬದಲಾಯಿಸುವ ವ್ಯವಸ್ಥೆ ಇದೆ ಎಂದರು.

ನಗರದಲ್ಲಿ ಪ್ರತಿ ವಿಧಾನಸಭೆ ಕ್ಷೇತ್ರದಲ್ಲಿ ಥೀಮ್ ಆಧರಿತ 10 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಎಲ್ಲ ಕ್ಷೇತ್ರದಲ್ಲಿ ತಲಾ 5 ಪಿಂಕ್ ಮತಗಟ್ಟೆಗಳಿದ್ದು, ಮಹಿಳಾ ಸಿಬ್ಬಂದಿ ನಿರ್ವಹಣೆ ಮಾಡಲಿದ್ದಾರೆ. ಮಹಿಳೆಯರಿಗೆ ವಿಶೇಷ ಸ್ವಾಗತದ ವ್ಯವಸ್ಥೆ ಅಲ್ಲಿರುತ್ತದೆ. ಇದಲ್ಲದೆ, ಅಂಗವಿಕಲರ ಮತಗಟ್ಟೆ, ತೃತೀಯ ಲಿಂಗಿ ಮತಗಟ್ಟೆ, ತಂತ್ರಜ್ಞಾನ ಮತಗಟ್ಟೆ, ಪರಿಸರ (ಹಸಿರು ಬಣ್ಣದ) ಮತಗಟ್ಟೆ, ಸೈನಿಕ ಮತಗಟ್ಟೆ, ಕ್ರೀಡಾ ಮತಗಟ್ಟೆ, ಯುವ ಮತದಾರರ ಮತಗಟ್ಟೆ, ಸಂಸ್ಕೃತಿ ಮತಗಟ್ಟೆ, ಸೈನಿಕರ ವಿಶೇಷ ಮತಗಟ್ಟೆಗಳಿರಲಿವೆ ಎಂದು ಹೇಳಿದರು.

ಮತದಾನ ಹೆಚ್ಚಾಗಲು ಸಾಕಷ್ಟು ಅರಿವು ಮೂಡಿಸಲಾಗಿದೆ. ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗೆ ಬಂದು ಮತದಾನ ಮಾಡಲಿದ್ದಾರೆ ಎಂದು ಆಶಿಸಿದ್ದೇವೆ ಎಂದರು.

ಮತಗಟ್ಟೆಗಳಲ್ಲಿನ ಸೌಲಭ್ಯಗಳು

ರ‍್ಯಾಂಪ್, ಕುಡಿಯುವ ನೀರು, ಪೀಠೋಪಕರಣ, ವಿದ್ಯುತ್, ವಿಶ್ರಾಂತಿ ಕೊಠಡಿ, ಪುರುಷ–ಮಹಿಳೆಯರ ಶೌಚಾಲಯ, ಸೂಚನಾ ಫಲಕ.

ಮತದಾರರು ಸಾಲು ನಿಲ್ಲುವ ಸ್ಥಳದಲ್ಲಿ ಶಾಮಿಯಾನ, ಕುರ್ಚಿಯ ವ್ಯವಸ್ಥೆ, ವಾಹನಗಳ ನಿಲುಗಡೆಯ ಸ್ಥಳ, ಹಿರಿಯ ನಾಗರಿಕರಿಗೆ ಹಾಗೂ ಅಂಗವಿಕಲರಿಗೆ ವೀಲ್‌ಚೇರ್ ಮತ್ತು ಮ್ಯಾಗ್ನಿಫೈಯಿಂಗ್ ಗ್ಲಾಸ್ (ದುರ್ಬೀನು) ನೀಡಲಾಗುತ್ತದೆ.

‘ಮೊಬೈಲ್’ ಮನವಿ

ಸೋಮವಾರ ಸಂಜೆ 6 ಗಂಟೆಗೆ ಬಹಿರಂಗ ಪ್ರಚಾರ ಅಂತ್ಯವಾಗಿದ್ದು, ಮಂಗಳವಾರ ಮನೆಮನೆಗೆ ಅಭ್ಯರ್ಥಿಗಳು ಪ್ರಚಾರ ಕೈಗೊಂಡಿದ್ದರು. ಇದರ ಜೊತೆಗೆ, ಮೊಬೈಲ್ ಕರೆಗಳು ಆಯಾ ಕ್ಷೇತ್ರದ ಮತದಾರರಿಗೆ ತಡರಾತ್ರಿವರೆಗೆ ಬರುತ್ತಿದ್ದವು. ಮತಯಾಚನೆ ಮಾಡುತ್ತಿದ್ದರು.

ಮಂಗಳವಾರ ಪ್ರಚಾರದ ಅಬ್ಬರ ಅಷ್ಟರ ಮಟ್ಟಿಗೆ ಇರಲಿಲ್ಲ. ಮೊಬೈಲ್ ಕರೆಗಳೇ ಹೆಚ್ಚಾಗಿದ್ದವು. ಹಿಂದೆಯೂ ಆಯಾ ಕ್ಷೇತ್ರದ ಮತದಾರರಿಗೆ ಅಭ್ಯರ್ಥಿಗಳಿಂದ, ಅವರ ಕಡೆಯವರಿಂದ ಮತ ಹಾಕುವ ಮನವಿಯ ಕರೆಗಳು ಬರುತ್ತಿದ್ದವು. ಮಂಗಳವಾರ ಈ ಕರೆಗಳ ಸಂಖ್ಯೆ ಹೆಚ್ಚಾಗಿತ್ತು. ತಡರಾತ್ರಿವರೆಗೆ ಹಲವು ಸಂಖ್ಯೆಗಳ ಮೂಲಕ ಕರೆಗಳು ಬಂದು ಮತಯಾಚನೆ ಮುಂದುವರಿದಿತ್ತು.

97,13,349 ಒಟ್ಟು ಮತದಾರರು

50,24,775 ಪುರುಷರು

46,86,813 ಮಹಿಳೆಯರು

1,761 ಲೈಂಗಿಕ ಅಲ್ಪಸಂಖ್ಯಾತರು

2,37,206 80 ವರ್ಷ ಮೇಲ್ಪಟ್ಟವರು

1,43,536 ಯುವ ಮತದಾರರು

25,790 ಅಂಗವಿಕಲರು

2,107 ಅನಿವಾಸಿ ಭಾರತೀಯರು

8,802 ಒಟ್ಟು ಮತಗಟ್ಟೆಗಳು

2,006 ಸೂಕ್ಷ್ಮ ಮತಗಟ್ಟೆಗಳು


1,201 ಮತಗಟ್ಟೆಗಳಲ್ಲಿ ಶೇ 60ರಷ್ಟು ಮೈಕ್ರೊ ಅಬ್ಸರ್ವರ್ಸ್

1,440 ಮತಗಟ್ಟೆಗಳಲ್ಲಿ ಶೇ 120ರಷ್ಟು ಮೈಕ್ರೊ ಅಬ್ಸರ್ವರ್ಸ್

583 ಬೆಂಗಳೂರು ದಕ್ಷಿಣದಲ್ಲಿ ಅತಿ ಹೆಚ್ಚು ಮತಗಟ್ಟೆ

ಮಸ್ಟರಿಂಗ್, ಮತಯಂತ್ರಗಳ ಸಂಗ್ರಹ ಸ್ಥಳಗಳು

ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರ	ಜ್ಞಾನಾಕ್ಷಿ ವಿದ್ಯಾನಿಕೇತನ ಶಾಲೆ, ಕೆಂಚೇನಹಳ್ಳಿ, ಹಲಗೆವಡೇರಹಳ್ಳಿ
ಶಿವಾಜಿನಗರ	ಕಮಲಾಬಾಯಿ ಬಾಲಕಿಯರ ಪ್ರೌಢಶಾಲೆ, ಕನ್ನಾಟ್–ಕ್ವೀನ್ಸ್ ರಸ್ತೆ
ಶಾಂತಿನಗರ	ಸೇಂಟ್ ಜೋಸೆಫ್ ಇಂಡಿಯನ್ ಪ್ರೌಢ ಶಾಲೆ, ವಿಠ್ಠಲಮಲ್ಯ ರಸ್ತೆ
ಗಾಂಧಿನಗರ	ಗೃಹವಿಜ್ಞಾನ ಕಾಲೇಜು, ಶೇಷಾದ್ರಿ–ಪ್ಯಾಲೇಸ್ ರಸ್ತೆ
ರಾಜಾಜಿನಗರ	ಜಗಜ್ಯೋತಿ ಬಸವೇಶ್ವರ ಪಿಯು ಮತ್ತು ಪದವಿ ಕಾಲೇಜು, 2ನೇ ಬ್ಲಾಕ್, ರಾಜಾಜಿನಗರ
ಚಾಮರಾಜಪೇಟೆ	ಬಿಬಿಎಂಪಿ ಪಿಯು ಕಾಲೇಜು, 5ನೇ ಮುಖ್ಯರಸ್ತೆ, ಚಾಮರಾಜಪೇಟೆ
ಚಿಕ್ಕಪೇಟೆ	ನ್ಯಾಷನಲ್ ಹೈಸ್ಕೂಲ್, ಕೆ.ಆರ್. ರಸ್ತೆ, ಬಸವನಗುಡಿ
ಗೋವಿಂದರಾಜನಗರ	ಡಾ.ಬಿ.ಆರ್. ಅಂಬೇಡ್ಕರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಲ್ಲತ್ತಹಳ್ಳಿ ವರ್ತುಲ ರಸ್ತೆ, ನಾಗರಬಾವಿ
ವಿಜಯನಗರ	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಂಪಿನಗರ
ಬಸವನಗುಡಿ	ಎಸ್‌ಎಸ್‌ಎಂ ಶಾಲೆ, ಸಿ.ಟಿ. ಬೆಡ್, ಟಿ.ಆರ್. ನಗರ
ಪದ್ಮನಾಭನಗರ	ಕೆಂಪೇಗೌಡ ವೈದ್ಯಕೀಯ ಕಾಲೇಜು, ಬನಶಂಕರಿ 2ನೇ ಹಂತ
ಬಿಟಿಎಂ ಲೇಔಟ್	ಸೇಂಟ್ ಫ್ರಾನ್ಸಿಸ್ ಶಾಲೆ, ಸೇವಾಸಂದ್ರ, ಕೋರಮಂಗಲ 3ನೇ ಹಂತ
ಜಯನಗರ	ಎನ್‌ಎಂಕೆಆರ್‌ವಿ ಮಹಿಳೆಯರ ಕಾಲೇಜು, 3ನೇ ಬ್ಲಾಕ್, ಜಯನಗರ
ಬೊಮ್ಮನಹಳ್ಳಿ	ಜೆಎಸ್‌ಎಸ್ ಪಬ್ಲಿಕ್ ಶಾಲೆ ಮತ್ತು ಮಹಿಳೆಯರ ಕಾಲೇಜು, ಎಚ್‌ಎಸ್‌ಆರ್ ಲೇಔಟ್
ಕೆ.ಆರ್. ಪುರ	ಐಟಿಐ ವಿದ್ಯಾಮಂದಿರ, ಐಟಿಐ ಕಾಲೊನಿ, ದೂರವಾಣಿನಗರ
ಮಹಾಲಕ್ಷ್ಮಿ ಲೇಔಟ್	ವಿದ್ಯಾವರ್ಧಕ ಸಂಘ, 1ನೇ ಬ್ಲಾಕ್, ರಾಜಾಜಿನಗರ
ಮಲ್ಲೇಶ್ವರ	ಸರ್ಕಾರಿ ಬಾಲಕರ ಪಿಯು ಕಾಲೇಜು, 18ನೇ ಅಡ್ಡರಸ್ತೆ, ಮಲ್ಲೇಶ್ವರ
ಹೆಬ್ಬಾಳ	ಯುಎಎಸ್ ಕ್ಯಾಂಪಸ್ ಪ್ರೌಢಶಾಲೆ, ಬಳ್ಳಾರಿ ರಸ್ತೆ, ಹೆಬ್ಬಾಳ.
ಪುಲಕೇಶಿನಗರ	ಬಿಬಿಎಂಪಿ ಬಾಲಕಿಯರ ಕಾಲೇಜು, ರಾಬರ್ಟ್‌ಸನ್ ರಸ್ತೆ, ಫ್ರೇಜರ್ ಟೌನ್
ಸರ್ವಜ್ಞನಗರ	ಮರಿಯಾ ನಿಕೇತನ್ ಹಿರಿಯ ಪ್ರಾಥಮಿಕ ಶಾಲೆ, ಡಿ ಕೊಸ್ಟಾ ಲೇಔಟ್, ಕುಕ್‌ಟೌನ್, ಬಾಣಸವಾಡಿ ಮುಖ್ಯರಸ್ತೆ
ಸಿ.ವಿ. ರಾಮನ್ ನಗರ	ಸೇಂಟ್ ಅಲೋಸಿಯಸ್ ಪದವಿ ಕಾಲೇಜು, ಕದಿರಪ್ಪ ರಸ್ತೆ, ಸರ್ವಜ್ಞನಗರ
ಯಲಹಂಕ	ಶೇಷಾದ್ರಿಪುರ ಕಾಲೇಜು, ಎನ್‌ಇಎಸ್ ರಸ್ತೆ, ಯಲಹಂಕ
ಬ್ಯಾಟರಾಯನಪುರ	ಬಿಇಎಲ್ ಪ್ರೌಢಶಾಲೆ, ಬ್ಯಾಟರಾಯನಪುರ
ಯಶವಂತಪುರ	ಆರ್.ವಿ. ಎಂಜಿನಿಯರಿಂಗ್ ಕಾಲೇಜು, ಮೈಸೂರು ರಸ್ತೆ
ದಾಸರಹಳ್ಳಿ	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಟಿ.ದಾಸರಹಳ್ಳಿ
ಮಹದೇವಪುರ	ಐಟಿಐ ವಿದ್ಯಾಮಂದಿರ, ಕೆ.ಆರ್. ಪುರ
ಬೆಂಗಳೂರು ದಕ್ಷಿಣ	ನ್ಯಾಷನಲ್ ಪಿಯು ಮತ್ತು ಪದವಿ ಕಾಲೇಜು, 7ನೇ ಬ್ಲಾಕ್ ಜಯನಗರ
ಆನೇಕಲ್	ಸರ್ಕಾರಿ ಹೊಸ ಮಾದರಿ ಪ್ರಾಥಮಿಕ ಶಾಲೆ, ಆನೇಕಲ್



20 ಯಲಹಂಕದಲ್ಲಿ ಅತಿಹೆಚ್ಚು ಅಭ್ಯರ್ಥಿಗಳು

10 ಶಾಂತಿನಗರ, ಸಿ.ವಿ. ರಾಮನ್ ನಗರದಲ್ಲಿ ಅತಿ ಕಡಿಮೆ ಅಭ್ಯರ್ಥಿಗಳು

115 ನೋಂದಾಯಿತ ರಾಜಕೀಯ ಪಕ್ಷಗಳು | **137** ಪಕ್ಷೇತರ

ಪಕ್ಷ	ಅಭ್ಯರ್ಥಿಗಳು
ಬಿಜೆಪಿ	28
ಕಾಂಗ್ರೆಸ್	28
ಎಎಪಿ	28
ಬಿಎಸ್‌ಪಿ	21
ಜೆಡಿಎಸ್	24
ಜೆಡಿಯು	5
ಎನ್‌ಪಿಪಿ	2
ಸಿಪಿಎಂ	1

1,94,055 ಶಿವಾಜಿನಗರದಲ್ಲಿ ಅತಿ ಕಡಿಮೆ ಮತದಾರರು

6,95,742 ಬೆಂಗಳೂರು ದಕ್ಷಿಣದಲ್ಲಿ ಅತಿ ಹೆಚ್ಚು ಮತದಾರರು

ಮತದಾನದ ನಂತರ ತಿಂಡಿ ವಿತರಣೆಗೆ ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರನ್ನು ಪ್ರೋತ್ಸಾಹಿಸುವ ಹಿನ್ನೆಲೆಯಲ್ಲಿ ಬೆಂಗಳೂರು ನಗರದ ಕೆಲವು ಹೋಟೆಲ್‌ಗಳಲ್ಲಿ ಮತದಾನ ಮಾಡಿ ಬಂದ ನಂತರ ಶಾಯಿ ಗುರುತು ತೋರಿಸಿದವರಿಗೆ ತಿಂಡಿ ವಿತರಣೆಗೆ ನೀಡಿದ್ದ ಅನುಮತಿಯನ್ನು ವಾಪಸ್ ಪಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ‘ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್’ ಕಾರ್ಯದರ್ಶಿ ವೀರೇಂದ್ರ ಎನ್. ಕಾಮತ್ ಹಾಗೂ ಹೋಟೆಲ್ ನಿಸರ್ಗ ಗ್ರ್ಯಾಂಡ್ ಮಾಲೀಕ ಎಸ್.ಪಿ. ಕೃಷ್ಣರಾಜ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಮಂಗಳವಾರ ರಾತ್ರಿ ತುರ್ತು ವಿಚಾರಣೆ ನಡೆಸಿದ ರಜಾಕಾಲದ ನ್ಯಾಯಪೀಠದ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಕೆ. ಸತೀಶ್ ಭಟ್, ‘ಅರ್ಜಿದಾರರು 2013, 2018ರ ಸಾರ್ವತ್ರಿಕ ಚುನಾವಣೆ, 2019ರ ಲೋಕಸಭಾ ಚುನಾವಣೆಯೂ ಸೇರಿದಂತೆ ಹಲವು ಚುನಾವಣೆಗಳಲ್ಲಿ ಇದೇ ರೀತಿಯಲ್ಲಿ ಮತದಾರರನ್ನು ಪ್ರೋತ್ಸಾಹಿಸಲು ಪಾಲಿಕೆಯ ಅನುಮತಿ ಪಡೆದೇ ತಿಂಡಿಗಳನ್ನು ಉಚಿತವಾಗಿ ವಿತರಿಸಿದ ಪರಿಪಾಠ ಹೊಂದಿದ್ದಾರೆ. ಅದರಂತೆ ಈ ಬಾರಿಯೂ ಪಾಲಿಕೆಯಿಂದ ಅನುಮತಿ ಪಡೆದು ಎಲ್ಲ ಸಿದ್ಧತೆ ಕೈಗೊಳ್ಳಲಾಗಿತ್ತು. ಆದರೆ, ಬಿಬಿಎಂಪಿ ಮಂಗಳವಾರ ಸಂಜೆ 4 ಗಂಟೆಗೆ ಅನುಮತಿಯನ್ನು ವಾಪಸ್ ಪಡೆದಿದೆ’ ಎಂದು ನ್ಯಾಯಪೀಠಕ್ಕೆ ವಿವರಿಸಿದರು.

‘ಹೋಟೆಲ್‌ಗೂ ರಾಜಕೀಯ ಪಕ್ಷಗಳಿಗೂ ಯಾವುದೇ ಸಂಬಂಧವಿಲ್ಲ. ಹಾಗಾಗಿ, ಅನುಮತಿ ವಾಪಸ್ ಪಡೆದಿರುವ ಬಿಬಿಎಂಪಿ ಆದೇಶಕ್ಕೆ ತಡೆ ನೀಡಬೇಕು’ ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠವು, ತಿಂಡಿ ವಿತರಣೆಯ ಅನುಮತಿ ಹಿಂಪಡೆದ ಬಿಬಿಎಂಪಿ ಆದೇಶಕ್ಕೆ ತಡೆ ನೀಡಿದೆ. ಅಂತೆಯೇ, ನೃಪತುಂಗ ರಸ್ತೆಯಲ್ಲಿರುವ ನಿಸರ್ಗ ಗಾರ್ಡನ್ ಸೇರಿದಂತೆ ಹಲವು ಹೋಟೆಲ್ ಗಳಲ್ಲಿ ಮತದಾನದ ನಂತರ ತಿಂಡಿ ವಿತರಣೆಗೆ ಅಸ್ತು ಎಂದಿದೆ.

ವಂಡರ್‌ಲಾ ರೆಸಾರ್ಟ್: ಶೋಧ

ಪ್ರಜಾವಾಣಿ ವಾರ್ತೆ

ರಾಮನಗರ: ಬಿಡದಿಯ ವಂಡರ್‌ಲಾ ರೆಸಾರ್ಟ್‌ನಲ್ಲಿ ಮಂಗಳವಾರ ಜಿಲ್ಲೆಯ ಚುನಾವಣಾ ಅಧಿಕಾರಿಗಳ ತಂಡವು (ಎಫ್‌ಎಸ್‌ಟಿ) ಶೋಧ ನಡೆಸಿತು.

ಮತದಾರರಿಗೆ ಹಂಚಲು ಅಭ್ಯರ್ಥಿಯೊಬ್ಬರ ಹಣವನ್ನು ಈ ರೆಸಾರ್ಟ್‌ನಲ್ಲಿ ಸಂಗ್ರಹಿಸಿ ಇಡಲಾಗಿದೆ ಎಂಬ ಮಾಹಿತಿಯ ಹಿನ್ನೆಲೆಯಲ್ಲಿ ಅಧಿಕಾರಿಗಳ ತಂಡವು ರೆಸಾರ್ಟ್‌ನ ಕೋಣೆಗಳಲ್ಲಿ ಹಣಕ್ಕಾಗಿ ಹುಡುಕಾಟ ನಡೆಸಿತು. ಆದರೆ ಈ ವೇಳೆ ನಗದು, ಇನ್ನಿತರ ಯಾವುದೇ ಸಾಮಗ್ರಿಗಳು ಪತ್ತೆ ಆಗಲಿಲ್ಲ. ಅಧಿಕಾರಿಗಳು ಬರಿಗೈಯಲ್ಲಿ ಮರಳಿದರು ಎಂದು ಮೂಲಗಳು ತಿಳಿಸಿವೆ.



ಸಹಕಾರನಗರದ ಕಾವೇರಿ ಬಿ.ಇಡಿ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಂದ ಮತದಾನ ಜಾಗೃತಿ ಕಾರ್ಯಕ್ರಮ ನಡೆಯಿತು

ಮತದಾನ: ನಿಷೇಧಾಜ್ಞೆ ಜಾರಿ

ಬೆಂಗಳೂರು: ವಿಧಾನಸಭೆ ಚುನಾವಣೆಯ ಮತದಾನ ಹಿನ್ನೆಲೆಯಲ್ಲಿ ನಗರದಲ್ಲಿ ಮೇ 8ರ ಸಂಜೆ 6 ಗಂಟೆಯಿಂದ ಮೇ 11ರ ಸಂಜೆ 6 ಗಂಟೆವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

‘ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಯಲ್ಲಿರಲಿದೆ. ಮತಗಟ್ಟೆ ಹೊರತುಪಡಿಸಿ ಇತರೆ ಸ್ಥಳಗಳಲ್ಲಿ ಐವರು ಹಾಗೂ ಅದಕ್ಕಿಂತ ಹೆಚ್ಚಿನ ಜನ ಗುಂಪು ಸೇರಬಾರದು. ಪ್ರತಿಭಟನೆ, ಮೆರವಣಿಗೆ, ರ‍್ಯಾಲಿಗಳಿಗೆ ಅವಕಾಶವಿಲ್ಲ. ಈ ಬಗ್ಗೆ ಕಮಿಷನರ್ ಆದೇಶ ಹೊರಡಿಸಿದ್ದಾರೆ’ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ನಂದಿಬೆಟ್ಟ ಪ್ರವೇಶ ಬಂದ್

ಚಿಕ್ಕಬಳ್ಳಾಪುರ: ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಮೇ 10 ರಂದು ಜಿಲ್ಲೆಯ ನಂದಿಬೆಟ್ಟ ಸೇರಿದಂತೆ ಪ್ರವಾಸಿತಾಣಗಳಿಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ. ಮತದಾರರೆಲ್ಲರೂ ಕಡ್ಡಾಯವಾಗಿ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು ಎನ್ನುವ ಚುನಾವಣಾ ಆಯೋಗದ ನಿರ್ದೇಶನ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ 10ರಂದು ಬೆಳಿಗ್ಗೆ 5ರಿಂದ ರಾತ್ರಿ 8ರವರೆಗೆ ಪ್ರವೇಶ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ್ ತಿಳಿಸಿದ್ದಾರೆ.

ಬನ್ನೇರುಘಟ್ಟ ಉದ್ಯಾನಕ್ಕೆ ಇಂದು ರಜೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಮೇ 10ರಂದು (ಬುಧವಾರ) ರಜೆ ಘೋಷಣೆ ಮಾಡಲಾಗಿದೆ. ಸಫಾರಿ ಮತ್ತು ಚಿಟ್ಟೆ ಉದ್ಯಾನವೂ ವೀಕ್ಷಕರಿಗೆ ಲಭ್ಯವಿರುವುದಿಲ್ಲ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸುನೀಲ್ ಪನ್ವಾರ್ ತಿಳಿಸಿದ್ದಾರೆ.

ಸಂಜೆವರೆಗೆ ಐಕಿಯಾ ಬಂದ್

ಬೆಂಗಳೂರು: ನಾಗಸಂದ್ರದಲ್ಲಿರುವ ಐಕಿಯಾ ಶಾಪಿಂಗ್ ಮಳಿಗೆ ಬುಧವಾರ ಸಂಜೆ 5ರಿಂದ ರಾತ್ರಿ 10ವರೆಗೆ ಮಾತ್ರ ಕಾರ್ಯಾಚರಣೆ ನಡೆಸಲಿದೆ. ವಿಧಾನಸಭೆ ಚುನಾವಣೆಗೆ ಬುಧವಾರ ಮತದಾನ ಇರುವುದರಿಂದ ಮಳಿಗೆಯನ್ನು ಸಂಜೆ 5ರವರೆಗೆ ಮುಚ್ಚಲಾಗಿರುತ್ತದೆ ಎಂದು ಕಂಪನಿಯ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

ಸಿಡಿಲು ಬಡಿದು ಇಬ್ಬರು ಸಾವು • ಚಾವಣಿ ಕುಸಿದು ಮಹಿಳೆಗೆ ಗಾಯ • ಪ್ರಚಾರಕ್ಕೆ ತೊಂದರೆ

ರಾಜ್ಯದ ವಿವಿಧೆಡೆ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಂಗಳವಾರ ಭಾರಿ ಮಳೆಯಾಗಿದೆ. ಕೆಲವೆಡೆ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆ ಬಿದ್ದಿದ್ದು, ರೈತರಲ್ಲಿ ಹರ್ಷ ಮೂಡಿಸಿದೆ.

ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ನಾಗರಾಳ ಗ್ರಾಮದಲ್ಲಿ ಸಿಡಿಲು ಬಡಿದು ನೀಲಗಂಗಮ್ಮ ಬಸನಗೌಡ ಬಿರಾದಾರ (70) ಎಂಬ ಮಹಿಳೆ ಸ್ಥಳದಲ್ಲಿಯೇ ಸಾವಿಗೀಡಾದರು.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಬೀರಲದಿನ್ನಿ ಗ್ರಾಮದ ರೈತ ಕನಕನಗೌಡ ಮಾಲೀಪಾಟೀಲ (33) ಎಂಬುವರು ಸಿಡಿಲು ಬಡಿದು ಮೃತಪಟ್ಟಿದ್ದಾರೆ. ಕುಷ್ಟಗಿ ತಾಲ್ಲೂಕಿನ ತಾವರಗೇರಾ ಸಮೀಪದ ರಾಮಜಿನಾಯಕ ತಾಂಡಾದಲ್ಲಿ ಸಿಡಿಲಿಗೆ ಎರಡು ಕುರಿಗಳು ಸಾವನ್ನಪ್ಪಿವೆ. ಯಲಬುರ್ಗಾ ತಾಲ್ಲೂಕಿನ ಮಂಡಲಮರಿ ಗ್ರಾಮದಲ್ಲಿ ಮಳೆ ಹಾಗೂ ಗಾಳಿ ಹೊಡೆತಕ್ಕೆ ಮನೆಯ ಚಾವಣಿ ಕುಸಿದು, ಹುಲಿಗೆಮ್ಮ ಜೂಲಕಟ್ಟಿ ಎಂಬುವರಿಗೆ ಗಾಯಗಳಾಗಿವೆ.

ಜಿಲ್ಲೆಯ ಕುಕನೂರು, ಕುಷ್ಟಗಿ, ಮುನಿರಾಬಾದ್, ಕೊಪ್ಪಳ ಮತ್ತು ತಾವರಗೇರಾದಲ್ಲೂ ಮಳೆಯಾಯಿತು.

ಹಾವೇರಿ ಜಿಲ್ಲೆ ರಟ್ಟೀಹಳ್ಳಿ ತಾಲ್ಲೂಕಿನ ಕುಡಪಲಿ ಗ್ರಾಮದಲ್ಲಿ ಸೋಮವಾರ ರಾತ್ರಿ ಸುರಿದ ಭಾರಿ ಮಳೆ, ಗಾಳಿಗೆ ಸರ್ಕಾರಿ ಶಾಲೆಯ ಚಾವಣಿ ಹಾರಿ ಹೋಗಿದ್ದು, ಕಟ್ಟಿಗೆಯ ತೊಲೆಗಳು ನೆಲಕ್ಕುರುಳಿವೆ. ನಾಲ್ಕು ಕೊಠಡಿಗಳು ಸಂಪೂರ್ಣ ಹಾಳಾಗಿವೆ. ಈ ಕೊಠಡಿಗಳಲ್ಲಿಯೇ ಮತಗಟ್ಟೆ ನಿರ್ಮಿಸಲಾಗಿತ್ತು.

ಹುಬ್ಬಳ್ಳಿಯಲ್ಲಿ ಗುಡುಗು, ಸಿಡಿಲಿನೊಂದಿಗೆ ಒಂದೂವರೆ ತಾಸು ರಭಸದ ಮಳೆಯಾಗಿದೆ. ಸೋಮವಾರ ರಾತ್ರಿ ಅಲ್ಪ ಪ್ರಮಾಣದಲ್ಲಿ ಮಳೆ ಸುರಿದಿತ್ತು. ವಿವಿಧೆಡೆ ಸುರಿದ ಮಳೆಯಿಂದಾಗಿ, ಮನೆ ಮನೆ ಪ್ರಚಾರ, ಮತದಾನ ಸಿದ್ಧತಾ ಕಾರ್ಯಕ್ಕೆ ಅಡ್ಡಿ ಉಂಟಾಯಿತು.

ಧಾರವಾಡ ನಗರ, ಧಾರವಾಡ ತಾಲ್ಲೂಕು, ಕುಂದಗೋಳ, ನವಲ ಗುಂದ ಹಾಗೂ ಕಲಘಟಗಿ ಭಾಗಗಳಲ್ಲಿ, ವಿಜಯನಗರ ಜಿಲ್ಲೆಯ ಹೊಸಪೇಟೆ, ಹರಪನಹಳ್ಳಿ, ಕೊಟ್ಟೂರು ತಾಲ್ಲೂಕಿನ ವಿವಿಧೆಡೆ ಗುಡುಗು ಸಹಿತ ಮಳೆಯಾಗಿದೆ. ಬಳ್ಳಾರಿ ಜಿಲ್ಲೆಯ ಸಿರುಗುಪ್ಪ, ಕುರುಗೋಡು, ಗದಗ- ಬೆಟಗೇರಿ ಅವಳಿನಗರ, ಗದಗ ಜಿಲ್ಲೆಯ ಲಕ್ಷ್ಮೇಶ್ವರ, ರೋಣ, ಡಂಬಳ ಭಾಗದಲ್ಲಿ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿ ನಗರದಲ್ಲಿಯೂ ಗುಡುಗು, ಸಿಡಿಲು ಸಹಿತ ಮಳೆಯಾಗಿದೆ. ದಾಂಡೇಲಿ, ಹಳಿಯಾಳದಲ್ಲಿ ಒಂದೂವರೆ ತಾಸಿಗೂ ಹೆಚ್ಚು ಮಳೆಯಾಗಿದೆ. ಮುಂಡಗೋಡ, ಕುಮಟಾ, ಅಂಕೋಲಾದಲ್ಲಿ ಕೆಲ ಹೊತ್ತು ಮಳೆ ಸುರಿದಿದೆ. ಬೆಳಗಾವಿ ನಗರ, ಚನ್ನಮ್ಮನ ಕಿತ್ತೂರಿನಲ್ಲಿ ಗುಡುಗು-ಮಿಂಚು ಸಹಿತ ಮಳೆ ಸುರಿದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಸೋಮವಾರ ತಡರಾತ್ರಿ ಉತ್ತಮ ಮಳೆಯಾಗಿದೆ. ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮುರು ತಾಲ್ಲೂಕಿನ ರಾಯಾಪುರ ಸುತ್ತಮುತ್ತ ಸೋಮವಾರ ಸಂಜೆ ಉತ್ತಮ ಮಳೆಯಾಗಿದೆ. ಚೆಕ್ ಡ್ಯಾಂಗಳು ಭರ್ತಿಯಾಗಿದ್ದು, ಸಣ್ಣ ಹಳ್ಳಗಳು ತುಂಬಿ ಹರಿದಿವೆ. ಸಮೀಪದ ಯರ್ರೇನಹಳ್ಳಿ ಗ್ರಾಮದ ಮಲ್ಲಿಕಾರ್ಜುನಪ್ಪ ಅವರ 1 ಎಕರೆ 5 ಗುಂಟೆ ಜಮೀನಿನಲ್ಲಿ ಬೆಳೆದಿದ್ದ ಶೇಂಗಾ ಬೆಳೆ ನೀರಿನಲ್ಲಿ ಕೊಚ್ಚಿ ಹೋಗಿದ್ದು, ₹ 1 ಲಕ್ಷದಷ್ಟು ನಷ್ಟವಾಗಿದೆ.

ದಾವಣಗೆರೆ ನಗರ ಸೇರಿ ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆಯಾಗಿದೆ. ಶಿವಮೊಗ್ಗ ನಗರ, ಜಿಲ್ಲೆಯ ಹೊಸನಗರ, ಶಿಕಾರಿ ಪುರ, ತೀರ್ಥಹಳ್ಳಿಯಲ್ಲೂ ಜೋರು ಮಳೆಯಾಗಿದೆ.

ಹಾಸನ ಜಿಲ್ಲೆಯ ಚನ್ನರಾಯ ಪಟ್ಟಣ ತಾಲ್ಲೂಕಿನ ಬಾಗೂರಿನಲ್ಲಿ 5.3 ಸೆಂ.ಮೀ. ಮಳೆ ಬಿದ್ದಿದೆ. ಜಿಲ್ಲೆಯ ಹಲವೆಡೆ ಉತ್ತಮ ಮಳೆಯಾಗಿದೆ. ಕೊಡಗು ಜಿಲ್ಲೆಯ ಪೊನ್ನಂಪೇಟೆ, ಗೋಣಿಕೊಪ್ಪಲು, ಹಾತೂರು, ಅರುವತ್ತೊಕ್ಕಲು, ಅತ್ತೂರು ಭಾಗದಲ್ಲಿ ಬಿರುಸಿನ ಮಳೆಯಾಯಿತು. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದಲ್ಲಿ ಸಾಧಾರಣ ಮಳೆಯಾಗಿದೆ.

ಪರದಾಡಿದ ಚುನಾವಣಾ ಸಿಬ್ಬಂದಿ

ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಸಿಬ್ಬಂದಿ ಮಳೆಯಿಂದಾಗಿ ಕೆಲವೆಡೆ ಪರದಾಡಿದರು.

ಹುಬ್ಬಳ್ಳಿಯಲ್ಲಿ ಚುನಾವಣಾ ಸಿಬ್ಬಂದಿ ತೊಂದರೆ ಅನುಭವಿಸಿದರು. ವಿಜಯನಗರ ಜಿಲ್ಲೆ ಹೂವಿನ ಹಡಗಲಿ ಪಟ್ಟಣದ ಎಸ್.ಆರ್.ಎಂ.ಪಿ.ಪಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತೆರೆಯಲಾಗಿದ್ದ ಮಸ್ಟರಿಂಗ್ ಕೇಂದ್ರದ ಮುಂಭಾಗದಲ್ಲಿ ಹಾಕಿದ್ದ ಶಾಮಿಯಾನ ಗಾಳಿ ಮಳೆಗೆ ಕಳಚಿ ಬಿದ್ದವು. ಮತಯಂತ್ರ, ದಾಖಲೆಗಳನ್ನು ಸಂರಕ್ಷಿಸಿಕೊಳ್ಳಲು ಸಿಬ್ಬಂದಿ ಪರದಾಡಿದರು.


ದಾಂಡೇಲಿ ಪಟ್ಟಣದ ಸರ್ಕಾರಿ ಪದವಿ ಕಾಲೇಜಿನ ಮೈದಾನ ಕೆಸರುಗದ್ದೆಯಂತಾಗಿತ್ತು. ಇದರಿಂದ ಚುನಾವಣೆ ಕರ್ತವ್ಯಕ್ಕೆ ತೆರಳಲು ಬಸ್‌ಗಳು ಸಂಚರಿಸಲಾಗದೆ ಪರದಾಡಬೇಕಾಯಿತು. ಕಲಬುರಗಿ ಹಾಗೂ ಆಳಂದದಲ್ಲಿ ಮಸ್ಟರಿಂಗ್ ಕಾರ್ಯದಲ್ಲಿ ನಿರತರಾಗಿದ್ದ ಚುನಾವಣಾ ಸಿಬ್ಬಂದಿಗೆ ತೊಂದರೆಯಾಯಿತು. ಆಳಂದದಲ್ಲಿ ಚುನಾವಣಾ ಕರ್ತವ್ಯದಲ್ಲಿದ್ದ ಸಿಬ್ಬಂದಿಯ ವಿಶ್ರಾಂತಿಗೆ ಹಾಕಿದ್ದ ಶಾಮಿಯಾನ ಕಿತ್ತು ಹೋಯಿತು. ಕುರ್ಚಿಗಳು ಹಾರಿದವು.

ರಾಜ್ಯದಾದ್ಯಂತ ಎರಡು ದಿನ ಭಾರಿ ಮಳೆ

ಬೆಂಗಳೂರು: ರಾಜ್ಯದಾದ್ಯಂತ ಎರಡು ದಿನ ಭಾರಿ ಮಳೆಯಾಗಲಿದ್ದು, ಬುಧವಾರ ನಾಲ್ಕು ಜಿಲ್ಲೆಗಳಿಗೆ ಹವಾಮಾನ ಇಲಾಖೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಕರಾವಳಿಯ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ದಕ್ಷಿಣ ಒಳನಾಡಿನ ಹಲವೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಯ ಅವಧಿಯಲ್ಲಿ ಹಾಸನದ ಸಕಲೇಶಪುರದಲ್ಲಿ (7 ಸೆಂ.ಮೀ.) ಗರಿಷ್ಠ ಮಳೆಯಾಗಿದೆ. ಮೈಸೂರಿನ ಹುಣಸೂರು, ಚಾಮರಾಜನಗರದ ಹರದನಹಳ್ಳಿಯಲ್ಲಿ ತಲಾ 6 ಸೆಂ.ಮೀ., ಹೊನ್ನಾವರ, ಬೆಳಗಾವಿಯ ಗೋಕಾಕ, ಯಾದಗಿರಿಯ ಕವಡಿಮಟ್ಟಿ, ಹಾಸನದ ಚನ್ನರಾಯಪಟ್ಟಣ, ಕೊಣನೂರು, ಬೆಂಗಳೂರಿನ ಉತ್ತರಹಳ್ಳಿ ಹಾಗೂ ಮೈಸೂರಿನ ಸರಗೂರಿನಲ್ಲಿ ತಲಾ 5 ಸೆಂ.ಮೀ. ಮಳೆಯಾಗಿದೆ. ಉಳಿದೆಡೆ ಈ ಪ್ರಮಾಣ 5 ಸೆಂ.ಮೀ.ಗಿಂತ ಕಡಿಮೆ ವರದಿಯಾಗಿದೆ. ಶಿರಾಳಿಯಲ್ಲಿ ಗರಿಷ್ಠ ಉಷ್ಣಾಂಶ (36.2 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ ಎಂದು ತಿಳಿಸಿದೆ.



ದಾವಣಗೆರೆಯಲ್ಲಿ ಮಂಗಳವಾರ ಸುರಿದ ಜೋರು ಮಳೆಯಲ್ಲಿ ಹಮಾಲಿಯೊಬ್ಬರು ಸುರಿಯುತ್ತಿದ್ದ ಮಳೆಯನ್ನು ಲೆಕ್ಕಿಸದೇ ತಮ್ಮ ಎತ್ತಿನಗಾಡಿಯೊಂದಿಗೆ ಸಾಗಿದರು —ಪ್ರಜಾವಾಣಿ ಚಿತ್ರ/ ಸತೀಶ್ ಬಡಿಗೇರ್



ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಶಾಲೆಯ ಮುಂದಿನ ರಸ್ತೆಯಲ್ಲಿ ಮಳೆ ನೀರು ನಿಂತಿತ್ತು. ಪ್ರಜಾವಾಣಿ ಚಿತ್ರ– ಗುರು ಹಬೀಬ

ಅಪಘಾತ ಪ್ರಕರಣ: ನ್ಯಾಯಮಂಡಳಿ ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪಘಾತ ಪ್ರಕರಣಗಳಲ್ಲಿ ಅಜಾಗರೂಕತೆ ಮತ್ತು ನಿರ್ಲಕ್ಷ್ಯದಿಂದ ವಾಹನ ಚಾಲನೆ ಮಾಡಿರುವ ವ್ಯಕ್ತಿಯನ್ನು (ಚಾಲಕ) ತಪ್ಪಿತಸ್ಥ ಎಂದು ವಿಚಾರಣಾ ನ್ಯಾಯಾಲಯ ತೀರ್ಮಾನಿಸಿದ ಬಳಿಕ, ಮೋಟಾರು ಅಪಘಾತ ಪರಿಹಾರ ನ್ಯಾಯಮಂಡಳಿಯು, ಚಾಲಕ ಅಪಘಾತಕ್ಕೆ ಕಾರಣನಲ್ಲ ಎಂದು ಹೇಳುವುದಕ್ಕೆ ಅವಕಾಶವಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

'ನ್ಯಾಯಮಂಡಳಿ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಅಪಘಾತಕ್ಕೆ ಕಾರಣವಾಗಿದ್ದ ಕಾರಿನ ಮಾಲೀಕ ಪ್ರಭಾಕರ್ ಹಾಗೂ 'ಪರಿಹಾರದ ಮೊತ್ತವನ್ನು ಹೆಚ್ಚಿಸಬೇಕು' ಎಂದು ಕೋರಿ ಪ್ರಕರಣದಲ್ಲಿ ಮೃತಪಟ್ಟಿದ್ದ ವ್ಯಕ್ತಿಯ ಪತ್ನಿ ಸಲ್ಲಿಸಿದ್ದ ಎರಡು ಪ್ರತ್ಯೇಕ ಮೇಲ್ಮನವಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್.ಎಸ್. ಸಂಜಯಗೌಡ ಅವರಿದ್ದ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಮೃತಪಟ್ಟ ಮತ್ತು ಗಾಯಗೊಂಡ ಸಂತ್ರಸ್ತರ ಎಂಎಲ್‌ಸಿ (ಮೆಡಿಕೊ ಲೀಗಲ್ ಕೇಸ್) ಮತ್ತು ಗಾಯದ ಪ್ರಮಾಣ ಪತ್ರದಲ್ಲಿ ಚಾಲಕನ ಹೆಸರು ಬೇರೆ ಇದೆ ಎಂಬ ಕಾರಣಕ್ಕೆ, 'ವಿಮಾ ಕಂಪನಿ ಬದಲಿಗೆ ವಾಹನದ ಮಾಲೀಕ ಪರಿಹಾರ ಪಾವತಿ ಹೊಣೆಯನ್ನು ಹೊರಬೇಕು' ಎಂದು ಆದೇಶಿಸಿದ್ದ ನ್ಯಾಯಮಂಡಳಿಯ ಆದೇಶವನ್ನು ರದ್ದುಪಡಿಸಿದೆ.

'ಸಂತ್ರಸ್ತರಿಗೆ ಪರಿಹಾರ ಪಾವತಿಸಬೇಕು' ಎಂದು ವಿಮಾ ಕಂಪನಿಗೆ ಆದೇಶಿಸಿರುವ ನ್ಯಾಯಪೀಠ, ನ್ಯಾಯಮಂಡಳಿ ನಿಗದಿಪಡಿಸಿದ್ದ ₹ 4,43,000 ಪರಿಹಾರದ ಮೊತ್ತವನ್ನು ₹ 9,48,200ಕ್ಕೆ ಹೆಚ್ಚಿಸಿ ಆದೇಶಿಸಿದೆ. 'ಈ ಮೊತ್ತವನ್ನು ವಾರ್ಷಿಕ ಶೇ 6ರ ಬಡ್ಡಿದರಲ್ಲಿ ಪಾವತಿಸಬೇಕು' ಎಂದು ನಿರ್ದೇಶಿಸಿದೆ.

ಪ್ರಕರಣವೇನು?: ದಾವಣಗೆರೆ ಜಿಲ್ಲೆಯ ಜಗಳೂರಿನಲ್ಲಿ 2015ರಲ್ಲಿ ಶುಕ್ರು ಸಾಬ್ ಮತ್ತು ಅವರ ಮೊಮ್ಮಗಳು ಬಸ್ ನಿಲ್ದಾಣದಲ್ಲಿ ನಿಂತಿದ್ದ ವೇಳೆ ಕಾರೊಂದು ಬಂದು ಡಿಕ್ಕಿ ಹೊಡೆದಿತ್ತು. ಘಟನೆಯಲ್ಲಿ ಶುಕ್ರು ಸಾಬ್ ಸಾವನ್ನಪ್ಪಿದರೆ, ಮೊಮ್ಮಗಳು ಗಾಯಗೊಂಡಿದ್ದರು. ಈ ಪ್ರಕರಣದಲ್ಲಿ ಪರಿಹಾರ ಕೋರಿ ಮೃತರ ಪತ್ನಿ ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿದ್ದರು. ನ್ಯಾಯ ಮಂಡಳಿ, 'ಪರಿಹಾರ ಮೊತ್ತದ ಪಾವತಿ ಹೊಣೆಗಾರಿಕೆಯನ್ನು ವಿಮಾ ಕಂಪನಿ ಬದಲಾಗಿ ಕಾರು ಮಾಲೀಕ ಪ್ರಭಾಕರ್ ಮೇಲೆ ಹೊರಿಸಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿತ್ತು. 'ಅತಾವುಲ್ಲಾ ಖಾನ್ ಕಾರು ಚಾಲನೆ ಮಾಡುತ್ತಿದ್ದುದು ವೈದ್ಯಕೀಯ ಸಾಕ್ಷ್ಯ, ಸಾಕ್ಷಿಗಳ ಹೇಳಿಕೆಯಿಂದ ದೃಢಪಟ್ಟಿದೆ. ಪ್ರಕರಣದಲ್ಲಿ ಕಾರಿಗೆ ವಿಮಾ ಸೌಲಭ್ಯ ಕಲ್ಪಿಸಿದ್ದ ವಿಮಾ ಕಂಪನಿಯೇ ಸಂತ್ರಸ್ತರ ಕುಟುಂಬಕ್ಕೆ ಪರಿಹಾರ ನೀಡಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

ಇಬ್ಬರು ಸಾವು

ಚನ್ನಗಿರಿ: ತಾಲ್ಲೂಕಿನ ಮುದಿಗೆರೆ ಗ್ರಾಮದಲ್ಲಿ ಮಂಗಳವಾರ ಕೃಷಿ ಹೊಂಡದಲ್ಲಿ ಈಜಲು ಹೋಗಿದ್ದ ಇಬ್ಬರು ಬಾಲಕರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಮುದಿಗೆರೆಯ ಸತೀಶ್ ಅವರ ಪುತ್ರ ಗಣೇಶ್ (16) ಹಾಗೂ ಅಜ್ಜಿಹಳ್ಳಿ ಗ್ರಾಮದ ಶ್ರೀನಿವಾಸ್ ಅವರ ಪುತ್ರ ಹೇಮಂತ್ (15) ಮೃತಪಟ್ಟವರು.

ಇಳುವರಿ ಕುಸಿತ: ಮಾವು ದುಬಾರಿ

• ಆರ್. ಜಿತೇಂದ್ರ

ರಾಮನಗರ: ಹವಾಮಾನ ವೈಪರೀತ್ಯದಿಂದಾಗಿ ಈ ಬಾರಿ ರಾಜ್ಯದಲ್ಲಿ ಮಾವು ಇಳುವರಿ ತೀವ್ರ ಕುಸಿತ ಕಂಡಿದ್ದು, ಇದರಿಂದ ಗ್ರಾಹಕರಿಗೆ ಮಾವಿನ ಹಣ್ಣು ತುಟ್ಟಿಯಾಗುತ್ತಿದೆ.

ರಾಮನಗರದ ಮಾವು ಮಾರುಕಟ್ಟೆಗೆ ಕಾಲಿಟ್ಟಿದ್ದು, ಒಂದು ತಿಂಗಳಿಂದಲೂ ಕೊಯ್ಲು ನಡೆದಿದೆ. ಮೂರ್ನಾಲ್ಕು ದಿನದಿಂದ ಜಿಲ್ಲೆಯಲ್ಲಿ ಮಳೆ,ಗಾಳಿ ಕಾರಣ ರೈತರು ಕೊಯ್ಲು ಚುರುಕುಗೊಳಿಸಿದ್ದಾರೆ. ಇದರಿಂದ ಚನ್ನಪಟ್ಟಣ, ರಾಮನಗರ ಎಪಿಎಂಸಿಗೆ ಉತ್ಪನ್ನದ ಆವಕ ಹೆಚ್ಚಿದ್ದು, ನಿತ್ಯ ತಲಾ 150-200 ಟನ್ ಮಾವು ಬರುತ್ತಿದೆ. ಮಳೆ ಹೆಚ್ಚಿದಷ್ಟು ಮಾವಿನ ಆವಕವೂ ಹೆಚ್ಚಲಿದೆ. ಹೀಗಿದ್ದೂ ಚಿಲ್ಲರೆ ಮಾರುಕಟ್ಟೆಯಲ್ಲಿ ಮಾವಿನ ದರ ಕಡಿಮೆ ಆಗಿಲ್ಲ.

ಸದ್ಯ ಮಾರುಕಟ್ಟೆಗೆ ಬದಾಮಿ, ರಸಪುರಿ, ಸೇಂದೂರ, ತೋತಾಪುರಿ ತಳಿ ಮಾವು ಹೆಚ್ಚು ಆವಕ ಆಗುತ್ತಿದೆ. ಬೈಗನ್‌ಪಲ್ಲಿ ಕಡಿಮೆ ಪ್ರಮಾಣದಲ್ಲಿ ಬರುತ್ತಿದೆ. ಮಲ್ಲಿಕ, ಮಲಗೋವ ಮತ್ತಿತರ ತಳಿ ನಂತರದಲ್ಲಿ ಆವಕ ಆಗಲಿವೆ. ಇವುಗಳ ಆವಕ ಹೆಚ್ಚಾದರೂ ಗ್ರಾಹಕರಿಗೆ ಸಿಗುವ ಹಣ್ಣಿನ ಬೆಲೆ ಇಳಿಯುವ ಸಾಧ್ಯತೆ ಕಡಿಮೆ ಎನ್ನುತ್ತಾರೆ ವರ್ತಕರು. ಜಿಲ್ಲೆಯಲ್ಲಿ ಬೆಳೆಯುವ ಮಾವಿನ ಪೈಕಿ ಶೇ 70ರಷ್ಟು ಅಲ್ಫಾನ್ಸೊ ಅರ್ಥಾತ್ ಬದಾಮಿ ತಳಿಯದ್ದಾಗಿದ್ದು, ರಫ್ತು ಗುಣಮಟ್ಟ ಹೊಂದಿದೆ. ಆದರೆ ಚುನಾವಣೆ ಕಾರಣಕ್ಕೆ ನಗದು ಸಾಗಣೆಗೆ ನಿರ್ಬಂಧ ಇರುವ ಕಾರಣ ಈ ಬಾರಿ ಹೊರ ರಾಜ್ಯಗಳ ವರ್ತಕರು ಹೆಚ್ಚು ಇತ್ತ ತಲೆ ಹಾಕಿಲ್ಲ.

ಜ್ಯೂಸ್ ತಯಾರಿಕಾ ಕಾರ್ಖಾನೆಗಳು ನಿಧಾನವಾಗಿ ಖರೀದಿಗೆ ಮುಂದಾಗುತ್ತಿವೆ. ಜೂನ್–ಜುಲೈ ನಲ್ಲಿ ಕೋಲಾರ ಜಿಲ್ಲೆಯ ಮಾವು ಮಾರುಕಟ್ಟೆಗೆ ಲಗ್ಗೆ ಇಡಲಿದೆ.



ರಾಮನಗರದ ಎಪಿಎಂಸಿಯಲ್ಲಿ ಮಾರಾಟಕ್ಕೆ ಬಂದ ಮಾವು ಪ್ರಜಾವಾಣಿ ಚಿತ್ರ

ಅಂಕಿ-ಅಂಶಗಳು

1.65 ಲಕ್ಷ ಹೆಕ್ಟೇರ್ ರಾಜ್ಯದಲ್ಲಿ ಮಾವು ಬೆಳೆಯುವ ಪ್ರದೇಶ

12-16 ಲಕ್ಷ ಟನ್ ವಾರ್ಷಿಕ ಸರಾಸರಿ ಇಳುವರಿ

5-6 ಲಕ್ಷ ಟನ್ ಈ ವರ್ಷದ ಇಳುವರಿ ನಿರೀಕ್ಷೆ

ಮಾವು ದರ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ತಳಿ	ಎಪಿಎಂಸಿ (ಕಾಯಿ)	ಚಿಲ್ಲರೆ ಮಾರುಕಟ್ಟೆ (ಹಣ್ಣು)
ತೋತಾಪುರಿ	15-20	40-50
ಬದಾಮಿ	65-70	140-150
ಸೇಂದೂರ	25-30	110-120
ನಾಟಿ ಕಾಯಿ	10-12	30-40
ರಸಪುರಿ	55-65	110-120
ಮಲಗೋವ	110-120	150-160
ಮಲ್ಲಿಕ	45-50	80-90
ಬೈಗನ್‌ಪಲ್ಲಿ	30-35	60-70

ಇಳುವರಿ ಕುಸಿತ

ಮಾವು ಬೆಳೆಯುವ ರಾಜ್ಯಗಳಲ್ಲಿ ಕರ್ನಾಟಕ ದೇಶದಲ್ಲಿ ಮೂರನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ ವಾರ್ಷಿಕ ಸರಾಸರಿ 12ರಿಂದ 16 ಲಕ್ಷ ಟನ್‌ನಷ್ಟು ಮಾವು ಬೆಳೆಯಲಾಗುತ್ತಿದೆ. ಇದರಲ್ಲಿ ಬದಾಮಿ ತಳಿಯದ್ದು ಸಿಂಹಪಾಲು. ಆದರೆ ಈ ವರ್ಷ ಏರು ಹಂಗಾಮು ಇದ್ದರೂ ಎಲ್ಲೆಡೆ ಇಳುವರಿ ಕುಸಿದಿದೆ.

ರಾಮನಗರ ಜಿಲ್ಲೆಯಲ್ಲಿ 33 ಸಾವಿರ ಹೆಕ್ಟೇರ್‌ನಲ್ಲಿ ಮಾವು ಬೆಳೆಯಲಾಗಿದ್ದು, ವಾರ್ಷಿಕ ಸರಾಸರಿ 2 ಲಕ್ಷ ಟನ್‌ನಷ್ಟು ಇಳುವರಿ ಇದೆ. ಆದರೆ ಈ ವರ್ಷ 60–80 ಸಾವಿರ ಟನ್‌ನಷ್ಟು ಇಳುವರಿ ಸಿಕ್ಕರೆ ಹೆಚ್ಚು ಎನ್ನುತ್ತಾರೆ ತೋಟಗಾರಿಕೆ ಇಲಾಖೆ ಅಧಿಕಾರಿಗಳು.

ಹವಾಮಾನದಲ್ಲಿನ ವ್ಯತ್ಯಾಸ, ಕೀಟಬಾಧೆ ಕಾರಣಕ್ಕೆ ಈ ಬಾರಿ ಶೇ 40ರಷ್ಟು ಫಸಲು ಸಿಕ್ಕರೆ ಹೆಚ್ಚಾಗಿದೆ. ಇಳುವರಿ ಕಡಿಮೆ ಕಾರಣಕ್ಕೆ ರೈತರಿಗೆ ನಿರ್ವಹಣೆ ವೆಚ್ಚ ಸಿಕ್ಕರೇ ಹೆಚ್ಚು ಎನ್ನುವಂತಾಗಿದೆ

ನಾಗರಾಜು, ಮಾವು ಬೆಳೆಗಾರ, ನಾಗನಹಳ್ಳಿ

ವಿದೇಶ ತಲುಪಿದ 'ಕೊಪ್ಪಳ ಕೇಸರ್'

ಮಾವು ಮಾಗಿಸಲು 'ಇಥಲೀನ್' ಮೊರೆ

• ಪ್ರಮೋದ

ಕೊಪ್ಪಳ: ಮಾವಿನ ಹಣ್ಣುಗಳ ಮೂಲಸತ್ವ ಹಾಗೂ ರುಚಿ ಉಳಿಸಿಕೊಂಡು ನೈಸರ್ಗಿಕವಾಗಿ ಮಾಗಿಸಲು ಜಿಲ್ಲೆಯ ರೈತರು 'ಇಥಲೀನ್' ಮಾದರಿಯ ಮೊರೆ ಹೋಗಿದ್ದಾರೆ. ಇದರಿಂದ ಇಲ್ಲಿಯ ಮಾವಿಗೆ ವಿದೇಶಗಳಲ್ಲಿಯೂ ಬೇಡಿಕೆ ವ್ಯಕ್ತವಾಗುತ್ತಿದೆ.

ಚೆನ್ನಾಗಿ ಬಲಿತ ಮಾವಿನ ಕಾಯಿಗಳು ಹಣ್ಣಾಗಲು 15 ರಿಂದ 20 ದಿನ ಬೇಕು. ಆದ್ದರಿಂದ ಹಲವು ವ್ಯಾಪಾರಿಗಳು 'ಕ್ಯಾಲ್ಸಿಯಂ ಕಾರ್ಬೈಡ್' ಬಳಸಿ ಕೃತಕವಾಗಿ ಎರಡೇ ದಿನಗಳಲ್ಲಿ ಹಣ್ಣುಗಳಿಗೆ ಬಂಗಾರದ ಬಣ್ಣ ಬರುವಂತೆ ಮಾಡುವುದು ಈಗ ಗುಟ್ಟಾಗಿ ಉಳಿದಿಲ್ಲ. ಆಹಾರ ಕಲಬೆರಕೆ ಕಾಯ್ದೆ ಪ್ರಕಾರ, 'ಕ್ಯಾಲ್ಸಿಯಂ ಕಾರ್ಬೈಡ್' ಬಳಕೆ ಅಪರಾಧವಾಗಿದೆ. ಇದು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಕಾರಣ ಜಿಲ್ಲೆಯ ರೈತರು ಸುರಕ್ಷಿತ ಮತ್ತು ವೈಜ್ಞಾನಿಕ ವಿಧಾನವಾದ 'ಇಥಲೀನ್' ಬಳಸುತ್ತಿದ್ದಾರೆ. 'ಇಥಲೀನ್' ಹಾರ್ಮೋನ್ ಆಗಿದ್ದು, ದ್ರವ ಹಾಗೂ ಅನಿಲ ರೂಪದಲ್ಲಿ ಲಭ್ಯವಾಗುತ್ತಿದೆ.

ಇದರ ಬಳಕೆಯಿಂದ ಮಾವಿನ ಕಾಯಿಗಳು ಹೆಚ್ಚು ಸುವಾಸನೆ ಹೊಂದಿ ಗರಿಷ್ಠ ನಾಲ್ಕು ದಿನಗಳಲ್ಲಿ ನೈಸರ್ಗಿಕವಾಗಿ ಮಾಗುತ್ತವೆ. ಹೀಗೆ ಹಣ್ಣಾದ ಮಾವುಗಳಿಗೆ ಬೇಡಿಕೆ ಹೆಚ್ಚಾಗಿ ಜಿಲ್ಲೆಯ ರೈತರ ಆದಾಯವೂ ಇಮ್ಮಡಿಗೊಂಡಿದೆ.

ಮಾವಿನ ಕಾಯಿಗಳನ್ನು ಕಟಾವು ಮಾಡಿದ ನಂತರ ಎರಡು ಗಂಟೆ ನೆರಳಿನಲ್ಲಿಡಬೇಕು. ಬಳಿಕ ಪ್ಲಾಸ್ಟಿಕ್ ಬುಟ್ಟಿಗಳಲ್ಲಿ ಸಂಗ್ರಹಿಸಿಟ್ಟು ಬಿಸಿ ನೀರಿನಲ್ಲಿ ಐದು ನಿಮಿಷ ಮುಳುಗಿಸಿ ಬಟ್ಟೆಯಿಂದ ಒರೆಸಲಾಗುತ್ತದೆ. ಬಳಿಕ ಕಾಯಿಗಳನ್ನು ಪ್ಲಾಸ್ಟಿಕ್ ಬುಟ್ಟಿಯಲ್ಲಿ ತಲೆ ಕೆಳಗಾಗಿಟ್ಟು ಅದರ ಮೇಲೆ ಭತ್ತದ ಹುಲ್ಲು ಅಥವಾ ಪೇಪರ್ ತುಂಡುಗಳನ್ನು ಹಾಕುವ ಪ್ರಯೋಗ ರೈತರು ಮಾಡುತ್ತಿದ್ದಾರೆ.

'ಕಬ್ಬಿನ ಸಿಪ್ಪೆಯಿಂದ ಮಾಡಿದ 'ಇಥಲೀನ್' ದ್ರಾವಣದಲ್ಲಿ ಕಾಯಿಗಳನ್ನು ಐದಾರು ಸೆಕೆಂಡ್ ಮುಳುಗಿಸಿ ತೆಗೆಯಬೇಕು. ಹಣ್ಣು ಮಾಗುವಾಗ 'ಇಥಲೀನ್' ಎನ್ನುವ ರಾಸಾಯನಿಕ ಉತ್ಪತ್ತಿಯಾಗಿ ಆಮ್ಲಗಳು ವಿಭಜನೆಯಾಗಿ ಸಕ್ಕರೆಯಾಗಿ ರೂಪುಗೊಳ್ಳುತ್ತವೆ. ಇದರಿಂದ ಹಣ್ಣಿನಲ್ಲಿ ಸುವಾಸನೆ ಬರುತ್ತವೆ. ನೈಸರ್ಗಿಕವಾಗಿ ಹಣ್ಣು ಮಾಗಿಸುವ ಈ ತಂತ್ರಜ್ಞಾನವನ್ನು ಬೆಂಗಳೂರಿನ ಭಾರತೀಯ ತೋಟಗಾರಿಕಾ ಸಂಸ್ಥೆ ಹಿಂದೆಯೇ ಅಭಿವೃದ್ಧಿ ಪಡಿಸಿದ್ದರೂ ವ್ಯಾಪಕವಾಗಿ ಗೊತ್ತಾಗಿರಲಿಲ್ಲ. ಜಿಲ್ಲೆಯ ರೈತರು ಈಗ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದ್ದಾರೆ' ಎಂದು ಇಲ್ಲಿನ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೃಷ್ಣ ಉಕ್ಕುಂದ 'ಪ್ರಜಾವಾಣಿ'ಗೆ ತಿಳಿಸಿದರು.



ನೈಸರ್ಗಿಕವಾಗಿ ಮಾಗಿಸಿದ ಕೊಪ್ಪಳ ಕೇಸರ್ ಬ್ರ್ಯಾಂಡ್‌ನ ಮಾವಿನ ಹಣ್ಣುಗಳು

ವಿಸ್ತಾರವಾದ ತೋಟಗಾರಿಕೆ ಕ್ಷೇತ್ರ

ರಾಜ್ಯದ ಭತ್ತದ ಕಣ ಎನಿಸಿಕೊಂಡ ಕೊಪ್ಪಳ ಜಿಲ್ಲೆ ಈಗ ತೋಟಗಾರಿಕಾ ಕಣಜವಾಗಿ ಬದಲಾಗುತ್ತಿದೆ. ಐದು ವರ್ಷಗಳ ಹಿಂದೆ ಜಿಲ್ಲೆಯಲ್ಲಿ 2,000 ಹೆಕ್ಟೇರ್ ಇದ್ದ ತೋಟಗಾರಿಕಾ ಪ್ರದೇಶ ಈಗ 3,500 ಹೆಕ್ಟೇರ್‌ಗೆ ವಿಸ್ತಾರವಾಗಿದೆ.

ಇಲ್ಲಿನ ತೋಟಗಾರಿಕಾ ಇಲಾಖೆಯು ರೈತರ ಜೊತೆ ಸೇರಿ 'ಕೊಪ್ಪಳ ಕೇಸರ್' ಎಂಬ ಮಾವಿನ ಬ್ರ್ಯಾಂಡ್ ಹುಟ್ಟುಹಾಕಿದ್ದು, ರೈತರು ನೇರವಾಗಿ ರಾಜ್ಯ ಮತ್ತು ಹೊರರಾಜ್ಯಗಳ ವ್ಯಾಪಾರಿಗಳಿಗೆ ಮಾರಲು ಅವಕಾಶ ಲಭಿಸಿದೆ. ಇಲಾಖೆ ತನ್ನ ವೆಬ್‌ಸೈಟ್‌ನಲ್ಲಿಯೇ ಮಾವು ಬೆಳೆಗಾರರ ಸಂಪರ್ಕ ಸಂಖ್ಯೆ ಹಾಕಿದೆ.

ಇಥಲೀನ್ ದ್ರಾವಣ ಬಳಸಿ ನೈಸರ್ಗಿಕವಾಗಿ ಹಣ್ಣು ಮಾಗಿಸುತ್ತಿದ್ದೇನೆ. ಮಾವಿನ ಹಣ್ಣುಗಳ ಭಾರಕ್ಕೆ ಮರವೇ ಬಗ್ಗಿ ಹೋದಂತೆ ಆಗಿದೆ. ವಿದೇಶಕ್ಕೆ ಕಳುಹಿಸಲು ಸಿದ್ಧತೆ ಮಾಡಿಕೊಂಡಿದ್ದೇನೆ.

ಶ್ರೀನಿವಾಸ ಜಾಲಿಹಾಳ, ರೈತ, ಕೊಪ್ಪಳ

ಹಣ್ಣುಗಳು ಜಿಲ್ಲೆಯಿಂದ ಯುರೋಪ್ ರಾಷ್ಟ್ರಗಳಿಗೆ ರಫ್ತಾಗುತ್ತಿವೆ. ಗುಜರಾತ್ ಕೇಸರ್ ಪ್ರಸಿದ್ಧಿಯಾಗಿದ್ದು ಅಲ್ಲಿ ಜೂನ್‌ನಲ್ಲಿ ಫಸಲು ಬರುತ್ತದೆ. ನಮ್ಮಲ್ಲಿ ಏಪ್ರಿಲ್‌ನಲ್ಲಿಯೇ ಫಸಲು ಬರುತ್ತದೆ.

ಕೃಷ್ಣ ಉಕ್ಕುಂದ, ಉಪನಿರ್ದೇಶಕ, ತೋಟಗಾರಿಕಾ ಇಲಾಖೆ, ಕೊಪ್ಪಳ

ಸಿಇಟಿ: ಅರ್ಜಿ ಸಲ್ಲಿಕೆ, ಶುಲ್ಕ ಪಾವತಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ನೋಂದಾಯಿಸಿಕೊಳ್ಳಲು ಮೇ 11ರ ಬೆಳಿಗ್ಗೆ 8ರಿಂದ 13ರ ಬೆಳಿಗ್ಗೆ 11ರವರೆಗೆ ಹಾಗೂ ಶುಲ್ಕ ಪಾವತಿಸಲು ಅಂದು ಸಂಜೆ 6ರ ತನಕ ಕೊನೆಯ ಅವಕಾಶವಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕಿ ರಮ್ಯಾ ತಿಳಿಸಿದ್ದಾರೆ.

ಪೋಷಕರ, ವಿದ್ಯಾರ್ಥಿಗಳ ಮನವಿ ಮೇರೆಗೆ ಮತ್ತೊಂದು ಅವಕಾಶ ಕಲ್ಪಿಸಲಾಗಿದೆ. ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶುವೈದ್ಯಕೀಯ, ಬಿಎಸ್‌ಸಿ (ನರ್ಸಿಂಗ್) ಮುಂತಾದ ಕೋರ್ಸ್‌ಗಳಿಗೆ 2023ರಲ್ಲಿ ಪ್ರವೇಶಾವಕಾಶ ಬಯಸುವ ವಿದ್ಯಾರ್ಥಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್: http://kea.kar.nic.inನಲ್ಲಿ ಮಾಹಿತಿ ಲಭ್ಯ ಎಂದು ಹೇಳಿದ್ದಾರೆ.

ಬಡತನದಲ್ಲಿಯೇ ಶೇ 91.84 ಅಂಕ ಗಳಿಕೆ ● ಮುಂದಿನ ಶಿಕ್ಷಣಕ್ಕೆ ನೆರವಿಗೆ ಮನವಿ

ಎಸ್ಸೆಸ್ಸೆಲ್ಸಿ: ಮನೆಗೆಲಸ ಮಾಡುತ್ತಲೇ ಸಾಧನೆ

● ಇಮಾಮ್‌ಹುಸೇನ್ ಗೂಡುನವರ



ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಪುತ್ರಿ ಭಾಗ್ಯಗೆ ತಾಯಿ ಭೀಮವ್ವ ಸಿಹಿ ತಿನ್ನಿಸಿದರು. ಸಹೋದರಿ ಲಕ್ಷ್ಮಿ ಇದ್ದಾರೆ

–ಪ್ರಜಾವಾಣಿ ಚಿತ್ರ:ಏಕನಾಥ ಅಗಸಿಮನಿ

ಪ್ರಜಾವಾಣಿ ವಿಶೇಷ

ಬೆಳಗಾವಿ: 'ಊರಾಗೊಂದು ಹಳೀ ಮನಿ ಬಿಟ್ರ ನಮಗೇನಿಲ್ರಿ. ಹಂಗಾಗಿ ದುಡ್ಯಾಕ ಬೆಳಗಾವಿಗೆ ಬಂದ್ವಿ. ನಾನೂ, ಗಂಡ ಕೂಲಿಗೆ ಹೋದ್ರ, ಮಗಳು 4ನೇ ಕ್ಲಾಸ್‌ನ್ಯಾಗ ಇದ್ದಾಗಿನಿಂದ ಬೇರೆಯವರ ಮನೆಗೆಲಸಕ್ಕ ಹೋಗಾಕತ್ತು. ದಿನ್ನಾ ಎರಡು ಮನಿಗೋಳ ಕೆಲ್ಸ ಮಾಡ್ಕೊಂತನ ಸಾಲಿಗೂ ಹೋಗ್ತಿದ್ಳು. ಈಗ ಮ್ಯಾಟ್ರಿಕ್ ಪರೀಕ್ಷಾದಾಗ ಏನೋ ಸಾಧನೆ ಮಾಡ್ಯಾಳು. ಇದನ್ನ ಕೇಳಿ ಭಾಳ್ ಆನಂದ ಆಗಾಕತ್ತೇತ್ರಿ...'

ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 574(ಶೇ.91.84) ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಭಾಗ್ಯ ಸಿದ್ದಾಪುರ ಅವಳ ತಾಯಿ ಭೀಮವ್ವ ಅವರು 'ಪ್ರಜಾವಾಣಿ' ಎದುರು ಮಂಗಳವಾರ ಸಂತಸ ಹಂಚಿಕೊಂಡಿದ್ದು ಹೀಗೆ.

ಗೋಕಾಕ ತಾಲ್ಲೂಕಿನ ಶಿಲ್ತಿಭಾವಿಯ ಭೀಮವ್ವ–ಮಾರುತಿ ದಂಪತಿ ಶಾಲೆ ಮೆಟ್ಟಿಲನ್ನೇ ತುಳಿದಿಲ್ಲ. ಆದರೆ, ಅವರ ಪುತ್ರಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾಳೆ. ಪ್ರಥಮ ಭಾಷೆ ಕನ್ನಡದಲ್ಲಿ 125ಕ್ಕೆ 125 ಅಂಕ ಗಳಿಸಿದ್ದಾಳೆ.

ಇಲ್ಲಿನ ಸರ್ಕಾರಿ ಸರ್ದಾರ್ಸ್ ಪ್ರೌಢಶಾಲೆಯಲ್ಲಿ ಓದುತ್ತಿರುವ ಭಾಗ್ಯ, ನಿತ್ಯ ಶಾಲೆಗೆ ತೆರಳುವ ಮುನ್ನ ಒಬ್ಬರ ಮನೆಗೆಲಸಕ್ಕೆ ಹೋಗುತ್ತಿದ್ದಳು. ಸಂಜೆ ಮತ್ತೊಬ್ಬರ ಮನೆಯಲ್ಲಿ ಪಾತ್ರೆ ತೊಳೆದು, ಕಸಗುಡಿಸಿ ಬಂದ ನಂತರ ಅಭ್ಯಾಸಕ್ಕೆ ಕೂರುತ್ತಿದ್ದಳು. ಮನೆಕೆಲಸದಿಂದ ಬರುವ ಮಾಸಿಕ ₹1,200 ಅನ್ನು ತನ್ನ ಶೈಕ್ಷಣಿಕ ವೆಚ್ಚಕ್ಕಾಗಿ ಬಳಸಿಕೊಳ್ಳುತ್ತಿದ್ದಳು.

'ಈ ಜಗತ್ತಿನಲ್ಲಿ ಕಷ್ಟ ಯಾರಿಗೂ ಬಿಟ್ಟಿಲ್ಲ. ಆದರೆ, ನಮಗಿರುವ ಸಂಕಷ್ಟಗಳಿಗಿಂತ ಅವಕಾಶಗಳ ಬಗ್ಗೆ ಯೋಚಿಸಬೇಕು. ಮುಂದೆ ಪಿಯು ವಿಜ್ಞಾನ ವಿಭಾಗಕ್ಕೆ ಸೇರಲಿದ್ದೇನೆ. ಪ್ರೌಢಶಾಲೆಯ ಶೈಕ್ಷಣಿಕ ವೆಚ್ಚ ಹೇಗೋ ಸರಿದೂಗಿಸುತ್ತಿದ್ದೆ. ಆದರೆ, ಪಿಯು ಕಾಲೇಜಿನಲ್ಲಿ ಪ್ರವೇಶ ಪಡೆಯಲು ಮತ್ತು ಕಲಿಕೆಗೆ ಹಣಕಾಸಿನ ಅಗತ್ಯವಿದೆ. ಯಾರಾದರೂ ನೆರವಾದರೆ ಅಭಾರಿಯಾಗಿರುತ್ತೇನೆ' ಎಂದು ಭಾಗ್ಯ ಹೇಳಿದಳು.

'ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಒಬ್ಬೊಬ್ಬರ ಮನೆಯಲ್ಲಿ ಕೆಲಸ ಮಾಡುತ್ತಿದ್ದೆ. ಪರೀಕ್ಷಾ ಅವಧಿಯಲ್ಲಿ ಮನೆಗೆಲಸಕ್ಕೆ ರಜೆ ಪಡೆದಿದ್ದೆ. ಶಾಲೆಯಲ್ಲಿ ಶಿಕ್ಷಕರ ಪಾಠ ಸಮಚಿತ್ತದಿಂದ ಆಲಿಸುತ್ತಿದ್ದೆ. ಏನೇ ಶೈಕ್ಷಣಿಕ ಗೊಂದಲಗಳಿದ್ದರೂ ಗುರುಗಳು ಹಾಗೂ ಸಹಪಾಠಿಗಳೊಂದಿಗೆ ಚರ್ಚಿಸಿ ಬಗೆಹರಿಸಿಕೊಳ್ಳುತ್ತಿದ್ದೆ. ಈ ಅಂಕಗಳನ್ನು ಹೆತ್ತವರು ಹಾಗೂ ಶಿಕ್ಷಕ ಬಳಗಕ್ಕೆ ಅರ್ಪಿಸುತ್ತೇನೆ' ಎಂದಳು.

ಭಾಗ್ಯ ಕುಟುಂಬಸ್ಥರು ಬೇರೆ ಕಡೆ ಕೂಲಿಯೊಂದಿಗೆ, ಬೆಳಗಾವಿಯ ಸದಾಶಿವ ನಗರದ ಖಾಸಗಿ ಆಸ್ಪತ್ರೆಯಲ್ಲಿ ಕಟ್ಟಡ ಸ್ವಚ್ಛಗೊಳಿಸುವ ಕೆಲಸ ಮಾಡುತ್ತಿದ್ದಾರೆ. ಅದೇ ಆಸ್ಪತ್ರೆ ಹಿಂಭಾಗದಲ್ಲಿ ತಗಡಿನ ಕೋಣೆಯಲ್ಲಿ ಅವರಿಗೆ ವಾಸಕ್ಕೆ ಅವಕಾಶ ಕಲ್ಪಿಸಲಾಗಿದೆ. ಭಾಗ್ಯಳ ಮುಂದಿನ ಕಲಿಕೆಗೆ ಸಹಾಯ ಮಾಡಲಿಚ್ಛಿಸುವವರು ಮೊ.ಸಂ.9019295914 ಸಂಪರ್ಕಿಸಬಹುದು.

> **ಹಲವು ಅಡ್ಡಿ–ಆತಂಕಗಳ ಮಧ್ಯೆಯೂ ಭಾಗ್ಯ ಉತ್ತಮ ಸಾಧನೆ ಮೆರೆದಿದ್ದಾಳೆ. ಅವಳ ಮುಂದಿನ ಶಿಕ್ಷಣಕ್ಕೆ ನಾವೂ ಸಹಾಯ ಮಾಡುತ್ತೇವೆ**
> **ಶಿವಶಂಕರ ಹಾದಿಮನಿ,** ಮುಖ್ಯಾಧ್ಯಾಪಕ, ಸರ್ಕಾರಿ ಸರ್ದಾರ್ಸ್ ಪ್ರೌಢಶಾಲೆ, ಬೆಳಗಾವಿ

> **ನಮ್ಮ ಸಾಮಾನ್ಯ ಜ್ಞಾನ ಹೆಚ್ಚಲೆಂದು ತಂದೆ ಹಲವು ವರ್ಷಗಳಿಂದ 'ಪ್ರಜಾವಾಣಿ' ತರಿಸುತ್ತಿದ್ದಾರೆ. ಇದರಲ್ಲಿ ಪ್ರಕಟವಾಗುವ ಅಂಶಗಳೂ ಕಲಿಕೆಗೆ ನೆರವಾದವು**
> **ಭಾಗ್ಯ ಸಿದ್ದಾಪುರ**
> ವಿದ್ಯಾರ್ಥಿನಿ

'ರೊಟ್ಟಿ ತಿನಿಸಿದ ಆನೆ ಮೇಲೆ ದಿಬ್ಬಣದ ಹೊರೆಯೇ?'

ಒಂದನೇ ಪುಟದಿಂದ...

'ಆನೆ ಮಾಲೀಕರು ಅನುಮತಿ ಪಡೆಯದೇ ವಾಣಿಜ್ಯ ಉದ್ದೇಶಕ್ಕೆ ಪದೇ ಪದೇ ಬೇರೆ ಜಿಲ್ಲೆಗಳಿಗೆ ಆನೆ ಕಳಿಸುತ್ತಾರೆ. ಹೈದರಾಬಾದ್‌ನಲ್ಲಿ ಮದುವೆಗೆ ಆನೆ ಒಯ್ಯುತ್ತಿದ್ದಾಗ ತೆಲಂಗಾಣದ ಅರಣ್ಯ ಇಲಾಖೆ ಅಧಿಕಾರಿಗಳು ಕರೆ ಮಾಡಿದ್ದರು. ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ, ಇದೇ ಆನೆ ಆಗಿತ್ತು. ಪದೇ ಪದೇ ನಿಯಮ ಉಲ್ಲಂಘಿಸುತ್ತಿರುವ ಕಾರಣ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದರು.

'ಬೀದರ್‌ನ ಜೆಎಂಎಫ್‌ಸಿ ನ್ಯಾಯಾಲಯವು ಪ್ರಕರಣದ ವಿಚಾರಣೆ ನಡೆಸಿ, ಅರಣ್ಯ ಇಲಾಖೆ ವಶದಲ್ಲಿರುವ ಆನೆ ಬಿಡುಗಡೆಗೆ ಆದೇಶ ನೀಡಿತು. ಆನೆ ಸಾಕಾಣಿಕೆಗೆ ಇರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಮಾಲೀಕರಿಗೆ ಸೂಚನೆ ನೀಡಿತು. ಆನೆಯನ್ನು 3 ತಿಂಗಳು ಶಿಬಿರಕ್ಕೆ ಕಳಿಸಿ ತರಬೇತಿ ಕೊಡಿಸುವ ಮೌಖಿಕ ಒಪ್ಪಿಗೆ ನೀಡಿದ ಬಳಿಕ ಆನೆ ಬಿಡುಗಡೆ ಮಾಡಲಾಯಿತು. ಆನೆ ಮಾಲೀಕ ಕಡಗಂಚಿಯ ವೀರತಪಸ್ವಿ ವೀರಭದ್ರ ಶಿವಾಚಾರ್ಯ ನ್ಯಾಯಾಲಯಕ್ಕೆ ಹಾಜರಾಗಿದ್ದರು' ಎಂದು ಆನೆ ಮಾಲೀಕರ ಪರ ವಾದ ಮಂಡಿಸಿದ ವಕೀಲ ಕೇಶವ ಶ್ರೀಮಾಳೆ ತಿಳಿಸಿದರು. ಆನೆಯ ಮಾವುತನ ವಿರುದ್ಧ ಪ್ರಕರಣ ದಾಖಲಾಗಿದೆ. ಲಾರಿ ಚಾಲಕ, ಕಲಬುರಗಿಯ ಈರಯ್ಯ ಹಿರೇಮಠ ಅವರನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ನೀಡಲಾಗಿದೆ.

ಮದ್ಯ ಕುಡಿದು ಬಂದ ಇಬ್ಬರು ಸಿಬ್ಬಂದಿ ಸೇವೆಯಿಂದ ಅಮಾನತು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಚುನಾವಣಾ ಕಾರ್ಯಕ್ಕೆ ಮದ್ಯಪಾನ ಮಾಡಿ ಬಂದಿದ್ದ ಇಬ್ಬರು ಸಿಬ್ಬಂದಿಯನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಸೊರಬ ತಾಲ್ಲೂಕಿನ ಹುರುಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಎನ್.ಮಾಲತೇಶ ಹಾಗೂ ಭದ್ರಾವತಿಯ ತೋಟಗಾರಿಕೆ ಇಲಾಖೆಯ ತೋಟಗಾರಿಕೆ ಸಹಾಯಕ ಬಿ.ರಮೇಶ ಅಮಾನತುಗೊಂಡವರು.

ಮತಗಟ್ಟೆ ಕೇಂದ್ರಕ್ಕೆ ತೆರಳಲು ಇಲ್ಲಿನ ಎನ್‌ಇಎಸ್ ಕಾಲೇಜು ಮೈದಾನದಲ್ಲಿ ಸ್ಥಾಪಿಸಿರುವ ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ ಮಸ್ಟರಿಂಗ್ ಕೇಂದ್ರಕ್ಕೆ ಮಂಗಳವಾರ ಬೆಳಿಗ್ಗೆ ಈ ಇಬ್ಬರೂ ಮದ್ಯ ಸೇವಿಸಿ ಕರ್ತವ್ಯಕ್ಕೆ ಹಾಜರಾದ ಬಗ್ಗೆ ಸಂಶಯ ಮೂಡಿತ್ತು. ಕೂಡಲೇ ಅವರನ್ನು ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿ ತಪಾಸಣೆಗೆ ಒಳಪಡಿಸಲಾಯಿತು. ವೈದ್ಯಕೀಯ ಪರೀಕ್ಷೆಯಲ್ಲಿ ಮದ್ಯಪಾನ ಮಾಡಿದ್ದು ಸಾಬೀತಾಗಿರುವ ವರದಿ ಆಧರಿಸಿ ಜಿಲ್ಲಾಧಿಕಾರಿ ಆರ್.ಸೆಲ್ವಮಣಿ ಅವರು ಇಬ್ಬರನ್ನೂ ಅಮಾನತು ಮಾಡಲು ಆದೇಶಿಸಿದ್ದಾರೆ.

ತಾ.ಪಂ ಇಒ ಅಮಾನತು

ಚಿಕ್ಕಮಗಳೂರು: ಚುನಾವಣಾ ಕಾರ್ಯಕ್ಕೆ ತೊಂದರೆ, ಕರ್ತವ್ಯ ಲೋಪ, ನಿರ್ಲಕ್ಷ್ಯದಡಿ ಶೃಂಗೇರಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪುಟ್ಟೇಗೌಡ ಅವರನ್ನು ಜಿಲ್ಲಾ ಚುನಾವಣಾಧಿಕಾರಿ ಕೆ.ಎನ್. ರಮೇಶ್ ಅಮಾನತುಗೊಳಿಸಿದ್ದಾರೆ.

ಪುಟ್ಟೇಗೌಡ ಅವರು ಚುನಾವಣಾ ಕೆಲಸಗಳನ್ನು ಸರಿಯಾಗಿ ನಿರ್ವಹಿಸಿಲ್ಲ. ಮಹಿಳಾ ಸಿಬ್ಬಂದಿ ಮುಂದೆ ಅವಾಚ್ಯ, ಅಶ್ಲೀಲ ಪದ ಬಳಸಿ ಮಜುಗರವಾಗುವಂತೆ ನಡೆದುಕೊಂಡಿರುವುದು ಕಂಡುಬಂದಿದೆ. ತಕ್ಷಣದಿಂದ ಅವರನ್ನು ಅಮಾತುಗೊಳಿಸಲಾಗಿದೆ ಎಂದು ರಮೇಶ್ ತಿಳಿಸಿದ್ದಾರೆ.

'ಉತ್ತರದಾಯಿತ್ವ ಪ್ರಮಾಣಪತ್ರ ಹಕ್ಕುಗಳ ದೃಢೀಕರಣ ಅಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉತ್ತರದಾಯಿತ್ವ ಪ್ರಮಾಣಪತ್ರವೆಂಬುದು ವ್ಯಕ್ತಿಯ ಸಾವಿನ ನಂತರದಲ್ಲಿ ಆತನ ಸಾಲಗಳು, ದಕ್ಕಬೇಕಾದ ಭತ್ಯೆಯ ಪ್ರಯೋಜನಗಳು ಅಥವಾ ಭದ್ರತೆಗಳನ್ನು ಯಾರಿಗೆ ನೀಡಬೇಕು ಎಂಬ ಸಂಗತಿಗಳನ್ನು ಗುರುತಿಸಲು ಸೀಮಿತ. ಆದರೆ, ಉತ್ತರದಾಯಿತ್ವ ಪ್ರಮಾಣ ಪತ್ರವನ್ನೇ ಮುಂದಿಟ್ಟುಕೊಂಡು ಹಕ್ಕುಗಳನ್ನು ಮಂಡಿಸಲು ಆಗುವುದಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಗಂಗಮ್ಮ ಮತ್ತು ಗುರುಪಾದಪ್ಪ ಸವದಿ ಎಂಬ ವೃದ್ಧ ದಂಪತಿ ಸಲ್ಲಿಸಿದ್ದ ಪುನರ್ ಪರಿಶೀಲನಾ ಅರ್ಜಿಯನ್ನು ಕಲಬುರಗಿ ಪೀಠದಲ್ಲಿನ ನ್ಯಾಯಮೂರ್ತಿ ಸಿ.ಎಂ.ಜೋಶಿ ಅವರಿದ್ದ ಏಕಸದಸ್ಯ ನ್ಯಾಯಪೀಠವು ತಿರಸ್ಕರಿಸಿದೆ.

ಪ್ರಕರಣವೇನು?: ಆಸ್ಪತ್ರೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿದ್ದ ನಾಗಪ್ಪ ಸಂಗಮೇಶ್ವರ ಸವದಿ ಎಂಬುವರು 2008ರ ನವೆಂಬರ್ 7ರಂದು ನಿಧನರಾದರು. ನಾಗಪ್ಪ ನಿಧನದ ನಂತರ ಪೋಷಕರು, 'ನಾವೇ ಉತ್ತರದಾಯಿಗಳು, ಆತನ ಮರಣಾನಂತರದ ಸೇವಾ ಭತ್ಯೆಗಳು ನಮಗೇ ಬರಬೇಕು' ಎಂದು ಕೋರಿದ್ದರು.

ಏತನ್ಮಧ್ಯೆ ನಾಗಪ್ಪ ಅವರ ಪತ್ನಿ ಪ್ರತಿಭಾ ಹಾಗೂ ಪುತ್ರ ಪ್ರತೀಕ್ ಈ ಕುರಿತಂತೆ ಸಿವಿಲ್ ನ್ಯಾಯಾಲಯದಿಂದ ಉತ್ತರದಾಯಿತ್ವ ಪ್ರಮಾಣಪತ್ರ ಪಡೆದುಕೊಂಡಿದ್ದರು. ಆದರೆ, ಪ್ರಮಾಣ ಪತ್ರದಲ್ಲಿ, 'ಪೋಷಕರಿಗೆ ಯಾವುದೇ ಪಾಲು ಇಲ್ಲ' ಎಂಬ ಬಗ್ಗೆ ಉಲ್ಲೇಖವೇನೂ ಇರಲಿಲ್ಲ. ಈ ಬಗ್ಗೆ ಪೋಷಕರು ಸಲ್ಲಿಸಿದ್ದ ಮೇಲ್ಮನವಿ ಆಲಿಸಿದ ಜಿಲ್ಲಾ ನ್ಯಾಯಾಲಯ ವಿಚಾರಣಾ ನ್ಯಾಯಾಲಯದ ಆದೇಶವನ್ನು ಕಾಯಂಗೊಳಿಸಿತ್ತು. ಅಂತೆಯೇ, 'ನಿಮ್ಮ ಹೆಚ್ಚಿನ ಅಹವಾಲುಗಳೇನಾದರೂ ಇದ್ದರೆ ಆ ಕುರಿತಾಗಿ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಬಹುದು' ಎಂದು ಆದೇಶಿಸಿತ್ತು.

ಈ ಹಿನ್ನೆಲೆಯಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದ ಪೋಷಕರು, 'ಎರಡೂ ವಿಚಾರಣಾ ನ್ಯಾಯಾಲಯಗಳು ನಮ್ಮನ್ನು ಮೊದಲ ಸ್ತರದ ಉತ್ತರದಾಯಿಗಳೆಂದು ಒಪ್ಪಿಕೊಂಡಿವೆ. ಹೀಗಾಗಿ, ಉತ್ತರದಾಯಿತ್ವ ಪ್ರಮಾಣಪತ್ರವನ್ನು ಜಂಟಿ ಹೆಸರಿನಲ್ಲಿ ನೀಡಬೇಕಾಗಿತ್ತು' ಎಂಬ ವಾದ ಮಂಡಿಸಿದ್ದರು. ಈ ವಾದಾಂಶವನ್ನು ತಳ್ಳಿ ಹಾಕಿರುವ ಹೈಕೋರ್ಟ್, 'ಉತ್ತರದಾಯಿತ್ವ ಪ್ರಮಾಣಪತ್ರವು ಹಕ್ಕುಗಳನ್ನು ನಿರ್ಧರಿಸುವ ಮಾನದಂಡವಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಮತದಾನಕ್ಕೆ ಲಂಡನ್‌ನಿಂದ ಬಂದ ಸ್ಪಂದನ್



ಸ್ಪಂದನ್ ಗೌಡ

ಹೆತ್ತೂರು (ಹಾಸನ ಜಿಲ್ಲೆ): ಹೋಬಳಿ ಕಾಗಿನೆರೆಯ ಕಾಫಿ ಬೆಳೆಗಾರ ಪರಮೇಶ್ ಅವರ ಪುತ್ರ ಸ್ಪಂದನ್ ಗೌಡ, ಮತದಾನ ಮಾಡಲು ಲಂಡನ್‌ನಿಂದ ಬಂದಿದ್ದಾರೆ. ಸಕಲೇಶಪುರ– ಆಲೂರು ಕ್ಷೇತ್ರದ ಮತದಾರರಾಗಿರುವ ಅವರು, ಮತದಾನಕ್ಕೆಂದೇ ₹ 80 ಸಾವಿರ ಖರ್ಚು ಮಾಡಿ ತವರಿಗೆ ಬಂದಿದ್ದಾರೆ.


ಲಂಡನ್‌ನಲ್ಲಿ ಅವರು ಗ್ಲೋಬಲ್ ಬ್ರ್ಯಾಂಡ್ ಮ್ಯಾನೇಜ್‌ಮೆಂಟ್ ಕುರಿತ ಎಂಬಿಎ ಪ್ರಥಮ ವರ್ಷದ ವಿದ್ಯಾರ್ಥಿ. ಕಾಲೇಜಿನ ಅನುಮತಿ ಪಡೆದು ಬಂದಿರುವ ಅವರ ಕಾಳಜಿಗೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಯುವಜನ ಮತದಾನದಲ್ಲಿ ಆಸಕ್ತಿ ತೋರಿಸದೇ ಇರುವುದರಿಂದಲೇ ಯೋಗ್ಯರು ಚುನಾವಣೆಯಲ್ಲಿ ಗೆಲ್ಲುತ್ತಿಲ್ಲ. ಎಲ್ಲರೂ ಮತದಾನ ಮಾಡಿದರೆ ಮಾತ್ರ ಯೋಗ್ಯರು ಆಯ್ಕೆಯಾಗಲು ಸಾಧ್ಯ' ಎಂಬುದು ಅವರ ಪ್ರತಿಪಾದನೆ.

'ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ನಮ್ಮ ಕಾಲೇಜಿನಲ್ಲಿ ಅಪಾರ ಗೌರವವಿದ್ದು, ಅಲ್ಲಿನ ಮುಖ್ಯಸ್ಥರು ನನಗೆ ನೆರವಾಗಿದ್ದಾರೆ. ಜೊತೆಗೆ, ಮನೆಯವರು ಹಾಗೂ ಸ್ನೇಹಿತರ ಸಹಕಾರದಿಂದ ಬರಲು ಸಾಧ್ಯವಾಯಿತು' ಎಂದರು.

ಶಾ ಹೇಳಿಕೆಗೆ 'ಸುಪ್ರೀಂ' ಆಕ್ಷೇಪ

ಒಂದನೇ ಪುಟದಿಂದ...



ಅಮಿತ್ ಶಾ

'ನಾವು ನ್ಯಾಯಾಲಯದ ಭಾವನೆಯನ್ನು ಅರ್ಥ ಮಾಡಿಕೊಳ್ಳುತ್ತೇವೆ ಹಾಗೂ ಗೌರವಿಸುತ್ತೇವೆ' ಎಂದು ಮೆಹ್ತಾ ಹೇಳಿದರು. 'ಧರ್ಮ ಆಧಾರಿತವಾದ ಯಾವುದೇ ಮೀಸಲಾತಿ ಅಸಂವಿಧಾನಿಕ' ಎಂದು ಅವರು ಪುನರುಚ್ಚರಿಸಿದರು.

'ಮುಸ್ಲಿಮರ ಮೀಸಲಾತಿಯನ್ನು ಹಿಂಪಡೆದಿದ್ದೇವೆ ಎಂದು ಸಚಿವರು ಪ್ರತಿನಿತ್ಯ ಹೇಳುತ್ತಿದ್ದಾರೆ' ಎಂದು ದವೆ ಅವರು ಮತ್ತೆ ಹೇಳಿದರು. ಈ ಮಾತಿಗೆ ಆಕ್ರೋಶಗೊಂಡ ಮೆಹ್ತಾ, ಇಂತಹ ಅಸಂಬದ್ಧ ಹೇಳಿಕೆಗಳನ್ನು ನೀಡದಂತೆ ಹಿರಿಯ ವಕೀಲರಿಗೆ ನಿರ್ಬಂಧ ಹೇರುವಂತೆ ನ್ಯಾಯಾಲಯಕ್ಕೆ ಮನವಿ ಮಾಡಿದರು.

'ಇದು ಸುಪ್ರೀಂ ಕೋರ್ಟ್ ಪೀಠ. ಇದನ್ನು ಮೀನು ಮಾರುಕಟ್ಟೆಯನ್ನಾಗಿ ಪರಿವರ್ತಿಸಲು ಬಿಡಬೇಡಿ. ಅಂತಹ ಹೇಳಿಕೆಗಳನ್ನು ನೀಡದಂತೆ ಅವರನ್ನು (ದವೆ) ನ್ಯಾಯಪೀಠ ತಡೆಯಬೇಕು. ಅವರು ಈ ಸಂಬಂಧ ಅರ್ಜಿ ಸಲ್ಲಿಸಲಿ. ನಾವು ಉತ್ತರ ಸಲ್ಲಿಸುತ್ತೇವೆ' ಎಂದು ಮೆಹ್ತಾ ಹೇಳಿದರು.

'ನ್ಯಾಯಪೀಠಕ್ಕೆ ನಾನು ಅರ್ಜಿ ಸಲ್ಲಿಸುತ್ತೇನೆ ಹಾಗೂ ಅವರ ಹೇಳಿಕೆಗಳ ಕುರಿತು ದಾಖಲೆ ಸಲ್ಲಿಸುತ್ತೇನೆ' ಎಂದು ದವೆ ಪ್ರತಿಕ್ರಿಯಿಸಿದರು.

ಆಗ ಮೆಹ್ತಾ, 'ಯಾವುದೇ ಅರ್ಜಿ ಇಲ್ಲದೇ ಯಾರೊಬ್ಬರಿಗೂ ಅವರ (ಕೇಂದ್ರ ಗೃಹ ಸಚಿವರು) ವಿರುದ್ಧ ಆರೋಪಿಸಲಾದ ಹೇಳಿಕೆಗಳನ್ನು ತಿಳಿಯಲು ಸಾಧ್ಯವಿಲ್ಲ' ಎಂದರು.

'ನ್ಯಾಯಾಲಯದಲ್ಲಿ ಕೂಗಾಡಬೇಡಿ ಅಥವಾ ರಾಜಕೀಯ ಹೇಳಿಕೆಗಳನ್ನು ನೀಡಬೇಡಿ' ಎಂದು ನ್ಯಾಯಮೂರ್ತಿ ಜೋಸೆಫ್ ಅವರು ದವೆ ಅವರಿಗೆ ಸೂಚಿಸಿದರು.

'ರಾಜಕೀಯಕ್ಕೂ ನಮಗೂ ಸಂಬಂಧ ಇಲ್ಲ. ಈ ರೀತಿಯಾಗಿ ಸಮಸ್ಯೆಯನ್ನು ರಾಜಕೀಯಗೊಳಿಸುವುದನ್ನು ಅನುಮತಿಸುವುದಿಲ್ಲ. ನಾವು ಪ್ರಕರಣದ ವಿಚಾರಣೆಯನ್ನು ಮುಂದೂಡುತ್ತೇವೆ' ಎಂದು ಪೀಠ ಹೇಳಿತು.


ಆಗ ಅರ್ಜಿದಾರರ ಪರ ವಕೀಲರು, ' ಪಕ್ಷ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದರೆ ಮುಸ್ಲಿಮರ ಶೇ 4 ಮೀಸಲಾತಿಯನ್ನು ರದ್ದುಪಡಿಸುವುದಾಗಿ ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ತಿಳಿಸಿದೆ' ಎಂದು ಗಮನ ಸೆಳೆದರು.

ಮೆಹ್ತಾ ಅವರು ಪ್ರತಿಕ್ರಿಯಿಸಿ, 'ಅಂತಹ ಪ್ರಣಾಳಿಕೆಯಲ್ಲಿ ಯಾವುದೇ ತಪ್ಪಿಲ್ಲ' ಎಂದೂ ಸಮರ್ಥಿಸಿಕೊಂಡರು.

ಸೆಂಟ್ರಲ್ ಮುಸ್ಲಿಂ ಅಸೋಸಿಯೇಷನ್ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ರವಿವರ್ಮ ಕುಮಾರ್, 'ಮೀಸಲಾತಿ ರದ್ದು ಕುರಿತ ಭಾಷಣಗಳನ್ನು ಪ್ರಕಟಿಸದಂತೆ ಮಾಧ್ಯಮಗಳಿಗೆ ನಿರ್ಬಂಧ ಹೇರಬೇಕು' ಎಂದು ಮನವಿ ಮಾಡಿದರು. ಈ ವಾದಕ್ಕೆ ವಿರೋಧ ವ್ಯಕ್ತಪಡಿಸಿದ ಮೆಹ್ತಾ, 'ಮಾಧ್ಯಮಗಳನ್ನು ಈ ರೀತಿ ನಿಯಂತ್ರಣ ಮಾಡಲು ಸಾಧ್ಯವಿಲ್ಲ' ಎಂದರು.

'ಮುಸ್ಲಿಮರ ಮೀಸಲಾತಿ ಹಿಂಪಡೆದಿರುವ ಮಾರ್ಚ್ 27ರ ಆದೇಶದ ಮೇಲೆ ಸರ್ಕಾರ ಸದ್ಯ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ಈ ಆದೇಶದ ಆಧಾರದಲ್ಲಿ ಯಾವುದೇ ಶೈಕ್ಷಣಿಕ ಸಂಸ್ಥೆಗಳಿಗೆ ಪ್ರವೇಶಾತಿ ನೀಡುವುದಿಲ್ಲ ಮತ್ತು ಯಾವುದೇ ಉದ್ಯೋಗಗಳಿಗೆ ನೇಮಕಾತಿ ಮಾಡುವುದಿಲ್ಲ' ಎಂದು ಮೆಹ್ತಾ ಮತ್ತೊಮ್ಮೆ ಸ್ಪಷ್ಟಪಡಿಸಿದರು. ಬಳಿಕ ನ್ಯಾಯಪೀಠವು ವಿಚಾರಣೆಯನ್ನು ಜುಲೈ 25ಕ್ಕೆ ಮುಂದೂಡಿತು.

ಮುಸ್ಲಿಮರ ಶೇ 4ರಷ್ಟು ಮೀಸಲಾತಿ ಹಿಂಪಡೆದ ಕರ್ನಾಟಕ ಸರ್ಕಾರದ ಮಾರ್ಚ್ 27ರ ಆದೇಶ ಪ್ರಶ್ನಿಸಿ ಎಲ್. ಗುಲಾಮ್ ರಸೂಲ್ ಮತ್ತು ಇತರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. 'ಮುಸ್ಲಿಮರನ್ನು ಒಬಿಸಿ ಪಟ್ಟಿಯಿಂದ ಕೈಬಿಟ್ಟಿರುವುದು ಕಾನೂನುಬಾಹಿರ ಮತ್ತು ಆರ್ಥಿಕವಾಗಿ ದುರ್ಬಲ ವರ್ಗದ ಪಟ್ಟಿಗೆ ಸೇರಿಸಿರುವುದು ಕೂಡ ಕಾನೂನಿಗೆ ವಿರುದ್ಧ' ಎಂದು ಅರ್ಜಿದಾರರು ದೂರಿದ್ದರು.



ಕೊಲ್ಲೂರು ರಥೋತ್ಸವ

ಉಡುಪಿ ಜಿಲ್ಲೆ ಕುಂದಾಪುರ ಸಮೀಪದ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶೋತ್ಸವದ ಅಂಗವಾಗಿ ಮಂಗಳವಾರ ಮಹಾರಥೋತ್ಸವ ಜರುಗಿತು

ಜನರ ಮತ ನಾಡಿಗೆ ತರಲಿ ಹಿತ

ಒಂದನೇ ಪುಟದಿಂದ...

ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರು ತಮ್ಮ ಶಕ್ತಿ ಪಣಕ್ಕಿಟ್ಟು ಪ್ರಚಾರ ಮಾಡಿದ್ದರು. ತಾವೇ ಚುನಾವಣೆಗೆ ನಿಂತಂತೆ ಬಿಂಬಿಸಿಕೊಂಡಿದ್ದರು. ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ ಹಾಗೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಪಕ್ಷದ ಟಿಕೆಟ್ ಹಂಚಿಕೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದರು. ಚುನಾವಣೆ ನಿರ್ವಹಣಾ ಸಮಿತಿ ಸಂಚಾಲಕಿ ಶೋಭಾ ಕರಂದ್ಲಾಜೆ ಸಕ್ರಿಯವಾಗಿ ತೊಡಗಿಕೊಂಡಿದ್ದರು. ಇವರೆಲ್ಲರ ಶಕ್ತಿಯನ್ನು ಈ ಚುನಾವಣೆ ಪಣಕ್ಕಿಟ್ಟಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಎರಡು ಕ್ಷೇತ್ರಗಳಲ್ಲಿ ತಮ್ಮ ಪ್ರಭಾವಳಿಯನ್ನು ಒತ್ತೆಯಿಟ್ಟಿರುವ ವಿ.ಸೋಮಣ್ಣ, ಆರ್. ಅಶೋಕ, 'ಹಿಂದುತ್ವ'ದ ಪ್ರಖರ ನಾಯಕರೇ ಎಂದು ಹೇಳಿಕೊಳ್ಳುವ ಸಿ.ಟಿ. ರವಿ ಮತ್ತು ವಿ. ಸುನೀಲ್ ಕುಮಾರ್, ಪರಿಶಿಷ್ಟ ಪಂಗಡದ ನಾಯಕರೆಂದು ಬಿಂಬಿಸಿಕೊಂಡ ಬಿ. ಶ್ರೀರಾಮುಲು ಹಾಗೂ ರಮೇಶ ಜಾರಕಿಹೊಳಿ ಅವರ ಶಕ್ತಿ ಪ್ರದರ್ಶನಕ್ಕೂ ಈ ಚುನಾವಣೆ ವೇದಿಕೆಯಾಗಿದೆ.

ಎಐಸಿಸಿ ಅಧ್ಯಕ್ಷ, ಕರ್ನಾಟಕದವರೇ ಆಗಿರುವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ರಾಜ್ಯವನ್ನು ಗೆಲ್ಲುವುದು ಮೊದಲ ಸವಾಲು. ಅವರ ಪಕ್ಷದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರಿಗೆ ತಮ್ಮ ಪ್ರಭಾವ ಎಷ್ಟಿದೆ ಎಂದು ತೋರಿಸಿಕೊಡುವ ಅಖಾಡವೂ ಹೌದು. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಎಂ.ಬಿ. ಪಾಟೀಲ, ಜಿ. ಪರಮೇಶ್ವರ, ಸತೀಶ ಜಾರಕಿಹೊಳಿ, ಕೆ.ಎಚ್. ಮುನಿಯಪ್ಪ ಅವರ ಭವಿಷ್ಯವನ್ನು ನಿರ್ಧರಿಸುವ ಕಣ ಸಹ ಇದಾಗಿದೆ. ಬಿಜೆಪಿ ತೊರೆದು ಕಾಂಗ್ರೆಸ್‌ಗೆ ಜಿಗಿದಿರುವ ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ ಅವರ ಹಣೆಬರಹವನ್ನೂ ಈ ಚುನಾವಣೆ ನಿರ್ಧರಿಸಲಿದೆ.

ಎರಡು ಪಕ್ಷಗಳ ಮಧ್ಯೆ ತಮ್ಮದೇ ಕಾರ್ಯತಂತ್ರ ಹೆಣೆದಿರುವ ಎಚ್.ಡಿ. ಕುಮಾರಸ್ವಾಮಿ 123 ಸ್ಥಾನ ಗೆಲ್ಲುವ ಗುರಿ ಇಟ್ಟುಕೊಂಡಿದ್ದಾರೆ. ದಶಕಗಳಿಂದ ನಿರೀಕ್ಷಿತ ಮಟ್ಟದಲ್ಲಿ ಸಾಧನೆ ಮಾಡದೇ ಇರುವ ಜೆಡಿಎಸ್‌ಗೆ ಇದು ಅಸ್ತಿತ್ವವನ್ನೇ ಪಣಕ್ಕಿಟ್ಟ ಚುನಾವಣೆ. ತಮ್ಮ ಏರುವಯಸ್ಸನ್ನೂ ಲೆಕ್ಕಿಸದ ಎಚ್.ಡಿ. ದೇವೇಗೌಡರು ಚುನಾವಣಾ ಪ್ರಚಾರವನ್ನು ಭರ್ಜರಿಯಾಗಿ ನಡೆಸಿದ್ದಾರೆ. ಕುಮಾರಸ್ವಾಮಿ ಪುತ್ರ ನಿಖಿಲ್‌ಗೂ ಇದು ಭವಿಷ್ಯ ನಿರ್ಧರಿಸುವ ಹೊತ್ತು. ತಮ್ಮದೇ ಪಕ್ಷ ಕಟ್ಟಿರುವ ಗಣಿ ಉದ್ಯಮಿ ಜಿ. ಜನಾರ್ದನ ರೆಡ್ಡಿ ಅವರ 'ಸಾಮರ್ಥ್ಯ'ವನ್ನು ಮತದಾರರು ಒರೆಗೆ ಹಚ್ಚಲಿದ್ದಾರೆ.

ಈ ಚುನಾವಣೆಯಲ್ಲಿ ರಾಜ್ಯದಾದ್ಯಂತ 2,615 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಒಟ್ಟು 5.31 ಕೋಟಿ ಮತದಾರರಿದ್ದಾರೆ. ಸೇವಾ ಮತದಾರರನ್ನು ಹೊರತುಪಡಿಸಿ 5.30 ಕೋಟಿ ಸಾಮಾನ್ಯ ಮತದಾರರಿದ್ದಾರೆ. ಅವರಲ್ಲಿ 94,931 ಮಂದಿ 80 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಾದವರು ಹಾಗೂ ಅಂಗವಿಕಲರು ಮನೆಗಳಿಂದಲೇ ಮತ ಚಲಾಯಿಸಿದ್ದಾರೆ.

ಮತಗಟ್ಟೆಯಲ್ಲಿ ಕರ್ತವ್ಯ ನಿರ್ವಹಿಸುವ ನಾಲ್ಕು ಲಕ್ಷ ಸಿಬ್ಬಂದಿ ವಿದ್ಯುನ್ಮಾನ ಮತಯಂತ್ರ, ಪೂರಕ ಸಾಮಗ್ರಿಗಳೊಂದಿಗೆ ಮಂಗಳವಾರ ಮಧ್ಯಾಹ್ನವೇ ತಮ್ಮ ಕೇಂದ್ರಗಳಿಗೆ ತಲುಪಿದ್ದಾರೆ. ಎಲ್ಲ ಮತಗಟ್ಟೆಗಳಿಗೂ ಬಿಗಿ ಭದ್ರತೆ ಒದಗಿಸಿದ್ದು, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಪ್ರದೇಶಗಳಲ್ಲಿ ಭಾರಿ ಸಂಖ್ಯೆಯ ಪೊಲೀಸರು ಹಾಗೂ ಅರೆ ಸೇನಾಪಡೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಮೀಸಲಾತಿ ವಿಚಾರದಲ್ಲಿ ಬಿಜೆಪಿ ದ್ರೋಹ: ಖರ್ಗೆ

ಬೆಂಗಳೂರು: 'ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಬಿಜೆಪಿ ಸರ್ಕಾರ ಲಿಂಗಾಯತ, ಒಕ್ಕಲಿಗ, ಎಸ್‌ಸಿ, ಎಸ್‌ಟಿ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಮೀಸಲಾತಿ ವಿಚಾರದಲ್ಲಿ ಬಗೆದಿರುವ ದ್ರೋಹ, ಪಿತೂರಿ ಮತ್ತೊಮ್ಮೆ ಸಾಬೀತಾಗಿದೆ. ಈ ಪಾಪದ ಕೃತ್ಯವನ್ನು ಕರ್ನಾಟಕದ ಜನರು ಎಂದಿಗೂ ಕ್ಷಮಿಸುವುದಿಲ್ಲ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

'ಬೊಮ್ಮಾಯಿ ಸರ್ಕಾರ ಲಿಂಗಾಯತರು, ಒಕ್ಕಲಿಗರಿಗೆ ಮೀಸಲಾತಿ ಹೆಚ್ಚಿಸಿ ಮಾರ್ಚ್ 27ರಂದು ಆದೇಶ ಹೊರಡಿಸಿತ್ತು. ಮುಸ್ಲಿಮರಿಗೆ ನೀಡಿದ್ದ ಶೇ 4 ಮೀಸಲಾತಿ ರದ್ದುಪಡಿಸಿ, ಮೀಸಲಾತಿ ಹಂಚಿದ ಪ್ರಕರಣದ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುವ ವೇಳೆ, ತನ್ನ ಈ ಆದೇಶವನ್ನು ತಡೆಹಿಡಿಯುವುದಾಗಿ ತಿಳಿಸಿತ್ತು. ಮುಂದಿನ ಆದೇಶದವರೆಗೂ ತನ್ನ ಮೀಸಲಾತಿ ಹೆಚ್ಚಳದ ನಿರ್ಧಾರ ತಡೆಹಿಡಿಯುವಂತೆ ಸುಪ್ರೀಂ ಕೋರ್ಟ್ ಮೇ 9 ಮತ್ತೆ ಹೇಳಿದೆ. ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳವನ್ನು ಮೋದಿ ಸರ್ಕಾರ ತಿರಸ್ಕರಿಸಿದೆ. ಸರ್ವರಿಗೂ ಮೋಸ, ಸರ್ವರಿಗೂ ದ್ರೋಹ ಎಂಬುವುದು ಇದರಿಂದ ಸಾಬೀತಾಗಿದೆ' ಎಂದಿದ್ದಾರೆ.


ದೆಹಲಿ ಉದ್ಯಮಿ ಮನೆಯಲ್ಲಿ ₹ 1.3 ಕೋಟಿ ಹಣ, 2 ಕೆ.ಜಿ ಚಿನ್ನ ದರೋಡೆ

ನವದೆಹಲಿ (ಪಿಟಿಐ): ವಾಯುವ್ಯ ದೆಹಲಿಯಲ್ಲಿ ಉದ್ಯಮಿಯೊಬ್ಬರ ಮನೆಗೆ ನುಗ್ಗಿದ ಐವರು ಶಸ್ತ್ರಸಜ್ಜಿತ ದರೋಡೆಕೋರರು ₹1.3 ಕೋಟಿ ಹಣ ಮತ್ತು 2 ಕೆ.ಜಿ.ಚಿನ್ನವನ್ನು ದೋಚಿದ್ದಾರೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಉದ್ಯಮಿಯು ಅಶೋಕ್ ವಿಹಾರ್‌ನ ನಿವಾಸಿಯಾಗಿದ್ದು, ಪೇಪರ್ ಟ್ರೇಡಿಂಗ್ ವ್ಯವಹಾರವನ್ನು ಹೊಂದಿದ್ದಾರೆ. ಅವರ ತಂದೆ ಗುತ್ತಿಗೆದಾರರಾಗಿದ್ದರು.

ಉದ್ಯೋಗ ವಾಣಿ

ಷೇರುಪೇಟೆ ವಹಿವಾಟು 2.92



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,264
ಇಂದಿನ ಅಂತ್ಯ	18,265
▲	1.55
ದಿನದ ಕನಿಷ್ಠ	18344

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹510
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹515

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1670(1680)
ಸೋಯಾ (ರಿಫೈನ್ಡ್)	₹990(1000)
ಸೂರ್ಯಕಾಂತಿ (ರಿಫೈನ್ಡ್)	₹995(1000)
ಪಾಮೋಲಿನ್	₹954(958)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹900-1,300
ಮಧ್ಯಮ	₹600-800
ಸಣ್ಣ	₹300-500

‘ಕ್ರೆಡಿಟ್ ಕಾರ್ಡ್ ಬಳಕೆ ಬೇಡ’

ಸಾಲ ಮರುಪಾವತಿ ವಿಚಾರವಾಗಿ ವಿಮಾ ಕಂಪನಿಗಳಿಗೆ ಐಆರ್‌ಡಿಎಐ ಆದೇಶ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಿಮಾ ಪಾಲಿಸಿ ಆಧರಿಸಿ ಸಾಲ ಪಡೆದವರಿಗೆ ಇನ್ನು ಮುಂದೆ, ಸಾಲದ ಕಂತು ಕಟ್ಟಲು ಕ್ರೆಡಿಟ್ ಕಾರ್ಡ್ ಬಳಕೆಗೆ ಅವಕಾಶ ಸಿಗುವ ಸಾಧ್ಯತೆ ಕಡಿಮೆ.

ದೇಶದ ವಿಮಾ ವಲಯದ ನಿಯಂತ್ರಣ ಪ್ರಾಧಿಕಾರವಾಗಿರುವ ‘ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ’ವು (ಐಆರ್‌ಡಿಎಐ) ವಿಮಾ ಪಾಲಿಸಿ ಆಧರಿಸಿದ ಸಾಲಗಳ ಮರುಪಾವತಿ ಸಂದರ್ಭದಲ್ಲಿ, ಕ್ರೆಡಿಟ್ ಕಾರ್ಡ್ ಬಳಕೆಗೆ ಅಂತ್ಯ ಹೇಳಬೇಕು ಎಂದು ಸಲಹೆ ಮಾಡಿದೆ.

ಐಆರ್‌ಡಿಎಐ ಈ ಆದೇಶವನ್ನು ಈ ತಿಂಗಳ ಮೊದಲ ವಾರದಲ್ಲಿ ಹೊರಡಿಸಿದೆ. ಆದೇಶದಲ್ಲಿ ಪ್ರಾಧಿಕಾರವು, ‘ಸಲಹೆ’ ಎಂಬ ಪದ ಬಳಸಿದ್ದರೂ, ಆದೇಶದಲ್ಲಿರುವ ಸೂಚನೆಯು ತಕ್ಷಣದಿಂದ ಅನ್ವಯವಾಗುತ್ತದೆ ಎಂದು ಎಲ್ಲ ವಿಮಾ ಕಂಪನಿಗಳಿಗೆ ಹೇಳಿದೆ.

ವಿಮಾ ಪಾಲಿಸಿ ಆಧರಿಸಿ ಸಾಲ ಪಡೆಯುವುದು ತುಸು ಸಲೀಸಿನ ಪ್ರಕ್ರಿಯೆ ಎಂದು ತಜ್ಞರು ಹೇಳುತ್ತಾರೆ. ಇದರಲ್ಲಿ ಅಡಮಾನವಾಗಿ ಯಾವುದೇ ಆಸ್ತಿಯನ್ನು ಇರಿಸಬೇಕಾಗಿಲ್ಲ. ವಿಮಾ ಪಾಲಿಸಿ ಆಧರಿಸಿದ ಸಾಲಗಳಿಗೆ ಶೇಕಡ 10ರಿಂದ ಶೇ 12ರಷ್ಟು ಬಡ್ಡಿ ಇರುತ್ತದೆ. ಇದು ವೈಯಕ್ತಿಕ ಸಾಲಗಳಿಗೆ ಇರುವ ಬಡ್ಡಿಯ ಪ್ರಮಾಣಕ್ಕಿಂತ ಕಡಿಮೆ.

ಸಾಲದ ಸುಳಿಗೆ ಸಿಲುಕುವುದು ತಪ್ಪುತ್ತದೆ: ತಜ್ಞರ ಅಭಿಪ್ರಾಯ

ನವದೆಹಲಿ (ಪಿಟಿಐ): ಕ್ರೆಡಿಟ್ ಕಾರ್ಡ್ ಮೂಲಕ ಇಂತಹ ಸಾಲ ಮರುಪಾವತಿ ಮಾಡುವುದನ್ನು ನಿಷೇಧಿಸುವ ತೀರ್ಮಾನವು ಒಳ್ಳೆಯ ನಡೆ, ಇದರಿಂದಾಗಿ ಇಂತಹ ಸಾಲ ಪಡೆದವರು ಸಾಲದ ಸುಳಿಗೆ ಸಿಲುಕುವುದು ತಪ್ಪುತ್ತದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

‘ಪಾಲಿಸಿ ಆಧರಿಸಿದ ಸಾಲಗಳಿಗೆ ವಿಧಿಸುವ ಬಡ್ಡಿಯು ಕಡಿಮೆ ಇರುತ್ತದೆ. ಹೀಗಾಗಿ, ಈ ಸಾಲವನ್ನು ತೀರಿಸಲು ಕ್ರೆಡಿಟ್ ಕಾರ್ಡ್‌ನ ಬಳಕೆಯು ಸೂಕ್ತವಾಗುವುದಿಲ್ಲ’ ಎಂದು ಕೋಟಕ್ ಮಹೀಂದ್ರ ಲೈಫ್ ಇನ್ಶುರೆನ್ಸ್ ಕಂಪನಿಯ ಅಧಿಕಾರಿ ಸುನಿಲ್ ಶರ್ಮ ಹೇಳಿದ್ದಾರೆ.

ದೇವನಹಳ್ಳಿಯಲ್ಲಿ ಜಮೀನು ಖರೀದಿಸಿದ ಫಾಕ್ಸ್‌ಕಾನ್

ಬೆಂಗಳೂರು (ಎಎಫ್‌ಪಿ): ತೈವಾನ್ ಮೂಲದ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ತಯಾರಿಕಾ ಕಂಪನಿ ಫಾಕ್ಸ್‌ಕಾನ್ ತಾನು ಬೆಂಗಳೂರಿನ ಹೊರವಲಯದಲ್ಲಿ ಜಮೀನು ಖರೀದಿಸಿರುವುದಾಗಿ ಲಂಡನ್ ಷೇರುಪೇಟೆಗೆ ಮಂಗಳವಾರ ಮಾಹಿತಿ ನೀಡಿದೆ.

ಫಾಕ್‌ಕಾನ್ ಕಂಪನಿಯು ಆ್ಯಪಲ್ ಕಂಪನಿಗೆ ಐಫೋನ್‌ಗಳನ್ನು ಸಿದ್ಧಪಡಿಸಿ ಕೊಡುತ್ತದೆ. ಫಾಕ್ಸ್‌ಕಾನ್ ಕಂಪನಿಯು ದೇವನಹಳ್ಳಿಯಲ್ಲಿ, ವಿಮಾನ ನಿಲ್ದಾಣದ ಸಮೀಪದಲ್ಲಿ ಸರಿಸುಮಾರು 296 ಎಕರೆ ಜಮೀನು ಖರೀದಿ ಮಾಡಿದೆ. ಈ ಜಮೀನಿಗೆ ಅದು ತನ್ನ ಅಂಗಸಂಸ್ಥೆಯ ಮೂಲಕ ₹ 303 ಕೋಟಿ ಪಾವತಿಸಲಿದೆ.

ಆ್ಯಪಲ್ ಕಂಪನಿಯು ಭಾರತದಲ್ಲಿ ಹೆಚ್ಚಿನ ಮಾರುಕಟ್ಟೆ ಪಾಲು ಹೊಂದಲು ಯತ್ನ ನಡೆಸಿದೆ. ಕಂಪನಿಯ ಸಿಇಒ ಟಿಮ್ ಕುಕ್ ಅವರು ಈಚೆಗೆ ಭಾರತಕ್ಕೆ ಭೇಟಿ ನೀಡಿ, ಆ್ಯಪಲ್‌ನ ಎರಡು ರಿಟೇಲ್ ಮಳಿಗೆಗಳನ್ನು ಉದ್ಘಾಟಿಸಿದ್ದಾರೆ.

ವೈಎಸ್‌ಆರ್ ಕಾಂಗ್ರೆಸ್ ಸಂಸದ ಪುತ್ರನ ಜಾಮೀನು ಅರ್ಜಿ ವಜಾ

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದ ಜೊತೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಧ್ಯಂತರ ಜಾಮೀನು ಕೋರಿ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಸಂಸದ ಮಾಗುಂಟ ಶ್ರೀನಿವಾಸುಲು ರೆಡ್ಡಿ ಅವರ ಪುತ್ರ ರಾಘವ ಮಾಗುಂಟ ಅವರು ಸಲ್ಲಿಸಿದ್ದ ಅರ್ಜಿಯನ್ನು ಇಲ್ಲಿನ ನ್ಯಾಯಾಲಯವು ವಜಾಗೊಳಿಸಿದೆ.

ಪತ್ನಿಯ ಅನಾರೋಗ್ಯದ ಕಾರಣ ಮಧ್ಯಂತರ ಜಾಮೀನು ನೀಡಬೇಕೆಂದು ಕೋರಿ ರಾಘವ ಅವರು ಸಲ್ಲಿಸಿದ್ದ ಅರ್ಜಿಯನ್ನು ವಿಶೇಷ ನ್ಯಾಯಾಧೀಶ ಎಂ.ಕೆ. ನಾಗ್ಪಾಲ್ ಅವರು ವಜಾಗೊಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

9–5–2023

ಜಾವಾ 70/80(ಹೊಸ)	11450-11500
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1680(1690)
ಒಂದು ವಾರದ ಡೆಲಿವರಿ	1675(1685)
ಸೋಯಾ ಕಚ್ಚಾ	890(910)
ಪಾಮ್ ವಾರದ ಡೆಲಿವರಿ	952(956)
ಸೂರ್ಯಕಾಂತಿ ಎಣ್ಣೆ ಕಚ್ಚಾ	910(920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
61200(60800)
ಬೆಳ್ಳಿ ಕೆ.ಜಿ 76350(76250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಭಾರತದ ರೇಟಿಂಗ್ ಬದಲಿಸದ ಫಿಚ್

ನವದೆಹಲಿ (ಪಿಟಿಐ): ಫಿಚ್ ಸಂಸ್ಥೆಯು ಭಾರತಕ್ಕೆ ನೀಡುವ ರೇಟಿಂಗ್ ಅನ್ನು ‘ಬಿಬಿಬಿ–’ನಲ್ಲಿ ಮುಂದುವರಿಸಿದೆ. ಮುನ್ನೋಟವು ಸ್ಥಿರ ಎಂದು ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಅರ್ಥ ವ್ಯವಸ್ಥೆಯು ಶೇ 6ರಷ್ಟು ಬೆಳವಣಿಗೆ ಸಾಧಿಸಲಿದ್ದು, ಇದು ವಿಶ್ವದ ಅತ್ಯಂತ ವೇಗದ ಬೆಳವಣಿಗೆ ದರ ಆಗಲಿದೆ ಎಂದಿದೆ. ಹಣದುಬ್ಬರ ಹೆಚ್ಚಿನ ಮಟ್ಟದಲ್ಲಿ ಇರುವುದು, ಬಡ್ಡಿ ದರ ಹೆಚ್ಚಾಗಿರುವುದು, ಜಾಗತಿಕ ಮಟ್ಟದಲ್ಲಿ ಬೇಡಿಕೆ ಕಡಿಮೆ ಆಗಿರುವುದು ಹಾಗೂ ಕೋವಿಡ್ ನಂತರದಲ್ಲಿ ದೇಶಿ ಮಾರುಕಟ್ಟೆಯಲ್ಲಿ ಕಂಡುಬಂದಿದ್ದ ಬೇಡಿಕೆ ಕಡಿಮೆ ಆಗುತ್ತಿರುವುದು ಭಾರತದ ಪಾಲಿಗೆ ಸವಾಲುಗಳು ಎಂದು ಫಿಚ್ ಹೇಳಿದೆ.

ಕೊಬ್ಬರಿ ಧಾರಣೆ

ಅರಸಿಕೆರೆ	₹9500-9725
ಕೆ.ಆರ್.ಪೇಟೆ (ಇತರ)	₹8500-8500
ತುರುವೇಕೆರೆ	₹9800-9800

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹111-412
ದ್ವಿತಳಿ (ಬಿ.ವಿ) ₹222-670

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹153
ಆರ್‌ಎಸ್‌ಎಸ್-5	₹147.50
ಗುಡ್ ಲಾಟ್	₹133

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1,000 - 1,050
ಹೆರಕಿದ್ದು	1,200-1,300
ಹಸಿರು ಸಾಧಾರಣ	800-900
ಹಸಿರು ಉತ್ತಮ	1,000-1,100
ಹಸಿರು ಅತಿ ಉತ್ತಮ	1,600-1,650
ಕಾಳು ಮೆಣಸು	- 470
ಅಡಿಕೆ	
ಬಂಟ್ವಾಳ	
ಕೋಕ	12,500-25,000
ಹೊಸತು	27,500-40,000
ಹಳತು	48,000-53,000
ಸಾಗರ	
ಬಿಳಿಗೋಟು	29,411-30,489
ಚಾಲಿ	35,809-35,899
ಕೋಕ	26,111-33,409
ಕೆಂಪುಗೋಟು	33,319-33,319
ರಾಶಿ	42,699-42,699
ಸಿಪ್ಪೆಗೋಟು	6310-20,969
ಶಿವಮೊಗ್ಗ	
ಬೆಟ್ಟೆ	43,899-53,000
ಗೊರಬಲು	20,009-34,715
ರಾಶಿ	33,200-49,099
ಸರಕು	50,159-81,596
ಸಿದ್ದಾಪುರ	
ಬಿಳಿಗೋಟು	28,609-31,449
ಚಾಲಿ	35,600-36,622
ಕೋಕ	27,699-32,899
ಕೆಂಪುಗೋಟು	28,812-30,899
ರಾಶಿ	43,699-46,799
ತಟ್ಟಿಬೆಟ್ಟೆ	37,469-43,099
ಶಿರಸಿ	
ಬೆಟ್ಟೆ	36,999-43,699
ಬಿಳಿಗೋಟು	23,636-32,199
ಚಾಲಿ	34,469-37,519
ಕೆಂಪುಗೋಟು	28,699-33,909
ರಾಶಿ	42,069-46,298
ಯಲ್ಲಾಪುರ	
ಬಿಳಿಗೋಟು	29,099-33,012
ಚಾಲಿ	32,699-37,198
ಕೋಕ	16,501-30,899
ಕೆಂಪುಗೋಟು	26,899-35,799
ರಾಶಿ	42,000-49,800
ತಟ್ಟಿಬೆಟ್ಟೆ	36,636-43,219

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,300	15,300	15,300	183.95 ಸೆಂಟ್ಸ್
ಎಸಿ	7,980	7,700	7,700	
ಆರ್‌ಪಿ	10,400	10,6750	10,550	ಲಂಡನ್
ಆರ್‌ಸಿ	5,860	228	5,750	- ಡಾಲರ್ಸ್

ಉತ್ಪನ್ನಗಳ ಮೇಲೆ ಕ್ಯೂಆರ್ ಕೋಡ್?

ನವದೆಹಲಿ (ಪಿಟಿಐ): ಎಲ್ಲ ಸ್ವರೂಪದ ಔಷಧಗಳು ಹಾಗೂ ಆಹಾರ ಉತ್ಪನ್ನಗಳ ಮೇಲೆ ಕ್ಯೂಆರ್ ಕೋಡ್‌ಗಳನ್ನು (ಕ್ವಿಕ್ ರೆಸ್ಪಾನ್ಸ್) ಬಳಕೆ ಮಾಡುವ ಕುರಿತು ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ದೆಹಲಿ ಹೈಕೋರ್ಟ್ ಮಂಗಳವಾರ ಸೂಚನೆ ನೀಡಿದೆ.

ಮುಖ್ಯನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಹಾಗೂ ನ್ಯಾಯಮೂರ್ತಿ ಸುಬ್ರಮಣಿಯಮ್ ಪ್ರಸಾದ್ ಅವರು ಈ ಕುರಿತು ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆ ನಡೆಸಿದರು. ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ಔಷಧ ತಾಂತ್ರಿಕ ಸಲಹಾ ಮಂಡಳಿಗೂ ಕೋರ್ಟ್ ನೋಟಿಸ್ ನೀಡಿತು. ಕಪಿಲಾ ಮತ್ತು ನಿರ್ಮಲ್ ಹಿಂಗೋರಾನಿ ಪ್ರತಿಷ್ಠಾನ ಹಾಗೂ ಡಾ. ಸ್ಮೃತಿ ಸಿಂಗ್ ಮತ್ತು ಶೋಭನ್ ಸಿಂಗ್ ಎಂಬವರು ಕೋರ್ಟ್‌ಗೆ ಪಿಐಎಲ್ ಸಲ್ಲಿಸಿದ್ದರು. ಸ್ಮೃತಿ ಹಾಗೂ ಶೋಭನ್ ಅವರು ದೃಷ್ಟಿಹೀನರು.

ಸ್ಮಾರ್ಟ್‌ಫೋನ್ ಮೂಲಕ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಉತ್ಪನ್ನವೊಂದರ ಅಗತ್ಯ ಮಾಹಿತಿಯನ್ನು ತಕ್ಷಣ ಪಡೆದುಕೊಳ್ಳಬಹುದು. ದೃಷ್ಟಿಹೀನರಿಗೆ ಅನುಕೂಲವಾಗುವಂತೆ ಈ ಮಾಹಿತಿಯನ್ನು ಧ್ವನಿರೂಪದಲ್ಲೂ ಪರಿವರ್ತಿಸಿಕೊಳ್ಳಬಹುದು ಎಂದು ಅರ್ಜಿದಾರರ ಪರ ವಕೀಲ ಅಮನ್ ಹಿಂಗೋರಾನಿ ಅವರು ಹೇಳಿದರು.

ದೃಷ್ಟಿಹೀನರೂ ಸಹ ಸಮಾನತೆ ಹಾಗೂ ಘನತೆಯಿಂದ ಜೀವಿಸುವ ಶಾಸನಬದ್ಧ ಮೂಲಭೂತ ಹಕ್ಕುಗಳನ್ನು ಹೊಂದಿದ್ದಾರೆ. ಕ್ಯೂಆರ್ ಕೋಡ್ ವ್ಯವಸ್ಥೆಯಿಂದ ಉತ್ಪನ್ನಗಳನ್ನು ಗುರುತಿಸಲು ಹಾಗೂ ಅಗತ್ಯ ಮಾಹಿತಿಯನ್ನು ಪಡೆಯಲು ಅವರಿಗೆ ಸಾಧ್ಯವಾಗಲಿದೆ ಎಂದು ವಿವರಿಸಲಾಗಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಊರು ಬೇಡ

● **ಪ್ರಶ್ನೆ:** ನಾನು ನನ್ನ ಸ್ನೇಹಿತರೊಬ್ಬರಿಗೆ ಮೌಲ್ಯಯುತವಾದ ಉತ್ಪನ್ನವೊಂದರ ಖರೀದಿಗೆ ಕ್ರೆಡಿಟ್ ಕಾರ್ಡ್ ನೀಡಿದ್ದೆ. ಅದನ್ನು ಬಳಸಿ ಅವರು ಒಂದೂವರೆ ಲಕ್ಷ ರೂಪಾಯಿ ಮೌಲ್ಯದ ಉತ್ಪನ್ನ ಖರೀದಿಸಿದ್ದಾರೆ. ನಂತರ ಅವರು ಆ ಹಣವನ್ನು ನನ್ನ ಖಾತೆಗೆ ಜಮಾ ಮಾಡಿದ್ದಾರೆ. ನಾನು ಆ ಹಣ ಬಳಸಿ ನನ್ನ ಕ್ರೆಡಿಟ್ ಕಾರ್ಡ್ ಬಿಲ್ ಪಾವತಿ ಮಾಡಿದ್ದೇನೆ. ನನ್ನ ಪ್ರಶ್ನೆಯೆಂದರೆ, ಅವರು ನನಗೆ ಕೊಟ್ಟ ಹಣಕ್ಕೆ ನಾನು ತೆರಿಗೆ ಪಾವತಿಸಬೇಕೇ?

ಉತ್ತರ: ಆದಾಯ ತೆರಿಗೆಯ ಕಾನೂನಿನ ವ್ಯಾಖ್ಯೆಯಡಿ ಬರುವ ಆದಾಯವನ್ನಷ್ಟೇ ‘ತೆರಿಗೆಗೊಳಪಡುವ ಆದಾಯ’ ಎಂದು ಪರಿಗಣಿಸಲಾಗುತ್ತದೆ. ಇಂತಹ ಆದಾಯ ಪ್ರಮುಖವಾಗಿ ಐದು ಮೂಲಗಳೊಳಗೆ ಬರುವ ಲಕ್ಷಣ ಹೊಂದಿರಬೇಕು. ಉದಾಹರಣೆಗೆ: ಉದ್ಯೋಗದಿಂದ ಬರುವ ವೇತನ, ಮನೆ-ಕಟ್ಟಡಗಳಿಂದ ಬರುವ ಬಾಡಿಗೆ, ವ್ಯಾಪಾರ-ವೃತ್ತಿಯಿಂದಾಗುವ ಲಾಭ, ಬಂಡವಾಳ ಆಸ್ತಿಯ ಮಾರಾಟದಿಂದ ಬರುವ ಲಾಭ ಹಾಗೂ ಇತರ ಮೂಲಗಳಿಂದ ಬಂದ ಆದಾಯ. ಮೊದಲ ನಾಲ್ಕು ವರ್ಗಗಳ ಅಡಿ ಹೊಂದಿಕೆಯಾಗದ ಯಾವುದೇ ಆದಾಯ ಮೂಲ ಇತರ ಮೂಲದಲ್ಲಿ ಒಳಪಡುತ್ತದೆ.

ಹೀಗಾಗಿ ಯಾವುದೇ ಹಣದ ಸ್ವೀಕೃತಿ ತೆರಿಗೆಗೊಳಪಡಲು ಅಂತಹ ಸ್ವೀಕೃತಿ ನಿಮ್ಮ ಆದಾಯವಾಗಿರಬೇಕು. ಹಾಗೂ ಮೇಲಿನ ಯಾವುದಾದರೂ ಒಂದು ವರ್ಗದಲ್ಲಿ ಬರುವ ಲಕ್ಷಣ ಹೊಂದಿರಬೇಕು. ವ್ಯಾಪಾರ-ವಾಣಿಜ್ಯ ವ್ಯವಹಾರದ ದೃಷ್ಟಿಯಿಂದಲ್ಲದ ಹಾಗೂ ಈಗಾಗಲೇ ತೆರಿಗೆಗೊಳಪಟ್ಟ ಆದಾಯ ಮೂಲದಿಂದ ನಡೆಸುವ ಅಪರೂಪದ ಇಂತಹ ವ್ಯವಹಾರಗಳು ಕಡಿಮೆ ತೆರಿಗೆ ಬಾಧ್ಯತೆ ಹೊಂದಿವೆ. ಆದರೆ ಇದೇ ವ್ಯವಹಾರ ಪದೇ ಪದೇ ಅಥವಾ ವಾಣಿಜ್ಯ ಉದ್ದೇಶದಿಂದ ಕೈಗೊಂಡಾಗ ನಿಖರ ದಾಖಲೆ ಹೊಂದಿ ವ್ಯವಹರಿಸುವ ಅಗತ್ಯವಿದೆ. ಹೀಗಾಗಿ ಇಂತಹ ಸಮಸ್ಯೆಗೆ ಪ್ರಸಕ್ತ ಸನ್ನಿವೇಶದಲ್ಲಿ ಸೂಕ್ತ ಪರಿಹಾರ ನಗದೇತರ ರೂಪದಲ್ಲೇ ವ್ಯವಹರಿಸುವುದು. ಒಂದು ಹಂತದ ವ್ಯವಹಾರ ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕ ಹಾಗೂ ಅದರ ಇನ್ನೊಂದು ಹಂತದ ವ್ಯವಹಾರ ನಗದು ರೂಪದಲ್ಲಿ ನಡೆದಾಗ ಸಮಸ್ಯೆ ಎದುರಾಗುತ್ತದೆ. ಸರಿಯಾದ ದಾಖಲೆಗಳಿಲ್ಲದ ನಗದು ಜಮಾ ಮೂಲವನ್ನೂ ಅನುಮಾನದ ಮೇಲೆ ಆದಾಯ ತೆರಿಗೆ ಕಾನೂನಿನ ಅನ್ವಯ ಪ್ರಶ್ನಿಸುವ ಅವಕಾಶಗಳಿವೆ. ಅಂತಹ ಸಂದರ್ಭದಲ್ಲಿ ಖಾತೆಗೆ ಜಮಾ ಆದ ಮೊತ್ತ ಯಾವ ಕಾರಣಕ್ಕೆ ನಮ್ಮ ಆದಾಯ ಆಗಿರುವುದಿಲ್ಲ ಎಂಬುದನ್ನು ಸಾಬೀತುಪಡಿಸುವ ಜವಾಬ್ದಾರಿ ಖಾತೆ ಹೊಂದಿದ ತೆರಿಗೆದಾರನದ್ದು. ಇಂದು ಬ್ಯಾಂಕುಗಳು ₹50,000ಕ್ಕೂ ಮೇಲ್ಪಟ್ಟ ನಗದು ಜಮಾಕ್ಕೆ ಪ್ಯಾನ್ ಕಡ್ಡಾಯ ಎನ್ನುವುದು ಇಂತಹ ವ್ಯವಹಾರಗಳ ಮಾಹಿತಿ ಸಂಗ್ರಹದ ಭಾಗವಾಗಿದೆ ಎನ್ನುವುದನ್ನು ಮರೆಯಬಾರದು.

ಯಾವುದೇ ವ್ಯಕ್ತಿಯು ಖಾತೆಯನ್ನು ಹೊಂದಿರುವ ಬ್ಯಾಂಕ್‌ಗೆ ಹೋಗಿ, ವ್ಯಕ್ತಿಯ ಹೆಸರು ಮತ್ತು ಖಾತೆ ಸಂಖ್ಯೆಯನ್ನು ನೀಡುವ ಮೂಲಕ ಬೇರೊಬ್ಬರ ಖಾತೆಗೆ ಹಣವನ್ನು ಹಾಕಬಹುದು. ಆದರೆ ಈ ಮೇಲಿನ ನಿಯಮಗಳ ಹೊರತಾಗಿಯೂ ಬ್ಯಾಂಕುಗಳು ಜಮಾದಾರ ಹಾಗೂ ಜಮಾ ಮೊತ್ತ ಸ್ವೀಕರಿಸುವ ಖಾತೆದಾರನ ಅನುಮತಿಪತ್ರ ಕೋರಬಹುದು. ಇದು ಗ್ರಾಹಕರ ಖಾತೆಯಲ್ಲಾಗುವ ಅನುಮಾನಾಸ್ಪದ ವ್ಯವಹಾರಗಳ ಮೇಲೆ ನಿಗಾ ಇರಿಸುವ ಭಾಗ. ನಿಮ್ಮ ವಿಚಾರದಲ್ಲಿ, ನೀವು ಅನಪೇಕ್ಷಿತವಾಗಿ ಅಪರೂಪದ ಒಂದು ವ್ಯವಹಾರ ನಡೆಸಿರಬಹುದು. ಜಮಾಗೊಂಡ ಮೊತ್ತ ನಿಮ್ಮ ಆದಾಯವಲ್ಲ ಹಾಗೂ ವಾಣಿಜ್ಯ ಉದ್ದೇಶದಿಂದ ವ್ಯವಹರಿಸಿಲ್ಲ ಎನ್ನುವುದಕ್ಕೆ ಪೂರಕವಾದ ಮಾಹಿತಿ ಹೊಂದಿ ನಿಶ್ಚಿಂತರಾಗಬಹುದು.

ಇನ್ನೂ ಒಂದು ಮಾಹಿತಿ ಗಮನದಲ್ಲಿರಲಿ. ಆದಾಯ ತೆರಿಗೆಯ ನಿಯಮ 114ಇ ಪ್ರಕಾರ ಯಾವುದೇ ಉಳಿತಾಯ ಖಾತೆಗೆ ವರ್ಷದಲ್ಲಿ ₹ 10 ಲಕ್ಷ ನಗದು ಜಮಾ ಮಾಡಿದಾಗ ಅಥವಾ ಕ್ರೆಡಿಟ್ ಕಾರ್ಡ್ ಬಿಲ್‌ಗಳಿಗಾಗಿ ವಾರ್ಷಿಕವಾಗಿ ಪಾವತಿಸುವ ₹ 2 ಲಕ್ಷಕ್ಕೂ ಹೆಚ್ಚಿನ ಮೊತ್ತ ಯಾವುದೇ ರೂಪದಲ್ಲಿ (ನಗದು, ಚೆಕ್, ನೆಫ್ಟ್ ಇತ್ಯಾದಿ) ಬಂದಾಗ ಬ್ಯಾಂಕುಗಳು ಆದಾಯ ತೆರಿಗೆ ಇಲಾಖೆಗೆ ಆ ವಿವರವನ್ನು ವಿನಿಮಯ ಮಾಡಬೇಕಾಗಿರುತ್ತದೆ.

ಐ.ಯು. ಇಟಗಿ, ಹುಬ್ಬಳ್ಳಿ

● **ಪ್ರಶ್ನೆ:** ನನ್ನ ವಯಸ್ಸು 85 ವರ್ಷ. ನಾನು ರಾಜ್ಯ ಸರ್ಕಾರದಿಂದ ಪಿಂಚಣಿ ಪಡೆಯುವವ. 2023-24ನೇ ಸಾಲಿನಲ್ಲಿ ನನ್ನ ಆದಾಯ ₹7.20 ಲಕ್ಷ ಆಗುತ್ತದೆ. ಈ ವರ್ಷದಲ್ಲಿ ಮಧ್ಯಾವಧಿ ಪರಿಹಾರ ನೀಡಿದರೆ ಆದಾಯ ಇನ್ನೂ ಹೆಚ್ಚಾಗುತ್ತದೆ. ಬ್ಯಾಂಕಿನವರು ತೆರಿಗೆ ಕಡಿತಗೊಳಿಸಲು ಹಳೆ ತೆರಿಗೆ ವ್ಯವಸ್ಥೆ ಬೇಕೇ, ಹೊಸ ತೆರಿಗೆ ವ್ಯವಸ್ಥೆ ಬೇಕೇ ಎಂಬುದನ್ನು ತಿಳಿಸಲು ಸೂಚಿಸಿದ್ದಾರೆ. ನನ್ನ ಆಯ್ಕೆ ಏನಿರಬೇಕು?

ಉತ್ತರ: ನಿರ್ದಿಷ್ಟ ತೆರಿಗೆ ವ್ಯವಸ್ಥೆಯನ್ನು ಲಿಖಿತ ರೂಪದಲ್ಲಿ ಆಯ್ಕೆಮಾಡದ ಸಂದರ್ಭದಲ್ಲಿ ಹೊಸ ತೆರಿಗೆ ವ್ಯವಸ್ಥೆಯನ್ನು ಮೊದಲ ಆಯ್ಕೆಯನ್ನಾಗಿ ತೆರಿಗೆ ನಿರ್ಧರಿಸಲು ಹಾಗೂ ತೆರಿಗೆ ಕಡಿತ ಮಾಡಲು ಪರಿಗಣಿಸಬೇಕೆನ್ನುವುದು ಈಗಿನ ನಿಯಮ. ಆರ್ಥಿಕ ವರ್ಷ 2023-24ಕ್ಕೆ ಅನ್ವಯವಾಗುವಂತೆ, ಹೊಸ ತೆರಿಗೆ ವ್ಯವಸ್ಥೆ ಆಯ್ಕೆ ಮಾಡುವ ತೆರಿಗೆದಾರರಿಗೆ, ವಿನಾಯಿತಿ (ಸೆಕ್ಷನ್ 87ಎ) ಸಹಿತ ₹7 ಲಕ್ಷದ ತೆರಿಗೆಗೊಳಪಡುವ ಆದಾಯಕ್ಕೆ ತೆರಿಗೆ ಇರುವುದಿಲ್ಲ. ಸಂಬಳ ಅಥವಾ ಪಿಂಚಣಿ ಇದ್ದಾಗ ₹50,000 ಸ್ಟ್ಯಾಂಡರ್ಡ್ ಡಿಡಕ್ಷನ್ ಇರುವ ಕಾರಣ ₹7.50 ಲಕ್ಷ ಆದಾಯ ಇದ್ದಾಗಲೂ ತೆರಿಗೆ ಅನ್ವಯವಾಗದ ಅವಕಾಶವಿದೆ.

ನಿಮಗೆ ಆದಾಯ ಹೆಚ್ಚಾಗುವ ಸಾಧ್ಯತೆಯಿದೆ. ನಿಮ್ಮ ಆದಾಯ ₹8 ಲಕ್ಷಕ್ಕೆ ವೃದ್ಧಿಯಾಗಬಹುದೆಂದು ಊಹಿಸಿದರೂ, ಯಾವುದೇ ಹೂಡಿಕೆ ಇಲ್ಲದ ಸಂದರ್ಭದಲ್ಲಿ ಹೊಸ ತೆರಿಗೆ ವ್ಯವಸ್ಥೆ ಸೂಕ್ತ. ಪಿಪಿಎಫ್, ಹಿರಿಯ ನಾಗರಿಕರ ಉಳಿತಾಯ ಯೋಜನೆ, ತೆರಿಗೆ ಉಳಿತಾಯದ ಎಫ್.ಡಿ ಇತ್ಯಾದಿಗಳಲ್ಲಿ ಒಟ್ಟು ₹1.50 ಲಕ್ಷದವರೆಗೆ ಹೂಡಿಕೆ ಮಾಡಿದರೆ ಮುಂದೆ ತೆರಿಗೆ ಪ್ರಮಾಣ ಕಡಿಮೆ ಮಾಡಬಹುದು. ಆಗ ಹಳೆಯ ತೆರಿಗೆ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳಬೇಕು.

ನಿಮ್ಮ ಪ್ರಶ್ನೆಗೆ ಪೂರಕವಾಗಿ ಇನ್ನೂ ಒಂದು ಮಾಹಿತಿ. ನೀವು ಅತಿ ಹಿರಿಯ ನಾಗರಿಕರ (80 ವರ್ಷಕ್ಕಿಂತ ಹೆಚ್ಚು ವಯಸ್ಸಾದವರು) ವರ್ಗಕ್ಕೆ ಸೇರಿದವರು. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 194ಪಿ ಅಡಿ, 75 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯೋಮಾನದ ನಿವಾಸಿ ಭಾರತೀಯ ತೆರಿಗೆದಾರರಿಗೆ ಕೆಲವು ನಿರ್ದಿಷ್ಟ ಸನ್ನಿವೇಶಗಳಲ್ಲಿ ಖುದ್ದಾಗಿ ತೆರಿಗೆ ವಿವರ ಸಲ್ಲಿಸುವುದು ಕಡ್ಡಾಯವಲ್ಲ. ಅದಕ್ಕೆ ತೆರಿಗೆದಾರರು ಪಿಂಚಣಿ ಆದಾಯ ಹಾಗೂ ಬಡ್ಡಿ ಆದಾಯ ಮಾತ್ರ ಹೊಂದಿರಬೇಕು. ಇಂತಹ ಬಡ್ಡಿ, ಪಿಂಚಣಿ ಮೊತ್ತ ಜಮಾ ಆಗುತ್ತಿರುವ ಬ್ಯಾಂಕಿನಿಂದ ಬಂದಿರಬೇಕು. ತೆರಿಗೆ ನಿಯಮಾನುಸಾರ ಅಗತ್ಯ ಫಾರಂಗಳನ್ನು ಬ್ಯಾಂಕ್, ತೆರಿಗೆದಾರರಿಂದ ಪಡೆದು ಅನ್ವಯವಾಗುವ ತೆರಿಗೆಯನ್ನು ಸೆಕ್ಷನ್ 194ಪಿ ಅಡಿ ಕಡಿತಗೊಳಿಸಿರಬೇಕು. ಇಂತಹ ಸಂದರ್ಭದಲ್ಲಿ ನೀವು ವಿವರ ಸಲ್ಲಿಸುವ ಅಗತ್ಯವಿಲ್ಲ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001 ಇ–ಮೇಲ್: businessdesk@prajavani.co.in

ಪಿಎಫ್‌ಐ ಜೊತೆ ನಂಟು ಆರೋಪ; ದಾಖಲೆ ವಶ

ತಮಿಳುನಾಡಿನಲ್ಲಿ ಎನ್‌ಐಎ ಶೋಧ; ಐವರ ಬಂಧನ

ನವದೆಹಲಿ (ಪಿಟಿಐ): ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಜೊತೆ ನಂಟು ಹೊಂದಿದ ಆರೋಪದ ಮೇಲೆ ತಮಿಳುನಾಡಿನ ಆರು ಸ್ಥಳಗಳಲ್ಲಿ ಮಂಗಳವಾರ ಶೋಧ ನಡೆಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ), ಐದು ಜನರನ್ನು ಬಂಧಿಸಿದೆ.

ಚೆನ್ನೈ, ಮದುರೈ, ದಿಂಡಿಗಲ್ ಹಾಗೂ ಥೇಣಿ ಜಿಲ್ಲೆಗಳಲ್ಲಿ ಶೋಧ ನಡೆಸಲಾಗಿದೆ. ಬಂಧಿತರ ಮನೆಗಳು ಹಾಗೂ ತೋಟದ ಮನೆಗಳಲ್ಲಿ ಶೋಧ ನಡೆಸಿದ ಅಧಿಕಾರಿಗಳು, ದಾಖಲೆಗಳು, ಹರಿತವಾದ ಆಯುಧಗಳು, ಡಿಜಿಟಲ್ ಸಾಕ್ಷ್ಯಗಳನ್ನು ವಶಪಡಿಸಿಕೊಂಡಿದ್ದಾರೆ.

ಚೆನ್ನೈನ ಅಬ್ದುಲ್ ರಜಾಕ್, ಮದುರೈನ ವಕೀಲರಾದ ಮೊಹಮ್ಮದ್ ಯೂಸುಫ್, ಎಂ. ಮೊಹಮ್ಮದ್ ಅಬ್ಬಾಸ್, ದಿಂಡಿಗಲ್‌ನ ಮೊಹಮ್ಮದ್ ಕೈಸರ್ ಹಾಗೂ ಥೇಣಿಯ ಸಾಧಿಕ್ ಅಲಿ ಎಂಬ ಆರೋಪಿಗಳನ್ನು ಬಂಧಿಸಲಾಗಿದೆ. ಕ್ರಿಮಿನಲ್ ಸಂಚು ಪ್ರಕರಣದಲ್ಲಿ ಕಳೆದ ವರ್ಷ ದಾಖಲಾಗಿದ್ದ ಪ್ರಕರಣದಲ್ಲಿ ಬಂಧಿತರಾದವರ ಸಂಖ್ಯೆ 15ಕ್ಕೆ ಏರಿಕೆಯಾಗಿದೆ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.



ತಮಿಳುನಾಡಿನ ದಿಂಡಿಗಲ್‌ನಲ್ಲಿ ಮೊಹಮ್ಮದ್ ಕೈಸರ್ ಎಂಬಾತನನ್ನು ಎನ್‌ಐಎ ಅಧಿಕಾರಿಗಳು ಮಂಗಳವಾರ ಬಂಧಿಸಿದರು —ಪಿಟಿಐ ಚಿತ್ರ

‘2047ರ ಹೊತ್ತಿಗೆ ಭಾರತವನ್ನು ಇಸ್ಲಾಮಿಕ್ ಸ್ಟೇಟ್ ಮಾಡುವ ಯೋಜನೆ ಜಾರಿಗೊಳಿಸಲು ವಿರೋಧ ವ್ಯಕ್ತಪಡಿಸಿದ ಹಾಗೂ ಪಿಎಫ್‌ಐ ಸಿದ್ಧಾಂತಗಳಿಗೆ ಹೊಂದಿಕೆಯಾಗದವರನ್ನು ಮುಗಿಸಲು ಬಂಧಿತ ಆರೋಪಿಗಳು ಸಂಚು ರೂಪಿಸಿದ್ದರು ಎಂಬ ಅಂಶ ತನಿಖೆಯಲ್ಲಿ ಕಂಡುಬಂದಿದೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ಸಂಚಿನ ಭಾಗವಾಗಿ, ತಮ್ಮ ವಿರೋಧಿಗಳನ್ನು ಕೊಲ್ಲುವ ಉದ್ದೇಶದಿಂದ ಸಾಕಷ್ಟು ಸಂಖ್ಯೆಯ ಪಿಎಫ್‌ಐ ಸದಸ್ಯರಿಗೆ ಅದರಲ್ಲೂ ಯುವಕರಿಗೆ ಆರೋಪಿಗಳು ಶಸ್ತ್ರಾಸ್ತ್ರ ತರಬೇತಿ ನೀಡಿದ್ದರು’ ಎಂದು ಹೇಳಿದ್ದಾರೆ. ಕಳೆದ ಸೆ.19ರಂದು ಪ್ರಕರಣ ದಾಖಲಿಸಿಕೊಂಡಿದ್ದ ಎನ್‌ಐಎ, 10 ಆರೋಪಿಗಳ ವಿರುದ್ಧ ಮಾ.17ರಂದು ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಧರ್ಮದ ಆಧಾರದಲ್ಲಿ ವಿವಿಧ ಗುಂಪುಗಳ ಮಧ್ಯೆ ದ್ವೇಷ ಹರಡಿದ, ಕೋಮು ಸಾಮರಸ್ಯ ಕೆಡಿಸುವ ಚಟುವಟಿಕೆ ನಡೆಸಿದ, ಸಾರ್ವಜನಿಕ ಶಾಂತಿ ಹಾಳುಮಾಡುವ ಕಾನೂನುಬಾಹಿರ ಚಟುವಟಿಕೆ ನಡೆಸಿದ ಆರೋಪಗಳನ್ನು ಹೊರಿಸಲಾಗಿದೆ. ತನ್ನ ಸದಸ್ಯರಿಗೆ ಶಸ್ತ್ರಾಸ್ತ್ರ ತರಬೇತಿ ನೀಡಲಾಗಿದೆ ಎಂದು ಸಂಘಟನೆ ವಿರುದ್ಧ ಆರೋಪಿಸಲಾಗಿದೆ.

ಗೆಹಲೋತ್‌ಗೆ ವಸುಂಧರಾ ರಾಜೇ ನಾಯಕಿ: ಪೈಲಟ್

ಜೈಪುರ (ಪಿಟಿಐ): ‘ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರ ನಾಯಕಿ ವಸುಂಧರಾ ರಾಜೇ ಹೊರತು ಸೋನಿಯಾ ಗಾಂಧಿ ಅಲ್ಲ ಎಂಬುದನ್ನು ಅವರ ಭಾಷಣವೇ ಪ್ರತಿಫಲಿಸುತ್ತದೆ’ ಎಂದು ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಅವರು ಮಂಗಳವಾರ ಹೇಳಿದ್ದಾರೆ.

ಧೋಲ್‌ಪುರದಲ್ಲಿ ಭಾನುವಾರ ಭಾಷಣ ಮಾಡಿದ್ದ ಅಶೋಕ್ ಗೆಹಲೋತ್ ಅವರು, ‘2020ರಲ್ಲಿ ನಮ್ಮದೇ ಪಕ್ಷದ ಮುಖಂಡರು ನನ್ನ ವಿರುದ್ಧ ಬಂಡಾಯವೆಳಲು ಬಿಜೆಪಿಯಿಂದ ಹಣ ಪಡೆದಿದ್ದರು. ಆ ಸಂಕಷ್ಟದ ಪರಿಸ್ಥಿತಿಯಲ್ಲಿ ವಸುಂಧರಾ ರಾಜೇ ಮತ್ತಿತರ ಬಿಜೆಪಿ ನಾಯಕರ ನನ್ನ ಬೆನ್ನಿಗೆ ನಿಂತರು’ ಎಂದು ಹೇಳಿದ್ದರು. ಈ ಹೇಳಿಕೆ ಕುರಿತು ಸಚಿನ್ ಪೈಲಟ್ ಅವರು ಹೀಗೆ ವ್ಯಂಗ್ಯವಾಡಿದ್ದಾರೆ.

> **ಸುಮಾರು 30 ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿರುವ ನಾಯಕರ ವಿರುದ್ಧ ಗೆಹಲೋತ್ ಅವರು ಹಣ ಪಡೆದ ಆರೋಪ ಮಾಡಿರುವುದು ತಪ್ಪು**
> **ಸಚಿನ್ ಪೈಲಟ್,** ಕಾಂಗ್ರೆಸ್ ನಾಯಕ

ಗೆಹಲೋತ್ ಅವರ ಭಾಷಣ ಸಚಿನ್ ಅವರ ಬಂಡಾಯಕ್ಕೆ ಮತ್ತಷ್ಟು ಪ್ರಚೋದನೆ ನೀಡಿದೆ. ಭ್ರಷ್ಟಾಚಾರ ಪ್ರಕರಣಗಳಲ್ಲಿ ವಸುಂಧರಾ ರಾಜೇ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಗೆಹಲೋತ್ ವಿರುದ್ಧ ಮತ್ತೊಂದು ಸುತ್ತು ಹೋರಾಟಕ್ಕೆ ಸಜ್ಜಾಗಿರುವ ಅವರು, ಮೇ 11ರಿಂದ ಅಜ್ಮೇರದಿಂದ ಜೈಪುರಕ್ಕೆ ಐದು ದಿನಗಳ, 125 ಕಿಮೀ ದೂರದ ‘ಜನ ಸಂಘರ್ಷ ಯಾತ್ರೆ’ ನಡೆಸುವುದಾಗಿ ಘೋಷಿಸಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ‘ಸ್ವಪಕ್ಷದ ನಾಯಕರ ಮೇಲೇ ಆರೋಪ ಹೊರಿಸುವುದು ತಪ್ಪು. ಈ ಆರೋಪಗಳನ್ನು ನಾನು ಕಡಾಖಂಡಿತವಾಗಿ ನಿರಾಕರಿಸುತ್ತೇನೆ. ಈ ಆರೋಪಗಳು ಸಂಪೂರ್ಣವಾಗಿ ಸುಳ್ಳು ಮತ್ತು ಆಧಾರರಹಿತವಾಗಿವೆ’ ಎಂದರು.

‘ನಾವು ಪಕ್ಷದೊಳಗೆ ಅಶಿಸ್ತನ್ನು ಹುಟ್ಟುಹಾಕುತ್ತಿಲ್ಲ. ಆದರೆ ಕಾಂಗ್ರೆಸ್ ಶಾಸಕರನ್ನು ಅವಮಾನಿಸಿ, ಬಿಜೆಪಿ ಶಾಸಕರನ್ನು ಹೊಗಳಿದ್ದನ್ನು ನಾನು ಸಹಿಸುವುದಿಲ್ಲ’ ಎಂದು ಸಚಿನ್ ಹೇಳಿದ್ದಾರೆ.

‘ನಿಯಮ ಕಡೆಗಣಿಸಲು ಬಿಟ್ಟಿದ್ದೇಕೆ?’

‘ತೂವಲ್‌ತೀರ ದೋಣಿ ದುರಂತ ಭಯಾನಕ’: ಸ್ವಯಂ ಪ್ರೇರಿತ ಪಿಐಎಲ್ ದಾಖಲಿಸಿಕೊಂಡ ಹೈಕೋರ್ಟ್

ಕೊಚ್ಚಿ (ಪಿಟಿಐ): ಕೇರಳದ ತೂವಲ್‌ತೀರ ಬೀಚ್ ಸಮೀಪ ಭಾನುವಾರ ಸಂಭವಿಸಿದ ದೋಣಿ ದುರಂತ ಭಯಾನಕ ಹಾಗೂ ಆಘಾತಕಾರಿ ಎಂದಿರುವ ಕೇರಳ ಹೈಕೋರ್ಟ್, ಈ ಸಂಬಂಧ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆಯನ್ನು ಮಂಗಳವಾರ ಆರಂಭಿಸಿತು.

‘ನಿಯಮಗಳನ್ನು ಕಡೆಗಣಿಸಿ ದೋಣಿ ಕಾರ್ಯಾಚರಿಸಲು ಸಂಬಂಧಪಟ್ಟ ಅಧಿಕಾರಿಗಳು ಅನುಮತಿ ನೀಡಿದ್ದೇಕೆ’ ಎಂದೂ ಪ್ರಶ್ನಿಸಿದೆ.

ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿಗಳಾದ ರಾಮಚಂದ್ರನ್ ಹಾಗೂ ಶೋಭಾ ಅನ್ನಮ್ಮ ಈಪ್ಪನ್ ಅವರಿರುವ ರಜಾಕಾಲದ ನ್ಯಾಯಪೀಠ, ಘಟನೆ ಕುರಿತು ವರದಿ ಸಲ್ಲಿಸುವಂತೆ ಮಲಪ್ಪುರ ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಿತು.

ರಾಜ್ಯ ಸರ್ಕಾರ, ಮಲಪ್ಪುರ ಜಿಲ್ಲಾ ಪ್ರವಾಸೋದ್ಯಮ ಉತ್ತೇಜನ ಮಂಡಳಿ, ಜಿಲ್ಲಾಧಿಕಾರಿ, ಎಸ್ಪಿ, ತಾನೂರು ಪುರಸಭೆ, ಅಲಪ್ಪುಳದ ಬಂದರು ಅಧಿಕಾರಿ, ಬೇಪೂರು ಬಂದರಿನ ಹಿರಿಯ ಅಧಿಕಾರಿಯನ್ನು ಪ್ರತಿವಾದಿಗಳನ್ನಾಗಿ ಮಾಡಿರುವ ನ್ಯಾಯಪೀಠ, ಮೇ 12ರಂದು ವಿಚಾರಣೆ ನಡೆಸುವುದಾಗಿ ಹೇಳಿದೆ.

‘ಅಧಿಕಾರಿಗಳ ಉದಾಸೀನತೆ’: ‘ದುರಂತದ ಸ್ಥಳದಲ್ಲಿ ಮಕ್ಕಳ ಮೃತದೇಹಗಳನ್ನು ನೋಡಿ ನಾವು ರಾತ್ರಿಯಿಡೀ ನಿದ್ದೆಯನ್ನೇ ಮಾಡಿಲ್ಲ. ನಮ್ಮ ಹೃದಯ ಘಾಸಿಗೊಂಡಿದೆ’ ಎಂದು ಕಳವಳ ವ್ಯಕ್ತಪಡಿಸಿದ ನ್ಯಾಯಮೂರ್ತಿಗಳು, ‘ಅಧಿಕಾರಿಗಳಲ್ಲಿ ಮನೆ ಮಾಡಿರುವ ಉದಾಸೀನತೆ, ನಿರ್ದಯತೆ ಹಾಗೂ ದುರಾಸೆಯಿಂದಾಗಿಯೇ ಈ ಘೋರ ಅವಘಡ ಸಂಭವಿಸಿದೆ’ ಎಂದು ಕಟು ಮಾತುಗಳಲ್ಲಿ ಹೇಳಿದರು.



ದುರಂತಕ್ಕೀಡಾದ ದೋಣಿ ಮಾಲೀಕ

‘ರಾಜ್ಯದಲ್ಲಿ 1924ರಿಂದಲೂ ದೋಣಿ ದುರಂತಗಳು ಸಂಭವಿಸುತ್ತಿವೆ. ಆ ವರ್ಷ, ಕೊಲ್ಲಂನಿಂದ ಕೋಟಯಂಗೆ ಹೊರಟಿದ್ದ ದೋಣಿ ಪಾಳನ ಎಂಬಲ್ಲಿ ಮುಳುಗಿ, ಹಲವರು ಮೃತಪಟ್ಟರು. ಕೇರಳದ ಮಹಾಕವಿ ಕುಮಾರನ್ ಆಶಾನ್ ಅವರೂ ಆ ದೋಣಿ ದುರಂತದಲ್ಲಿ ಮೃತಪಟ್ಟರು’ ಎಂದು ನ್ಯಾಯಪೀಠ ಹೇಳಿತು.

‘ದೋಣಿಯ ಸಾಮರ್ಥ್ಯಕ್ಕಿಂತ ಹೆಚ್ಚು ಜನರನ್ನು ಕರೆದೊಯ್ಯುವುದು, ನಿಯಮಗಳ ಉಲ್ಲಂಘನೆ, ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳದಿರುವುದು ಸಾಮಾನ್ಯವೆನಿಸಿಬಿಟ್ಟಿದೆ. ನಿರ್ಲಕ್ಷ್ಯ, ಕಾನೂನು ಪಾಲನೆ ಮಾಡದಿರುವ ಕುರಿತು ಕಠಿಣ ಕ್ರಮ ಕೈಗೊಳ್ಳದಿದ್ದರೆ ಇಂಥ ದುರಂತಗಳು ಸಂಭವಿಸುತ್ತಲೇ ಇರುತ್ತವೆ’ ಎಂದು ನ್ಯಾಯಪೀಠ ಹೇಳಿತು.

‘ಇಂಥ ಘಟನೆಗಳು ಸಂಭವಿಸಿದಾಗಲೆಲ್ಲಾ ಯಥಾಪ್ರಕಾರ ತನಿಖೆ ನಡೆಯುತ್ತದೆ. ಕೆಲ ಶಿಫಾರಸುಗಳನ್ನು ಮಾಡಲಾಗುತ್ತದೆಯಾದರೂ ನಂತರ ಅವುಗಳ ಅನುಸಾರ ಕ್ರಮ ಇರುವುದಿಲ್ಲ’ ಎಂದು ಬೇಸರ ವ್ಯಕ್ತಪಡಿಸಿತು.

‘ಪ್ರವಾಸೋದ್ಯಮವೇ ಪ್ರಮುಖವಾಗಿರುವ ಕೇರಳದಲ್ಲಿ ನೂರಾರು ದೋಣಿಗಳಿದ್ದು, ಇದೇ ರೀತಿ ನಿರ್ಲಕ್ಷ್ಯ ತೋರಿದರೆ ಬರುವ ದಿನಗಳಲ್ಲಿ ಮತ್ತಷ್ಟು ಅವಘಡಗಳ ಸಾಧ್ಯತೆ ಇದೆ. ದೋಣಿಗಳ ಕಾರ್ಯಾಚರಣೆ ಮಾಡುವವರಿಗಿಂತಲೂ ಸಂಬಂಧಪಟ್ಟ ಅಧಿಕಾರಿಗಳ ಜವಾಬ್ದಾರಿ ಹೆಚ್ಚಿನದು’ ಎಂದು ನ್ಯಾಯಪೀಠ ಹೇಳಿತು.

ಮಲಪ್ಪುರ ಜಿಲ್ಲೆಯ ತಾನೂರಿನ ತೂವಲ್‌ತೀರ ಬೀಚ್ ಸಮೀಪ ಭಾನುವಾರ ದೋಣಿ ಮಗುಚಿತ್ತು. 22 ಮಂದಿ ಮೃತಪಟ್ಟಿದ್ದರು.

ಎಸ್‌ಐಟಿ ರಚನೆ: ದೋಣಿ ಮಾಲೀಕನ ವಿರುದ್ಧ ಕೊಲೆ ಪ್ರಕರಣ ದಾಖಲು

ತಿರುವನಂತಪುರ: ಮಲಪ್ಪುರ ಜಿಲ್ಲೆಯ ತೂವಲ್‌ಬೀಚ್ ಬಳಿ ಸಂಭವಿಸಿದ ದೋಣಿ ದುರಂತ ಕುರಿತು ತನಿಖೆ ನಡೆಸಲು ಕೇರಳ ಪೊಲೀಸ್ ಇಲಾಖೆ ವಿಶೇಷ ತನಿಖಾ ತಂಡ (ಎಸ್‌ಐಟಿ)ವನ್ನು ಮಂಗಳವಾರ ರಚಿಸಿದೆ.

ವಿರೋಧ ಪಕ್ಷಗಳು ಹಾಗೂ ಸಾರ್ವಜನಿಕರಿಂದ ವ್ಯಾಪಕ ಟೀಕೆ ವ್ಯಕ್ತವಾದ ಹಿನ್ನೆಲೆಯಲ್ಲಿ, ದೋಣಿ ಮಾಲೀಕನ ವಿರುದ್ಧ ಕೊಲೆ ಪ್ರಕರಣ ದಾಖಲಿಸಿದೆ.

‘ಡಿಜಿಪಿ ಅನಿಲ್ ಕಾಂತ್ ಅವರು ಮಲಪ್ಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಜಿತ್ ದಾಸ್ ಎಸ್. ನೇತೃತ್ವದಲ್ಲಿ ಎಸ್‌ಐಟಿ ರಚಿಸಿ ಆದೇಶ ಹೊರಡಿಸಿದ್ದಾರೆ’ ಇಲಾಖೆಯ ಪ್ರಕಟಣೆ ತಿಳಿಸಿದೆ.

‘ದೋಣಿ ಮಾಲೀಕನ ವಿರುದ್ಧ ಐಪಿಸಿ ಸೆಕ್ಷನ್ 302 ಅಡಿ ಪ್ರಕರಣ ದಾಖಲಿಸಲಾಗಿದೆ. ದೋಣಿ ಚಾಲಕ ದಿನೇಶನ್ ತಲೆಮರೆಸಿಕೊಂಡಿದ್ದು, ಇತರ ಸಿಬ್ಬಂದಿ ಕುರಿತು ಮಾಹಿತಿ ಸಂಗ್ರಹಿಸಲಾಗುತ್ತಿದೆ’ ಎಂದು ಸುಜಿತ್ ದಾಸ್ ಹೇಳಿದ್ದಾರೆ.

ಎನ್‌ಡಿಆರ್‌ಎಫ್‌ನಿಂದ ಮುಂದುವರಿದ ಶೋಧ

ಮಲಪ್ಪುರ (ಕೇರಳ) (ಪಿಟಿಐ): ದೋಣಿ ದುರಂತ ಸಂಭವಿಸಿದ ಸ್ಥಳದಲ್ಲಿ ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆ (ಎನ್‌ಡಿಆರ್‌ಎಫ್) ಸಿಬ್ಬಂದಿ ಮಂಗಳವಾರವೂ ಶೋಧ ಕಾರ್ಯವನ್ನು ಮುಂದುವರಿಸಿತು.

ದುರಂತಕ್ಕೀಡಾದ ದೋಣಿಯಲ್ಲಿ ಪ್ರಯಾಣಿಸುತ್ತಿದ್ದವರ ಸಂಖ್ಯೆ ಕುರಿತು ಗೊಂದಲವಿರುವ ಕಾರಣ, ಎನ್‌ಡಿಆರ್‌ಎಫ್ ಸಿಬ್ಬಂದಿ ಶೋಧ ಕಾರ್ಯವನ್ನು ಮುಂದುವರಿಸಿವೆ ಎಂದು ಮೂಲಗಳು ತಿಳಿಸಿವೆ.

‘ಕೊನೆ ಟ್ರಿಪ್ ಎಂಬ ಕಾರಣಕ್ಕಾಗಿ ಸಾಕಷ್ಟು ಜನರು ದೋಣಿ ಏರಿದ್ದರು ಎಂಬುದಾಗಿ ಕೆಲ ಪ್ರತ್ಯಕ್ಷದರ್ಶಿಗಳು ಹಾಗೂ ಈ ಅವಘಡದಲ್ಲಿ ಬದುಕುಳಿದ ಕೆಲವರು ಹೇಳಿದ್ದಾರೆ. ಹೀಗಾಗಿ ಎಷ್ಟು ಜನರು ದೋಣಿಯಲ್ಲಿ ಪ್ರಯಾಣಿಸುತ್ತಿದ್ದರು ಎಂಬ ಬಗ್ಗೆ ನಿಖರ ಮಾಹಿತಿ ಇರದ ಕಾರಣ ಶೋಧ ಕಾರ್ಯ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾಶ್ಮೀರದ 15 ಸ್ಥಳಗಳಲ್ಲಿ ಎನ್‌ಐಎ ದಾಳಿ

ಶ್ರೀನಗರ (ಪ್ರಜಾವಾಣಿ ವಾರ್ತೆ): ಪಾಕಿಸ್ತಾನ ಬೆಂಬಲಿತ ಭಯೋತ್ಪಾದನೆ ಸಂಚಿನ ಪ್ರಕರಣದಲ್ಲಿ ಪ್ರತ್ಯೇಕತಾವಾದಿಗಳು ಮತ್ತು ಉಗ್ರಗಾಮಿಗಳ ವಿರುದ್ಧದ ಕಾರ್ಯಾಚರಣೆಯನ್ನು ಮುಂದುವರಿಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಮಂಗಳವಾರ ಜಮ್ಮು ಮತ್ತು ಕಾಶ್ಮೀರದಾದ್ಯಂತ 15 ಸ್ಥಳಗಳಲ್ಲಿ ದಾಳಿ ನಡೆಸಿತು.

ಕೇಂದ್ರ ಕಾನೂನು ಖಾತೆ ರಾಜ್ಯ ಸಚಿವ ಸತ್ಯಪಾಲ್ ಸಿಂಗ್ ಹೇಳಿಕೆ

ಉನ್ನತ ಹುದ್ದೆಗೆ ಮುಸ್ಲಿಮರಿಂದ ಸಹಿಷ್ಣುತೆ ಮುಖವಾಡ



ಎಸ್.ಪಿ.ಸಿಂಗ್ ಬಘೇಲಾ

ನವದೆಹಲಿ (ಪಿಟಿಐ): ‘ಮುಸ್ಲಿಮರು ಉಪ ರಾಷ್ಟ್ರಪತಿ, ರಾಜ್ಯಪಾಲ, ವಿಶ್ವವಿದ್ಯಾಲಯಗಳ ಕುಲಪತಿಯಂತಹ ಉನ್ನತ ಹುದ್ದೆಗಳನ್ನು ಪಡೆಯುವುದಕ್ಕಾಗಿ ಸಹಿಷ್ಣುತೆಯ ಮುಖವಾಡ ಧರಿಸುತ್ತಾರೆ. ನಿವೃತ್ತಿಯ ನಂತರ ಅಥವಾ ಅಧಿಕಾರಾವಧಿ ಮುಗಿದ ಬಳಿಕ ಇಂತಹವರ ನಿಜ ಬಣ್ಣ ಬಯಲಾಗುತ್ತದೆ’ ಎಂದು ಕೇಂದ್ರ ಕಾನೂನು ಖಾತೆ ರಾಜ್ಯ ಸಚಿವ ಸತ್ಯಪಾಲ್ ಸಿಂಗ್ ಬಘೇಲಾ ಮಂಗಳವಾರ ಹೇಳಿದ್ದಾರೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮಾಧ್ಯಮ ಶಾಖೆಯಾಗಿರುವ ಇಂದ್ರಪ್ರಸ್ಥ ವಿಶ್ವ ಸಂವಾದ ಕೇಂದ್ರವು ಸೋಮವಾರ ಹಮ್ಮಿಕೊಂಡಿದ್ದ ದೇವ್ ರಿಷಿ ನಾರದ್ ಪತ್ರಕರ್ತರ ಸನ್ಮಾನ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಸಹಿಷ್ಣುತೆಯನ್ನು ಹೊಂದಿರುವ ಮುಸ್ಲಿಮರು ಬೆರಳೆಣಿಕೆಯಷ್ಟು ಮಂದಿ ಮಾತ್ರ. ಇವರ ಸಂಖ್ಯೆ ಸಾವಿರವೂ ಇರಲಾರದು ಎಂಬುದು ನನ್ನ ಭಾವನೆ. ಬುದ್ಧಿಜೀವಿಗಳೆಂದು ಕರೆಸಿಕೊಳ್ಳುವ ಇವರು ಉನ್ನತ ಹುದ್ದೆಯ ಆಸೆಯಿಂದ ಸಾರ್ವಜನಿಕ ಜೀವನದಲ್ಲಿ ಮುಖವಾಡ ಧರಿಸಿ ಬದುಕುವ ತಂತ್ರ ಅನುಸರಿಸುತ್ತಾರೆ’ ಎಂದು ದೂರಿದರು.

‘ಭಾರತವು ಮುಸ್ಲಿಂ ಮೂಲಭೂತವಾದದ ವಿರುದ್ಧ ಕಡ್ಡಾಯವಾಗಿ ಹೋರಾಡಬೇಕು. ಇದೇ ಹೊತ್ತಿನಲ್ಲಿ ಸಹಿಷ್ಣುತೆ ಹೊಂದಿರುವ ಮುಸ್ಲಿಮರನ್ನು ಜೊತೆಗೆ ಕರೆದುಕೊಂಡು ಸಾಗಬೇಕು’ ಎಂದು ಮಾಹಿತಿ ಆಯುಕ್ತ ಉದಯ್ ಮಹುರ್ಕರ್ ಅವರು ಸಮಾರಂಭದಲ್ಲಿ ಹೇಳಿದ್ದರು. ಇದರ ಬೆನ್ನಲ್ಲೇ ಬಘೇಲಾ ಅವರು ಈ ರೀತಿಯ ಮಾತುಗಳನ್ನು ಆಡಿದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚಿತ್ರಕ್ಕೆ ಉತ್ತರಪ್ರದೇಶದಲ್ಲಿ ತೆರಿಗೆ ವಿನಾಯಿತಿ

ಸುದೀಪ್ತೊ ಸೇನ್ ನಿರ್ದೇಶನದ ವಿವಾದಿತ ಬಹುಭಾಷಾ ಚಿತ್ರ ಬಿಡುಗಡೆ ತಡೆಗೆ ಕೇರಳ ಹೈಕೋರ್ಟ್ ನಿರಾಕರಣೆ ಆದೇಶ ಪ್ರಶ್ನಿಸಿ ಅರ್ಜಿ ಸಲ್ಲಿಕೆ

‘ದಿ ಕೇರಳ ಸ್ಟೋರಿ’: 15ರಂದು ಸುಪ್ರೀಂ ಕೋರ್ಟ್ ವಿಚಾರಣೆ


‘ದಿ ಕೇರಳ ಸ್ಟೋರಿ’ ಚಿತ್ರದ ಪೋಸ್ಟರ್

ನವದೆಹಲಿ (ಪಿಟಿಐ): ವಿವಾದಿತ ‘ದಿ ಕೇರಳ ಸ್ಟೋರಿ’ ಬಹುಭಾಷೆಯ ಚಿತ್ರದ ಬಿಡುಗಡೆಗೆ ತಡೆ ನೀಡಲು ನಿರಾಕರಿಸಿದ ಕೇರಳ ಹೈಕೋರ್ಟ್ ಆದೇಶ ಪ್ರಶ್ನಿಸಿರುವ ಅರ್ಜಿಯನ್ನು ಮೇ 15ರಂದು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ಸಮ್ಮತಿಸಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠದ ಎದುರು, ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಈ ಅರ್ಜಿ ತುರ್ತು ವಿಚಾರಣೆಗೆ ಪಟ್ಟಿ ಮಾಡುವಂತೆ ಮನವಿ ಮಾಡಿದರು.

ಈ ಪ್ರಕರಣದಲ್ಲಿ ಹೈಕೋರ್ಟ್ ಆದೇಶ ನೀಡಿದೆಯೇ ಎಂದು ಪೀಠವು ಪ್ರಶ್ನಿಸಿದಾಗ, ಕಪಿಲ್ ಸಿಬಲ್ ಅವರು, ಚಿತ್ರ ಬಿಡುಗಡೆಗೆ ತಡೆ ನೀಡಲು ಕೋರ್ಟ್ ನಿರಾಕರಿಸಿದೆ ಎಂದು ಮಾಹಿತಿ ನೀಡಿದರು. ಆಗ ಸಿಜೆಐ ನೇತೃತ್ವದ ಪೀಠವು, ಈ ಅರ್ಜಿಯನ್ನು ಮೇ 15ರಂದು ವಿಚಾರಣೆಗೆ ಪಟ್ಟಿ ಮಾಡಿಸಿತು.

ಚಿತ್ರದ ಟೀಸರ್ ಮತ್ತು ಟ್ರೇಲರ್ ವೀಕ್ಷಿಸಿದ ನಂತರ ಕೇರಳ ಹೈಕೋರ್ಟ್, ಮೇ 5ರಂದು ಚಿತ್ರ ಬಿಡುಗಡೆಗೆ ತಡೆ ನೀಡಲು ಮತ್ತು ಟ್ರೈಲರ್ ಮತ್ತಿತರ ದೃಶ್ಯಗಳನ್ನು ತೆಗೆದುಹಾಕಲು ನಿರ್ದೇಶನ ನೀಡಲು ನಿರಾಕರಿಸಿತ್ತು. ‘ಇಸ್ಲಾಂ ಅಥವಾ ಮುಸ್ಲಿಮರ ವಿರುದ್ಧವಾದಂತಹ ಅಂಶಗಳು ಇದರಲ್ಲಿ ಇಲ್ಲ. ಬದಲಿಗೆ ಇದು ಭಯೋತ್ಪಾದಕ ಐಎಸ್ಐಎಸ್ ಸಂಘಟನೆಗೆ ಸಂಬಂಧಿಸಿದ್ದಾಗಿದೆ’ ಎಂಬ ವಾದವನ್ನೂ ಹೈಕೋರ್ಟ್ ಮಾನ್ಯ ಮಾಡಿತ್ತು.

ತೆರಿಗೆ ವಿನಾಯಿತಿ ಘೋಷಿಸಿದ ಯೋಗಿ: ಉತ್ತರಪ್ರದೇಶದಲ್ಲಿ ‘ದಿ ಕೇರಳ ಸ್ಟೋರಿ’ ಚಲನಚಿತ್ರ ಪ್ರದರ್ಶನಕ್ಕೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಮಂಗಳವಾರ ತೆರಿಗೆ ವಿನಾಯಿತಿ ಘೋಷಿಸಿದ್ದಾರೆ. ಮಧ್ಯಪ್ರದೇಶದಲ್ಲಿ ಈ ಚಿತ್ರದ ಪ್ರದರ್ಶನಕ್ಕೆ ಅಲ್ಲಿನ ಬಿಜೆಪಿ ಸರ್ಕಾರ ತೆರಿಗೆ ವಿನಾಯಿತಿ ಘೋಷಿಸಿದ ಬೆನ್ನಲ್ಲೇ ಯೋಗಿ ಅವರ ಸರ್ಕಾರವೂ ಅದೇ ಕ್ರಮ ಅನುಸರಿಸಿದೆ.

ಪಶ್ಚಿಮ ಬಂಗಾಳದಲ್ಲಿ ಈ ಚಿತ್ರ ಪ್ರದರ್ಶನ ನಿರ್ಬಂಧಿಸಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸೋಮವಾರ ಆದೇಶ ಹೊರಡಿಸಿದ್ದಾರೆ.

ಸಲಿಂಗ ವಿವಾಹ ಮಾನ್ಯತೆ: ಅರ್ಜಿಗಳ ವಿಚಾರಣೆ ಮುಂದುವರಿಸಿದ ‘ಸುಪ್ರೀಂ’

ಸಂಪೂರ್ಣ ಹಕ್ಕು ಎಂಬುದೇ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಮದುವೆಯಾಗುವುದು ಮೂಲಭೂತ ಹಕ್ಕಲ್ಲ ಎಂಬ ನಿಲುವನ್ನು ಒಂದೊಮ್ಮೆ ನ್ಯಾಯಾಲಯವು ತಳೆದಿದ್ದೇ ಆದರೆ ಅದು ದೂರಗಾಮಿ ಪರಿಣಾಮ ಬೀರಬಹುದು. ಸಂವಿಧಾನವು ವಿವಾಹಕ್ಕೆ ಸಂಬಂಧಿಸಿದ ಹಲವು ಪ್ರಮುಖ ಅಂಶಗಳನ್ನು ರಕ್ಷಿಸಿದೆ. ಅದು ಸಂಪ್ರದಾಯವನ್ನು ಮುರಿಯುವಂತಹ ವ್ಯವಸ್ಥೆಯಾಗಿದೆ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಸಲಿಂಗ ಮದುವೆಗೆ ಕಾನೂನಿನ ಮಾನ್ಯತೆ ನೀಡುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಸಾಂವಿಧಾನಿಕ ನ್ಯಾಯ ಪೀಠವು ಮಂಗಳವಾರವೂ ಮುಂದುವರಿಸಿದೆ.

ಮಧ್ಯಪ್ರದೇಶ ಸರ್ಕಾರದ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ರಾಕೇಶ್ ದ್ವಿವೇದಿ, ‘ಮದುವೆ ಎಂಬುದು ಭಿನ್ನ ಲಿಂಗಕ್ಕೆ ಸಂಬಂಧಿಸಿದ್ದು’ ಎಂದು ಹೇಳಿದರು.

‘ಸಲಿಂಗ ವಿವಾಹಕ್ಕೆ ಸಂಬಂಧಿಸಿದ ವಿಚಾರವನ್ನು ಮರೆತುಬಿಡಿ. ಯಾರಿಗಾದರೂ ಮದುವೆಯಾಗುವ ಮೂಲಭೂತ ಹಕ್ಕು ಇದೆಯೇ? ಅಥವಾ ಮದುವೆಯಾಗುವ ಮೂಲಭೂತ ಹಕ್ಕೇ ಇಲ್ಲವೇ? ನಿಮ್ಮ ವಾದದ ಪ್ರಕಾರ ಯಾರಿಗೂ ಮದುವೆಯಾಗುವ ಮೂಲಭೂತ ಹಕ್ಕೇ ಇಲ್ಲ’ ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಎಸ್.ರವೀಂದ್ರ ಭಟ್, ಹಿಮಾ ಕೊಹ್ಲಿ ಮತ್ತು ಪಿ.ಎಸ್.ನರಸಿಂಹ ಅವರಿದ್ದ ಪೀಠವು ದ್ವಿವೇದಿ ಅವರಿಗೆ ಹೇಳಿತು.

‘ನಾವು ವ್ಯಕ್ತಿತ್ವ, ಆಯ್ಕೆಗೆ ಸಂಬಂಧಿಸಿದ, ಏಕಾಂಗಿಯಾಗಿರಲು ಬಯಸುವ, ಖಾಸಗಿತನ ಮತ್ತು ಘನತೆಯ ಹಕ್ಕುಗಳನ್ನು ರೂಪಿಸಿದ್ದೇವೆ. ಇದೆಲ್ಲವನ್ನೂ ನೋಡಿದಾಗ ಒಬ್ಬ ವ್ಯಕ್ತಿ ಅಥವಾ ನಾಗರಿಕನು ಮದುವೆಯಾಗುವ ಹಕ್ಕು ಹೊಂದಿದ್ದಾನೆಯೇ ಎಂಬ ಪ್ರಶ್ನೆ ಎದುರಾಗುತ್ತದೆ’ ಎಂದು ನ್ಯಾಯಪೀಠ ತಿಳಿಸಿದೆ.

‘ಇದು ಕಲಂ 21ರ ಭಾಗವೇ ಅಥವಾ ಅಲ್ಲವೇ? ನಿರ್ಬಂಧ ಹೇರಲು ಸಾಧ್ಯವಾಗದಂತಹ ಹಕ್ಕು ಯಾವುದೂ ಇಲ್ಲ. ನಾವು ಆ ನೆಲೆಯಿಂದ ಚರ್ಚೆ ಶುರುಮಾಡಬೇಕಾಗುತ್ತದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು, ಸಂಘಟನಾ ಹಕ್ಕು, ವೈಯಕ್ತಿಕ ಹಕ್ಕು, ಜೀವಿಸುವ ಹಕ್ಕು ಇವು ನಿರ್ಬಂಧ ಹೇರಲು ಸಾಧ್ಯವಾಗದಂತಹ ಹಕ್ಕುಗಳಲ್ಲ. ಈ ನೆಲೆಯಲ್ಲಿ ನೋಡುವುದಾದರೆ ಸಂಪೂರ್ಣ ಹಕ್ಕು ಎಂಬುದೇ ಇಲ್ಲ. ಜೀವಿಸುವ ಹಕ್ಕು ಇದೆ ಎಂದಾದರೆ ಅದರ ಜೊತೆಗೆ ಮದುವೆಯ ಹಕ್ಕೂ ಇರುತ್ತದೆ’ ಎಂದು ಹೇಳಿದೆ.

‘ಮನ ಮುಟ್ಟದ ಕಲಾಪ ನೇರ ಪ್ರಸಾರ’

ನವದೆಹಲಿ (ಪಿಟಿಐ): ಪ್ರಕರಣಗಳ ವಿಚಾರಣೆಯ ನೇರ ಪ್ರಸಾರದಿಂದಾಗಿ ನ್ಯಾಯಾಲಯದ ಕಲಾಪಗಳು ಜನಸಾಮಾನ್ಯರ ಮನೆ- ಮನಗಳನ್ನು ಹೆಚ್ಚು ತಲುಪುತ್ತಿವೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಇಂಗ್ಲಿಷ್ ಹೊರತುಪಡಿಸಿ, ಇತರ ಭಾಷೆಗಳಲ್ಲೂ ಏಕಕಾಲದಲ್ಲಿ ಕೋರ್ಟ್ ಕಲಾಪ ವೀಕ್ಷಣೆ ಸಾಧ್ಯವಾಗಿಸಲು ಕೋರ್ಟ್ ಕೆಲಸ ಮಾಡುತ್ತಿದೆ. ಇದಕ್ಕಾಗಿ ಅಗತ್ಯ ತಂತ್ರಜ್ಞಾನ ಬಳಸಿಕೊಳ್ಳಲು ಪ್ರಯತ್ನಿಸುತ್ತಿದೆ. ಇದರಿಂದ ಕಲಾಪಗಳು ಇನ್ನಷ್ಟು ಹೆಚ್ಚು ಜನರನ್ನು ತಲುಪಲಿವೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹೇಳಿದರು.

‘ಕಲಾಪಗಳ ನೇರ ಪ್ರಸಾರವು ನಮ್ಮ ನ್ಯಾಯಾಲಯವನ್ನು ನಿಜಕ್ಕೂ ಮನೆಗಳಿಗೆ ಮತ್ತು ಜನಸಾಮಾನ್ಯರ ಹೃದಯಕ್ಕೆ ತಲುಪಿಸಿದೆ’ ಎಂದು ಚಂದ್ರಚೂಡ್ ಅಭಿಪ್ರಾಯ ವ್ಯಕ್ತಪಡಿಸಿದರು.

ಐವರು ನ್ಯಾಯಮೂರ್ತಿಗಳಿರುವ ಸಂವಿಧಾನ ಪೀಠದ ನೇತೃತ್ವ ವಹಿಸಿರುವ ಅವರು, ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡುವಂತೆ ಕೋರಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯ ಎಂಟನೇ ದಿನದ ವಾದಗಳನ್ನು ಆಲಿಸಿದರು. ಸಂವಿಧಾನ ಪೀಠದಲ್ಲಿ ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್, ಎಸ್.ಆರ್. ಭಟ್, ಹಿಮಾ ಕೊಹ್ಲಿ ಮತ್ತು ಪಿ.ಎಸ್. ನರಸಿಂಹ ಇದ್ದಾರೆ.

ಮಧ್ಯಪ್ರದೇಶ ಸರ್ಕಾರದ ಪರ ಹಾಜರಿದ್ದ ಹಿರಿಯ ವಕೀಲ ರಾಕೇಶ್ ದ್ವಿವೇದಿ, ನ್ಯಾಯಾಲಯದ ಕಲಾಪಗಳು ಸಾಮಾನ್ಯವಾಗಿ ಇಂಗ್ಲಿಷ್‌ನಲ್ಲಿ ನಡೆಯುತ್ತವೆ. ಇದರಿಂದ ಕೆಲವು ಪ್ರದೇಶಗಳ ಜನರಿಗೆ ಕಲಾಪ ಅರ್ಥವಾಗುವುದು ಸಾಧ್ಯವಾಗದಿರಬಹುದು ಎಂದು ಕಳವಳ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಚಂದ್ರಚೂಡ್, ‘ಇದು ಕೋರ್ಟ್ ಗಮನದಲ್ಲಿದೆ. ನಿಮಗೆ ಅಚ್ಚರಿಯಾಗಬಹುದು. ವಿಚಾರಣೆ ನಡೆದ ತಕ್ಷಣವೇ ಪ್ರಾದೇಶಿಕ ಭಾಷೆಗಳಲ್ಲಿಯೂ ಲಿಪ್ಯಂತರದ ಪ್ರತಿಗಳು ಲಭ್ಯವಾಗಿಸಲು ನಾವು ಕಾರ್ಯೋನ್ಮುಖವಾಗಿದ್ದೇವೆ’ ಎಂದರು. ಜಮೀಯತ್ ಉಲೇಮಾ ಎ ಹಿಂದ್ ಸಂಘಟನೆ ಪರ ವಾದಿಸುತ್ತಿರುವ ಹಿರಿಯ ವಕೀಲ ಕಪಿಲ್ ಸಿಬಲ್, ಈಗ ತಂತ್ರಜ್ಞಾನವು ಒಬ್ಬ ವ್ಯಕ್ತಿಯು ಇಂಗ್ಲಿಷ್‌ನಲ್ಲಿ ಏನು ಮಾತನಾಡುತ್ತಿದ್ದಾನೆ ಎಂಬುದನ್ನಷ್ಟೇ ಅಲ್ಲ, ಜಪಾನ್ ಭಾಷೆ ಸೇರಿ ವಿವಿಧ ಭಾಷೆಗಳಲ್ಲಿ ಏನು ಮಾತನಾಡಿದರೆನ್ನುವುದನ್ನೂ ತಿಳಿಸುತ್ತದೆ ಎಂದರು.

ಮಣಿಪುರ ಶಾಂತ: 11 ಜಿಲ್ಲೆಗಳಲ್ಲಿ ಕರ್ಫ್ಯೂ ಸಡಿಲ


ಮಣಿಪುರದಲ್ಲಿ ಹಿಂಸಾಚಾರ ಸಂಭವಿಸಿದ ಹಿನ್ನೆಲೆಯಲ್ಲಿ ಅಲ್ಲಿ ವ್ಯಾಸಂಗ ಮಾಡುತ್ತಿದ್ದ ಬಿಹಾರದ ಹಲವು ವಿದ್ಯಾರ್ಥಿಗಳು ಮಂಗಳವಾರ ಪಟ್ನಾ ವಿಮಾನನಿಲ್ದಾಣಕ್ಕೆ ಬಂದಿಳಿದರು –ಪಿಟಿಐ ಚಿತ್ರ

ಇಂಫಾಲ (ಪಿಟಿಐ): ಹಿಂಸಾಚಾರದಿಂದ ನಲುಗಿದ್ದ ಮಣಿಪುರದಲ್ಲಿ ಜನಜೀವನ ಸಹಜ ಸ್ಥಿತಿಯತ್ತ ಮರಳುತ್ತಿದೆ. ಹೊಸದಾಗಿ ಯಾವುದೇ ಅಹಿತಕರ ಘಟನೆ ವರದಿಯಾಗಿಲ್ಲ. ಎಲ್ಲ 11 ಜಿಲ್ಲೆಗಳಲ್ಲೂ ಕರ್ಫ್ಯೂ ಸಡಿಲಿಸಲಾಗಿದೆ ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

‘ರಾಜ್ಯದಾದ್ಯಂತ ಪರಿಸ್ಥಿತಿ ಶಾಂತವಾಗುತ್ತಿದೆ. ಕಳೆದ 24 ತಾಸುಗಳಲ್ಲಿ ಹಿಂಸಾಚಾರದ ಯಾವುದೇ ಘಟನೆಗಳು ವರದಿಯಾಗಿಲ್ಲ. ಪಶ್ಚಿಮ ಇಂಫಾಲದಲ್ಲಿ ನಾಲ್ಕು ತಾಸು ಕರ್ಫ್ಯೂ ಸಡಿಲಗೊಳಿಸಲಾಗಿದೆ. ಪೂರ್ವ ಇಂಫಾಲದಲ್ಲಿ ಮಂಗಳವಾರ ಬೆಳಿಗ್ಗೆ 5ರಿಂದಲೇ ಕರ್ಫ್ಯೂ ಸಡಿಲಗೊಳಿಸಲಾಗಿದೆ. ಹಿಂಸಾಚಾರ ಪೀಡಿತ ಉಳಿದ ಒಂಬತ್ತು ಜಿಲ್ಲೆಗಳಲ್ಲೂ ಇದೇ ರೀತಿ ಕರ್ಫ್ಯೂ ಸಡಿಲಗೊಳಿಸಲಾಗಿದೆ’ ಎಂದು ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

ಮೈತೇಯಿ ಸಮುದಾಯದವರ ಪರಿಶಿಷ್ಟ ಪಂಗಡ (ಎಸ್‌ಟಿ) ಸ್ಥಾನಮಾನದ ಬೇಡಿಕೆಯ ವಿರುದ್ಧ ಬುಡಕಟ್ಟು ಸಮುದಾಯಗಳು ಮೇ 3 ರಂದು 10 ಗುಡ್ಡಗಾಡು ಜಿಲ್ಲೆಗಳಲ್ಲಿ ಆಯೋಜಿಸಿದ್ದ ಒಗ್ಗಟ್ಟಿನ ನಡಿಗೆ ಘರ್ಷಣೆಗೆ ತಿರುಗಿ, ನಂತರ ಈಶಾನ್ಯ ರಾಜ್ಯದಾದ್ಯಂತ ಹಿಂಸಾಚಾರ ಭುಗಿಲೇಳಲು ಕಾರಣವಾಯಿತು.

‘ಈಶಾನ್ಯ ರಾಜ್ಯದಲ್ಲಿ ಕಳೆದ ಕೆಲವು ದಿನಗಳಿಂದ ಜನಾಂಗೀಯ ಹಿಂಸಾಚಾರದಿಂದಾಗಿ 60 ಜನರು ಮೃತಪಟ್ಟಿದ್ದು, 231 ಮಂದಿ ಗಾಯಗೊಂಡಿದ್ದಾರೆ. ದೇವಸ್ಥಾನ, ಚರ್ಚುಗಳು ಸೇರಿ 1,700 ಮನೆಗಳಿಗೆ ಹಾನಿಯಾಗಿದೆ. ಸುಮಾರು 20 ಸಾವಿರ ಜನರಿಗೆ ಸೇನಾ ಶಿಬಿರಗಳಲ್ಲಿ ಆಶ್ರಯ ಕಲ್ಪಿಸಲಾಗಿದೆ’ ಎಂದು ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ್ದಾರೆ.

‘ಭದ್ರತಾ ಪಡೆಗಳಿಗೆ ಸೇರಿದ ಸುಮಾರು 1,041 ಬಂದೂಕುಗಳನ್ನು ಗಲಭೆಕೋರರು ಲೂಟಿ ಮಾಡಿದ್ದರು. ಈ ಪೈಕಿ 214 ಬಂದೂಕುಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದೂ ಹೇಳಿದ್ದಾರೆ.

ಶಾಂತಿ ಸ್ಥಾಪನೆಗೆ ಪಿತ್ರೋಡಾ ಆಗ್ರಹ

ವಾಷಿಂಗ್ಟನ್ (ಪಿಟಿಐ): ಕಾಂಗ್ರೆಸ್‌ನ ಹಿರಿಯ ನಾಯಕ ಸ್ಯಾಮ್ ಪಿತ್ರೋಡಾ ಅವರು, ಮಣಿಪುರ ಬೆಳವಣಿಗೆ ಕುರಿತು ಕಳವಳ ವ್ಯಕ್ತಪಡಿಸಿದ್ದು, ಹಿಂಸಾಚಾರ ತಡೆಗೆ ತಕ್ಷಣದ ಕ್ರಮ ಅಗತ್ಯ ಎಂದು ಕೋರಿದ್ದಾರೆ.

‘ಸಾಗರೋತ್ತರ ಕಾಂಗ್ರೆಸ್ (ಐಒಸಿ) ಮಣಿಪುರ ಬೆಳವಣಿಗೆ ಕುರಿತು ಕಳವಳ ಹೊಂದಿದೆ. ಮಣಿಪುರದಲ್ಲಿ ಅಲ್ಲಿ ಕ್ರೈಸ್ತ ಸಮುದಾಯದರಿಗೆ ಸಮಸ್ಯೆಯಾಗಿದೆ. 25 ಚರ್ಚ್, 500ಕ್ಕೂ ಹೆಚ್ಚು ಮನೆಗಳು ಜಖಂಗೊಂಡಿವೆ’ ಎಂದು ಐಒಸಿ ಅಧ್ಯಕ್ಷರು ಆದ ಪಿತ್ರೋಡಾ ಹೇಳಿದರು.

‘ಹಿಂಸಾಚಾರವನ್ನು ತಕ್ಷಣ ತಡೆಯಬೇಕು. ಶಾಂತಿ ಸ್ಥಾಪಿಸಲು ಮತ್ತು ಜನರ ಸುರಕ್ಷತೆಗೆ ಕ್ರಮವಹಿಸಬೇಕು. ಹಿಂಸಾಚಾರದಲ್ಲಿ ನೊಂದ ಜನರಿಗೆ ನಮ್ಮ ಸಹಾನುಭೂತಿಯಿದೆ’ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

‘ಹಿಂಸೆಯಲ್ಲಿ 60 ಜನರ ಮೃತಪಟ್ಟಿದ್ದು, 231 ಮಂದಿ ಗಾಯಗೊಂಡಿದ್ದಾರೆ. 1,700 ಧಾರ್ಮಿಕ ಸ್ಥಳಗಳು ಜಖಂಗೊಂಡಿವೆ ಎಂದು ಮಣಿಪುರ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಸೋಮವಾರ ತಿಳಿಸಿದ್ದರು.

ನಾಸಾ ಸ್ಪರ್ಧೆ: ಬಿಟ್ಸ್ ಪಿಲಾನಿ ‘ರೋವರ್’ಗೆ ಮೊದಲ ಸ್ಥಾನ



ನವದೆಹಲಿ (ಪಿಟಿಐ): ಅಮೆರಿಕದ ಬಾಹ್ಯಾಕಾಶ ಅಧ್ಯಯನ ಸಂಸ್ಥೆ ‘ನಾಸಾ’ ಏರ್ಪಡಿಸಿದ್ದ ಚಂದ್ರ ಮತ್ತು ಮಂಗಳ ಗ್ರಹಕ್ಕೆ ಕಳಿಸುವಂಥ ಮಾನವ ಚಾಲಿತ ‘ರೋವರ್’ ಅಭಿವೃದ್ಧಿ ಸ್ಪರ್ಧೆಯಲ್ಲಿ ರಾಜಸ್ಥಾನದ ಬಿಟ್ಸ್ ಪಿಲಾನಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ತಂಡವು ಮೊದಲ ಸ್ಥಾನ ಗಳಿಸಿದೆ ಎಂದು ವಿ.ವಿಯ ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕದ ಅಲಬಾಮದ ನಾಸಾ ಮಾರ್ಷಲ್ ಸ್ಪೇಸ್ ಫ್ಲೈಟ್ ಸೆಂಟರ್‌ನಲ್ಲಿ ಈ ಸ್ಪರ್ಧೆ ಏರ್ಪಡಿಸಲಾಗಿತ್ತು. ಮಂಗಳ ಗ್ರಹದ ಮೇಲಿನ ಮಾರ್ಟಿನ್ ಟೆರೈನ್‌ಗಳ (ಬೃಹದಾಕಾರದ ಕುಳಿಗಳನ್ನು ಹೊಂದಿರುವ ಮಂಗಳ ಗ್ರಹದ ಮೇಲ್ಮೈ ಪ್ರದೇಶ) ಮೇಲೂ ಸಂಚರಿಸಬಲ್ಲ ಸಾಮರ್ಥ್ಯದ ಮಾನವ ಚಾಲಿತ ರೋವರ್‌ಗಳನ್ನು ಅಭಿವೃದ್ಧಿಪಡಿಸುವುದು ಸ್ಪರ್ಧೆಯ ಸವಾಲಾಗಿತ್ತು. ವಿ.ವಿ.ಯ ‘ಇನ್‌ಸ್ಪೈರ್ಡ್ ಕಾರ್ಟೆಸ್ ಗ್ರಾವಿಟ’ ತಂಡವು ಸ್ಪರ್ಧೆಯ ಯೋಜನೆ ಪರಿಶೀಲನೆ ವಿಭಾಗದಲ್ಲಿ ಮೊದಲ ಸ್ಥಾನ ಪಡೆದಿದೆ ಎಂದು ಹೇಳಿದ್ದಾರೆ.

ತಂಡ ಅಭಿವೃದ್ಧಿಪಡಿಸಿದ್ದ ‘ಜಿ-ರೋವರ್ 3’ ಹಲವಾರು ವಿಶಿಷ್ಟ ಲಕ್ಷಣಗಳು ಇದ್ದ ಕಾರಣ ಸ್ಪರ್ಧೆಯಲ್ಲಿ ಬಹುವಾಗಿ ಗಮನ ಸೆಳೆಯಿತು ಎಂದು ಅವರು ಹೇಳಿದ್ದಾರೆ.

ಅನಧಿಕೃತ ಭೇಟಿ: ರಾಹುಲ್‌ಗೆ ನೋಟಿಸ್

ದೆಹಲಿ ವಿಶ್ವವಿದ್ಯಾಲಯ ರಿಜಿಸ್ಟ್ರಾರ್ ವಿಕಾಸ್ ಗುಪ್ತ ಹೇಳಿಕೆ

ನವದೆಹಲಿ (ಪಿಟಿಐ): ಮುಂದಿನ ದಿನಗಳಲ್ಲಿ ‘ಅನಧಿಕೃತ’ವಾಗಿ ಕ್ಯಾಂಪಸ್‌ಗೆ ಭೇಟಿ ನೀಡದಂತೆ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿಗೆ ಎಚ್ಚರಿಕೆಯ ನೋಟಿಸ್ ನೀಡುವುದಾಗಿ ದೆಹಲಿ ವಿಶ್ವವಿದ್ಯಾಲಯ ಮಂಗಳವಾರ ತಿಳಿಸಿದೆ.

ರಾಹುಲ್ ಗಾಂಧಿ ಅವರು ಕಳೆದ ಶುಕ್ರವಾರ ಸ್ನಾತಕೋತ್ತರ ವಿದ್ಯಾರ್ಥಿಗಳ ಬಾಲಕರ ಹಾಸ್ಟೆಲ್‌ಗೆ ಭೇಟಿ ನೀಡಿ, ವಿದ್ಯಾರ್ಥಿಗಳೊಂದಿಗೆ ಮಾತುಕತೆ ನಡೆಸಿ, ಊಟ ಸವಿದಿದ್ದರು. ಈ ಬೆನ್ನಲ್ಲೇ ದೆಹಲಿ ವಿಶ್ವವಿದ್ಯಾಲಯ ಈ ನಿರ್ಣಯ ತೆಗೆದುಕೊಂಡಿದೆ.

ರಾಹುಲ್ ಅವರ ಈ ರೀತಿಯ ಭೇಟಿ ವಿದ್ಯಾರ್ಥಿಗಳ ಸುರಕ್ಷತೆಗೆ ಅಪಾಯವನ್ನುಂಟು ಮಾಡುತ್ತದೆ. ಅಲ್ಲದೇ ವಿದ್ಯಾರ್ಥಿಗಳ ಭೇಟಿಗೆ ಕ್ಯಾಂಪಸ್‌ನ ಶಿಷ್ಟಾಚಾರ ಅನುಸರಿಸಬೇಕಿರುತ್ತದೆ. ಇದನ್ನು ತಿಳಿಸುವ ಸಲುವಾಗಿ ರಾಹುಲ್‌ಗೆ ನೋಟಿಸ್ ನೀಡಲಾಗುತ್ತಿದೆ ಎಂದು ವಿವಿ ರಿಜಿಸ್ಟ್ರಾರ್ ವಿಕಾಸ್ ಗುಪ್ತ ತಿಳಿಸಿದ್ದಾರೆ.


ದೆಹಲಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ಬಾಲಕರ ಹಾಸ್ಟೆಲ್‌ಗೆ ಶುಕ್ರವಾರ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಊಟ ಸವಿದ ರಾಹುಲ್ ಗಾಂಧಿ –ಪಿಟಿಐ ಚಿತ್ರ

‘ರಾಹುಲ್ ಗಾಂಧಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಡಳಿತ ಮಂಡಳಿಗೆ ಒತ್ತಡ ಇದೆ’ ಎಂದು ಭಾರತದ ರಾಷ್ಟ್ರೀಯ ವಿದ್ಯಾರ್ಥಿಗಳ ಒಕ್ಕೂಟ (ಎನ್‌ಎಸ್‌ಯುಐ) ಆರೋಪಿಸಿದೆ.

ಈ ಆರೋಪವನ್ನು ತಳ್ಳಿಹಾಕಿರುವ ರಿಜಿಸ್ಟ್ರಾರ್, ನಮ್ಮ ಮೇಲೆ ಯಾವುದೇ ಒತ್ತಡ ಇಲ್ಲ. ಇದು ಶಿಸ್ತು ಪಾಲಿಸುವ ವಿಷಯವಾಗಿದೆ ಎಂದಿದ್ದಾರೆ.

ದೆಹಲಿ ಸಿಎಂ ನಿವಾಸ ನವೀಕರಣ: ವರದಿ ಕೇಳಿದ ಎಲ್‌ಜಿ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ನಿವಾಸದ ನವೀಕರಣದ ದುಂದುವೆಚ್ಚದ ಬಗ್ಗೆ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಕಾಂಗ್ರೆಸ್ ನಾಯಕ ಅಜಯ್ ಮಾಕೆನ್ ಅವರ ಪತ್ರಕ್ಕೆ ಸ್ಪಂದಿಸಿರುವ ಲೆಫ್ಟಿನೆಂಟ್ ಗವರ್ನರ್ (ಎಲ್.ಜಿ) ವಿ.ಕೆ.ಸಕ್ಸೇನಾ, ಮುಖ್ಯ ಕಾರ್ಯದರ್ಶಿಯಿಂದ ವಾರದೊಳಗಾಗಿ ವಿವರವಾದ ವರದಿ ಕೇಳಿದ್ದಾರೆ.

ಕೇಜ್ರಿವಾಲ್ ಅವರ ನಿವಾಸವನ್ನು ನವೀಕರಣಗೊಳಿಸಲು ವ್ಯಯಮಾಡಿದ್ದು ₹ 45 ಕೋಟಿ ಅಲ್ಲ. ಬದಲಾಗಿ ₹ 171 ಕೋಟಿ. ಅದೂ ಕೊರೊನಾ ಸಾಂಕ್ರಾಮಿಕದ ಸಮಯದಲ್ಲಿ ಆಸ್ಪತ್ರೆಯಲ್ಲಿ ಹಾಸಿಗೆ, ಆಕ್ಸಿಜನ್ ಸಿಗದೆ ಜನ ನಲುಗುತ್ತಿದ್ದ ಸಂದರ್ಭದಲ್ಲಿ ಇಷ್ಟು ಹಣ ವ್ಯಯ ಮಾಡಲಾಗಿದೆ ಎಂದು ಕಾಂಗ್ರೆಸ್‌ನ ಹಿರಿಯ ವಕ್ತಾರ ಅಜಯ್ ಮಾಕೆನ್ ಆರೋಪಿಸಿ ರಾಜ್ಯಪಾಲರಿಗೆ ಪತ್ರ ಬರೆದಿದ್ದರು. ವರದಿಯನ್ನು ಏಳು ದಿನಗಳಲ್ಲಿ ಒದಗಿಸಬೇಕು ಎಂದು ಎಲ್.ಜಿ ಅವರು ಸೂಚಿಸಿದ್ದಾರೆ.

ಟೈಗರ್ ಕಪ್: ಪ್ಲೇ ಸ್ಮಾರ್ಟ್‌ಗೆ ಪ್ರಶಸ್ತಿ

ಬೆಂಗಳೂರು: ಪ್ಲೇ ಸ್ಮಾರ್ಟ್ ತಂಡವು ಟೈಗರ್ ಕಪ್ ಕ್ರಿಕೆಟ್ ಟೂರ್ನಿಯ 12 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆಯಿತು.

ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಮೈದಾನದಲ್ಲಿ ಮಂಗಳವಾರ ನಡೆದ ಫೈನಲ್‌ನಲ್ಲಿ ಪ್ಲೇ ಸ್ಮಾರ್ಟ್ ತಂಡ 71 ರನ್‌ಗಳಿಂದ ಕೆಸಿಸಿ ಗುರುಕುಲ ತಂಡವನ್ನು ಮಣಿಸಿತು. ಪ್ಲೇ ಸ್ಮಾರ್ಟ್, ನಿಗದಿತ 30 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 194 ರನ್ ಗಳಿಸಿತು. ಕೆಸಿಸಿ ತಂಡ 30 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 123 ರನ್ ಮಾತ್ರ ಪೇರಿಸಿತು.

ಸಂಕ್ಷಿಪ್ತ ಸ್ಕೋರ್: ಪ್ಲೇ ಸ್ಮಾರ್ಟ್ 30 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 194 (ಆರ್.ಪವನ್‌ದೀಪ್ 58, ಲಿತಿಕ್ ರೆಡ್ಡಿ 55, ಗಗನ್ ಯಶ್ವಾಲ್ 40, ಸೋಹಮ್ ಜೋಶಿ 24, ಮಾಹಿನ್ ಶ್ರೀಕಾಂತ್ 23ಕ್ಕೆ 2) ಕೆಸಿಸಿ ಗುರುಕುಲ 30 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 123 (ನೀರಜ್ 28, ದೀಪ್ 23, ತೇಜಸ್ ಎಸ್. ಭಟ್ 16ಕ್ಕೆ 2, ಶ್ಲೋಕ್ ಚಡಿಚಲ್ 28ಕ್ಕೆ 2) ಫಲಿತಾಂಶ: ಪ್ಲೇ ಸ್ಮಾರ್ಟ್ ತಂಡಕ್ಕೆ 71 ರನ್‌ಗಳ ಗೆಲುವು

ಕುಸ್ತಿ: ಏಷ್ಯನ್ ಗೇಮ್ಸ್‌ಗೆ ಆಯ್ಕೆ ಟ್ರಯಲ್ಸ್

ಸ್ಪರ್ಧಿ ಕಳುಹಿಸಲು ರಾಜ್ಯಗಳಿಗೆ ಅವಕಾಶ?

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್ ಕುಸ್ತಿ ಆಯ್ಕೆ ಟ್ರಯಲ್ಸ್‌ಗೆ ಅರ್ಹ ಕುಸ್ತಿಪಟುಗಳನ್ನು ಕಳುಹಿಸಿಕೊಡಲು ರಾಜ್ಯ ಕುಸ್ತಿ ಸಂಸ್ಥೆಗಳಿಗೆ ಭಾರತ ಒಲಿಂಪಿಕ್ ಸಂಸ್ಥೆಯ ಅಡ್ ಹಾಕ್ ಸಮಿತಿ ಅವಕಾಶ ನೀಡುವ ಸಾಧ್ಯತೆಯಿದೆ. ಈ ಹಿಂದಿನ ಮಾನದಂಡದ ಪ್ರಕಾರ ನಿರ್ದಿಷ್ಟ ಟೂರ್ನಿಗಳಲ್ಲಿ ಪದಕ ಗೆದ್ದ ಕುಸ್ತಿಪಟುಗಳಷ್ಟೇ ಟ್ರಯಲ್ಸ್‌ನಲ್ಲಿ ಭಾಗವಹಿಸಲು ಅರ್ಹರಾಗಿದ್ದರು.

ಹೊಸ ಆಯ್ಕೆ ನಿಯಮದ ಪ್ರಕಾರ ಕುಸ್ತಿಪಟುಗಳು ನಿಗದಿಪಡಿಸಿದ ಟೂರ್ನಿಗಳಲ್ಲಿ ಪದಕ ಗೆಲ್ಲದಿದ್ದರೂ ಟ್ರಯಲ್ಸ್‌ನಲ್ಲಿ ಸ್ಪರ್ಧಿಸಲು ಅವಕಾಶವಿದೆ.

ಜೂನ್ ಮೂರನೇ ವಾರ ಏಷ್ಯನ್ ಕ್ರೀಡಾಕೂಟಕ್ಕೆ ಆಯ್ಕೆ ಟ್ರಯಲ್ಸ್ ನಡೆಯುವ ನಿರೀಕ್ಷೆಯಿದೆ. ಒಂದೆರಡು ದಿನಗಳಲ್ಲಿ ದಿನಾಂಕ ನಿಗದಿಯಾಗಲಿದೆ. ಏಷ್ಯನ್ ಕ್ರೀಡಾಕೂಟ ಸೆಪ್ಟೆಂಬರ್ 23ರಿಂದ ಚೀನಾದ ಹಾಂಗ್‌ಝೌ ನಗರದಲ್ಲಿ ನಡೆಯಲಿದೆ.

ಆಯ್ಕೆ ಟ್ರಯಲ್ಸ್‌ಗೆ ಸಂಬಂಧಿಸಿ ಭಾರತ ಕುಸ್ತಿ ಫೆಡರೇಷನ್ ಕಳೆದ ವರ್ಷ ನೀತಿ ರೂಪಿಸಿದ್ದು, ಇದರ ಪ್ರಕಾರ ರಾಷ್ಟ್ರೀಯ ಚಾಂಪಿಯನ್‌ಷಿಪ್, ರಾಷ್ಟ್ರೀಯ ರ್‍ಯಾಂಕಿಂಗ್ ಟೂರ್ನಿ, ಫೆಡರೇಷನ್ ಕಪ್, ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಪದಕ ಗೆದ್ದವರು ಮತ್ತು ಪ್ರತಿಭಾನ್ವಿತ ಕಿರಿಯ ಪೈಲ್ವಾನರು ಟ್ರಯಲ್ಸ್‌ನಲ್ಲಿ ಭಾಗವಹಿಸಲು ಅವಕಾಶವಿತ್ತು.

ಆಯ್ಕೆಗೆ ಓಪನ್ ಟ್ರಯಲ್ಸ್ ನಡೆಸುವ ಬಗ್ಗೆ ಅಡ್ ಹಾಕ್ ಸಮಿತಿ ಸದಸ್ಯ ಭೂಪೇಂದರ್ ಬಾಜ್ವಾ ಒಲವು ವ್ಯಕ್ತಪಡಿಸಿದ್ದರು. ಆದರೆ ಕೋಚ್ ಮತ್ತು ರೆಫ್ರಿಗಳು ಪದಕ ಗೆಲ್ಲುವ ಸಂಭವನೀಯರಿಗೆ ಮಾತ್ರ ಟ್ರಯಲ್ಸ್ ಸೀಮಿತಗೊಳಿಸುವಂತೆ ಸಲಹೆ ನೀಡಿದರು ಎಂದು ಐಒಎ ಮೂಲಗಳು ತಿಳಿಸಿವೆ.

ಓಪನ್ ಟ್ರಯಲ್ಸ್ ನಡೆಸಿದರೆ ನಿಗದಿತ ಅವಧಿಯೊಳಗೆ ಪ್ರಕ್ರಿಯೆ ಮುಗಿಸಲು ಕಷ್ಟವಾಗಬಹುದು. ಎರಡು ಶೈಲಿಯ (ಫ್ರೀಸ್ಟೈಲ್ ಮತ್ತು ಗ್ರಿಕೊ ರೋಮನ್) ಕುಸ್ತಿಗಳ 10 ವಿಭಾಗಗಳಲ್ಲಿ ರಾಜ್ಯ ಸಂಸ್ಥೆಗಳು ತಮ್ಮ ಆಯ್ಕೆಯ ಕುಸ್ತಿಪಟುಗಳನ್ನು ಕಣಕ್ಕಿಳಿಸುವ ಅವಕಾಶ ಇರುವುದರಿಂದ ಟ್ರಯಲ್ಸ್‌ನಲ್ಲಿ ಭಾಗವಹಿಸುವ ಸ್ಪರ್ಧಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಬಹುದು.

‘ಅಂತಿಮ ನಿರ್ಧಾರವನ್ನು ಶೀಘ್ರ ಪ್ರಕಟಿಸಲಾಗುವುದು. ಸದ್ಯ 25 ರಾಜ್ಯಗಳು ಕುಸ್ತಿ ಫೆಡರೇಷನ್‌ನ ಮಾನ್ಯತೆ ಪಡೆದಿವೆ.

ಈ ಸಂಬಂಧ ಸೋಮವಾರ ನಡೆದ ಸಭೆಯಲ್ಲಿ ಬಾಜ್ವಾ ಜೊತೆ ಕುಸ್ತಿ ಕೋಚ್‌ಗಳು, ರೆಫ್ರಿಗಳು ಮತ್ತು ಭಾರತ ಕ್ರೀಡಾ ಪ್ರಾಧಿಕಾರದ ಅಧಿಕಾರಿಗಳು ಭಾಗವಹಿಸಿದ್ದರು.

ಜೂನಿಯರ್ ಹಾಕಿ: ಆಯ್ಕೆ ಟ್ರಯಲ್ಸ್ 12ರಂದು

ಬೆಂಗಳೂರು: ರಾಜ್ಯ ಜೂನಿಯರ್ ಬಾಲಕರ ಹಾಕಿ ತಂಡದ ಆಯ್ಕೆ ಟ್ರಯಲ್ಸ್ ಇದೇ 12ರಂದು ನಡೆಯಲಿದೆ.

ಜೂನ್ 12 ರಿಂದ 22ರವರೆಗೆ ಒಡಿಶಾದ ರೂರ್ಕೆಲಾದಲ್ಲಿ ನಡೆಯಲಿರುವ 13ನೇ ರಾಷ್ಟ್ರೀಯ ಜೂನಿಯರ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಈ ತಂಡವು ಸ್ಪರ್ಧಿಸಲಿದೆ. 2004ರ ಜನವರಿ 1ರಂದು ಅಥವಾ ನಂತರ ಜನಿಸಿದವರು ಟ್ರಯಲ್ಸ್‌ನಲ್ಲಿ ಭಾಗವಹಿಸಬಹುದು. ಶಾಂತಿನಗರದಲ್ಲಿರುವ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರಿಯಪ್ಪ ಹಾಕಿ ಕ್ರೀಡಾಂಗಣದಲ್ಲಿ ಟ್ರಯಲ್ಸ್ ನಡೆಯಲಿದೆ. ಮೇ 12ರಂದು ಬೆಳಿಗ್ಗೆ 10 ಗಂಟೆಗೆ ಹಾಕಿ ಆಟಗಾರರು ಹಾಜರಿರಬೇಕು ಎಂದು ಹಾಕಿ ಕರ್ನಾಟಕದ ಮಹಾಪ್ರಧಾನ ಕಾರ್ಯದರ್ಶಿ ಎ.ಬಿ. ಸುಬ್ಬಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಎಸ್‌ಜಿ ಜತೆಗಿನ ಒಪ್ಪಂದ ಜೂನ್ 30ಕ್ಕೆ ಕೊನೆ

ಸೌದಿ ಕ್ಲಬ್ ಪರ ಆಡಲು ಮೆಸ್ಸಿ ಒಪ್ಪಂದ?

ರಿಯಾದ್ (ಎಎಫ್‌ಪಿ): ದಿಗ್ಗಜ ಫುಟ್‌ಬಾಲ್ ಆಟಗಾರ ಲಯೊನೆಲ್ ಮೆಸ್ಸಿ ಅವರು ಮುಂದಿನ ಋತುವಿನಲ್ಲಿ ಸೌದಿ ಅರೇಬಿಯಾದ ಕ್ಲಬ್ ಪರ ಆಡಲು ಭಾರಿ ಮೊತ್ತದ ಒಪ್ಪಂದ ಮಾಡಿಕೊಂಡಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ.

ಇದರೊಂದಿಗೆ ಅವರು ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ ಅವರ ಹಾದಿಯಲ್ಲಿ ಹೆಜ್ಜೆಯಿಟ್ಟಿದ್ದಾರೆ. ರೊನಾಲ್ಡೊ, ಸೌದಿ ಅರೇಬಿಯಾದ ಪ್ರೊ ಲೀಗ್ ಕ್ಲಬ್ ಅಲ್ ನಸ್ರ್ ಪರ ಆಡುತ್ತಿದ್ದಾರೆ.

ಮೆಸ್ಸಿ ಯಾವ ಕ್ಲಬ್ ಪರ ಆಡುವರು ಮತ್ತು ಒಪ್ಪಂದದ ಮೊತ್ತ ಎಷ್ಟು ಎಂಬುದು ಬಹಿರಂಗವಾಗಿಲ್ಲ. ‘ಮೆಸ್ಸಿ ಅವರ ಒಪ್ಪಂದ ಪ್ರಕ್ರಿಯೆ ಪೂರ್ಣಗೊಂಡಿದೆ. ಮುಂದಿನ ಋತುವಿನಲ್ಲಿ ಸೌದಿ ಅರೇಬಿಯಾದಲ್ಲಿ ಆಡಲಿದ್ದಾರೆ’ ಎಂಬುದನ್ನಷ್ಟೇ ಮೂಲಗಳು ಹೇಳಿವೆ.

‘ಭಾರಿ ಮೊತ್ತದ ಒಪ್ಪಂದ ಇದಾಗಿದ್ದು, ಅಂತಿಮ ಹಂತದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುತ್ತಿದ್ದೇವೆ’ ಎಂದು ಮೂಲಗಳು ತಿಳಿಸಿವೆ. ಮೆಸ್ಸಿ ಅವರು ಅಲ್ ಹಿಲಾಲ್ ಕ್ಲಬ್‌ಗೆ ಆಡಲಿದ್ದಾರೆ ಎಂದು ಕೆಲವು ಮಾಧ್ಯಮಗಳು ಈ ಹಿಂದೆ ವರದಿ ಮಾಡಿದ್ದವು.

ಅವರು ಈಗ ಆಡುತ್ತಿರುವ ಪ್ಯಾರಿಸ್ ಸೇಂಟ್ ಜರ್ಮೈನ್ (ಪಿಎಸ್‌ಜಿ) ಕ್ಲಬ್ ಈ ಬೆಳವಣಿಗೆಗಳ ಬಗ್ಗೆ ಏನನ್ನೂ ಹೇಳಿಲ್ಲ. ಪಿಎಸ್‌ಜಿ ಜತೆಗಿನ ಅವರ ಒಪ್ಪಂದ ಜೂನ್ 30 ರಂದು ಕೊನೆಗೊಳ್ಳಲಿದೆ. ಒಪ್ಪಂದವನ್ನು ಇನ್ನೊಂದು ಅವಧಿಗೆ ವಿಸ್ತರಿಸಲು ಕ್ಲಬ್ ಉತ್ಸುಕವಾಗಿಲ್ಲ ಎನ್ನಲಾಗಿದೆ.

‘ಒಪ್ಪಂದವನ್ನು ನವೀಕರಿಸುವುದಾಗಿದ್ದಲ್ಲಿ, ಈ ಹಿಂದೆಯೇ ಮಾಡಬೇಕಿತ್ತು’ ಎಂದು ಪಿಎಸ್‌ಜಿಯ ಮೂಲಗಳು ಹೇಳಿವೆ.

ಇನ್ನೂ ನಿರ್ಧರಿಸಿಲ್ಲ (ಬಾರ್ಸಿಲೋನಾ ವರದಿ): ಮುಂದಿನ ಋತುವಿನಲ್ಲಿ ಎಲ್ಲಿ ಆಡಬೇಕು ಎಂಬುದನ್ನು ಮೆಸ್ಸಿ ಇನ್ನೂ ನಿರ್ಧರಿಸಿಲ್ಲ ಎಂದು ಅವರ ತಂದೆ ಮತ್ತು ಏಜೆಂಟ್ ಕೂಡಾ ಆಗಿರುವ ಜಾರ್ಜ್ ಮೆಸ್ಸಿ ಹೇಳಿದ್ದಾರೆ.

‘ಮುಂದಿನ ಋತುವಿನಲ್ಲಿ ಆಡಲು ಯಾವ ಕ್ಲಬ್ ಜತೆಯೂ ಒಪ್ಪಂದ ಮಾಡಿಕೊಂಡಿಲ್ಲ. ಪಿಎಸ್‌ಜಿಯೊಂದಿಗಿನ ಒಪ್ಪಂದ ಕೊನೆಗೊಳ್ಳುವವರೆಗೂ ಯಾವುದೇ ತೀರ್ಮಾನ ತೆಗೆದುಕೊಳ್ಳುವುದಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

ಮೆಸ್ಸಿ, ಫ್ರೇಸರ್‌ಗೆ ಲಾರಿಯಸ್ ಗೌರವ



ಪ್ರಶಸ್ತಿಯೊಂದಿಗೆ ಮೆಸ್ಸಿ –ಎಎಫ್‌ಪಿ ಚಿತ್ರ

ಪ್ಯಾರಿಸ್ (ಎಪಿ): ಅರ್ಜೆಂಟೀನಾದ ಫುಟ್‌ಬಾಲ್ ಆಟಗಾರ ಲಯೊನೆಲ್ ಮೆಸ್ಸಿ ಅವರು ಪ್ರತಿಷ್ಠಿತ ‘ಲಾರಿಯಸ್ ವರ್ಷದ ಕ್ರೀಡಾಪಟು’ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಈ ಗೌರವ ಜಮೈಕದ ವೇಗದ ಓಟಗಾರ್ತಿ ಶೆಲ್ಲಿ ಆ್ಯನ್ ಫ್ರೇಸರ್ ಪ್ರೈಸ್ ಅವರಿಗೆ ಒಲಿದಿದೆ.

2022 ರಲ್ಲಿ ತೋರಿದ ಸಾಧನೆಯನ್ನು ಗುರುತಿಸಿ ಇಬ್ಬರನ್ನೂ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ಯಾರಿಸ್‌ನಲ್ಲಿ ಸೋಮವಾರ ರಾತ್ರಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೆಸ್ಸಿ ನೇತೃತ್ವದ ಅರ್ಜೆಂಟೀನಾ ತಂಡ 2022 ರಲ್ಲಿ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯನ್ನು ಗೆದ್ದುಕೊಂಡಿತ್ತು. ಮೆಸ್ಸಿ ಅವರು 2020 ರಲ್ಲಿ ಫಾರ್ಮುಲಾ 1 ಚಾಲಕ ಲೆವಿಸ್ ಹ್ಯಾಮಿಲ್ಟನ್ ಅವರೊಂದಿಗೆ ಜಂಟಿಯಾಗಿ ಈ ಗೌರವ ಪಡೆದುಕೊಂಡಿದ್ದರು.

ಶೆಲ್ಲಿ ಅವರು 2022ರ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ 100 ಮೀ. ಓಟದಲ್ಲಿ ಚಿನ್ನ ಗೆದ್ದಿದ್ದರಲ್ಲದೆ, ಐದನೇ ಬಾರಿ ಈ ಸಾಧನೆ ಮಾಡಿದ್ದರು.

ಸ್ಪೇನ್‌ನ ಯುವ ಟೆನಿಸ್ ಆಟಗಾರ ಕಾರ್ಲೋಸ್ ಅಲ್ಕರಾಜ್ ಅವರು ‘ಬ್ರೇಕ್‌ಥ್ರೂ ಆಫ್ ದಿ ಇಯರ್’ ಗೌರವಕ್ಕೆ ಪಾತ್ರರಾದರು.

ಶ್ರದ್ಧಾ ಹತ್ಯೆ: ದೋಷಾರೋಪ ನಿಗದಿ



ನವದೆಹಲಿ (ಪಿಟಿಐ): ಕಾಲ್‌ಸೆಂಟರ್ ಉದ್ಯೋಗಿ ಶ್ರದ್ಧಾ ವಾಲ್ಕರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಆರೋಪಿ ಆಫ್ತಾಬ್ ಅಮಿನ್ ಪೂನಾವಾಲ ವಿರುದ್ಧ ದೆಹಲಿಯ ನ್ಯಾಯಾಲಯವೊಂದು ಮಂಗಳವಾರ ದೋಷಾರೋಪ ನಿಗದಿಪಡಿಸಿತು.

ಮೇಲ್ನೋಟಕ್ಕೆ ಈ ಮೊಕದ್ದಮೆಯು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 302 (ಕೊಲೆ) ಮತ್ತು 201 (ಅಪರಾಧದ ಸಾಕ್ಷ್ಯನಾಶ) ಅಡಿ ಬರುತ್ತವೆ.

ಆರೋಪಿಯ ವಿರುದ್ಧ ಈ ಸೆಕ್ಷನ್‌ಗಳ ಅಡಿ ದೋಷಾರೋಪ ನಿಗದಿಪಡಿಸಲಾಗಿದೆ ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶೆ ಮನೀಶಾ ಖುರಾನ ಕಕ್ಕರ್ ಹೇಳಿದರು.

ಈ ಮೊಕದ್ದಮೆಗೆ ಸಂಬಂಧಿಸಿ ವಿವರವಾಗಿ ವಾದಗಳನ್ನು ಆಲಿಸಲಾಗಿದೆ. ಸರ್ಕಾರಿ ವಕೀಲರು ಸಾಕಷ್ಟು ದಾಖಲೆಗಳನ್ನು ನ್ಯಾಯಾಲಯದ ಎದುರು ಹಾಜರುಪಡಿಸಿದ್ದಾರೆ ಎಂದು ಅವರು ತಿಳಿಸಿದರು.

ಕಳೆದ ವರ್ಷ ಮೇ 18ರಂದು ಆಫ್ತಾಬ್ ಪೂನಾವಾಲಾ ತನ್ನ ಸಹಜೀವನ ಸಂಗಾತಿ ಶ್ರದ್ಧಾ ವಾಲ್ಕರ್ ಅವರನ್ನು ಹತ್ಯೆ ಮಾಡಿದ್ದಾನೆ. ಬಳಿಕ ಮೃತದೇಹವನ್ನು ತುಂಡರಿಸಿ ಮೇ 18ರಿಂದ 22ರ ವರೆಗೆ ದೆಹಲಿಯ ಹಲವಾರು ಸ್ಥಳಗಳಲ್ಲಿ ಎಸೆದಿದ್ದಾನೆ ಎಂದು ನ್ಯಾಯಾಧೀಶರು ಈ ವೇಳೆ ಹೇಳಿದರು.

ನ್ಯಾಯಾಲಯ ಹೊರಿಸಿರುವ ಆರೋಪಗಳು ಅರ್ಥವಾಗಿವೆಯೇ ಎಂದು ನ್ಯಾಯಾಲಯವು ಆಫ್ತಾಬ್‌ನನ್ನು ಪ್ರಶ್ನಿಸಿತು. ಅದಕ್ಕೆ ಉತ್ತರಿಸಿದ ಆತ, ‘ನ್ಯಾಯಾಲಯ ಹೊರಿಸಿರುವ ಆರೋಪಗಳು ನಿಜವಲ್ಲ. ಈ ಮೊಕದ್ದಮೆಯನ್ನು ಮತ್ತೊಮ್ಮೆ ವಿಚಾರಣೆಗೆ ಒಳಪಡಿಸಬೇಕು’ ಎಂದು ಹೇಳಿದ.

ಈ ಮೊಕದ್ದಮೆಯ ಮುಂದಿನ ವಿಚಾರಣೆಯನ್ನು ನ್ಯಾಯಾಲಯವು ಜೂನ್ 1ಕ್ಕೆ ನಿಗದಿಪಡಿಸಿತು.

ವಾಯು ದಾಳಿ: 13 ಜನರ ಸಾವು

ಗಾಜಾ ಸಿಟಿ (ಎ.ಪಿ): ಇಸ್ಲಾಮಿಕ್ ಜಿಹಾದ್ ಗುಂಪಿನ ವಸತಿ ನೆಲೆಯನ್ನು ಗುರಿಯಾಗಿಸಿ ಮಂಗಳವಾರ ಇಸ್ರೇಲ್ ಸೇನೆ ವಾಯುದಾಳಿ ನಡೆಸಿದ್ದು, ಗುಂಪಿನ ಮೂವರು ಹಿರಿಯ ಕಮಾಂಡರ್‌ಗಳು ಸೇರಿ 13 ಮಂದಿ ಮೃತಪಟ್ಟಿದ್ದಾರೆ ಎಂದು ಸೇನೆಯು ಹೇಳಿದೆ.

ಪ್ಯಾಲೆಸ್ಟೀನ್ ಆರೋಗ್ಯ ಇಲಾಖೆ ಅಧಿಕಾರಿಗಳ ಪ್ರಕಾರ, ವಾಯುದಾಳಿಯಲ್ಲಿ ಮೃತಪಟ್ಟವರಲ್ಲಿ ಮೂವರು ಕಮಾಂಡರ್‌ಗಳು, ಅವರ ಪತ್ನಿಯರು, ಮಕ್ಕಳು ಸೇರಿದ್ದಾರೆ.

ಗಾಜಾ ಸಿಟಿ ರಫಾ ಪಟ್ಟಣದ ವಸತಿ ಪ್ರದೇಶದಲ್ಲಿ ವಸತಿ ಸಂಕೀರ್ಣವನ್ನೇ ಗುರಿಯಾಗಿಸಿ ದಾಳಿ ನಡೆದಿದೆ. ಈ ಬೆಳವಣಿಗೆ ದೊಡ್ಡಪ್ರಮಾಣದಲ್ಲಿ ಗುಂಡಿನ ಚಕಮಕಿಗೂ ಪ್ರಚೋದನೆಯಾಗಿದೆ ಎಂದು ವರದಿ ತಿಳಿಸಿದೆ.

ಇಸ್ಲಾಮಿಕ್ ಜಿಹಾದ್ ಗುಂಪಿನ ಕಮಾಂಡರ್ ಖಲೀಸ್ ಬಹ್‌ಟಿನಿ, ಸಮೂಹದ ಗಾಜಾ ಮತ್ತು ವೆಸ್ಟ್ ಬ್ಯಾಂಕ್ ಸದಸ್ಯರ ನಡುವೆ ಸಂವಹನಕ್ಕೆ ನೆರವಾಗುತ್ತಿದ್ದ ತಾರೀಕ್ ಇಜೆಲ್‌ದೀನ್, ಇಸ್ಲಾಮಿಕ್ ಜಿಹಾದ್‌ನ ಮಿಲಿಟರಿ ಕೌನ್ಸಿಲ್‌ನ ಕಾರ್ಯದರ್ಶಿ ಜಿಹಾದ್ ಘಾನಂ ಮೃತಪಟ್ಟವರು.

ಇರಾನ್ ಬೆಂಬಲಿತ ಇಸ್ಲಾಮಿಕ್ ಜಿಹಾದ್ ಗ್ರೂಪ್ ಇವರು ಮೃತಪಟ್ಟಿರುವುದನ್ನು ದೃಢಪಡಿಸಿದೆ. ವಾಯುದಾಳಿಗೆ ಮುನ್ನ ಗಾಜಾ ಸಿಟಿಯಲ್ಲಿ 40 ಕಿ.ಮೀ. ಪರಿಧಿಯಲ್ಲಿ ನಿವಾಸಿಗಳಿಗೆ ಸುರಕ್ಷಿತ ಸ್ಥಳದಲ್ಲಿ ಆಶ್ರಯ ಪಡೆಯಲು ಸೂಚಿಸಲಾಗಿತ್ತು. ಜನ ಗುಂಪುಗೂಡದಂತೆ ನಿರ್ಬಂಧಿಸಲಾಗಿತ್ತೆಂದು ಸೇನೆ ಹೇಳಿದೆ.

ಪಶ್ಚಿಮ ರಾಷ್ಟ್ರಗಳ ಯುದ್ಧ: ಪುಟಿನ್ ಕಿಡಿ



ಮಾಸ್ಕೊ (ಎ.ಪಿ): ‘ಪಶ್ಚಿಮ ರಾಷ್ಟ್ರಗಳಿಂದ ರಷ್ಯಾದ ಮೇಲೆ ನಿಜವಾದ ಯುದ್ಧವನ್ನು ಸಾರಲಾಗಿದೆ’ ಎಂದು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಇಲ್ಲಿ ಆರೋಪಿಸಿದರು.

ಉಕ್ರೇನ್‌ನ ರಾಜಧಾನಿ ಕೀವ್ ಮತ್ತು ಇತರ ನಗರಗಳನ್ನು ಗುರಿಯಾಗಿಸಿ ರಷ್ಯಾದ ಸೇನೆಯು ಮಂಗಳವಾರ ಕ್ಷಿಪಣಿಗಳ ದಾಳಿ ನಡೆಸಿದ ಹಿಂದೆಯೇ ರಷ್ಯಾದ ಅಧ್ಯಕ್ಷರ ಈ ಹೇಳಿಕೆ ಬಂದಿದೆ.

ರಷ್ಯಾ ಸೇನೆಯು ಉಕ್ರೇನ್ ಅನ್ನು ಗುರಿಯಾಗಿಸಿ ಕ್ಷಿಪಣಿಗಳ ದಾಳಿ ನಡೆಸಿದ್ದು, ಉಕ್ರೇನ್‌ನ ಸೇನೆಯು ಇದನ್ನು ಎದುರಿಸಿದ್ದು ರಷ್ಯಾದ 23–25 ಕ್ಷಿಪಣಿಗಳನ್ನು ನಾಶಪಡಿಸಿದೆ ಎಂದು ಉಕ್ರೇನ್ ಪ್ರತಿಕ್ರಿಯಿಸಿದೆ.

ಪಶ್ಚಿಮ ರಾಷ್ಟ್ರಗಳ ಬೆದರಿಕೆಯಿಂದ ದೇಶ ರಕ್ಷಿಸಿಕೊಳ್ಳಲು ಉಕ್ರೇನ್ ಮೇಲಿನ ಅತಿಕ್ರಮಣ ಅನಿವಾರ್ಯ ಎಂದು ಪುಟಿನ್ ಈಗಾಗಲೇ ಉಕ್ರೇನ್ ಮೇಲಿನ ದಾಳಿ ಸಮರ್ಥಿಸಿಕೊಂಡಿದ್ದಾರೆ. ಆದರೆ, ಈ ಆರೋಪವನ್ನು ಉಕ್ರೇನ್ ಮತ್ತು ಅದಕ್ಕೆ ಬೆಂಬಲವಾಗಿ ನಿಂತಿರುವ ರಾಷ್ಟ್ರಗಳು ನಿರಾಕರಿಸಿವೆ.

ಎರಡನೇ ವಿಶ್ವಯುದ್ಧದಲ್ಲಿ ಜರ್ಮನಿಯನ್ನು ಸೋಲಿಸಿದ ನೆನಪಿಗಾಗಿ ಆಯೋಜಿಸಿದ್ದ ವಾರ್ಷಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಪುಟಿನ್ ಅವರು, ‘ದೇಶದ ನಾಗರಿಕತೆಯು ಮತ್ತೊಮ್ಮೆ ನಿರ್ಣಾಯಕ ತಿರುವಿನಲ್ಲಿದೆ. ರಷ್ಯಾ ವಿರುದ್ಧ ಪಶ್ಚಿಮ ರಾಷ್ಟ್ರಗಳು ನಿಜವಾದ ಯುದ್ಧ ಸಾರಿವೆ’ ಎಂದು ಹೇಳಿದರು.

ಮಾಸ್ಕೊದ ರೆಡ್ ಸ್ಕ್ವೈರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸುಮಾರು 8,000 ಯೋಧರು ಭಾವಹಿಸಿದ್ದರು.

2008ರ ನಂತರ ಇದು ಅತ್ಯಂತ ಕಡಿಮೆ ಹಾಜರಾತಿ. ಕೋವಿಡ್ ಅವಧಿಯಲ್ಲಿ 2020ರಲ್ಲಿ ನಡೆದಿದ್ದ ಪಥಸಂಚಲನದಲ್ಲಿಯೂ 13 ಸಾವಿರ ಯೋಧರು ಭಾಗವಹಿಸಿದ್ದರು ಎಂದು ವರದಿ ತಿಳಿಸಿದೆ.

‘ಗ್ಲೋಬಲ್ ನರ್ಸಿಂಗ್ ಪ್ರಶಸ್ತಿ’ ಸ್ಪರ್ಧೆ: ಭಾರತ ಮೂಲದ ಇಬ್ಬರು

ಲಂಡನ್ (ಪಿಟಿಐ): ಪ್ರತಿಷ್ಠಿತ ‘ಗ್ಲೋಬಲ್ ನರ್ಸಿಂಗ್ ಪ್ರಶಸ್ತಿ‘ ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಭಾರತ ಮೂಲದ ಇಬ್ಬರು ಶುಶ್ರೂಷಕಿಯರಿದ್ದಾರೆ. ಪ್ರಶಸ್ತಿ ಮೊತ್ತ 2.5 ಲಕ್ಷ ಡಾಲರ್ (ಸುಮಾರು ₹ 2.05 ಕೋಟಿ) ಆಗಿದೆ.

ದುಬೈನಲ್ಲಿ ಕೇಂದ್ರ ಕಚೇರಿ ಹೊಂದಿರುವ ಖಾಸಗಿ ಆರೋಗ್ಯ ಸೇವಾ ಸಂಸ್ಥೆ ಅಸ್ಟೇರ್ ಡಿ.ಎಂ ಹೆಲ್ತ್‌ಕೇರ್, ವಿಶ್ವಾದಾದ್ಯಂತ ಸಾಧಕ ಶುಶ್ರೂಷಕಿಯರನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡುತ್ತಿದೆ.

ಅಂಡಮಾನ್ ನಿಕೋಬಾರ್‌ನಲ್ಲಿ ಬುಡಕಟ್ಟು ಜನರ ಸೇವೆಯಲ್ಲಿ ನಿರತ ಶಾಂತಿ ತೆರೇಸಾ ಲಾಕ್ರಾ ಮತ್ತು ಕೇರಳ ಮೂಲದ ಐರ್ಲೆಂಡ್‌ನ ನಿವಾಸಿ ಜಿನ್ಸಿ ಜೆರ್ರಿ ಸೇರಿ ಸದ್ಯ ಪ್ರಶಸ್ತಿ ಅಂತಿಮ ಪಟ್ಟಿಯಲ್ಲಿ 10 ಮಂದಿ ಇದ್ದಾರೆ.

ಪ್ರಶಸ್ತಿ ಪುರಸ್ಕೃತರ ಪ್ರಕಟಣೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭವು ಅಂತರರಾಷ್ಟ್ರೀಯ ನರ್ಸ್‌ಗಳ ದಿನವಾದ ಮೇ 12ರಂದು ಲಂಡನ್‌ನಲ್ಲಿ ನಡೆಯಲಿದೆ ಎಂದು ಹೇಳಿಕೆ ತಿಳಿಸಿದೆ.



ಫಫ್ ಡುಪ್ಲೆಸಿ– ಗ್ಲೆನ್ ಮ್ಯಾಕ್ಸ್‌ವೆಲ್ ಆಟ ವ್ಯರ್ಥ: ಬೆಂಗಳೂರು ತಂಡದ ವಿರುದ್ಧ ಮುಂಬೈಗೆ ಆರು ವಿಕೆಟ್ ಜಯ

ಆರ್‌ಸಿಬಿಗೆ ‘ಸೂರ್ಯ’ ಆಘಾತ



ಸೂರ್ಯಕುಮಾರ್ ಯಾದವ್ (ಎಡ) ಮತ್ತು ನೇಹಲ್ ವಡೇರಾ– ಎಎಫ್‌ಪಿ ಚಿತ್ರ

ಮುಂಬೈ (ಪಿಟಿಐ): ಸೂರ್ಯಕುಮಾರ್ ಯಾದವ್ ಅಬ್ಬರದ ಬ್ಯಾಟಿಂಗ್ ಮುಂದೆ ಫಫ್ ಡುಪ್ಲೆಸಿ ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ ಆಟ ವ್ಯರ್ಥವಾಯಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವು ಆರು ವಿಕೆಟ್‌ಗಳಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಗೆದ್ದಿತು.

ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿಯು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 199 ರನ್ ಗಳಿಸಿತು. ರೋಹಿತ್ ಶರ್ಮಾ ಬಳಗ 16.3 ಓವರ್‌ಗಳಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು ಗೆಲುವು ಸಾಧಿಸಿತು. ಈ ಸೋಲಿನಿಂದ ಆರ್‌ಸಿಬಿಯ ಪ್ಲೇ ಆಫ್ ಪ್ರವೇಶದ ಹಾದಿ ಮತ್ತಷ್ಟು ಕಠಿಣವಾಗಿದೆ. ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ ಏಳನೇ ಸ್ಥಾನಕ್ಕೆ ಕುಸಿಯಿತು. ಮುಂಬೈ ಈ ಗೆಲುವಿನೊಂದಿಗೆ ಮೂರನೇ ಸ್ಥಾನಕ್ಕೇರಿತು.

ಗುರಿ ಬೆನ್ನತ್ತಿದ ಮುಂಬೈ ತಂಡಕ್ಕೆ ಇಶಾನ್ ಕಿಶನ್ (42, 21ಎ) ಹಾಗೂ ರೋಹಿತ್ ಮೊದಲ ವಿಕೆಟ್ ಜೊತೆಯಾಟದಲ್ಲಿ 28 ಎಸೆತಗಳಲ್ಲಿ 51 ರನ್ ಸೇರಿಸಿದರು. ಇನಿಂಗ್ಸ್‌ನ 5ನೇ ಓವರ್‌ನಲ್ಲಿ ವಣಿಂದು ಹಸರಂಗ (53ಕ್ಕೆ 2) ಇವರಿಬ್ಬರ ವಿಕೆಟ್ ಕಬಳಿಸಿದರು.

ಆದರೆ ಸೂರ್ಯಕುಮಾರ್ (83, 35ಎ) ಹಾಗೂ ನೇಹಲ್ ವಡೇರಾ (52, 34ಎ) ಬೀಸಾಟವಾಡಿ ತಂಡದ ಗೆಲುವನ್ನು ಸುಲಭವಾಗಿಸಿದರು. 3ನೇ ವಿಕೆಟ್ ಜೊತೆಯಾಟಕ್ಕೆ ಇವರಿಬ್ಬರ ಬ್ಯಾಟಿಂಗ್‌ನಿಂದ ಕೇವಲ 66 ಎಸೆತಗಳಲ್ಲಿ 140 ರನ್ ಹರಿದು ಬಂದವು.

ಬೆಂಗಳೂರು ಪರ ವಿಜಯಕುಮಾರ್ ವೈಶಾಖ 2 ವಿಕೆಟ್ ಗಳಿಸಿದರು.

ಡುಪ್ಲೆಸಿ- ಮ್ಯಾಕ್ಸ್‌ವೆಲ್ ಆಟ ವ್ಯರ್ಥ: ಟಾಸ್ ಗೆದ್ದ ಮುಂಬೈ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಡುಪ್ಲೆಸಿ (65; 41ಎ) ಹಾಗೂ ಮ್ಯಾಕ್ಸ್ ವೆಲ್ (68; 33ಎ) ಅವರ ಅಬ್ಬರದ ಬ್ಯಾಟಿಂಗ್‌ನಿಂದಾಗಿ ಆರ್‌ಸಿಬಿಯು ಉತ್ತಮ ಮೊತ್ತ ಕಲೆಹಾಕಿತ್ತು.

ಬೆಂಗಳೂರು ತಂಡಕ್ಕೆ ಉತ್ತಮ ಆರಂಭ ಲಭಿಸಲಿಲ್ಲ. ಮೊದಲ ಓವರ್‌ನಲ್ಲಿಯೇ ಮುಂಬೈ ತಂಡದ ವೇಗಿ ಜೇಸನ್ ಬೆಹ್ರನ್‌ಡಾರ್ಫ್ ಅವರು ವಿರಾಟ್ ಕೊಹ್ಲಿಯ ವಿಕೆಟ್ ಗಳಿಸಿದರು. ಇದೇ ಓವರ್‌ನ ನಾಲ್ಕನೇ ಎಸೆತದಲ್ಲಿ ಫಫ್ ಅವರ ಕ್ಯಾಚ್ ಬಿಟ್ಟ ಮಿಡ್‌ವಿಕೆಟ್ ಫೀಲ್ಡರ್ ನೆಹಲ್ ವಡೇರಾ ಅವರಿಂದಾಗಿ ಮುಂಬೈ ಪರಿತಪಿಸುವಂತಾಯಿತು.

ತಂಡವು 16 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿದ್ದ ಹೊತ್ತಿನಲ್ಲಿ ಫಫ್ ಜೊತೆಗೂಡಿದ ಗ್ಲೆನ್ ಮ್ಯಾಕ್ಸ್‌ವೆಲ್ ಇನಿಂಗ್ಸ್ ಚಿತ್ರಣವನ್ನೇ ಬದಲಿಸಿಬಿಟ್ಟರು.

ಆಸ್ಟ್ರೇಲಿಯಾ ಬ್ಯಾಟರ್ ಗ್ಲೆನ್ 206ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು. ಎಂಟು ಬೌಂಡರಿ ಹಾಗೂ ನಾಲ್ಕು ಸಿಕ್ಸರ್‌ಗಳ ಚಿತ್ತಾರ ಬಿಡಿಸಿದರು. ಟೂರ್ನಿಯಲ್ಲಿ ನಾಲ್ಕನೇ ಅರ್ಧಶತಕ ದಾಖಲಿಸಿದರು. ಫಫ್ ಕೂಡ ಆರನೇ ಅರ್ಧಶತಕ ಗಳಿಸಿದರು.

ಇಬ್ಬರೂ ಸೇರಿ ಮೂರನೇ ವಿಕೆಟ್‌ಗೆ 120 ರನ್‌ಗಳನ್ನು ಸೇರಿಸಿದರು. 13ನೇ ಓವರ್‌ನಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ವಿಕೆಟ್ ಗಳಿಸಿದ ಬೆಹ್ರನ್‌ಡಾರ್ಫ್ ಅವರೇ ಈ ಜೊತೆಯಾಟ ಮುರಿದರು. ಮಹಿಪಾಲ್ ಲೊಮ್ರೊರ್ ಆಟ ಇಲ್ಲಿ ನಡೆಯಲಿಲ್ಲ. ಕುಮಾರ ಕಾರ್ತಿಕೇಯ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆಗಿ ನಿರ್ಗಮಿಸಿದರು. ನಂತರದ ಓವರ್‌ನಲ್ಲಿ ಡುಪ್ಲೆಸಿ ಕೂಡ ಔಟಾದರು.

ಟೂರ್ನಿಯಲ್ಲಿ ಸತತ ವೈಫಲ್ಯ ಅನುಭವಿಸಿದ್ದ ದಿನೇಶ್ ಕಾರ್ತಿಕ್ (30; 18ಎ) ಇಲ್ಲಿ ಮಿಂಚಿದರು. ಅವರಿಗೆ 17ನೇ ಓವರ್‌ನಲ್ಲಿ ಲಾಂಗ್ ಆಫ್ ಫೀಲ್ಡರ್ ಕ್ಯಾಮರಾನ್ ಗ್ರೀನ್ ಕ್ಯಾಚ್ ಕೈಚೆಲ್ಲಿದರು. ಇದರ ಲಾಭ ಪಡೆಯುವಲ್ಲಿ ದಿನೇಶ್ ಯಶಸ್ವಿಯಾದರು. ‘ಇಂಪ್ಯಾಕ್ಟ್ ಪ್ಲೇಯರ್’ ಕೇದಾರ್ ಜಾಧವ್ ಹಾಗೂ ವಣಿಂದು ಹಸರಂಗಾ ತಲಾ 12 ರನ್ ಗಳಿಸಿ ತಂಡದ ಮೊತ್ತವನ್ನು ಹೆಚ್ಚಿಸಿದರು.

ಕಾರ್ತಿಕ್‌ಗೆ ಅನಾರೋಗ್ಯ: ಬೆಂಗಳೂರು ಇನಿಂಗ್ಸ್ ವೇಳೆ ಔಟಾಗಿ ಪೆವಿಲಿಯನ್‌ಗೆ ಮರಳುವಾಗ ದಿನೇಶ್ ಕಾರ್ತಿಕ್ ಅವರಿಗೆ ಕೆಮ್ಮು ಕಾಡಿತು. ಅಸ್ವಸ್ಥರಾದಂತೆ ಕಂಡುಬಂದ ಅವರ ಬದಲಿಗೆ ಅನುಜ್ ರಾವತ್ ಕೀಪಿಂಗ್ ಮಾಡಿದರು.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 6ಕ್ಕೆ 199 (20 ಓವರ್)

ಕೊಹ್ಲಿ ಸಿ ಇಶಾನ್ ಬಿ ಬೆಹ್ರೆನ್‌ಡಾರ್ಫ್ 1 (4 ಎ)
ಡುಪ್ಲೆಸಿ ಸಿ ಸಬ್ (ವಿಷ್ಣು) ಬಿ ಗ್ರೀನ್ 65 (41 ಎ., 4X5, 6X3)
ಅನುಜ್ ಸಿ ಗ್ರೀನ್ ಬಿ ಬೆಹ್ರೆನ್‌ಡಾರ್ಫ್ 6 (4 ಎ., 4X1)
ಮ್ಯಾಕ್ಸ್‌ವೆಲ್ ಸಿ ವಡೇರಾ ಬಿ ಬೆಹ್ರೆನ್‌ಡಾರ್ಫ್ 68 (33 ಎ., 4X8, 6X4)
ಮಹಿಪಾಲ್ ಬಿ ಕಾರ್ತಿಕೇಯ 1 (3 ಎ)
ಕಾರ್ತಿಕ್ ಸಿ ವಡೇರಾ ಬಿ ಜೋರ್ಡನ್ 30 (18 ಎ., 4X4, 6X1)
ಕೇದಾರ್ ಜಾಧವ್ ಔಟಾಗದೆ 12 (10 ಎ., 4X1)
ಹಸರಂಗ ಔಟಾಗದೆ 12 (8 ಎ., 4X2)
ಇತರೆ: 4 (ಲೆಗ್ ಬೈ 1, ನೋಬಾಲ್ 1, ವೈಡ್ 2)
ವಿಕೆಟ್ ಪತನ: 1–2 (ವಿರಾಟ್ ಕೊಹ್ಲಿ; 0.5), 2–16 (ಅನುಜ್ ರಾವತ್; 2.2), 3–136 (ಗ್ಲೆನ್ ಮ್ಯಾಕ್ಸ್‌ವೆಲ್; 12.3), 4–143 (ಮಹಿಪಾಲ್ ಲೊಮ್ರೊರ್; 13.4), 5–146 (ಫಫ್ ಡುಪ್ಲೆಸಿ; 14.1), 6–185 (ದಿನೇಶ್ ಕಾರ್ತಿಕ್; 18.1)
ಬೌಲಿಂಗ್: ಜೇಸನ್ ಬೆಹ್ರೆನ್‌ಡಾರ್ಫ್ 4–0–36–3, ಪೀಯೂಷ್ ಚಾವ್ಲಾ 4–0–41–0, ಕ್ಯಾಮರಾನ್ ಗ್ರೀನ್ 2–0–15–1, ಕ್ರಿಸ್ ಜೋರ್ಡನ್ 4–0–48–1, ಕುಮಾರ್ ಕಾರ್ತಿಕೇಯ 4–0–35–1, ಆಕಾಶ್ ಮಧ್ವಾಲ್ 2–0–23–0

ಮುಂಬೈ ಇಂಡಿಯನ್ಸ್ 4ಕ್ಕೆ 200 (16.3 ಓವರ್)

ಇಶಾನ್ ಸಿ ರಾವತ್ ಬಿ ಹಸರಂಗ 42 (21 ಎ., 4X4, 6X4)
ರೋಹಿತ್ ಎಲ್‌ಬಿಡಬ್ಲ್ಯು ಬಿ ಹಸರಂಗ 7 (8 ಎ., 4X1)
ಸೂರ್ಯಕುಮಾರ್ ಸಿ ಜಾಧವ್ ಬಿ ವೈಶಾಖ್ 83 (35 ಎ., 4X7, 6X6)
ನೇಹಲ್ ವಡೇರಾ ಔಟಾಗದೆ 52 (34 ಎ., 4X4, 6X3)
ಡೇವಿಡ್ ಸಿ ಮ್ಯಾಕ್ಸ್‌ವೆಲ್ ಬಿ ವೈಶಾಖ್ 0 (1 ಎ)
ಗ್ರೀನ್ ಔಟಾಗದೆ 2 (2 ಎ)
ಇತರೆ: 14 (ಲೆಗ್ ಬೈ 6, ನೋಬಾಲ್ 2, ವೈಡ್ 6)
ವಿಕೆಟ್ ಪತನ: 1–51 (ಇಶಾನ್ ಕಿಶನ್; 4.4), 2–52 (ರೋಹಿತ್ ಶರ್ಮಾ; 4.6), 3–192 (ಸೂರ್ಯಕುಮಾರ್ ಯಾದವ್; 15.4), 4–192 (ಟಿಮ್ ಡೇವಿಡ್; 15.5)
ಬೌಲಿಂಗ್: ಮೊಹಮ್ಮದ್ ಸಿರಾಜ್ 3–0–31–0, ಜೋಶ್ ಹ್ಯಾಜಲ್‌ವುಡ್ 3–0–32–0, ವನಿಂದು ಹಸರಂಗ 4–0–53–2, ವೈಶಾಖ್ ವಿಜಯಕುಮಾರ್ 3–0–37–2, ಹರ್ಷಲ್ ಪಟೇಲ್ 3.3–0–41–0
ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 6 ವಿಕೆಟ್ ಗೆಲುವು

ಮುಂಬೈ ತಂಡಕ್ಕೆ ಕ್ರಿಸ್ ಜೋರ್ಡನ್

ನವದೆಹಲಿ (ಪಿಟಿಐ): ಮುಂಬೈ ಇಂಡಿಯನ್ಸ್ ತಂಡವು ಇಂಗ್ಲೆಂಡ್‌ನ ವೇಗದ ಬೌಲರ್ ಜೋಫ್ರಾ ಆರ್ಚರ್ ಬದಲು ಅದೇ ದೇಶದ ಇನ್ನೊಬ್ಬ ವೇಗಿ ಕ್ರಿಸ್ ಜೋರ್ಡನ್ ಅವರಿಗೆ ಸ್ಥಾನ ನೀಡಿದೆ.

ಫಿಟ್‌ನೆಸ್ ಸಮಸ್ಯೆ ಎದುರಿಸುತ್ತಿರುವ ಜೋಫ್ರಾ ಅವರು ಐಪಿಎಲ್‌ನ ಇನ್ನುಳಿದ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಮುಂಬೈ ಫ್ರಾಂಚೈಸ್, ಹರಾಜಿನಲ್ಲಿ ₹ 8 ಕೋಟಿ ನೀಡಿ ಅವರನ್ನು ತಂಡಕ್ಕೆ ಸೇರಿಸಿಕೊಂಡಿತ್ತು. ಈ ಆವೃತ್ತಿಯಲ್ಲಿ ಐದು ಪಂದ್ಯಗಳನ್ನು ಆಡಿರುವ ಅವರು ಎರಡು ವಿಕೆಟ್ ಮಾತ್ರ ಪಡೆದಿದ್ದಾರೆ.

ಜೋಫ್ರಾ ಬೆನ್ನು ನೋವಿನ ಕಾರಣ ಸುಮಾರು 2 ವರ್ಷ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ದೂರವುಳಿದಿದ್ದರು.

ಜೋರ್ಡನ್ ಅವರಿಗೆ ಮುಂಬೈ ತಂಡ ₹ 2 ಕೋಟಿ ನೀಡಲಿದೆ.

ನಿತೀಶ್ ರಾಣಾಗೆ ₹ 12 ಲಕ್ಷ ದಂಡ

ನವದೆಹಲಿ(ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಾಯಕ ನಿತೀಶ್ ರಾಣಾ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿದೆ.

ಈಡನ್ ಗಾರ್ಡನ್‌ನಲ್ಲಿ ನಡೆದ ಪಂಜಾಬ್ ಕಿಂಗ್ಸ್ ಎದುರಿನ ಪಂದ್ಯದಲ್ಲಿ ಕೋಲ್ಕತ್ತ ನಿಗದಿಯ ವೇಳೆಯಲ್ಲಿ ಓವರ್‌ಗಳನ್ನು ಪೂರೈಸುವಲ್ಲಿ ವಿಫಲವಾಗಿತ್ತು. ಐಪಿಎಲ್ ನಿಯಮದಡಿಯಲ್ಲಿ ಕನಿಷ್ಠ ಓವರ್ ರೇಟ್ ಲೋಪವೆಂದು ಪರಿಗಣಿಸಲಾಗಿದೆ. ಇದರಿಂದಾಗಿ ತಂಡದ ನಾಯಕನಿಗೆ ದಂಡ ವಿಧಿಸಲಾಗಿದೆ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	11	8	3	0	16	0.951
ಚೆನ್ನೈ	11	6	4	1	13	0.409
ಮುಂಬೈ	11	6	5	0	12	-0.255
ಲಖನೌ	11	5	5	1	11	0.294
ರಾಜಸ್ಥಾನ	11	5	6	0	10	0.388
ಕೋಲ್ಕತ್ತ	11	5	6	0	10	-0.079
ಬೆಂಗಳೂರು	11	5	6	0	10	-0.345
ಪಂಜಾಬ್	11	5	6	0	10	-0.441
ಹೈದರಾಬಾದ್	10	4	6	0	8	-0.472
ಡೆಲ್ಲಿ	10	4	6	0	8	-0.529

ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	19

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	576

ಚೆನ್ನೈ ಸೂಪರ್ ಕಿಂಗ್ಸ್ – ಡೆಲ್ಲಿ ಕ್ಯಾಪಿಟಲ್ಸ್ ಪಡೆಗಳ ಮುಖಾಮುಖಿ ಇಂದು

ಪ್ಲೇ ಆಫ್ ಮೇಲೆ ಧೋನಿ ಬಳಗದ ಕಣ್ಣು



ಮಹೇಂದ್ರ ಸಿಂಗ್ ಧೋನಿ ಅಭ್ಯಾಸ– ಪಿಟಿಐ ಚಿತ್ರ

ಚೆನ್ನೈ(ಪಿಟಿಐ): ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ಬುಧವಾರ ತನ್ನ ತವರಿನಂಗಳದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ವಿರುದ್ಧ ಸೆಣಸಲಿದೆ.

ಚೆನ್ನೈ ತಂಡವು ಅಂಕಪಟ್ಟಿಯಲ್ಲಿ 13 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಆದರೂ ಮೈಮರೆಯುವಂತಿಲ್ಲ. ಚೆನ್ನೈ ತಂಡವು ಇನ್ನುಳಿದಿರುವ ತನ್ನ ಪಾಲಿನ ಮೂರು ಪಂದ್ಯಗಳಲ್ಲಿ ಎರಡು ಬಾರಿ ಡೆಲ್ಲಿಯನ್ನು ಎದುರಿಸಲಿದೆ. ಇದೇ 20ರಂದು ದೆಹಲಿಯಲ್ಲಿ ನಡೆಯುವ ಪಂದ್ಯದಲ್ಲಿ ಉಭಯ ತಂಡಗಳು ಮತ್ತೆ ಮುಖಾಮುಖಿಯಾಗಲಿವೆ. ಇದಕ್ಕೂ ಮುನ್ನ ಇನ್ನೊಂದು ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಚೆನ್ನೈ ಆಡುವುದು.

ಡೆಲ್ಲಿ ತಂಡಕ್ಕೆ ಪ್ಲೇ ಆಫ್ ಪ್ರವೇಶಿಸುವ ಹಾದಿ ಬಹುತೇಕ ಮುಚ್ಚಿದೆ. ಆದರೆ ಕೊನೆಯ ಸ್ಥಾನದಲ್ಲಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಈಚೆಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ ಆಘಾತ ನೀಡಿತ್ತು. ಇದರಿಂದಾಗಿ ಧೋನಿ ಬಳಗವು ಡೇವಿಡ್ ವಾರ್ನರ್ ಪಡೆಯನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ತನ್ನ ಜಯದ ಲಯವನ್ನು ಮುಂದುವರಿಸುವ ಅಗತ್ಯವಿದೆ.

ಚೆನ್ನೈ ತಂಡವು ತನ್ನ ಈಚಿನ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಜಯಿಸಿತ್ತು. ಬೌಲಿಂಗ್ ವಿಭಾಗದ ಲೋಪವು ಸುಧಾರಣೆಯಾಗಿರುವ ಅಂಶವು ಆ ಪಂದ್ಯದಲ್ಲಿ ಎದ್ದುಕಂಡಿತ್ತು. ಮಥೀಷ್ ಪಥಿರಾಣಾ, ತುಷಾರ್ ದೇಶಪಾಂಡೆ, ದೀಪಕ್ ಚಾಹರ್ ಹಾಗೂ ಅನುಭವಿ ಸ್ಪಿನ್ನರ್ ರವೀಂದ್ರ ಜಡೇಜ ಅವರು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಆದರೆ ಚೆನ್ನೈ ಬೌಲಿಂಗ್ ಪಡೆಗೆ ಡೆಲ್ಲಿ ತಂಡದ ಆರಂಭಿಕ ಬ್ಯಾಟರ್ ಫಿಲ್ ಸಾಲ್ಟ್, ವಾರ್ನರ್, ಮಿಚೆಲ್ ಮಾರ್ಷ್ ಮತ್ತು ರಿಲಿ ರುಸೊ ಅವರು ಕಠಿಣ ಸವಾಲೊಡ್ಡುವ ಸಾಧ್ಯತೆ ಇದೆ.

ಡೆಲ್ಲಿ ತಂಡದ ಬೌಲರ್‌ಗಳಾದ ಇಶಾಂತ್ ಶರ್ಮಾ, ಮುಕೇಶ್ ಕುಮಾರ್ ಹಾಗೂ ಕುಲದೀಪ್ ಯಾದವ್ ಅವರಿಗೆ ಚೆನ್ನೈ ಬ್ಯಾಟರ್‌ಗಳನ್ನು ಕಟ್ಟಿಹಾಕುವುದು ಕಠಿಣ ಸವಾಲಾಗಬಹುದು.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ಬಾಕ್ಸಿಂಗ್: ಕ್ವಾರ್ಟರ್‌ಗೆ ನಿಶಾಂತ್



ನಿಶಾಂತ್ ದೇವ್

ತಾಷ್ಕೆಂಟ್, ಉಜ್ಬೆಕಿಸ್ತಾನ (ಪಿಟಿಐ): ಗೆಲುವಿನ ಓಟ ಮುಂದುವರಿಸಿದ ಭಾರತದ ದೀಪಕ್ ಭೋರಿಯಾ ಹಾಗೂ ನಿಶಾಂತ್ ದೇವ್ ಅವರು ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 51 ಕೆಜಿ ವಿಭಾಗದ 16ರ ಘಟ್ಟದ ಬೌಟ್‌ನಲ್ಲಿ ದೀಪಕ್ 5-0ಯಿಂದ ಚೀನಾದ ಜಾಂಗ್ ಜಿಯಮಾವೊ ಅವರನ್ನು ಪರಾಭವಗೊಳಿಸಿದರು..

ನಿಶಾಂತ್ (71 ಕೆಜಿ) ಪ್ರೀ-ಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ಆರ್‌ಎಸ್‌ಸಿ (ರೆಫರಿಯಿಂದ ಪಂದ್ಯ ಸ್ಥಗಿತ) ಆಧಾರದಲ್ಲಿ ಪ್ಯಾಲೆಸ್ಟೀನ್‌ನ ಫೊಕಹಾ ನಿಡಾಲ್ ಅವರನ್ನು ಮಣಿಸಿದರು.

ರಾಜ್ಯ ರ‍್ಯಾಂಕಿಂಗ್ ಟಿಟಿ 18ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯು (ಕೆಟಿಟಿಎ) ಇದೇ 18ರಿಂದ 21ರವರೆಗೆ ರಾಜ್ಯ ರ‍್ಯಾಂಕಿಂಗ್ ಟೂರ್ನಿಯನ್ನು ಆಯೋಜಿಸಲಿದೆ. ಕಂಠೀರವ ಕ್ರೀಡಾಂಗಣದಲ್ಲಿ 11, 13, 15, 17 ಮತ್ತು 19 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗಗಳಲ್ಲಿ ಟೂರ್ನಿ ನಡೆಯಲಿದೆ. :https:// karnatakatt.web.app/ home ಮೂಲಕ ನೋಂದಾಯಿಸಿಕೊಳ್ಳಬಹುದು. ನೋಂದಣಿಗೆ ಇದೇ 14 ಕೊನೆಯ ದಿನವಾಗಿದ್ದು, ಮುಖ್ಯ ರೆಫರಿ ಸಿ. ಗುಣಲನ್ (ದೂ.ಸಂ. 94481 27447) ಅವರನ್ನು ಸಂಪರ್ಕಿಸಬಹುದು ಎಂದು ಕೆಟಿಟಿಎ ಕಾರ್ಯದರ್ಶಿ ಟಿ.ಜಿ.ಉಪಾಧ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫಖರ್, ಚೈವಾಯ್‌ಗೆ ಐಸಿಸಿ ಪ್ರಶಸ್ತಿ

ದುಬೈ (ಪಿಟಿಐ): ಪಾಕಿಸ್ತಾನದ ಬ್ಯಾಟರ್ ಫಖರ್ ಜಮಾನ್ ಮತ್ತು ಥಾಯ್ಲೆಂಡ್ ಕ್ರಿಕೆಟ್ ತಂಡದ ನಾಯಕಿ ನರುಮೊಲ್ ಚೈವಾಯ್ ಅವರು ಐಸಿಸಿಯ ‘ತಿಂಗಳ ಆಟಗಾರರು’ ಗೌರವ ಪಡೆದುಕೊಂಡಿದ್ದಾರೆ.

ಏಪ್ರಿಲ್ ತಿಂಗಳಿನಲ್ಲಿ ನೀಡಿದ ಪ್ರದರ್ಶನವು ಇಬ್ಬರಿಗೂ ಈ ಗೌರವ ತಂದುಕೊಟ್ಟಿದೆ. ನ್ಯೂಜಿಲೆಂಡ್ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಯಲ್ಲಿ ಫಖರ್ ಅವರು ಸತತ ಎರಡು ಶತಕ ಗಳಿಸಿದ್ದರು. ರಾವಲ್ಪಿಂಡಿಯಲ್ಲಿ ನಡೆದಿದ್ದ ಮೊದಲ ಎರಡು ಪಂದ್ಯಗಳಲ್ಲಿ ಕ್ರಮವಾಗಿ 117 ಹಾಗೂ 180 ರನ್ ಪೇರಿಸಿದ್ದರು.

ಚೈವಾಯ್ ಅವರು ಜಿಂಬಾಬ್ವೆ ವಿರುದ್ಧದ ಮಹಿಳಾ ಏಕದಿನ ಕ್ರಿಕೆಟ್ ಸರಣಿಯಲ್ಲಿ ಥಾಯ್ಲೆಂಡ್ ತಂಡಕ್ಕೆ 3-0 ರಲ್ಲಿ ಐತಿಹಾಸಿಕ ಗೆಲುವು ತಂದುಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮೊದಲ ಪಂದ್ಯದಲ್ಲಿ ಅಜೇಯ 57 ಹಾಗೂ ಮೂರನೇ ಪಂದ್ಯದಲ್ಲಿ 52 ರನ್ ಗಳಿಸಿದ್ದರು.

ಏಷ್ಯಾಕಪ್ ಸ್ಥಳಾಂತರ: ಪಿಸಿಬಿ ವಿರೋಧ

ಕರಾಚಿ (ಪಿಟಿಐ): ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯನ್ನು ಪಾಕಿಸ್ತಾನದ ಬದಲು ಶ್ರೀಲಂಕಾದಲ್ಲಿ ನಡೆಸುವುದಕ್ಕೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ವಿರೋಧ ವ್ಯಕ್ತಪಡಿಸಿದೆ.

ಪಿಸಿಬಿ ಮುಖ್ಯಸ್ಥ ನಜಮ್ ಸೇಥಿ ಅವರು ಮಂಗಳವಾರ ದುಬೈನಲ್ಲಿ ಎಸಿಸಿ ಅಧಿಕಾರಿಗಳನ್ನು ಭೇಟಿ ಮಾಡಿ ಈ ಕುರಿತು ಮಾತುಕತೆ ನಡೆಸಿದ್ದಾರೆ. ತಾನು ಮುಂದಿಟ್ಟಿರುವ ‘ಹೈಬ್ರಿಡ್ ಮಾದರಿ’ಯನ್ನು ತಿರಸ್ಕರಿಸಿದರೆ, ಏಷ್ಯಾ ಕಪ್ ಟೂರ್ನಿಯನ್ನು ಬಹಿಷ್ಕರಿಸುವ ಚಿಂತನೆಯನ್ನೂ ಮಾಡಿದೆ.

‘ಏಷ್ಯಾ ಕಪ್ ಟೂರ್ನಿಯ ಆತಿಥ್ಯಕ್ಕೆ ಸಂಬಂಧಿಸಿದಂತೆ ಹೈಬ್ರಿಡ್ ಮಾದರಿಯನ್ನು ಎಸಿಸಿ ಒಪ್ಪಿಕೊಳ್ಳಬೇಕು. ಆದರೆ ಹೆಚ್ಚಿನ ಸದಸ್ಯ ರಾಷ್ಟ್ರಗಳು ವಿರೋಧಿಸಿದರೆ, ಯುಎಇನಲ್ಲಿ ಆಯೋಜಿಸಬೇಕು’ ಎಂದು ಸೇಥಿ ಹೇಳಿದ್ದಾರೆ.

ಏಷ್ಯಾಕಪ್ ಟೂರ್ನಿಗೆ ಭಾರತ ತಂಡವನ್ನು ಪಾಕಿಸ್ತಾನಕ್ಕೆ ಕಳುಹಿಸುವುದಿಲ್ಲ ಎಂದು ಬಿಸಿಸಿಐ ಹೇಳಿತ್ತು. ಅದಕ್ಕೆ ಪಿಸಿಬಿಯು ‘ಹೈಬ್ರಿಡ್ ಮಾದರಿ’ಯನ್ನು ಮುಂದಿಟ್ಟಿತ್ತು.

ಸಂಕ್ಷಿಪ್ತ ಸುದ್ದಿ

ವಿಶ್ವಕಪ್ ಶೂಟಿಂಗ್ ಟೂರ್ನಿ ಇಂದಿನಿಂದ

ಬಾಕು (ಅಜರ್‌ಬೈಜಾನ್) (ಪಿಟಿಐ): ಐಎಸ್‌ಎಸ್‌ಎಫ್ ವಿಶ್ವಕಪ್ (ಪಿಸ್ತೂಲ್ ಮತ್ತು ರೈಫಲ್) ಕೂಟ ಬುಧವಾರ ಇಲ್ಲಿ ಆರಂಭವಾಗಲಿದ್ದು, ಭಾರತದ ಸ್ಪರ್ಧಿಗಳು ಉತ್ತಮ ಸಾಧನೆಯ ನಿರೀಕ್ಷೆಯಲ್ಲಿದ್ದಾರೆ.

ಸರಬ್ಜೋತ್ ಸಿಂಗ್, ಶಿವ ನರ್ವಾಲ್ ಮತ್ತು ವರುಣ್ ತೋಮರ್ ಪುರುಷರ ವಿಭಾಗದಲ್ಲಿ, ದಿವ್ಯಾ ಟಿ.ಎಸ್., ಇಶಾ ಸಿಂಗ್ ಮತ್ತು ರಿದಮ್ ಸಂಗ್ವಾನ್ ಮಹಿಳೆಯರ ವಿಭಾಗದಲ್ಲಿ ಪದಕಗಳ ವಿಶ್ವಾಸ ಹೊಂದಿದ್ದಾರೆ. ಮೊದಲ ದಿನ 10 ಮೀ. ಏರ್‌ಪಿಸ್ತೂಲ್ ಸ್ಪರ್ಧೆ ನಡೆಯಲಿದೆ. 34 ಮಂದಿ ಸ್ಪರ್ಧಿಗಳ ಭಾರತ ತಂಡಕ್ಕೆ ಇದು ವಿಶ್ವ ಚಾಂಪಿಯನ್‌ಷಿಪ್‌ಗೆ ಮುನ್ನ ಕೊನೆಯ ಅಂತರರಾಷ್ಟ್ರೀಯ ಸ್ಪರ್ಧೆಯಾಗಿದೆ. ವಿಶ್ವ ಚಾಂಪಿಯನ್‌ಷಿಪ್ ಆಗಸ್ಟ್ 14 ರಿಂದ ಸೆ. 1ರವರೆಗೆ ಇಲ್ಲಿಯೇ ನಿಗದಿಯಾಗಿದೆ.

ಗಾಲ್ಫ್ ಟೂರ್ನಿ: ಬಿಜಿಸಿಗೆ ಜಯ

ಬೆಂಗಳೂರು: ಆತಿಥೇಯ ಬೆಂಗಳೂರು ಗಾಲ್ಫ್ ಕ್ಲಬ್ (ಬಿಜಿಸಿ) ತಂಡವು ಅಂತರ ಕ್ಲಬ್ ಎರಡನೇ ಪಂದ್ಯದಲ್ಲಿ ಗೆಲುವು ಸಾಧಿಸಿತು.

ಬಿಜಿಸಿಯು 11–1/2, 6–1/2 ರಿಂದ ಪಿಲಿಕುಳ ಗಾಲ್ಫ್ ಕ್ಲಬ್ ಎದುರು ಜಯಿಸಿತು. ಇನ್ನೊಂದು ಪಂದ್ಯದಲ್ಲಿ ಪಿಲಿಕುಳ ಫೆಲೋಷಿಪ್ ತಂಡವು 6–1/2, 5–1/2ರಿಂದ ಬಿಜಿಸಿಯನ್ನು ಸೋಲಿಸಿತು.

ಬುಧವಾರ, ಮೇ 10, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಗು...
ಮುಂಬೈನಲ್ಲಿ ಮಂಗಳವಾರ 'ಆದಿಪುರುಷ್' ಸಿನಿಮಾ ಟ್ರೇಲರ್ ಬಿಡುಗಡೆ ವೇಳೆ ಬಾಲಿವುಡ್ ನಟಿ ಕೃತಿ ಸನೂನ್ ಕಾಣಿಸಿಕೊಂಡಿದ್ದು ಹೀಗೆ



ಚುನಾವಣಾ ಅಖಾಡ; ‘ನಕಲಿ ಪವಾಡ’!


ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿನಪತ್ರಿಕೆಗಳ ವರದಿಗಳನ್ನು ಹೋಲುವಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಸುದ್ದಿ ತುಣುಕುಗಳ ಪ್ರಸಾರ, ತಿರುಚಿದ ವಿಡಿಯೊ ಮತ್ತು ಚಿತ್ರಗಳ ಬಳಕೆಯ ಕೃತ್ಯಗಳು ಈ ಚುನಾವಣೆಯಲ್ಲಿ ಪ್ರಮುಖ ರಾಜಕೀಯ ಪಕ್ಷಗಳ ಪಾಲಿಗೆ ಬಿಸಿ ತುಪ್ಪವಾಗಿ ಪರಿಣಮಿಸಿವೆ. ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳು ‘ನಕಲಿ’ ಹಾವಳಿಗೆ ಹೈರಾಣಾಗಿವೆ.

ಚುನಾವಣೆ ಘೋಷಣೆಗೂ ಮುನ್ನವೇ ರಾಜಕೀಯ ಪಕ್ಷಗಳ ಕಾರ್ಯಕರ್ತರು ಸಾಮಾಜಿಕ ಮಾಧ್ಯಮಗಳ ಮೂಲಕ ಸಾರ್ವಜನಿಕರ ದಿಕ್ಕು ತಪ್ಪಿಸುವ ಕೆಲಸಕ್ಕೆ ಇಳಿದಿದ್ದರು. ಎದುರಾಳಿಗಳ ಕುರಿತು ತಪ್ಪು ಕಲ್ಪನೆಯನ್ನು ಸೃಷ್ಟಿಸುವಂತಹ ಮಾಹಿತಿ, ವಿಡಿಯೊ, ಆಡಿಯೊ ತುಣುಕುಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಟ್ಟು ಪ್ರತಿಸ್ಪರ್ಧಿಗಳನ್ನು ಇಕ್ಕಟ್ಟಿಗೆ ಸಿಲುಕಿಸುವ ಕೆಲಸ ಆರಂಭಿಸಿದ್ದರು.

ಚುನಾವಣಾ ಪ್ರಚಾರ ಕೊನೆಗೊಳ್ಳುವ ಸಮಯದಲ್ಲೇ ಬಿಜೆಪಿ ಮತ್ತು ಕಾಂಗ್ರೆಸ್ ವಿರುದ್ಧ ಇಂತಹ ಹಲವು ‘ನಕಲಿ’ ಸುದ್ದಿಗಳನ್ನು ಹರಿಯಬಿಡಲಾಗಿದೆ. ಮತದಾನಕ್ಕೆ ದಿನಗಣನೆ ಆರಂಭವಾದ ಹೊತ್ತಲ್ಲೇ ತೂರಿಬಂದ ‘ನಕಲಿ’ ಹಾವಳಿಗೆ ಪ್ರಮುಖ ಪಕ್ಷಗಳು ಅಕ್ಷರಶಃ ತತ್ತರಿಸಿವೆ.

ಬಿ.ಎಲ್. ಸಂತೋಷ್ ಹೆಸರಿನಲ್ಲಿ ಹೇಳಿಕೆ



‘ಬಿಜೆಪಿ ಹಿಂದುತ್ವದ ಮೇಲೆ ನಿಂತಿದೆ. ಅದರ ಆಧಾರದಲ್ಲೇ ಪಕ್ಷ ಕಟ್ಟಿದ್ದೇವೆ. ಯಾವುದೋ ನಾಯಕನ ಜಾತಿಯನ್ನು ನಂಬಿ ಪಕ್ಷ ಕಟ್ಟಿಲ್ಲ. ಲಿಂಗಾಯತರ ಅಗತ್ಯ ನಮಗಿಲ್ಲ’ ಎಂಬುದಾಗಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹೇಳಿದ್ದಾರೆ ಎಂಬ ವರದಿ ಪತ್ರಿಕೆಯೊಂದರಲ್ಲಿ ಪ್ರಕಟವಾಗಿರುವಂತೆ ಸೃಷ್ಟಿಸಿ ಕೆಲವು ದಿನಗಳ ಹಿಂದೆ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಡಲಾಗಿತ್ತು.

ಈ ತುಣುಕು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡಿತು. ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಹಲವು ನಾಯಕರು ಸಂತೋಷ್ ವಿರುದ್ಧ ಪ್ರತಿಕ್ರಿಯಿಸಿದರು. ಲಿಂಗಾಯತ ಸಮುದಾಯದ ನಾಯಕರು, ಕೂಡ ಕಟುವಾಗಿ ಟೀಕಿಸಿದ್ದರು.

ಈ ವಿಷಯ ಚುನಾವಣೆಯಲ್ಲಿ ಬಿಜೆಪಿ ಹಿನ್ನಡೆಗೆ ಕಾರಣವಾಗಬಹುದು ಎಂಬುದನ್ನು ಅರಿತ ಪಕ್ಷದ ಮುಖಂಡರು, ಹಾನಿ ತಡೆಗೆ ಕಾರ್ಯಾಚರಣೆ ಆರಂಭಿಸಿದ್ದರು.

‘ಕಾಂಗ್ರೆಸ್‌ನ ಕೆಲವರು ಇಂತಹ ಸುಳ್ಳು ಸುದ್ದಿ ಹರಡುತ್ತಿದ್ದಾರೆ. ಅಂತಹ ಮಾತುಗಳನ್ನು ಸಂತೋಷ್ ಅವರು ಹೇಳಿಲ್ಲ’ ಎಂದು ಪೋಸ್ಟರ್‌ಗಳನ್ನು ಮಾಡಿದ ಬಿಜೆಪಿಯ ಕೆಲವರು, ಜಾಲತಾಣದಲ್ಲಿ ದೊಡ್ಡಮಟ್ಟದಲ್ಲಿ ಹಂಚಿಕೊಂಡರು.

ಮೈಸೂರು, ಬೆಂಗಳೂರು, ಬೆಳಗಾವಿಯಲ್ಲಿ ಬಿಜೆಪಿ ಕಾರ್ಯಕರ್ತರು ನೀಡಿದ ದೂರು ಆಧರಿಸಿ, ಪೊಲೀಸರು ಮೂರು ಕಡೆ ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ. ಮೈಸೂರಿನಲ್ಲಿ ಒಬ್ಬ ಯುವಕನನ್ನು ಬಂಧಿಸಲಾಗಿದೆ.

ಈ ತುಣುಕಿನಲ್ಲಿದ್ದ ಸಂಗತಿ ಕುರಿತು ಬಿ.ಎಲ್. ಸಂತೋಷ್ ಈವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಸಿದ್ದರಾಮಯ್ಯ ಹೆಸರಿನಲ್ಲಿ ನಕಲಿ ಪತ್ರ!

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರಿಗೆ ದೂರು ನೀಡಿರುವಂತೆ ನಕಲಿ ಪತ್ರವೊಂದನ್ನು ಸೃಜಿಸಿ ಸೋಮವಾರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಡಲಾಗಿದೆ.

‘ಕೋಲಾರದಲ್ಲಿ ನನಗೆ ಟಿಕೆಟ್ ತಪ್ಪಿಸುವಲ್ಲಿ ಶಿವಕುಮಾರ್ ಪಾತ್ರವಿದೆ. ವರುಣದಲ್ಲಿ ನನ್ನನ್ನು ಸೋಲಿಸಲು ಜೆಡಿಎಸ್ ಅಭ್ಯರ್ಥಿಗೆ ಹಣ ಪೂರೈಸಿದ್ದಾರೆ. ನನ್ನನ್ನು ಬದಿಗಿಡಲು ಜೆಡಿಎಸ್ ಜತೆ ಮೈತ್ರಿ ಮಾಡಿಕೊಳ್ಳಲು ಯತ್ನಿಸುತ್ತಿದ್ದಾರೆ’ ಎಂದು ಸಿದ್ದರಾಮಯ್ಯ ಅವರು ಶಿವಕುಮಾರ್ ವಿರುದ್ಧ ದೂರಿದಂತೆ ಪತ್ರದಲ್ಲಿ ಬಿಂಬಿಸಲಾಗಿದೆ.

ಶಿವಕುಮಾರ್ ಜತೆ ಸೌಹಾರ್ದ ಸಂಬಂಧ: ಸಿದ್ದರಾಮಯ್ಯ



‘ನನ್ನ ಮತ್ತು ಡಿ.ಕೆ. ಶಿವಕುಮಾರ್ ಜತೆಗಿನ ಸಂಬಂಧ ಸೌಹಾರ್ದಯುತವಾಗಿದೆ. ಆರೆಸ್ಸೆಸ್‌ನಂತಹ ಕೆಲವು ಕುತಂತ್ರಿಗಳು ನಕಲಿ ಪತ್ರವನ್ನು ಸೃಷ್ಟಿಸಿ, ಇಬ್ಬರ ಮಧ್ಯೆ ಹುಳಿಹಿಂಡುವ ಯತ್ನ ಮಾಡಿದ್ದಾರೆ’ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

‘ಇಂತಹ ಯಾವ ಪತ್ರವನ್ನೂ ನಾನು ಬರೆದಿಲ್ಲ. ಸೋಲಿನ ಭೀತಿಯಿಂದ ಹತಾಶಗೊಂಡಿರುವ ಬಿಜೆಪಿ, ನನ್ನ ಹೆಸರಿನ ಖೊಟ್ಟಿ ಪತ್ರ ಬರೆದು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದೆ. ಪಕ್ಷದ ಕಾರ್ಯಕರ್ತರು ಈ ಸುಳ್ಳು ಅಪಪ್ರಚಾರಕ್ಕೆ ಬಲಿಯಾಗಬಾರದು. ಇಂತಹ ಪತ್ರ ಹಂಚುತ್ತಿರುವವರ ವಿರುದ್ಧ ಚುನಾವಣಾ ಆಯೋಗ ಮತ್ತು ಪೊಲೀಸರಿಗೆ ದೂರು ನೀಡುತ್ತೇನೆ. ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆ ಹಚ್ಚಿ ಕ್ರಮ ಜರುಗಿಸಬೇಕೆಂದು ಆಗ್ರಹಿಸುತ್ತೇನೆ ಎಂದಿದ್ದಾರೆ. ‘ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನನ್ನ ಹೆಸರಿನಲ್ಲಿ ನಕಲಿ ಪತ್ರವೊಂದನ್ನು ಬರೆದಿದ್ದಾರೆ. ಇದು ನಾನು ಬರೆದ ಪತ್ರ ಅಲ್ಲವೇ ಅಲ್ಲ. ಕೆಲವು ಕುತಂತ್ರಿಗಳು ನಕಲಿ ಪತ್ರ ಸೃಷ್ಟಿಮಾಡಿ, ನನ್ನ ಮತ್ತು ಶಿವಕುಮಾರ್ ಮಧ್ಯೆ ಭಿನ್ನಾಭಿಪ್ರಾಯಗಳು ಇವೆ ಎಂದು ಅಪಪ್ರಚಾರ ಮಾಡಲು ಇಂತಹ ಹುನ್ನಾರ ನಡೆಸಿದ್ದಾರೆ’ ಎಂದು ಹೇಳಿದ್ದಾರೆ.

ಸೋಲಿನ ಭೀತಿಯಿಂದ ಬಿಜೆಪಿ ಕುತಂತ್ರ: ಡಿಕೆಶಿ



‘ಚುನಾವಣೆಯಲ್ಲಿ ಸೋಲುವ ಭೀತಿಗೆ ಒಳಗಾಗಿರುವ ಬಿಜೆಪಿಯವರು, ಸಿದ್ದರಾಮಯ್ಯ ಅವರ ಹೆಸರಲ್ಲಿ ನನ್ನ ವಿರುದ್ಧ ಪತ್ರ ಬರೆದಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

‘ಸಿದ್ದರಾಮಯ್ಯನವರು ನನ್ನ ವಿರುದ್ಧ ಯಾಕೆ ಪತ್ರ ಬರೆಯುತ್ತಾರೆ? ಅವರು ಎಲ್ಲ ಕ್ಷೇತ್ರಗಳಲ್ಲಿ ಪ್ರಚಾರ ಮಾಡಿ, ಪಕ್ಷದ ಗೆಲುವಿಗೆ ಶ್ರಮಿಸಿದ್ದಾರೆ. ಮೊನ್ನೆಯಷ್ಟೇ ನಾವಿಬ್ಬರೂ ಸೇರಿ ಅಭಿಪ್ರಾಯ ಹಂಚಿಕೊಂಡಿದ್ದೇವೆ. ಈಗಲೂ ನಾವು ಒಟ್ಟಾಗಿ ದುಡಿಯುತ್ತಿದ್ದೇವೆ. ಜನರ ಬಳಿ ಪ್ರಚಾರ ಮಾಡಲು ಅವರಿಗೆ ಸಮಯ ಸಿಗುತ್ತಿಲ್ಲ. ಇನ್ನು ಪತ್ರ ಬರೆಯಲು ಅವರಿಗೆ ಸಮಯ ಎಲ್ಲಿದೆ ಎಂದು ಪ್ರಶ್ನಿಸಿದರು.ಬಿಜೆಪಿ ಅವರಿಗೆ ಮಾಡಲು ಕೆಲಸ ಇಲ್ಲದೇ ಇರುವುದರಿಂದ ಇಂತಹ ನಕಲಿ ಪತ್ರ ಸೃಷ್ಟಿಸಿ ಹಂಚುತ್ತಿದ್ದಾರೆ. ಬಿಜೆಪಿಯಲ್ಲಿರುವ ಆಂತರಿಕ ಹುಳುಕು ಮುಚ್ಚಿಕೊಳ್ಳಲು ಈ ರೀತಿ ಪ್ರಯತ್ನ ಮಾಡುತ್ತಿದ್ದಾರೆ ಎಂದರು.

ಸುದ್ದಿ 2 ನಿಮಿಷ

ಮತ್ತೊಂದು ಚೀತಾ ಸಾವು

ಭೋಪಾಲ್ (ಪಿಟಿಐ): ದಕ್ಷಿಣ ಆಫ್ರಿಕಾದಿಂದ ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಕರೆತರಲಾಗಿದ್ದ ಮತ್ತೊಂದು ಚೀತಾ ಮಂಗಳವಾರ ಮೃತಪಟ್ಟಿದೆ. ಈ ಚೀತಾಗೆ ‘ದಕ್ಷಾ’ ಎಂದು ಹೆಸರಿಡಲಾಗಿತ್ತು ಎಂದು ಅರಣ್ಯಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇದರೊಂದಿಗೆ ಕುನೊ ಉದ್ಯಾನದಲ್ಲಿ ಕಳೆದ 42 ದಿನಗಳಲ್ಲಿ ಮೂರು ಚೀತಾಗಳು ಮೃತಪಟ್ಟಂತಾಗಿದೆ. ಇದಕ್ಕೂ ಮುನ್ನ ಒಂದು ಹೆಣ್ಣು ಚೀತಾ, ಮತ್ತೊಂದು ಗಂಡು ಚೀತಾ ಕ್ರಮವಾಗಿ ಮಾ.27 ಮತ್ತು ಏ.23ರಂದು ಮೃತಪಟ್ಟಿದ್ದವು.

‘ದಕ್ಷಾ’ ಗಾಯಗೊಂಡಿರುವ ಸ್ಥಿತಿಯಲ್ಲಿ ಇರುವುದನ್ನು ಬೆಳಗಿನ ಪರಿಶೀಲನೆ ತಂಡ ಗುರುತಿಸಿತ್ತು. ಕೂಡಲೇ ಅದನ್ನು ಕರೆತಂದು ಅಗತ್ಯ ಚಿಕಿತ್ಸೆ ನೀಡಲಾಗಿತ್ತು. ಆದರೆ ಮಧ್ಯಾಹ್ನ 12 ಗಂಟೆ ಹೊತ್ತಿಗೆ ಚೀತಾ ಮೃತಪಟ್ಟಿತು ಎಂದು ಅಧಿಕಾರಿ ಮಾಹಿತಿ ನೀಡಿದರು.

‘ಸಂತಾನೋತ್ಪತ್ತಿಗಾಗಿ ಎರಡು ಗಂಡು ಚೀತಾಗಳೊಂದಿಗೆ ದಕ್ಷಾಳನ್ನು ಬಿಡಲಾಗಿತ್ತು. ಈ ವೇಳೆ ಗಂಡು ಚೀತಾಗಳು ಆಕ್ರಮಣಕಾರಿಯಾಗಿ ವರ್ತಿಸಿದ್ದರಿಂದ ‘ದಕ್ಷಾ’ ತೀವ್ರ ಗಾಯಗೊಂಡಿರಬಹುದು. ಇಂಥ ಸನ್ನಿವೇಶದಲ್ಲಿ ಪರಿಶೀಲನಾ ತಂಡ ಮಧ್ಯಪ್ರವೇಶಿಸುವುದು ಕಷ್ಟ’ ಎಂದು ಅವರು ತಿಳಿಸಿದ್ದಾರೆ.

ನಿತೀಶ್–ಪಟ್ನಾಯಕ್ ಭೇಟಿ



ಭುವನೇಶ್ವರ (ಪಿಟಿಐ): ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಇಲ್ಲಿನ ‘ನವೀನ್ ನಿವಾಸ’ದಲ್ಲಿ ಮಂಗಳವಾರ ಭೇಟಿಯಾಗಿದ್ದು, ‘ಲೋಕಸಭಾ ಚುನಾವಣೆಗೆ ಜೆಡಿಯು ಮತ್ತು ಬಿಜೆಡಿ ಪಕ್ಷಗಳ ಮೈತ್ರಿಯ ಕುರಿತು ಮಾತುಕತೆ ನಡೆಸಿಲ್ಲ’ ಎಂದು ಇಬ್ಬರೂ ನಾಯಕರು ಬಳಿಕ ತಿಳಿಸಿದ್ದಾರೆ.

‘ಮೈತ್ರಿಯ ಕುರಿತು ಯಾವುದೇ ಚರ್ಚೆ ನಡೆಸಿಲ್ಲ. ನಿತೀಶ್ ಅವರು ಇಲ್ಲಿಗೆ ಬಂದಿದ್ದರ ಬಗ್ಗೆ ನನಗೆ ಖುಷಿ ಇದೆ. ನಾವು ಬಹಳ ಹಳೆಯ ಸ್ನೇಹಿತರು. ವಾಜಪೇಯಿ ಅವರ ಸಂಪುಟದಲ್ಲಿ ಸಚಿವರಾಗಿದ್ದವರು’ ಎಂದು ನವೀನ್ ಪಟ್ನಾಯಕ್ ಹೇಳಿದರು.

ಪುರಿ ಜಗನ್ನಾಥನ ದರ್ಶನಕ್ಕೆ ಬರುವ ಭಕ್ತಾದಿಗಳಿಗೆ ಕಟ್ಟಡ ಸೌಲಭ್ಯ ಕಲ್ಪಿಸಿಕೊಡುವ ಸಲುವಾಗಿ, ಬಿಹಾರ ಸರ್ಕಾರಕ್ಕೆ ಪುರಿಯಲ್ಲಿ 1.5 ಎಕರೆ ಪ್ರದೇಶವನ್ನು ಉಚಿತವಾಗಿ ನೀಡುವುದಾಗಿ ನವೀನ್ ಪಟ್ನಾಯಕ್ ತಿಳಿಸಿದರು.

ಇಬ್ಬರ ಭೇಟಿ ರಾಜಕೀಯ ವಲಯದಲ್ಲಿ ಚರ್ಚೆ ಹುಟ್ಟುಹಾಕಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ವಿವಿಧ ಪಕ್ಷಗಳನ್ನು ಒಗ್ಗೂಡಿಸುವ ಕುರಿತು ನಿತೀಶ್ ಕುಮಾರ್ ಅವರು ಹಲವು ನಾಯಕರನ್ನು ಕೆಲವು ತಿಂಗಳುಗಳಿಂದ ಭೇಟಿಯಾಗುತ್ತಿದ್ದಾರೆ. ಈ ಹೊತ್ತಿನಲ್ಲಿ ಈ ಇಬ್ಬರು ನಾಯಕರ ಭೇಟಿ ಕುತೂಹಲ ಮೂಡಿಸಿದೆ.

ಮತದಾನದ ಉತ್ಸಾಹ ಕುಂದಿಸಿದ ಬಸ್‌ಗಳ ಕೊರತೆ, ಚುನಾವಣೆ ಕರ್ತವ್ಯಕ್ಕೆ 4,100 ಬಸ್‌ಗಳ ಬಳಕೆ

ಸ್ವಗ್ರಾಮಕ್ಕೆ ಹೊರಟವರಿಗೆ ಬಸ್‌ಗಳಿಲ್ಲದೆ ಬವಣೆ

ಪ್ರಜಾವಾಣಿ ವಾರ್ತೆ



ಮತ ಚಲಾಯಿಸಲು ವಿವಿಧ ಊರುಗಳಿಗೆ ತೆರಳಲು ಸಜ್ಜಾಗಿದ್ದ ಪ್ರಯಾಣಿಕರು ಬೆಂಗಳೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಬಸ್‌ಗಳ ಸಂಖ್ಯೆ ಕಡಿಮೆ ಇದ್ದ ಕಾರಣ ಮಂಗಳವಾರ ಪರದಾಡಿದರು –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ ‘ಹಕ್ಕು’ ಚಲಾಯಿಸಲು ರಾಜಧಾನಿಯಿಂದ ಸ್ವಗ್ರಾಮಗಳಿಗೆ ಮಂಗಳವಾರ ಹೊರಟಿದ್ದ ಪ್ರಯಾಣಿಕರಿಗೆ ಬಸ್‌ಗಳ ಕೊರತೆ ಉತ್ಸಾಹವನ್ನೇ ಕುಂದಿಸಿತು.

ಮೊದಲ ಬಾರಿಗೆ ಮತದಾನ ಮಾಡಲು ಅತ್ಯುತ್ಸಾಹದಿಂದ ಸಜ್ಜಾಗಿದ್ದ ಯುವಕ, ಯುವತಿಯರೂ ನಿಲ್ದಾಣದಲ್ಲಿ ತಾಸುಗಟ್ಟಲೇ ಬಸ್‌ಗಾಗಿ ಕಾದಿದ್ದರು.

‘ಮತದಾನ ಮಾಡುವಂತೆ ಜಾಗೃತಿ ಮೂಡಿಸುತ್ತಾರೆ. ಆದರೆ, ಬಸ್ ವ್ಯವಸ್ಥೆಯನ್ನು ಮಾತ್ರ ಕಲ್ಪಿಸಿಲ್ಲ’ ಎಂದು ನಿಲ್ದಾಣದಲ್ಲಿ ಹಾಜರಿದ್ದ ಪ್ರಯಾಣಿಕರು ಆಕ್ರೋಶ ಹೊರಹಾಕಿದರು.

ಕೆಎಸ್‌ಆರ್‌ಟಿಸಿಯಲ್ಲಿ 8,100 ಬಸ್‌ಗಳಿದ್ದು, ಮತಯಂತ್ರಗಳನ್ನು ಕೊಂಡೊಯ್ಯಲು ಮತ್ತು ಪೊಲೀಸ್ ಸಿಬ್ಬಂದಿ ಕರೆದೊಯ್ಯಲು 4,100 ಬಸ್‌ಗಳನ್ನು ಚುನಾವಣಾ ಆಯೋಗ ಬಳಸಿಕೊಂಡಿದೆ. ಉಳಿದ 4 ಸಾವಿರ ಬಸ್‌ಗಳನ್ನು ನಿಯೋಜಿಸಿದ್ದರೂ ನಿಗದಿತ ಸಮಯಕ್ಕೆ ಪ್ರಯಾಣಿಕರಿಗೆ ಲಭ್ಯವಾಗಲಿಲ್ಲ. ಬೆಂಗಳೂರು ನಗರದ ಕೆಎಸ್‌ಆರ್‌ಟಿಸಿಯ ಮೂರು ಟರ್ಮಿನಲ್‌ಗಳಲ್ಲೂ ಬಸ್‌ಗಳಿಲ್ಲದೇ ಪ್ರಯಾಣಿಕರು ಕಷ್ಟಪಟ್ಟರು.

ಮಡಿಕೇರಿ, ಕುಶಾಲನಗರ, ಸುಳ್ಯ, ಪುತ್ತೂರು ಕಡೆಗೆ ಹೊರಟಿದ್ದ ಪ್ರಯಾಣಿಕರೂ ಸ್ಯಾಟ್‌ಲೈಟ್ ನಿಲ್ದಾಣದಲ್ಲೇ ಸಿಲುಕಿದ್ದರು. ನಾಲ್ಕರಿಂದ ಐದು ಗಂಟೆ ಕಾದರೂ ಬಸ್‌ಗಳು ಬರುತ್ತಿರಲಿಲ್ಲ. ನಿಲ್ದಾಣಕ್ಕೆ ಬಂದ ಒಂದೆರಡು ಬಸ್‌ಗಳೂ ಕ್ಷಣಾರ್ಧದಲ್ಲಿ ಭರ್ತಿ ಆಗುತ್ತಿದ್ದವು.

ಅಭ್ಯರ್ಥಿಗಳಿಂದ ಬಸ್‌ಗಳ ವ್ಯವಸ್ಥೆ!

ಬೆಂಗಳೂರಿನಿಂದ ಬೆಳಗಾವಿ, ಶಿವಮೊಗ್ಗ, ಉತ್ತರ ಕನ್ನಡ, ಹುಬ್ಬಳ್ಳಿ ಸೇರಿದಂತೆ ಹಲವು ಸ್ಥಳಗಳಿಗೆ ಮತದಾರರನ್ನು ಕರೆದೊಯ್ಯಲು ಕೆಲವು ಅಭ್ಯರ್ಥಿಗಳು ಬಸ್‌ಗಳ ವ್ಯವಸ್ಥೆ ಮಾಡಿದ್ದರು.

ಬೆಳಗಾವಿಯ ಅಭ್ಯರ್ಥಿಯೊಬ್ಬರು ಬೆಂಗಳೂರು ಮತ್ತು ಪುಣೆಯಿಂದ ಸೋಮವಾರವೇ ಬಸ್‌ಗಳ ಮೂಲಕ ತಮ್ಮ ಮತದಾರರನ್ನು ಕರೆದೊಯ್ದಿದ್ದಾರೆ. ಮತದಾರರಿಗೆ ವಾಟ್ಸ್‌ಆ್ಯಪ್ ಮೂಲಕವೇ ಈ ಬಗ್ಗೆ ಸಂದೇಶಗಳನ್ನು ಕಳುಹಿಸಲಾಗಿತ್ತು.

ಬಸ್‌ಗಳು ನಿಲ್ದಾಣದ ಆವರಣಕ್ಕೆ ಪ್ರವೇಶಿಸುತ್ತಿದ್ದಂತೆಯೇ ಪ್ರಯಾಣಿಕರು ಓಡಿ ಹೋಗಿ ಏರಲು ಪ್ರಯತ್ನಿಸುತ್ತಿದ್ದರು. ಬಹುತೇಕ ಬಸ್‌ಗಳಲ್ಲಿ ಪ್ರಯಾಣಿಕರು ನಿಂತೇ ಪ್ರಯಾಣಿಸಿದ್ದು ಕಂಡುಬಂತು. ಪೋಷಕರೊಂದಿಗೆ ಬಂದಿದ್ದ ಪುಟ್ಟ ಮಕ್ಕಳು, ವೃದ್ಧರೂ ಪಡಿಪಾಟಲು ಪಟ್ಟರು.

ಮಂಗಳವಾರ ಬೆಳಿಗ್ಗೆ 5 ಗಂಟೆಯಿಂದಲೇ ನಿಲ್ದಾಣದಲ್ಲಿ ಪ್ರಯಾಣಿಕರ ದಟ್ಟಣೆ ಕಂಡುಬಂತು. ರಾತ್ರಿಯಾದರೂ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿರಲಿಲ್ಲ. ಇರುವ ಬಸ್‌ಗಳಿಗೆ ಪ್ರಯಾಣಿಕರಿಗೆ ಸ್ಥಳಾವಕಾಶ ಮಾಡಿ ಕಳುಹಿಸುವಲ್ಲಿ ಕೆಎಸ್‌ಆರ್‌ಟಿಸಿ ಸಿಬ್ಬಂದಿ ಹೈರಾಣಗೊಂಡರು.

ಬಳ್ಳಾರಿ, ಸಿರಗುಪ್ಪ, ಸಿಂಧನೂರು, ದೇವದುರ್ಗ, ಸುರಪುರ, ಶಹಾಪುರ, ಲಿಂಗಸೂರು, ರಾಯಚೂರು, ಯಾದಗಿರಿ, ಕಲಬುರಗಿ, ಬೀದರ್, ಚಿತ್ರದುರ್ಗ, ಚಳ್ಳಕೆರೆ, ಪರುಶುರಾಂಪುರ ಭಾಗದಿಂದ ವಲಸೆ ಬಂದವರು ಬೆಂಗಳೂರಿನಲ್ಲಿ ಕೂಲಿ, ಬೇರೆ ವೃತ್ತಿಯೊಂದಿಗೆ ಬದುಕು ಕಟ್ಟಿಕೊಂಡಿದ್ದಾರೆ. ಬಹುತೇಕರು ತಮ್ಮ ಊರಿನಲ್ಲಿಯೇ ಮತದಾನ ಮಾಡುವ ‘ಹಕ್ಕು’ ಹೊಂದಿದ್ದಾರೆ. ಬುಧವಾರ ಒಮ್ಮೆಲೇ ಊರಿಗೆ ತೆರಳಲು ಬಂದಿದ್ದರಿಂದ ಸಮಸ್ಯೆ ಉಂಟಾಯಿತು.

ಹೊಸದುರ್ಗ, ಶಿವಮೊಗ್ಗ, ತುಮಕೂರು, ತುರುವೆಕೆರೆ, ಪಾವಗಡ, ಚಿಕ್ಕಬಳ್ಳಾಪುರ, ಹಾಸನ, ಚಿಕ್ಕಮಗಳೂರು, ಮಂಗಳೂರು, ಧರ್ಮಸ್ಥಳದ ಕಡೆಗೂ ಬಸ್‌ಗಳು ಇರಲಿಲ್ಲ.

ಮಧ್ಯಾಹ್ನದ ಬಳಿಕ ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದರಿಂದ ಬಿಎಂಟಿಸಿಯು 250 ಬಸ್‌ಗಳನ್ನು ಬೇರೆ ಬೇರೆ ಭಾಗಕ್ಕೆ ಕಳುಹಿಸಲಾಯಿತು. ಆ ಬಸ್‌ಗಳೂ ಭರ್ತಿಯಾಗಿದ್ದವು. ರಾಜಹಂಸ ಬಸ್‌ಗಳನ್ನೂ ಸಣ್ಣ ಪಟ್ಟಣಗಳಿಗೂ ಕಳುಹಿಸಲಾಯಿತು.

‘ಹಲವು ಚುನಾವಣೆಯಲ್ಲಿ ಕೆಲಸ ಮಾಡಿದ್ದೇನೆ. ಆದರೆ, ಈ ಬಾರಿ ಮತದಾನಕ್ಕೆ ಊರಿಗೆ ತೆರಳುವವರ ಸಂಖ್ಯೆ ದುಪ್ಪಟ್ಟಾಗಿದೆ. ಮತದಾನದ ಬಗ್ಗೆ ಜನರಿಗೆ ಅರಿವು ಬಂದಿದೆ’ ಎಂದು ಕೆಎಸ್‌ಆರ್‌ಟಿಸಿ ಸಿಬ್ಬಂದಿಯೊಬ್ಬರು ಹೇಳಿದರು.

ಬಸ್‌ಗಳಲ್ಲದೇ ರೈಲುಗಳಲ್ಲಿಯೂ ಪ್ರಯಾಣಿಕರ ದಟ್ಟಣೆ ಕಂಡುಬಂದಿತು. ಬೆಂಗಳೂರಿನಿಂದ ಬುಧವಾರ ಹೊರಟ ಎಲ್ಲ ಪ್ಯಾಸೆಂಜರ್ ರೈಲುಗಳಲ್ಲೂ ಪ್ರಯಾಣಿಕರ ದಟ್ಟಣೆ ಕಂಡುಬಂತು.

‘ಗ್ರಾಮಕ್ಕೆ ಬಂದು ಮತದಾನ ಮಾಡಿ ಬಸ್ ಪ್ರಯಾಣದ ಟಿಕೆಟ್ ತೋರಿಸಿದರೆ ಖರ್ಚು–ವೆಚ್ಚ ಭರಿಸುತ್ತೇವೆಂದು ಅಭ್ಯರ್ಥಿಗಳ ಬೆಂಬಲಿಗರು ಭರವಸೆ ನೀಡಿದ್ದಾರೆ’ ಎಂದು ಪ್ರಯಾಣಿಕರೊಬ್ಬರು ಹೇಳಿದರು.

> **ಮೊದಲ ಬಾರಿಗೆ ಮತದಾನ ಮಾಡಲು ತೆರಳುತ್ತಿದ್ದೇನೆ. ಚುನಾವಣಾ ಆಯೋಗವು ಬರೀ ಜಾಗೃತಿ ಮೂಡಿಸಿದೆ. ಆದರೆ, ಸಾರಿಗೆ ವ್ಯವಸ್ಥೆ ಮಾಡಿಲ್ಲ**
> **ಸೌಮ್ಯಾ,** ದೇವದುರ್ಗ

> **ಊರಿಗೆ ಬಂದು ಮತ ಚಲಾಯಿಸುತ್ತೇನೆ ಎಂದು ಮಾತು ಕೊಟ್ಟಿದ್ದೇನೆ. ರಾತ್ರಿಯಾದರೂ ತೊಂದರೆ ಇಲ್ಲ. ಊರಿಗೆ ಹೋಗುತ್ತೇನೆ**
> **ರಮೇಶ್**
> ಹೊಸದುರ್ಗ

ಖಾಸಗಿ ಬಸ್ ಪ್ರಯಾಣ ದರವೂ ದುಬಾರಿ

ಪ್ರಯಾಣಿಕರ ದಟ್ಟಣೆಯ ಕಾರಣದಿಂದ ಖಾಸಗಿ ಬಸ್‌ಗಳ ಪ್ರಯಾಣ ದರವು ಸಹ ಮಂಗಳವಾರ ದುಬಾರಿಯಾಗಿತ್ತು.

ಬೆಂಗಳೂರಿನಿಂದ ಹುಬ್ಬಳ್ಳಿಗೆ ಗರಿಷ್ಠ ₹ 3,500 ಮತ್ತು ಕನಿಷ್ಠ ₹ 810, ಬೀದರ್‌ಗೆ ಗರಿಷ್ಠ ₹ 3,000 ಹಾಗೂ ಕನಿಷ್ಠ ₹ 1,800, ದಾವಣಗೆರೆಗೆ ಗರಿಷ್ಠ ₹ 3,300 ಹಾಗೂ ಕನಿಷ್ಠ ₹ 810 ಹಾಗೂ ಮಂಗಳೂರಿಗೆ ಗರಿಷ್ಠ ₹ 2,200 ಹಾಗೂ ಕನಿಷ್ಠ ₹ 900 ದರವಿತ್ತು.

ಆ. 1ರಿಂದ ಬ್ರಿಗೇಡಿಯರ್ ಮೇಲ್ಮಟ್ಟದ ಅಧಿಕಾರಿಗಳಿಗೆ ಏಕರೂಪದ ಸಮವಸ್ತ್ರ

ನವದೆಹಲಿ (ಪಿಟಿಐ): ‘ಬ್ರಿಗೇಡಿಯರ್‌ಗಳು ಹಾಗೂ ಮೇಲ್ಮಟ್ಟದ ಅಧಿಕಾರಿಗಳಿಗೆ ಅವರು ನೇಮಕಗೊಂಡ ಕೇಡರ್ ಅಥವಾ ರೆಜಿಮೆಂಟ್‌ಗಳನ್ನು ಲೆಕ್ಕಿಸದೇ ಆಗಸ್ಟ್ 1ರಿಂದ ಏಕರೂಪದ ಸಮವಸ್ತ್ರವನ್ನು ಜಾರಿಗೊಳಿಸಲು ಸೇನೆ ನಿರ್ಧರಿಸಿದೆ’ ಎಂದು ಮೂಲಗಳು ಮಂಗಳವಾರ ತಿಳಿಸಿವೆ.

‘ಇತ್ತೀಚೆಗೆ ಹಮ್ಮಿಕೊಂಡಿದ್ದ ಸೇನಾ ಕಮಾಂಡರ್‌ಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದವರು ನಡೆಸಿದ ವಿಸ್ತೃತ ಚರ್ಚೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಮೂಲಗಳು ಹೇಳಿವೆ.

ಹಿರಿಯ ಅಧಿಕಾರಿಗಳ ಹೆಡ್‌ಗೇರ್‌ಗಳು, ಶೋಲ್ಡರ್ ರ್‍ಯಾಂಕ್ ಬ್ಯಾಡ್ಜ್‌ಗಳು, ಗಾರ್ಗೆಟ್ ಪ್ಯಾಚಸ್, ಬೆಲ್ಟ್ ಹಾಗೂ ಬೂಟುಗಳು ಇನ್ನು ಮುಂದೆ ಒಂದೇ ರೀತಿಯಲ್ಲಿ ಇರಲಿವೆ. ಆದರೆ, ಕರ್ನಲ್‌ಗಳು ಹಾಗೂ ಕೆಳಮಟ್ಟದ ಅಧಿಕಾರಿಗಳ ಹಂತದ ಸಮವಸ್ತ್ರದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ’ ಎಂದೂ ವಿವರಿಸಲಾಗಿದೆ.

‘ರೆಜಿಮೆಂಟ್ ಮಿತಿಯನ್ನು ಮೀರಿ, ಹಿರಿಯ ನಾಯಕತ್ವದ ನಡುವೆ ಏಕರೂಪತೆಯ ಗುರುತನ್ನು ಬಲಪಡಿಸುವ ಹಾಗೂ ಉತ್ತೇಜಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗುತ್ತಿದೆ. ಭಾರತೀಯ ಸೇನೆಯು ನ್ಯಾಯಯುತ ಹಾಗೂ ಸಮಾನತೆಯ ಸಂಸ್ಥೆಯಾಗುವಲ್ಲಿ ಈ ನಿರ್ಧಾರ ಸಹಾಯಕವಾಗುತ್ತದೆ’ ಎಂದು ತಿಳಿಸಲಾಗಿದೆ.

ಬಿಲ್ಕಿಸ್ ಪ್ರಕರಣ: ಜುಲೈ 11ಕ್ಕೆ ವಿಚಾರಣೆ ಮುಂದೂಡಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣದ 11 ಮಂದಿ ದೋಷಿಗಳ ಅವಧಿಪೂರ್ವ ಬಿಡುಗಡೆಯನ್ನು ವಿರೋಧಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ಜುಲೈ 11ಕ್ಕೆ ಮುಂದೂಡಿದೆ.

ದೋಷಿಗಳಲ್ಲಿ ಕೆಲವರಿಗೆ ನೋಟಿಸ್ ತಲುಪಿಲ್ಲ. ಅವರಿಗೆ ನೋಟಿಸ್ ನೀಡುವಂತೆ ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್, ಬಿ.ವಿ. ನಾಗರತ್ನ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರಿದ್ದ ನ್ಯಾಯಪೀಠವು ನಿರ್ದೇಶನ ನೀಡಿತು. ಜೊತೆಗೆ, ಸಂಪರ್ಕಕ್ಕೆ ಸಿಗದ ದೋಷಿಗಳಿಗೆ ನೋಟಿಸ್ ತಲುಪಿಸುವ ನಿಟ್ಟಿನಲ್ಲಿ ಗುಜರಾತಿ ಮತ್ತು ಇಂಗ್ಲಿಷ್ ಸುದ್ದಿಪತ್ರಿಕೆಗಳಲ್ಲಿ ನೋಟಿಸ್ ಪ್ರಕಟಿಸುವಂತೆಯೂ ನ್ಯಾಯಪೀಠ ನಿರ್ದೇಶಿಸಿತು.

ಪ್ರಕರಣದ ಮುಂದಿನ ವಿಚಾರಣೆಯನ್ನು ಜುಲೈ 11ಕ್ಕೆ ನಿಗದಿಪಡಿಸಲಾಗಿರುವ ವಿಚಾರವೂ ನೋಟಿಸ್‌ನಲ್ಲಿ ನಮೂದಿಸುವಂತೆ ಹೇಳಿದ ಪೀಠ, ಈ ಕ್ರಮದಿಂದ ಸಮಯ ವ್ಯರ್ಥವಾಗುವುದಿಲ್ಲ ಎಂದು ಕೂಡಾ ಹೇಳಿತು.

ಅವಧಿಪೂರ್ವ ಬಿಡುಗಡೆ ವಿರೋಧಿಸಿ ಸಲ್ಲಿಕೆಯಾಗಿರುವ ಅರ್ಜಿಗಳಿಗೆ ಸಂಬಂಧಿಸಿ ಎಲ್ಲಾ ದೋಷಿಗಳಿಗೂ ನೋಟಿಸ್ ನೀಡಲಾಗಿಲ್ಲ ಎಂದು ಕೆಲ ದೋಷಿಗಳ ಪರ ವಕೀಲರು ಆಕ್ಷೇಪಿಸಿದ್ದರು. ಈ ಹಿನ್ನೆಲೆಯಲ್ಲಿ ವಿಚಾರಣೆಯನ್ನು ಮುಂದೂಡಿರುವುದಾಗಿ ಸುಪ್ರೀಂ ಕೋರ್ಟ್ ಮೇ 2ರಂದು ಹೇಳಿತ್ತು. ಕೆಲ ದೋಷಿಗಳ ಮನೆ ವಿಳಾಸ ಬದಲಾಗಿರುವುದಾಗಿ ಮತ್ತು ದೂರವಾಣಿ ಸಂಪರ್ಕಕ್ಕೆ ಅವರು ಸಿಗದಿರುವ ಕುರಿತು ಪೊಲೀಸರು ಈ ಹಿಂದೆಯೇ ಕೋರ್ಟ್‌ಗೆ ಹೇಳಿದ್ದರು.

ಈ ಪ್ರಕರಣದ ವಿಚಾರಣೆ ನಡೆಸುತ್ತಿರುವ ನ್ಯಾಯಪೀಠವನ್ನು ಮುನ್ನಡೆಸುತ್ತಿರುವ ನ್ಯಾಯಮೂರ್ತಿ ಕೆ.ಎಂ. ಜೋಸೆಫ್ ಅವರು ಜೂನ್ 16ರಂದು ನಿವೃತ್ತರಾಗುತ್ತಿರುವ ಕಾರಣ ಈ ಪ್ರಕರಣದ ವಿಚಾರಣೆಯನ್ನು ಹೊಸದಾಗಿ ನೇಮಕವಾಗುವ ನ್ಯಾಯಪೀಠವು ಮುನ್ನಡೆಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಪ್ರಕರಣದ ದೋಷಿಗಳನ್ನು ಅವಧಿಗೂ ಮುನ್ನ ಬಿಡುಗಡೆ ಮಾಡಿರುವುದನ್ನು ವಿರೋಧಿಸಿ ಸಿಪಿಎಂ ನಾಯಕಿ ಸುಭಾಷಿಣಿ ಅಲಿ, ಪತ್ರಕರ್ತೆ ರೇವತಿ ಲೌಲ್, ಟಿಎಂಸಿ ಸಂಸದೆ ಮಹುವಾ ಮೋಯಿತ್ರ ಮುಂತಾದವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಮಧ್ಯಪ್ರದೇಶ: ಸೇತುವೆಯಿಂದ ಬಸ್ ಬಿದ್ದು 24 ಜನ ಸಾವು



ಮಧ್ಯಪ್ರದೇಶ ಖರ್ಗೋನ್ ಜಿಲ್ಲೆಯ ಡೊಂಗರಗಾಂವ್ ಗ್ರಾಮದ ಬಳಿ ಸೇತುವೆಯಿಂದ ಖಾಸಗಿ ಬಸ್ ಮಂಗಳವಾರ ಉರುಳಿ ಬಿದ್ದಿರುವುದು –ಎಎಫ್‌ಪಿ ಚಿತ್ರ

ಖರ್ಗೋನ್/ಭೋಪಾಲ್ (ಮಧ್ಯ ಪ್ರದೇಶ) (ಪಿಟಿಐ): ಖರ್ಗೋನ್ ಜಿಲ್ಲೆಯ ಡೊಂಗರಗಾಂವ್ ಗ್ರಾಮದ ಬಳಿ ಖಾಸಗಿ ಬಸ್ ಸೇತುವೆಯಿಂದ ಮಂಗಳವಾರ ಬಿದ್ದ ಪರಿಣಾಮ 24 ಪ್ರಯಾಣಿಕರು ಮೃತಪಟ್ಟು, ಇತರ 41 ಜನರು ಗಾಯಗೊಂಡಿದ್ದಾರೆ.

‘ಗ್ರಾಮದ ಬಳಿಯ ಬೋರದ್ ನದಿ ಸೇತುವೆ ತಡೆಗೋಡೆಗೆ ಬಸ್ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಸೇತುವೆಯ ತಡೆಗೋಡೆ ಛಿದ್ರಗೊಂಡು, ಬಸ್ ಬತ್ತಿದ ನದಿಗೆ ಬಿದ್ದಿದೆ. 37 ಜನರು ಪ್ರಯಾಣಿಸುವ ಸಾಮರ್ಥ್ಯವಿರುವ ಬಸ್‌ನಲ್ಲಿ ಸುಮಾರು 70 ಜನರಿದ್ದರು’ ಎಂದು ಗೃಹ ಸಚಿವ ನರೋತ್ತಮ ಮಿಶ್ರಾ ತಿಳಿಸಿದ್ದಾರೆ.

‘ಘಟನೆ ಕುರಿತು ನ್ಯಾಯಾಧೀಶರಿಂದ ತನಿಖೆಗೆ ಆದೇಶಿಸಲಾಗಿದೆ. ಗಾಯಗೊಂಡವರನ್ನು ಖರ್ಗೋನ್ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದೂ ತಿಳಿಸಿದ್ದಾರೆ.

ಪರಿಹಾರ ಘೋಷಣೆ: ಬಸ್ ಅಪಘಾತದಲ್ಲಿ ಮೃತಪಟ್ಟರ ಕುಟುಂಬಕ್ಕೆ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ತಲಾ ₹ 4 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಗಂಭೀರ ಗಾಯಗೊಂಡವರಿಗೆ ₹ 50 ಸಾವಿರ, ಸಣ್ಣಪುಟ್ಟ ಗಾಯಗಳಾಗಿರುವವರಿಗೆ ₹ 25 ಸಾವಿರ ಪರಿಹಾರ ನೀಡಲಾಗುವುದು. ಗಾಯಗೊಂಡವರ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದು ಸಚಿವ ಮಿಶ್ರಾ ತಿಳಿಸಿದ್ದಾರೆ.

ಮೋದಿ ಸಂತಾಪ: ಖರ್ಗೋನ್ ಜಿಲ್ಲೆಯಲ್ಲಿ ಸಂಭವಿಸಿದ ಬಸ್ ಅಪಘಾತದಲ್ಲಿ ಮೃತಪಟ್ಟವರಿಗೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ.

‘ಮೋದಿ ಅವರು ಈ ಅಪಘಾತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಲಾ ₹ 2 ಲಕ್ಷ ಹಾಗೂ ಗಾಯಗೊಂಡವರಿಗೆ ₹ 50 ಸಾವಿರ ಪರಿಹಾರ ಘೋಷಿಸಿದ್ದಾರೆ’ ಎಂದು ಪ್ರಧಾನಿ ಕಚೇರಿ ಟ್ವೀಟ್ ಮಾಡಿದೆ.

ಕೇರಳ ಗಡಿ ದಾಟಿ ಹೊರಟ ಕರ್ನಾಟಕದ ಚುನಾವಣಾ ಸಿಬ್ಬಂದಿ

ಇರುವುದು 42 ಮತ: 120 ಕಿ.ಮೀ ಪ್ರಯಾಣ!

• ಕೆ.ಎಸ್.ಗಿರೀಶ



ಮತದಾನ ಬಹಿಷ್ಕರಿಸಿದ್ದ ಮುಂಡ್ರೋಟ್ ಜನರನ್ನು ಭಾಗಮಂಡಲ ಗ್ರಾಮ ಪಂಚಾಯಿತಿ ಅಧಿಕಾರಿಗಳು ಈಚೆಗೆ ಮನವೊಲಿಸಿ, ಮತದಾನ ಮಾಡುವ ಪ್ರತಿಜ್ಞೆ ಸ್ವೀಕರಿಸುವಂತೆ ಮಾಡಿದರು

ಮಡಿಕೇರಿ: 42 ಮತದಾರರಿಗಾಗಿ 120 ಕಿ.ಮೀ ಪ್ರಯಾಣವೇ?

ವಿಧಾನಸಭೆ ಚುನಾವಣೆಯ ಮತದಾನದ ಸಿದ್ಧತೆಗಾಗಿ ಮಂಗಳವಾರ ಮಸ್ಟರಿಂಗ್ ಕೇಂದ್ರಕ್ಕೆ ಬಂದು, ತಾವು ತೆರಳಬೇಕಾದ ಮತಗಟ್ಟೆಯ ಮಾಹಿತಿ ಪಡೆದ ಸಿಬ್ಬಂದಿಗೆ ಇಂಥದ್ದೊಂದು ಅಚ್ಚರಿ ಎದುರಾಗಿತ್ತು. ಆ ಭಾವದೊಂದಿಗೇ ವಲಯ ಅರಣ್ಯಾಧಿಕಾರಿ ಕೊಟ್ರೇಶ್ ಅವರ ನೇತೃತ್ವದ ಸಿಬ್ಬಂದಿಯು ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ ಐವರು ಹಾಗೂ ಮೂವರು ಪೊಲೀಸರೊಂದಿಗೆ ಸುದೀರ್ಘ ಪ್ರಯಾಣವನ್ನು ಆರಂಭಿಸಿದರು.

ಮಡಿಕೇರಿ ತಾಲ್ಲೂಕಿನ ಭಾಗಮಂಡಲ ಗ್ರಾಮ ಪಂಚಾಯಿತಿಯ ಮುಂಡ್ರೋಟ್‌ನಲ್ಲಿರುವ 42 ಮತದಾರರನ್ನು ತಲುಪಬೇಕಾದರೆ ವಿರಾಜಪೇಟೆಯಿಂದ 120 ಕಿ.ಮೀ ಪ್ರಯಾಣಿಸಿ, ಕೇರಳ ಗಡಿ ದಾಟಬೇಕು.

ಭಾಗಮಂಡಲ ಪಂಚಾಯಿತಿ ಕೇಂದ್ರಕ್ಕೆ ಗ್ರಾಮಸ್ಥರು ಬರಬೇಕಾದರೆ 88 ಕಿ.ಮೀ ಪ್ರಯಾಣಿಸಬೇಕು. ದುರ್ಗಮವಾದ ಬೆಟ್ಟಗುಡ್ಡಗಳನ್ನು ಹತ್ತಿ ಇಳಿಯಬೇಕು. ನಂತರ ಕರಿಕೆ ತಲುಪಿ ಅಲ್ಲಿಂದ ಕೇರಳದ ಪಾಣತ್ತೂರು, ಕೋಯಿಚಾಲ್, ಮಾಲಂ, ಚಿತ್ತಾರಿಕಲ್, ಪಾಲಂಬೈಲ್ ಮೂಲಕ ಕರ್ನಾಟಕದ ಮುಂಡ್ರೋಟ್‌ಗೆ ಬರಬೇಕು. ಇಲ್ಲಿನ ವಲಯ ಅರಣ್ಯಾಧಿಕಾರಿಗಳ ಕಚೇರಿಯಲ್ಲಿ ಮತಗಟ್ಟೆಯನ್ನು ಸ್ಥಾಪಿಸಲಾಗಿದೆ. ಸುತ್ತಮುತ್ತ 8 ಮತದಾರರಷ್ಟೇ ಇದ್ದು, ಇನ್ನುಳಿದವರೂ 15 ಕಿ.ಮೀ ದೂರದಿಂದ ದುರ್ಗಮ ಹಾದಿಯಲ್ಲಿ ಬರಬೇಕು.

ಮುಂಡ್ರೋಟ್ ಭಾಗಮಂಡಲ ಪಂಚಾಯಿತಿಗೆ ಸೇರಿದ್ದರೆ, ಇಲ್ಲಿಂದ 20 ಕಿ.ಮೀ ದೂರದಲ್ಲಿರುವ ಮುಂದಾರೆ ಮಲೆ 80ಕ್ಕೂ ಹೆಚ್ಚು ಕಿ.ಮೀ ದೂರದ ಅಯ್ಯಂಗೇರಿ ಪಂಚಾಯಿತಿಗೆ ಸೇರಿದೆ.

ಜೀಪ್ ಬಾಡಿಗೆ ಎರಡೂವರೆ ಸಾವಿರ!: ‘ಮುಂಡ್ರೋಟ್‌ನಿಂದ 15 ಕಿ.ಮೀ ದೂರದಲ್ಲಿರುವ ಮುಂದಾರೆಯಲ್ಲಿ 32 ಮತದಾರರಿದ್ದಾರೆ. ದುರ್ಗಮ ಹಾದಿಯಲ್ಲಿ ಮತ ಹಾಕಲು ಬರಬೇಕಾದರೆ ಕನಿಷ್ಠ ₹ 2,5 ಸಾವಿರ ಜೀಪ್ ಬಾಡಿಗೆ ಕೊಡಬೇಕು. ಮುಂಡ್ರೋಟ್ 80 ಕಿ.ಮೀ ದೂರದ ಚೇರಂಗಾಲದ ವಾರ್ಡ್‌ಗೆ ಸೇರುತ್ತದೆ. ನಾನು ಮತಯಾಚಿಸಲು ಅಷ್ಟು ದೂರ ಪ್ರಯಾಣಿಸಬೇಕು’ ಎಂದು ಈ ಭಾಗವನ್ನು ಪ್ರತಿನಿಧಿಸುತ್ತಿರುವ ಚೇರಂಗಾಲದ ನಾಗೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸುಮಾರು 4 ಗಂಟೆಯಷ್ಟು ದೀರ್ಘ ಕಾಲ ಪ್ರಯಾಣಿಸಬೇಕಿದ್ದು, ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ’ ಎಂದು ಮತಗಟ್ಟೆ ಅಧಿಕಾರಿ ಕೊಟ್ರೇಶ್ ತಿಳಿಸಿದರು.

‘ಮುಂಡ್ರೋಟ್ ಹಾಗೂ ಮುಂದಾರೆ ಮಲೆಯ ಗ್ರಾಮಸ್ಥರು ಚುನಾವಣೆಯನ್ನು ಬಹಿಷ್ಕರಿಸಿದ್ದರು. ಸ್ವೀಪ್ ಸಮಿತಿಯಿಂದ ಇಡೀ ದಿನ ಕಾರ್ಯಾಗಾರ ನಡೆಸಿ ಮನವೊಲಿಸಿದ್ದೇವೆ. ಮತದಾನಕ್ಕಾಗಿ ದುರ್ಗಮ ಹಾದಿಯಲ್ಲಿ ಬರಬೇಕೆಂಬುದು ಅವರ ಆಕ್ಷೇಪ’ ಎಂದು ಭಾಗಮಂಡಲ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಂದ ತಿಳಿಸಿದರು.

> **ಮುಂಡ್ರೋಟ್‌ನಲ್ಲಿ 15 ವರ್ಷದ ಹಿಂದೆ 100ಕ್ಕೂ ಅಧಿಕ ಮತದಾರರು ಇದ್ದರು. ಈಗ 42ಕ್ಕೆ ಕಡಿಮೆಯಾಗಿದೆ. ವರ್ಷದಿಂದ ವರ್ಷಕ್ಕೆ ಜನಸಂಖ್ಯೆ ಕಡಿಮೆಯಾಗುತ್ತಿದೆ**
> **ಬೇಬಿ ಮ್ಯಾಥ್ಯು,** ಮುಂಡ್ರೋಟ್ ನಿವಾಸಿ.

ತಲಕಾವೇರಿಯಿಂದ 18 ಕಿ.ಮೀ ಇದ್ದರೂ 80 ಕಿ.ಮೀ ಬಳಸಿ ಬರಬೇಕು!

ಮುಂಡ್ರೋಟ್ ತಲಕಾವೇರಿಯಿಂದ ಕೇವಲ 18 ಕಿ.ಮೀ ದೂರದಲ್ಲಿದೆ. ಆದರೆ, ಈ ಮಾರ್ಗದಲ್ಲಿ ತೀರಾ ಅಪಾಯಕಾರಿಯಾದ ಐದು ತಿರುವುಗಳಿದ್ದು, ತೀರಾ ಕಡಿದಾದ ಹಾದಿಯಲ್ಲಿ ಸ್ವಲ್ಪ ಎಚ್ಚರ ತಪ್ಪಿದರೂ ಆಳವಾದ ಕಂದಕಕ್ಕೆ ವಾಹನ ಉರುಳುತ್ತದೆ. ಹಾಗಾಗಿ, ಈ ಮಾರ್ಗದಲ್ಲಿ ಸಂಚಾರವನ್ನು ನಿಷೇಧಿಸಲಾಗಿದೆ.

‘ಸುಮಾರು 20 ವರ್ಷದ ಹಿಂದೆ ಇಲ್ಲಿ ಜೀಪೊಂದು ಉರುಳಿ ಬಿದ್ದು, ಮೃತದೇಹಗಳನ್ನು ತೆಗೆಯಲು ಅರಣ್ಯ ಇಲಾಖೆ ಇನ್ನಿಲ್ಲದ ಶ್ರಮಪಟ್ಟಿತ್ತು. ಅಂದಿನಿಂದ ಈ ದಾರಿಯನ್ನು ಮುಚ್ಚಲಾಗಿದೆ. ಹೀಗಾಗಿ 80 ಕಿ.ಮೀ ದೂರ ಬಳಸಿ, ಕೇರಳ ದಾಟಿ ಮುಂಡ್ರೋಟ್‌ಗೆ ಹೋಗಬೇಕು. ಅಲ್ಲಿನ ನಿವಾಸಿಗಳ ಸಮಸ್ಯೆ ಹೇಳತೀರದು’ ಎಂದು ಭಾಗಮಂಡಲ ಗ್ರಾಮ ಪಂಚಾಯಿತಿ ಸದಸ್ಯ ಚೇರಂಗಾಲದ ನಾಗೇಶ್ ಹೇಳಿದರು.

ರಾಜಸ್ಥಾನ: ಬೆಂಗಳೂರಿನ ವಿದ್ಯಾರ್ಥಿ ಸಾವು

ಕೋಟಾ (ರಾಜಸ್ಥಾನ) (ಪಿಟಿಐ): ‘ಎರಡು ದಿನಗಳ ಹಿಂದೆಯಷ್ಟೇ ’ನೀಟ್‘ ಬರೆದಿದ್ದ ಬೆಂಗಳೂರಿನ ವಿದ್ಯಾರ್ಥಿ ಮಹಮ್ಮದ್ ನಾಸಿರ್ ಎಂಬುವವರು ಇಲ್ಲಿನ ವಿಜ್ಞಾನ್ ನಗರದ ಬಹು ಮಹಡಿ ಕಟ್ಟಡವೊಂದರಿಂದ ಬಿದ್ದು ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಮಂಗಳವಾರ ತಿಳಿಸಿದರು. ವಿದ್ಯಾರ್ಥಿಯು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಅವರು ಶಂಕಿಸಿದ್ದಾರೆ.

‘ನಾಸಿರ್ ಅವರು ರಾಜಸ್ಥಾನದ ಜೈಪುರದ ಪರೀಕ್ಷಾ ಕೇಂದ್ರವೊಂದರಲ್ಲಿ ಭಾನುವಾರ ’ನೀಟ್‘ ಬರೆದಿದ್ದರು. ಮರುದಿನ ಕೋಟಾಗೆ ವಾಪಸಾಗಿದ್ದರು. ನಾಸಿರ್ ಅವರು ಕೋಟಾದ ಇನ್‌ಸ್ಟಿಟ್ಯೂಟ್‌ವೊಂದರಲ್ಲಿ ಕಳೆದ ವರ್ಷದಿಂದ ನೀಟ್ ಪರೀಕ್ಷೆಗಾಗಿ ತರಬೇತಿ ಪಡೆಯುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಸೋಮವಾರ ರಾತ್ರಿ ಸುಮಾರು 11 ಗಂಟೆಯ ವೇಳೆಗೆ ಕಟ್ಟಡದ 10ನೇ ಮಹಡಿಯಿಂದ ಬಿದ್ದು ನಾಸಿರ್ ಮೃತಪಟ್ಟಿದ್ದಾರೆ. ಕೆಲವು ಸ್ನೇಹಿತರೊಂದಿಗೆ ಅವರು ವಾಸವಿದ್ದರು. ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ಈ ಘಟನೆ ನಡೆದಿದೆ’ ಎಂದು ವಿಜ್ಞಾನ್ ನಗರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ದೇವೇಶ್ ಭಾರದ್ವಾಜ್ ತಿಳಿಸಿದರು.


‘ಎಂಬಿಎಸ್ ಆಸ್ಪತ್ರೆಯ ಶಾವಾಗಾರದಲ್ಲಿ ಮೃತದೇಹವನ್ನು ಇಡಲಾಗಿದೆ. ಬೆಂಗಳೂರಿನಿಂದ ನಾಸಿರ್ ಅವರ ಪೋಷಕರು ಬಂದ ಬಳಿಕ ಮರಣೋತ್ತರ ಪರೀಕ್ಷೆ ನಡೆಸಲಾಗುತ್ತದೆ’ ಎಂದರು.

ಬುಧವಾರ, ಮೇ 10, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ತಂತ್ರಜ್ಞಾನ
ಇಂದಿನ ಚುನಾವಣೆಗಳಲ್ಲಿ ಕೃತಕ ಬುದ್ಧಿಮತ್ತೆಯ ಪಾತ್ರವೂ ದೊಡ್ಡದು



ಸಂಪಾದಕೀಯ

ಅಂಟಾರ್ಕ್ಟಿಕದ ಜೀವಿಉದ್ಯಾನಗಳ ಭವಿಷ್ಯ | 2 | ಮತದ ಮೌಲ್ಯ ಮುಕ್ಕುಗೊಳ್ಳದಿರಲಿ ವಿವೇಕ

ಬನ್ನಿ ಮತ ಹಾಕೋಣ




ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನ ಮಾಡುವುದು ಪ್ರತಿಯೊಬ್ಬ ನಾಗರಿಕರ ಪವಿತ್ರ ಹಕ್ಕು ಮತ್ತು ಕರ್ತವ್ಯ. ಕೆಲವರು ಉದಾಸೀನ ಮಾಡಿ ಅಥವಾ ಕುಂಟು ನೆಪ ಒಡ್ಡಿ ಮತದಾನ ಮಾಡುವುದಿಲ್ಲ. ದಕ್ಷ, ಪ್ರಾಮಾಣಿಕ ಹಾಗೂ ಉತ್ತಮ ನಾಯಕತ್ವ ಗುಣವನ್ನು ಹೊಂದಿರುವ ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಉಜ್ವಲ ಭವಿಷ್ಯ ರೂಪಿಸಿಕೊಳ್ಳುವುದು ನಮ್ಮೆಲ್ಲರ ಹೊಣೆಗಾರಿಕೆ. ಭಯ, ಒತ್ತಡ ಹಾಗೂ ಆಮಿಷಕ್ಕೆ ಒಳಗಾಗದೆ ಸ್ವಯಂ ಪ್ರೇರಣೆಯಿಂದ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು.
ಡಿ.ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ




ಪ್ರಜಾಪ್ರಭುತ್ವ ಉಳಿಯಬೇಕಾದರೆ ಮತದಾರರು ಕಡ್ಡಾಯವಾಗಿ ಮತ ಚಲಾಯಿಸಬೇಕು. ಅಭ್ಯರ್ಥಿಗಳು ಹಣ, ಹೆಂಡ, ಆಮಿಷಗಳು ಎಂಬ ಗಾಳ ಹಾಕಿ ಮತಗಳನ್ನು ಪಡೆಯಲು ಸಂಚು ರೂಪಿಸುತ್ತಾರೆ. ಮತದಾರರು ಎಂದಿಗೂ ಗಾಳಕ್ಕೆ ಮೀನುಗಳಾಗಬಾರದು, ಮನುಷ್ಯರಾಗಿರಬೇಕು. ಉತ್ತಮ ಸರ್ಕಾರ ರಚನೆಯಾಗಬೇಕಾದರೆ ನಮ್ಮೊಳಗೆ ಚಿಂತಿಸಿ ಉತ್ತಮ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕು. ಧರ್ಮ, ಜಾತಿ, ಭಾವನಾತ್ಮಕ ವಿಚಾರಗಳಿಗಿಂತ ಮಾನವೀಯತೆ ಬಹಳ ಮುಖ್ಯ. ಮಾನವೀಯತೆ ಮರೆತ ಯಾವ ಧರ್ಮವೂ ಧರ್ಮವಲ್ಲ; ಧರ್ಮದ ಮೂಲವೇ ಮಾನವೀಯತೆ ಎಂಬುದು ತಿಳಿದಿರಲಿ.
ವೈದೇಹಿ, ಲೇಖಕಿ



ಸದೃಢ ಸಮಾಜ, ನೆಮ್ಮದಿಯ ನಾಡು ಕಟ್ಟಲು ಮತದಾನ ಅಸ್ತ್ರವಾಗಬೇಕು. ಭಾರತೀಯ ಸಂವಿಧಾನ ಕೊಟ್ಟಿರುವ ಮತದಾನ ಹಕ್ಕು ನೂರಕ್ಕೆ ನೂರರಷ್ಟು ಬಳಕೆಯಾಗಬೇಕು. ಅಭ್ಯರ್ಥಿ ಯೋಗ್ಯರಿಲ್ಲ ಎಂಬ ಒಂದೇ ಒಂದು ಕಾರಣಕ್ಕೆ ಮತದಾನದಿಂದಲೇ ದೂರ ಉಳಿಯುವುದು ದೊಡ್ಡ ತಪ್ಪು. ಇರುವವರಲ್ಲೇ ಯೋಗ್ಯರನ್ನು ಆಯ್ಕೆ ಮಾಡಿ ಸಂವಿಧಾನ, ಪ್ರಜಾಪ್ರಭುತ್ವ ಉಳಿಸಬೇಕು. ಪ್ರತಿ 5 ವರ್ಷಕ್ಕೊಮ್ಮೆ ಬರುವ ಮತದಾನದ ಅವಕಾಶವನ್ನು ಕಳೆದುಕೊಳ್ಳಬಾರದು. ಯಾವುದೇ ಕಾರಣಕ್ಕೂ ಪವಿತ್ರ ಮತವನ್ನು ಆಸೆ, ಆಮಿಷಗಳಿಗೆ ಮಾರಿಕೊಳ್ಳಬಾರದು. ಹಾಗೆ ಮಾಡುವುದು ನಮ್ಮ ನಾಡಿಗೆ, ಸಮಾಜಕ್ಕೆ, ಸಂವಿಧಾನಕ್ಕೆ ಮಾಡುವ ದ್ರೋಹ.
ಉಸ್ತಾದ್ ಫಯಾಜ್ ಖಾನ್, ಹಿಂದೂಸ್ತಾನಿ ಗಾಯಕ, ಸಾರಂಗಿ ವಾದಕ



ಮತದಾನವನ್ನು ಜನರು ಆದ್ಯತೆಯಾಗಿ ಇಟ್ಟುಕೊಳ್ಳಬೇಕು. ಯೋಚನೆ ಮಾಡಿ ಮತ ಹಾಕಬೇಕು. ಯಾರು ಸರಿಯಾದ ನಾಯಕರು ಎಂಬುದರ ಚಿಂತನೆ ಮಾಡಬೇಕು. ಇದನ್ನೇ ದೇಶದ ಬಗ್ಗೆ ಯೋಚಿಸುವುದು ಅಂತ ಹೇಳೋದು. ಏನೋ ನಡೆದುಕೊಂಡು ಹೋಗುತ್ತದೆ ಎಂದು ಭಾವಿಸಿ ಸುಮ್ಮನೆ ಕೂರಬಾರದು. ಮತದಾನದ ಅವಕಾಶ ತಪ್ಪಿಸಿಕೊಳ್ಳಬೇಡಿ.
ಜಾವಗಲ್ ಶ್ರೀನಾಥ್, ಕ್ರಿಕೆಟಿಗ, ಐಸಿಸಿ ರೆಫರಿ



ಪಕ್ಷ ನೋಡಿಕೊಂಡು ಮತ ಹಾಕಬೇಡಿ. ಒಬ್ಬ ಒಳ್ಳೆಯ ನಾಯಕ ಯಾವುದೇ ಪಕ್ಷದಲ್ಲಿ ಇದ್ದರೂ ಅವರನ್ನು ಗುರುತಿಸಿ ಮತ ಹಾಕಿ. ಏಕೆಂದರೆ ಒಳ್ಳೆಯ ನಾಯಕನಿದ್ದರೆ ರಾಜ್ಯದ ಅಭಿವೃದ್ಧಿ ಸಾಧ್ಯ. ಪಕ್ಷೇತರನಾಗಿ ನಿಂತಿರುವ ಅಭ್ಯರ್ಥಿಯ ಆಲೋಚನೆ, ಆತನ ಕೆಲಸ ಇಷ್ಟವಾಗಿದ್ದಲ್ಲಿ ಅವರಿಗೆ ಮತ ನೀಡಿ. ಒಬ್ಬ ಉತ್ಕೃಷ್ಟ ಆಡಳಿತಗಾರನನ್ನು ಆರಿಸುವ ಅಗತ್ಯವಿದೆ. ಅದಕ್ಕಾಗಿ ನಿಮ್ಮ ಹಕ್ಕು ಚಲಾಯಿಸಿ.
ರಚಿತಾ ರಾಮ್, ನಟಿ





ಮರಳು ಕಲಾಕೃತಿ ಹೇಳೋದೇನು?

ಉಡುಪಿಯ ಮಲ್ಪೆ ಬೀಚ್‌ನಲ್ಲಿ ಮಂಗಳವಾರ ಸ್ಯಾಂಡ್ ಥೀಮ್ ಉಡುಪಿ ಮರಳು ಕಲಾವಿದರಾದ ಹರೀಶ್ ಸಾಗಾ, ಸಂತೋಷ್ ಭಟ್ ಹಾಲಾಡಿ, ಉಜ್ವಲ್ ನಿಟ್ಟೆ ನಾಲ್ಕುವರೆ ಅಡಿ ಎತ್ತರ, ಆರು ಅಡಿ ಅಗಲದ ಮರಳು ಕಲಾಕೃತಿ ರಚಿಸಿ ಮತದಾನದ ಜಾಗೃತಿ ಮೂಡಿಸಿದರು

ಮುಖ್ಯಮಂತ್ರಿಯಿಂದ ಆಂಜನೇಯ ಪೂಜೆ; ಕಾಂಗ್ರೆಸ್ ನಾಯಕರಿಂದ ಚಾಮುಂಡೇಶ್ವರಿಗೆ ಅರಿಕೆ

‘ದೇವರ’ ಮೊರೆಹೋದ ನಾಯಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಆಡಳಿತ ಚುಕ್ಕಾಣಿ ಮುಂದಿನ ಐದು ವರ್ಷ ಹಿಡಿಯುವವರು ಯಾರು ಎಂದು ನಿರ್ಧರಿಸಲಿರುವ ವಿಧಾನಸಭೆ ಚುನಾವಣೆಯ ಮತದಾನಕ್ಕೆ ಇನ್ನು ಕೆಲವೇ ಗಂಟೆಗಳು ಬಾಕಿ ಇರುವಂತೆ, ಬಿಜೆಪಿ– ಕಾಂಗ್ರೆಸ್ ನಾಯಕರು ದೇವರ ಮೊರೆ ಹೋಗಿದ್ದಾರೆ.

ಹುಬ್ಬಳ್ಳಿಯ ವಿಜಯನಗರದ ಆಂಜನೇಯ ದೇವಸ್ಥಾನದಲ್ಲಿ ಮಂಗಳವಾರ ಬೆಳಿಗ್ಗೆ ವಿಶೇಷ ಪೂಜೆ ಸಲ್ಲಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಹನುಮಾನ್ ಚಾಲೀಸ ಪಠಣ ಮಾಡಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿಗೆ ಪ್ರಾರ್ಥನೆ ಸಲ್ಲಿಸಿದರು.

ಚಾಮುಂಡಿ ಬೆಟ್ಟಕ್ಕೆ ತೆರಳುವುದಕ್ಕೂ ಮೊದಲು ನಗರದ ಮೈಸೂರು ಬ್ಯಾಂಕ್ ವೃತ್ತದ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಡಿ.ಕೆ. ಶಿವಕುಮಾರ್ ವಿಶೇಷ ಪೂಜೆ, ಹೋಮ ಮಾಡಿಸಿದರು. ಅತ್ತ ಶಿವಮೊಗ್ಗ ನಗರದಲ್ಲಿರುವ ಕೋಟೆ ಆಂಜನೇಯ ದೇವಾಲಯದಲ್ಲಿ ಶಿಕಾರಿಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ವೈ. ವಿಜಯೇಂದ್ರ ಪೂಜೆ ಸಲ್ಲಿಸಿದರು.

‘ಸಂವಿಧಾನದ ವಿಧಿಗಳನ್ನು ಉಲ್ಲಂಘಿಸುವ ವ್ಯಕ್ತಿ ಹಾಗೂ ಬಜರಂಗದಳ, ಪಿಎಫ್ಐನಂತಹ ಸಂಘಟನೆಗಳ ನಿಷೇಧವೂ ಸೇರಿದಂತೆ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಉಲ್ಲೇಖಿಸಿರುವುದು, ಎರಡೂ ಪಕ್ಷಗಳ ನಡುವೆ ವಾಗ್ಯುದ್ಧಕ್ಕೆ ಕಾರಣವಾಗಿತ್ತು.

ಕಾಂಗ್ರೆಸ್‌ನ ನಡೆಗೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಬಿಜೆಪಿ, ಬಜರಂಗದಳ ಸೇರಿದಂತೆ ವಿವಿಧ ಸಂಘಟನೆಗಳು ಕಾಂಗ್ರೆಸ್ ಪಕ್ಷದ ವಿರುದ್ಧ ಹನುಮಾನ್ ಚಾಲೀಸ ಪಠಿಸುವ ಮಾಡುವ ಮೂಲಕ ತಿರುಗೇಟು ನೀಡುತ್ತಿವೆ. ಬಿಜೆಪಿಯ ಈ ‘ತಂತ್ರ’ಕ್ಕೆ ಪ್ರತಿತಂತ್ರ ಹೆಣೆದಿರುವ ಕಾಂಗ್ರೆಸ್ ನಾಯಕರು ದೇವಸ್ಥಾನಗಳಿಗೆ ತೆರಳಿ ಭಕ್ತಿ ಮೆರೆದಿದ್ದಾರೆ.



ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಮಂಗಳವಾರ ಭೇಟಿ ನೀಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಚಾಮುಂಡೇಶ್ವರಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. – ಪ್ರಜಾವಾಣಿ ಚಿತ್ರ.

ಕಾಂಗ್ರೆಸ್ ನಾಯಕರಿಂದ ದೇವಿಗೆ ಅರಿಕೆ

ಮೈಸೂರು: ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್, ‘ಕಾಂಗ್ರೆಸ್ ಸರ್ಕಾರ ಬರಲು ಆಶೀರ್ವಾದ ಮಾಡು ತಾಯಿ’ ಎಂದು ಪ್ರಾರ್ಥಿಸಿದರು.

ಕಾಂಗ್ರೆಸ್‌ನ ‘ಗ್ಯಾರಂಟಿ’ ಕಾರ್ಡ್‌ಗಳನ್ನು ಮಲ್ಲಿಗೆ, ಕನಕಾಂಬರ ಹೂವಿನ ಹಾರ, ತುಪ್ಪ, ಹಣ್ಣು, ಹಾಗೂ ಸೀರೆಯೊಂದಿಗೆ ಪೂಜಾ ತಟ್ಟೆಯಲ್ಲಿರಿಸಿ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್ ಅವರಿಗೆ ನೀಡಿದ ಇಬ್ಬರೂ ನಾಯಕರು, ‘ಜನರ ಯೋಜನೆಗಳನ್ನು ಜಾರಿಗೊಳಿಸಲು ಅನುಕೂಲ ಮಾಡಿಕೊಡಬೇಕು’ ಎಂದು ಕೋರಿ ಪ್ರಸಾದ ಪಡೆದರು. ನಂತರ ದೇವಿಯ ಉತ್ಸವ ಮೂರ್ತಿಗೆ ನಮಸ್ಕರಿಸಿದ ಇಬ್ಬರೂ ದೇವಾಲಯದ ಎದುರು ತೆಂಗಿನಕಾಯಿ ಒಡೆದರು.

ಹನುಮಂತನಲ್ಲಿ ಪ್ರಾರ್ಥನೆ: ಮೈಸೂರು ಬ್ಯಾಂಕ್ ವೃತ್ತದಲ್ಲಿರುವ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಬಳಿಕ ಮಾತನಾಡಿದ ಡಿ.ಕೆ. ಶಿವಕುಮಾರ್, ‘ದೇಶದಲ್ಲಿ ರಾಮನ ತಂದೆ ದಶರಥ ಮಹಾರಾಜನ ದೇವಾಲಯ ಎಲ್ಲೂ ಇಲ್ಲ. ಆದರೆ, ರಾಮನ ಬಂಟ ಹನುಮನ ದೇವಾಲಯ ಎಲ್ಲ ಕಡೆ ಇದೆ. ಹನುಮಂತ ಸಮಾಜದ ಸೇವಕ. ನಮ್ಮ ಮೇಲೆ ಆಂಜನೇಯನ ಅನುಗ್ರಹ ಸದಾ ಇರಲಿದೆ. ಆಂಜನೇಯ ಹೇಗೆ ಸಮಾಜಕ್ಕೆ ಸೇವೆ ಮಾಡಿದನೋ ಅದೇ ರೀತಿ ರಾಜ್ಯದ ಸೇವೆ ಮಾಡಲು ಶಕ್ತಿ ನೀಡುವಂತೆ ಹನುಮಂತನಲ್ಲಿ ಪ್ರಾರ್ಥನೆ ಮಾಡಿದ್ದೇನೆ’ ಎಂದರು.

ಬಿಜೆಪಿಯಿಂದ ‘ಹನುಮಾನ್ ಚಾಲೀಸ’

ಹುಬ್ಬಳ್ಳಿಯ ವಿಜಯನಗರದ ಆಂಜನೇಯ ದೇವಸ್ಥಾನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹನುಮಾನ್ ಚಾಲೀಸ ಪಠಣ ಮಾಡಿದರು. ರಾಜ್ಯ ಬಿಜೆಪಿ ಕಚೇರಿಯಲ್ಲಿ ಹನುಮಾನ್ ಚಾಲೀಸ ಪಠಿಸಿ, ಶ್ರೀ ಗಣಪತಿ ಸ್ತೋತ್ರ ಪಠಣ ಮಾಡಿ ಭಾರತ ಮಾತೆಗೆ ಪೂಜೆ ಸಲ್ಲಿಸಲಾಯಿತು.

ಬಿಜೆಪಿ ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಜಿ.ವಿ, ರಾಜ್ಯ ಕಾರ್ಯಾಲಯ ಕಾರ್ಯದರ್ಶಿ ಲೋಕೇಶ್ ಅಂಬೆಕಲ್ಲು, ಪ್ರಕಾಶನ ಪ್ರಕೋಷ್ಠದ ರಾಜ್ಯ ಸಂಚಾಲಕ ಬಿದರೆ ಪ್ರಕಾಶ್ ಮತ್ತಿತರರು, ರಾಜ್ಯ, ದೇಶ ಮತ್ತು ಪ್ರಧಾನಿ ನರೇಂದ್ರ ಮೋದಿ ಒಳಿತಿಗಾಗಿ ಪ್ರಾರ್ಥಿಸಿದರು.

ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅಶ್ವತ್ಥನಗರದ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ನೇತೃತ್ವದಲ್ಲಿ ಹನುಮಾನ್ ಚಾಲೀಸ ಪಠಣ ನಡೆಯಿತು.

ಮಹಾಲಕ್ಷ್ಮೀ ಲೇಔಟ್‌ನಲ್ಲಿರುವ ಪ್ರಸನ್ನ ವೀರಾಂಜನೇಯ ದೇವಸ್ಥಾನದಲ್ಲಿ ರಾಜ್ಯ ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಶೋಭಾ ಕರಂದ್ಲಾಜೆ ಪೂಜೆ ನೆರವೇರಿಸಿದರು. ಸಚಿವ ಕೆ. ಗೋಪಾಲಯ್ಯ, ಬಿಬಿಎಂಪಿ ಮಾಜಿ ಉಪಮೇಯರ್ ಎಸ್. ಹರೀಶ್ ಜೊತೆಗಿದ್ದರು ಈ ವೇಳೆಯಲ್ಲಿ ಮಾತನಾಡಿದ ಶೋಭಾ, ‘ಬಜರಂಗದಳವನ್ನು ನಿಷೇಧಿಸುವುದಾಗಿ ಪ್ರಣಾಳಿಕೆಯಲ್ಲಿ ಹೇಳಿರುವ ಕಾಂಗ್ರೆಸ್, ಹಿಂದೂಗಳ ಭಾವನೆ ಮತ್ತು ಶ್ರದ್ಧೆಗೆ ಧಕ್ಕೆ ತರುವ ಕೆಲಸ ಮಾಡುತ್ತಿದೆ’ ಎಂದರು.



ಹುಬ್ಬಳ್ಳಿಯ ವಿಜಯನಗರದ ಆಂಜನೇಯ ದೇವಸ್ಥಾನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಹನುಮಾನ ಚಾಲೀಸ ಪಠಣ ಮಾಡಿದರು

ಬಿಜೆಪಿ ಕಾರ್ಯಕರ್ತರನ್ನು ಹಿಂಬಾಲಿಸಿ ಹಿಡಿದ ಡಿ.ಸಿ!

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲಬುರಗಿ ದಕ್ಷಿಣ ಕ್ಷೇತ್ರದ ಸಂಗಮೇಶ್ವರ ಕಾಲೊನಿಯಲ್ಲಿ ಬಿಜೆಪಿ ಅಭ್ಯರ್ಥಿ ಪರ ಹಣ ಹಂಚಲು ಮುಂದಾಗಿದ್ದ ಇಬ್ಬರು ಆರೋಪಿಗಳನ್ನು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಯಶವಂತ ವಿ. ಗುರುಕರ್ ಅವರು ಕಾರಿನಲ್ಲಿ ಹಿಂಬಾಲಿಸಿ, ನಂತರ ಪೊಲೀಸರ ವಶಕ್ಕೆ ಒಪ್ಪಿಸಿದರು.

‘ಬಿಜೆಪಿ ಅಭ್ಯರ್ಥಿ, ಹಾಲಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಕಡೆಯವರು ಎನ್ನಲಾದ ಶಿವಾನಂದ ಹುಲಿ ಹಾಗೂ ಅವರ ಕಾರಿನ ಚಾಲಕ ಇಬ್ಬರೂ ರಾತ್ರಿ ದೀಪ ಆರಿಸಿ ಹಣ ಹಂಚಲು ಮುಂದಾಗಿದ್ದಾರೆ’ ಎಂದು ಕಾಂಗ್ರೆಸ್ ಕಾರ್ಯಕರ್ತರು ಜಿಲ್ಲಾಧಿಕಾರಿ ಅವರಿಗೆ ದೂರು ನೀಡಿದ್ದರು. ಸೋಮವಾರ ತಡ ರಾತ್ರಿ ಪೊಲೀಸರ ಗಮನಕ್ಕೂ ತರದೇ ಜಿಲ್ಲಾಧಿಕಾರಿ ಸ್ಥಳಕ್ಕೆ ಧಾವಿಸಿದರು.

ಜಿಲ್ಲಾಧಿಕಾರಿ ಬರುತ್ತಿದ್ದಂತೆ ಕಕ್ಕಾಬಿಕ್ಕಿಯಾದ ಇಬ್ಬರೂ ಆರೋಪಿಗಳು ಕಾರನ್ನು ವೇಗವಾಗಿ ಚಾಲನೆ ಮಾಡಿ, ಪರಾರಿಯಾಗಲು ಯತ್ನಿಸಿದರು. ಅವರನ್ನು ಬೆನ್ನಟ್ಟಿದ ಜಿಲ್ಲಾಧಿಕಾರಿ ಕೇಂದ್ರ ಬಸ್ ನಿಲ್ದಾಣ ಸಮೀಪದ ವಿದ್ಯಾನಗರದ ಆಂಜನೇಯ ದೇವಸ್ಥಾನದ ಬಳಿ ಕಾರನ್ನು ತಡೆದರು. ನಂತರ ಸ್ಥಳಕ್ಕೆ ಬಂದ ಪೊಲೀಸರು ಇಬ್ಬರನ್ನೂ ವಶಕ್ಕೆ ಪಡೆದರು.

‘ಜಿಲ್ಲಾಧಿಕಾರಿ ಬರುವ ಸುದ್ದಿ ಗೊತ್ತಾಗುತ್ತಿದ್ದಂತೆಯೇ ಹಣದ ಬ್ಯಾಗ್‌ನೊಂದಿಗೆ ವ್ಯಕ್ತಿಯೊಬ್ಬರು ಪರಾರಿಯಾಗಿದ್ದಾರೆ’ ಎಂದು ಮೂಲಗಳು ತಿಳಿಸಿವೆ. ‘ಕಾರನ್ನು ನಿಲ್ಲಿಸು’ ಎಂದರೂ ವೇಗವಾಗಿ ಚಲಾಯಿಸಿದ ಕಾರು ಚಾಲಕನನ್ನು ಜಿಲ್ಲಾಧಿಕಾರಿ ಗುರುಕರ್ ಅವರು ತರಾಟೆಗೆ ತೆಗೆದುಕೊಂಡ ದೃಶ್ಯ ವಿಡಿಯೊದಲ್ಲಿದೆ.

ಘಟನೆ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಪೊಲೀಸ್ ಕಮಿಷನರ್ ಚೇತನ್ ಆರ್, ‘ರಾತ್ರಿ ಕೆಲವರು ಹಣ ಹಂಚುತ್ತಿರುವ ಬಗ್ಗೆ ಮಾಹಿತಿ ಬಂದ ಬಳಿಕ ಜಿಲ್ಲಾಧಿಕಾರಿ ತೆರಳಿದ್ದಾರೆ. ಈ ಕುರಿತು ಕಾಂಗ್ರೆಸ್ ಮುಖಂಡರು ದೂರು ನೀಡಿದ್ದು, ನ್ಯಾಯಾಲಯದ ಅನುಮತಿ ಪಡೆದು ಎಫ್‌ಐಆರ್ ದಾಖಲಿಸುತ್ತೇವೆ’ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟನೆ ನೀಡಿದ ಬಿಜೆಪಿ ಅಭ್ಯರ್ಥಿ ದತ್ತಾತ್ರೇಯ ಪಾಟೀಲ ರೇವೂರ, ‘ನಾನು ಯಾರಿಗೂ ಹಣ ಹಂಚಿಲ್ಲ. ಕಾಂಗ್ರೆಸ್ ಅಭ್ಯರ್ಥಿ ಹತಾಶರಾಗಿ ಇಂತಹ ಆರೋಪ ಮಾಡಿದ್ದಾರೆ. ನಾನು ಸ್ಥಳದಲ್ಲಿ ಇರಲಿಲ್ಲ’ ಎಂದರು.



ಕಲಬುರಗಿ ಸಂಗಮೇಶ್ವರ ಕಾಲೊನಿಯಲ್ಲಿ ಹಣ ಹಂಚಿಕೆ ಮಾಡಿದ ಆರೋಪದ ಮೇಲೆ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಕರೆದೊಯ್ದರು

ಬಿಜೆಪಿ ಅಭ್ಯರ್ಥಿ ಸೋಲಿನ ಹತಾಶೆಯಿಂದ ಕೋಟ್ಯಂತರ ರೂಪಾಯಿ ಹಂಚಿಕೆ ಮಾಡುತ್ತಿದ್ದಾರೆ. ಪ್ರಚಾರಕ್ಕೆ ಹೋದ ನಮ್ಮ ಕಾರ್ಯಕರ್ತರನ್ನು ಬೆದರಿಸುತ್ತಿದ್ದಾರೆ
ಅಲ್ಲಮಪ್ರಭು ಪಾಟೀಲ, ಕಾಂಗ್ರೆಸ್ ಅಭ್ಯರ್ಥಿ

ಪ್ರಚಾರ ಮುಗಿಸಿ ಹೋಗುತ್ತಿದ್ದ ನಮ್ಮ ಕಾರ್ಯಕರ್ತರನ್ನು ಕಾಂಗ್ರೆಸ್ ಗೂಂಡಾಗಳು ಥಳಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಚುನಾಯಿತರಾದರೆ ಗೂಂಡಾ ಸಂಸ್ಕೃತಿ ತಲೆ ಎತ್ತಲಿದೆ
ದತ್ತಾತ್ರೇಯ ಪಾಟೀಲ ರೇವೂರ, ಬಿಜೆಪಿ ಅಭ್ಯರ್ಥಿ

ಹಣ ಹಂಚಿಕೆ ಆರೋಪ

ಭ್ರಷ್ಟಾಚಾರ: ಇಮ್ರಾನ್ ಖಾನ್ ಬಂಧನ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಅರೆಸೇನಾ ಪಡೆ ರೇಂಜರ್ಸ್ ಯೋಧರು ಇಲ್ಲಿನ ಹೈಕೋರ್ಟ್ ಆವರಣದಲ್ಲಿ ಮಂಗಳವಾರ ಬಂಧಿಸಿದ್ದಾರೆ.

ಭ್ರಷ್ಟಾಚಾರ ಪ್ರಕರಣದಲ್ಲಿ ಬೊಕ್ಕಸಕ್ಕೆ ನಷ್ಟ ಮಾಡಿದ ಪ್ರಕರಣದಲ್ಲಿ ಖಾನ್ ಅವರನ್ನು ಬಂಧಿಸಲಾಗಿದೆ ಎಂದು ಪಾಕಿಸ್ತಾನದ ಒಳಾಡಳಿತ ಸಚಿವ ರಾಣಾ ಸನಾವುಲ್ಲಾ ತಿಳಿಸಿದ್ದಾರೆ. ಬಂಧನದ ವೇಳೆ ಖಾನ್ ಅವರಿಗೆ ಕಿರುಕುಳ ನೀಡಲಾಗಿದೆ ಎಂಬ ಆರೋಪಗಳನ್ನು ರೇಂಜರ್ಸ್ ಯೋಧರು ನಿರಾಕರಿಸಿದ್ದಾರೆ.

ಖಾನ್ ಅವರನ್ನು ರಾಷ್ಟ್ರೀಯ ಭ್ರಷ್ಟಾಚಾರ ನಿಗ್ರಹ ಮಂಡಳಿಯ ಅಧಿಕಾರಿಗಳು ಅಲ್ ಖಾದಿರ್ ಟ್ರಸ್ಟ್ ಸ್ಥಾಪನೆ, ಹಣ ದುರ್ಬಳಕೆ ಪ್ರಕರಣದಲ್ಲಿ ಬಂಧಿಸಿದ್ದಾರೆ ಎಂದೂ ಸಚಿವರು ವಿವರಿಸಿದ್ದಾರೆ.

ಪಾಕಿಸ್ತಾನ್ ತೆಹ್ರೀಕ್ -ಇ- ಇನ್ಸಾಫ್ (ಪಿಟಿಐ) ಪಕ್ಷದ ಅಧ್ಯಕ್ಷರೂ ಆದ ಇಮ್ರಾನ್ ಖಾನ್, ಭ್ರಷ್ಟಾಚಾರ ಆರೋಪಗಳ ಪ್ರಕರಣದ ವಿಚಾರಣೆಗೆ ಲಾಹೋರ್‌ನಿಂದ ಇಲ್ಲಿನ ಹೈಕೋರ್ಟ್‌ಗೆ ಹಾಜರಾದಾಗ ಬಂಧಿಸಲಾಯಿತು ಎಂದು ಪಿಟಿಐ ಪಕ್ಷದ ವಕೀಲ ಫೈಸಲ್ ಚೌಧರಿ ತಿಳಿಸಿದ್ದಾರೆ.



ಇಮ್ರಾನ್ ಖಾನ್ ಬಂಧನವನ್ನು ಖಂಡಿಸಿ ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್ ಪಕ್ಷದ ಕಾರ್ಯಕರ್ತರು ಇಸ್ಲಾಮಾಬಾದ್‌ನಲ್ಲಿ ಪ್ರತಿಭಟನೆ ನಡೆಸಿದರು – ಎಎಫ್‌ಪಿ ಚಿತ್ರ



ಇಮ್ರಾನ್ ಖಾನ್

ಹಿಂಸಾಚಾರ

ಇಮ್ರಾನ್ ಖಾನ್ ಬಂಧನ ಖಂಡಿಸಿ ಪಿಟಿಐ ಕಾರ್ಯಕರ್ತರು ದೇಶದ ವಿವಿಧೆಡೆ ಪ್ರತಿಭಟನೆ ನಡೆಸಿದರು.

ಕರಾಚಿ ಮತ್ತು ಲಾಹೋರ್‌ನಲ್ಲಿ ಗುಂಪು ಚದುರಿಸಲು ಪೊಲೀಸರು ಅಶ್ರುವಾಯು ಮತ್ತು ಜಲಫಿರಂಗಿ ಪ್ರಯೋಗಿಸಿದರು. ಇಸ್ಲಾಮಾಬಾದ್, ರಾವಲ್ಪಿಂಡಿ, ಪೇಶಾವರದಲ್ಲಿ ರಸ್ತೆ ತಡೆಸಿ ಪ್ರತಿಭಟಿಸಿದರು.

‘ಬಂಧನ ಖಂಡಿಸಿ ಪಕ್ಷವು ದೇಶವ್ಯಾಪಿ ಪ್ರತಿಭಟನೆಗೆ ಕರೆ ನೀಡಿದೆ’ ಎಂದು ಪಿಟಿಐ ನಾಯಕ ಅಜರ್ ಮಶ್ವಾನಿ ತಿಳಿಸಿದ್ದರು.

ನೆಚ್ಚಿನ ಅಭ್ಯರ್ಥಿಗಳ ಪರವಾಗಿ ₹10 ಸಾವಿರದಿಂದ ಲಕ್ಷಾಂತರ ರೂಪಾಯಿವರೆಗೆ ಬೆಟ್ಟಿಂಗ್

ಅಡಿಕೆ–ತೆಂಗು ತೋಟ, ಚಿನ್ನ, ಕುರಿ, ಕೋಳಿ ಪಣಕ್ಕೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾನಕ್ಕೆ ಕ್ಷಣಗಣನೆ ಆರಂಭವಾದ ಹೊತ್ತಿನಲ್ಲೇ ಯಾರು ಗೆಲ್ಲುತ್ತಾರೆ ಎಂಬ ವಿಷಯವಾಗಿ ರಾಜ್ಯದಾದ್ಯಂತ ಬೆಟ್ಟಿಂಗ್ ಭರಾಟೆಯೂ ಜೋರಾಗಿದೆ. ಕೆಲವರು ಅಡಿಕೆ, ತೆಂಗಿನ ತೋಟವನ್ನೇ ಪಣಕ್ಕಿಟ್ಟರೆ, ಇನ್ನು ಕೆಲವರು ಕುರಿ, ಕೋಳಿಗಳನ್ನು ಜೂಜಿಗಿಟ್ಟಿದ್ದಾರೆ. ಬೆಟ್ಟಿಂಗ್‌ನ ಈ ಅಬ್ಬರದಿಂದ ಗ್ರಾಮಾಂತರ ಭಾಗದಲ್ಲಿ ಚುನಾವಣಾ ಕಣ ರಂಗೇರಿದೆ.

ಕಲಬುರಗಿ ವರದಿ: ಯಾದಗಿರಿ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಬೆಟ್ಟಿಂಗ್‌ಗಾಗಿ ಮನೆಯಲ್ಲಿರುವ ವಸ್ತುಗಳು, ಕುರಿ, ಕೋಳಿ, ಚಿನ್ನ ಸೇರಿದಂತೆ ಇತರೆ ವಸ್ತುಗಳನ್ನು ಪಣಕ್ಕಿಡುತ್ತಿದ್ದಾರೆ. ಕೆಲವರು ₹ 50 ಸಾವಿರದಿಂದ ₹ 1 ಲಕ್ಷದವರೆಗೆ ಹಣವನ್ನು ಪಣಕ್ಕಿಟ್ಟಿದ್ದಾರೆ.

ಯಾದಗಿರಿ ಮತ್ತು ಬೀದರ್ ಜಿಲ್ಲೆಯಲ್ಲಿ ₹10 ಸಾವಿರದಿಂದ ಲಕ್ಷಾಂತರ ರೂಪಾಯಿ, ಒಂದು ತೊಲೆ ಚಿನ್ನಾಭರಣ ಬೆಟ್ಟಿಂಗ್ ಕಟ್ಟಲಾಗಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ಮತ್ತು ಕೊಪ್ಪಳ ಕ್ಷೇತ್ರದಲ್ಲಿ ಕೆಲವರು ಜಾನುವಾರುಗಳನ್ನು ಬೆಟ್ ಕಟ್ಟಿದರೆ, ಇನ್ನೂ ಕೆಲವರು ಲಕ್ಷಾಂತರ ರೂಪಾಯಿ ಹಣ ಬೆಟ್ ಕಟ್ಟಿದ್ದಾರೆ. ಕುಷ್ಟಗಿ ವಿಧಾನಸಭಾ ಕ್ಷೇತ್ರದಲ್ಲಿ ಕಾರ್ಯಕರ್ತರೊಬ್ಬರು ಕಾಂಗ್ರೆಸ್ ಗೆಲ್ಲಲಿದೆ ಎಂದು ಎರಡು ಎಕರೆ ಭೂಮಿ ಪಣಕ್ಕೆ ಇಟ್ಟಿದ್ದಾರೆ ಎಂದು ಗೊತ್ತಾಗಿದೆ.

ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ಜೆಡಿಎಸ್ ಅಭ್ಯರ್ಥಿ ಜಯ ಸಾಧಿಸುತ್ತಾರೆ ಎಂದು ರೈತರೊಬ್ಬರು ಬೆಟ್ಟಿಂಗ್‌ಗೆ ಮೂರು ಎಕರೆ ಜಮೀನು ಪಣಕ್ಕಿಟ್ಟಿದ್ದಾರೆ. ಬೆಟ್ಟಿಂಗ್‌ನಲ್ಲಿ ಸೋತರೆ ಪ್ರತಿಸ್ಪರ್ಧಿ ವ್ಯಕ್ತಿಯು ರೈತನಿಗೆ ಬರೀ ₹3 ಲಕ್ಷ ಕೊಡಬೇಕು.

ಮಸ್ಕಿ ವಿಧಾನಸಭೆ ಕ್ಷೇತ್ರದಲ್ಲಿ ಬಿಜೆಪಿ–ಕಾಂಗ್ರೆಸ್ ಅಭ್ಯರ್ಥಿ ನಡುವೆ ಪೈಪೋಟಿಯಿದ್ದು, ಜನರು ₹1 ಲಕ್ಷದಿಂದ ₹40 ಲಕ್ಷದವರೆಗೆ ಬೆಟ್ಟಿಂಗ್ ಕಟ್ಟಿದ್ದಾರೆ. ಸಿಂಧನೂರಿನಲ್ಲಿ ಕಾಂಗ್ರೆಸ್ ಟಿಕೆಟ್ ಹಂಚಿಕೆ ವಿಷಯವಾಗಿಯೇ ₹1 ಕೋಟಿ ಮೊತ್ತದ ಬೆಟ್ಟಿಂಗ್ ಆಗಿದೆ ಎಂಬುದು ಮೂಲಗಳ ಮಾಹಿತಿ.

ಲಿಂಗಸುಗೂರಿನಲ್ಲಿ ಕಾಂಗ್ರೆಸ್ ಟಿಕೆಟ್ ಹಂಚಿಕೆಯ ವಿಷಯದ ಕುರಿತು ₹1 ಕೋಟಿ ಮೊತ್ತದ ಬೆಟ್ಟಿಂಗ್ ಹಲವು ಜನರು ಮಧ್ಯೆ ಆಗಿದೆ ಎಂಬುದು ಮೂಲಗಳ ಮಾಹಿತಿ. ಈ ಬೆಟ್ಟಿಂಗ್‌ನಲ್ಲಿ ಸೋತಿರುವವರನ್ನು ಆಯಾ ಅಭ್ಯರ್ಥಿಗಳು ಚುನಾವಣೆ ಪ್ರಚಾರದಲ್ಲಿ ತೊಡಗಿಸಿಕೊಂಡು ಹಣಕಾಸು ನೆರವು ನೀಡಿದ್ದಾರೆ ಎಂದು ಜನರಲ್ಲಿ ಚರ್ಚೆಯಾಗುತ್ತಿದೆ.

ಮೈಸೂರು ವರದಿ: ‘ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕಾಂಗ್ರೆಸ್ ಮುಖಂಡರೊಬ್ಬರು ₹10 ಲಕ್ಷ ಬೆಟ್ಟಿಂಗ್ ಕಟ್ಟಲು ತಯಾರಿದ್ದರೂ, ಜೆಡಿಎಸ್‌ನಿಂದ ₹ 5 ಲಕ್ಷಕ್ಕೆ ಮಾತ್ರ ಒಪ್ಪಿಕೊಂಡಿದ್ದಾರೆ. ಕಳೆದ ಬಾರಿ ಇದೇ ಕ್ಷೇತ್ರದಲ್ಲಿ ಜೆಡಿಎಸ್ ಪರವಾಗಿ ಬೆಟ್ಟಿಂಗ್ ಹೆಚ್ಚಿತ್ತು’ ಎಂಬ ಮಾತು ಕೇಳಿಬಂದಿದೆ.

ಸಂತೇಬೆನ್ನೂರು (ದಾವಣಗೆರೆ ಜಿಲ್ಲೆ) ವರದಿ: ಚನ್ನಗಿರಿ ಕ್ಷೇತ್ರದ ಅಭ್ಯರ್ಥಿಗಳ ಪರ-ವಿರೋಧವಾಗಿ ಲಕ್ಷಾಂತರ ರೂಪಾಯಿ ಮೊತ್ತದ ಬೆಟ್ಟಿಂಗ್ ನಡೆಯುತ್ತಿದೆ.

ಹೊಲದಲ್ಲಿ ಬೆಳೆದ ಬೆಳೆಯೂ ಜೂಜಿಗೆ!

ತುಮಕೂರು: ಜಿಲ್ಲೆಯ ಕೆಲವು ಕ್ಷೇತ್ರಗಳಲ್ಲಿ ರಾಜಕೀಯ ಪಕ್ಷ ಮತ್ತು ಅಭ್ಯರ್ಥಿಗಳ ಪರ ಬೆಟ್ಟಿಂಗ್ ಜೋರಾಗಿದೆ.

ಅಡಿಕೆ, ತೆಂಗು ಹೆಚ್ಚಾಗಿ ಬೆಳೆಯುವ ಜಿಲ್ಲೆಯ ಪಾವಗಡ, ಕೊರಟಗೆರೆ, ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ನಗದು, ಚಿನ್ನಾಭರಣ, ಜಮೀನು, ಅಡಿಕೆ ಬೆಳೆಯನ್ನೇ ಪಣಕ್ಕೆ ಇಡುತ್ತಿದ್ದಾರೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಅಡಿಕೆ ತೋಟವನ್ನೆ ಬಾಜಿ ಕಟ್ಟಿದ್ದಾರೆ. ಅಡಿಕೆ ಬೆಳೆಗಾರರು ಒಂದು ವರ್ಷದ ಅಡಿಕೆ ಬೆಳೆಯನ್ನೇ ಜೂಜಿಗಿಟ್ಟಿದ್ದಾರೆ!

ಪಾವಗಡಕ್ಕೆ ಹೊಂದಿಕೊಂಡಿರುವ ಆಂಧ್ರಪ್ರದೇಶದ ಕೆಲವು ಭಾಗಗಳ ಮುಖಂಡರು ಬೆಟ್ಟಿಂಗ್‌ನಲ್ಲಿ ತೊಡಗಿದ್ದಾರೆ. ಪಾವಗಡದಲ್ಲಿ ಈ ಬಾರಿ ಜೆಡಿಎಸ್, ಕಾಂಗ್ರೆಸ್ ಮಧ್ಯೆ ನೇರ ಸ್ಪರ್ಧೆ ಇದ್ದು, ಎರಡೂ ಕಡೆಯವರು ತಮ್ಮ ಅಭ್ಯರ್ಥಿಗಳು ಗೆಲ್ಲಲಿದ್ದಾರೆ ಎಂಬ ವಿಶ್ವಾಸದಲ್ಲಿ ಭಾರಿ ಬೆಟ್ಟಿಂಗ್ ನಡೆಸಿದ್ದಾರೆ.

ಎರಡು ಪಕ್ಷಗಳಲ್ಲಿ ₹50 ಸಾವಿರದಿಂದ ಶುರುವಾಗಿ ಲಕ್ಷಾಂತರ ರೂಪಾಯಿವರೆಗೆ ಬೆಟ್ಟಿಂಗ್ ನಡೆಯುತ್ತಿದೆ. ಪಾವಗಡ ತಾಲ್ಲೂಕಿನ ವೈ.ಎನ್. ಹೊಸಕೋಟೆ ಹೋಬಳಿಯ ಮರಿದಾಸನಹಳ್ಳಿ, ಲಿಂಗದಹಳ್ಳಿ, ನಾಗಲಮಡಿಕೆ, ತಿರುಮಣಿ ಭಾಗದ ಜನರು ಜಮೀನುಗಳನ್ನು ಪಣಕ್ಕಿಡುತ್ತಿದ್ದಾರೆ.

ಕುರಿಗಾಹಿಗಳು 5ರಿಂದ 10 ಕುರಿ, ಮೇಕೆ, ಕೆಲವರು ಕೋಳಿ, ಹುಂಜಗಳನ್ನೂ ಪಣಕ್ಕಿಡುತ್ತಿದ್ದಾರೆ. ಪಕ್ಷದ ಅಭ್ಯರ್ಥಿಯ ಗೆಲುವು–ಸೋಲು, ಮತಗಳ ಅಂತರ, ಪಡೆಯುವ ಮತಗಳ ಸಂಖ್ಯೆ, ಯಾವ ಪಕ್ಷಕ್ಕೆ ಹೆಚ್ಚು ಮತಗಳು ಸಿಗುತ್ತವೆ ಎಂಬಿತ್ಯಾದಿ ಆಧಾರದಲ್ಲಿ ಬೆಟ್ ಕಟ್ಟಲಾಗುತ್ತಿದೆ.

ಕೊರಟಗೆರೆ ವ್ಯಾಪ್ತಿಯಲ್ಲಿ ನಗದು, ಕಾರು, ದ್ವಿಚಕ್ರ ವಾಹನಗಳನ್ನು ಬೆಟ್ಟಿಂಗ್‌ಗೆ ಇಡುತ್ತಿದ್ದಾರೆ. ಇದರ ಜತೆಗೆ ಬಂಗಾರದ ಆಭರಣಗಳನ್ನು ಪಣಕ್ಕಿಟ್ಟಿದ್ದಾರೆ.

‘ವಿಕಾಸವಾದ ಪಠ್ಯಕ್ಕೆ ಕೊಕ್: ಮಕ್ಕಳಲ್ಲಿ ಮೂಢನಂಬಿಕೆ ಸೃಷ್ಟಿ’

ನವದೆಹಲಿ (ಪಿಟಿಐ): ವಿಜ್ಞಾನಿ ಚಾರ್ಲ್ಸ್ ಡಾರ್ವಿನ್‌ನ ವಿಕಾಸವಾದ ಸಿದ್ಧಾಂತ ಅಧ್ಯಾಯವನ್ನು 10ನೇ ತರಗತಿ ಪುಠ್ಯಪುಸ್ತಕದಿಂದ ತೆಗೆದುಹಾಕುವ ನಿರ್ಧಾರಕ್ಕೆ ತಜ್ಞರು ವಿರೋಧ ವ್ಯಕ್ತಪಡಿಸಿದ್ದಾರೆ. ಈ ನಡೆಯಿಂದ, ಮಕ್ಕಳಲ್ಲಿ ಮೂಢನಂಬಿಕೆ ಹಾಗೂ ಅತಾರ್ಕಿಕ ಚಿಂತನೆಗಳು ಬೆಳೆಯುವ ಅಪಾಯವಿದೆ ಎಂದು ಎಚ್ಚರಿಸಿದ್ದಾರೆ.

ವಿಕಾಸವಾದ ಸಿದ್ಧಾಂತ ಭಾಗವನ್ನು 10ನೇ ತರಗತಿ ಪಠ್ಯಕ್ರಮದಿಂದ ಕೈಬಿಡುವ ನಿರ್ಧಾರವನ್ನು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ (ಎನ್‌ಸಿಇಆರ್‌ಟಿ) ಇತ್ತೀಚೆಗೆ ತೆಗೆದುಕೊಂಡಿತ್ತು. ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಷನ್ ಅಂಡ್ ರಿಸರ್ಚ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿಜ್ಞಾನಿಗಳು, ವಿಜ್ಞಾನ ಶಿಕ್ಷಕರು, ಬೋಧಕರು ಸೇರಿದಂತೆ 1800ಕ್ಕೂ ಹೆಚ್ಚು ಜನರು ಎನ್‌ಸಿಇಆರ್‌ಟಿ ನಿರ್ಧಾರವನ್ನು ವಿರೋಧಿಸಿದ್ದಾರೆ. ಬಹಿರಂಗ ಪತ್ರ ಬರೆದು ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದಾರೆ.

ಡಾರ್ವಿನ್‌ನ ವಿಕಾಸವಾದವು ಪ್ರಮುಖವಾದ ಹಾಗೂ ಮೂಲ ಪರಿಕಲ್ಪನೆ ಎಂದು ಜೀವಶಾಸ್ತ್ರಜ್ಞರು ನಂಬುತ್ತಾರೆ. ಈ ಸಿದ್ಧಾಂತವಿಲ್ಲದೇ ನೈಸರ್ಗಿಕ ವಿಜ್ಞಾನದ ಯಾವ ಪರಿಕಲ್ಪನೆಗಳನ್ನೂ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ತಜ್ಞರು ಹೇಳಿದ್ದು, ಸರ್ಕಾರದ ನಿರ್ಧಾರವನ್ನು ಹಾಸ್ಯಾಸ್ಪದ ಎಂದು ಕರೆದಿದ್ದಾರೆ.

‘ವೈವಿಧ್ಯಮಯ ಸ್ವರೂಪದಲ್ಲಿರುವ ಜೀವಿಗಳ ಅಸ್ತಿತ್ವ, ಜೀವಿಗಳು ಹಾಗೂ ಅವುಗಳ ಸುತ್ತಲಿನ ವಾತಾವರಣ, ಪರಿಸರದ ಪರಸ್ಪರ ಕ್ರಿಯೆಗಳನ್ನು ವಿಕಾಸವಾದದ ಪರಿಕಲ್ಪನೆಯಿಲ್ಲದೇ ಅರ್ಥಮಾಡಿಸಲು ಆಗುವುದಿಲ್ಲ’ ಎಂದು ಬೆಂಗಳೂರಿನ ಜವಾಹರಲಾಲ್ ನೆಹರೂ ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈನ್ಸ್ ರಿಸರ್ಚ್‌ನ ಪ್ರಾಧ್ಯಾಪಕ ಅಮಿತಾಭ್ ಜೋಷಿ ಅಭಿಪ್ರಾಯಪಟ್ಟಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಜಗತ್ತನ್ನು ತಪ್ಪಾಗಿ ಗ್ರಹಿಸುವ ನಾವು, ಅದು ನಮ್ಮನ್ನು ವಂಚಿಸಿತು ಎಂದು ದೂರುತ್ತೇವೆ.

-ರವೀಂದ್ರನಾಥ ಟ್ಯಾಗೋರ್

ಮತದ ಮೌಲ್ಯ ಮುಕ್ಕಾಗದಿರಲಿ ವಿವೇಕ–ಪ್ರಜ್ಞಾವಂತಿಕೆ ಜೊತೆಗಿರಲಿ

ವಿಧಾನಸಭಾ ಚುನಾವಣೆ ರೂಪದಲ್ಲಿ ಕರ್ನಾಟಕದ ಮತದಾರರ ಎದುರು ಸಂಭ್ರಮ ಮತ್ತು ಹೊಣೆಗಾರಿಕೆ ಮಿಳಿತಗೊಂಡ ಸಂದರ್ಭವೊಂದು ಎದುರಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿ ಚುನಾವಣೆಯನ್ನೂ ಮತದಾರರ ಹಬ್ಬವೆಂದು ಪರಿಗಣಿಸಲಾಗುತ್ತದೆ. ಪ್ರಜಾಪ್ರಭುತ್ವದ ಆಶಯ ಪೂರ್ಣರೂಪದಲ್ಲಿ ಸಾಕಾರಗೊಳ್ಳುವುದರಲ್ಲಿ ಚುನಾವಣೆಗಳ ಪಾತ್ರ ಬಹು ದೊಡ್ಡದು. ಜನರ ಆಶೋತ್ತರಗಳ ರೂಪದಲ್ಲಿ ಚುನಾವಣೆಯಲ್ಲಿ ಆರಿಸಿಬರುವ ಪ್ರತಿನಿಧಿಗಳು ಶಾಸಕಾಂಗದ ಭಾಗವಾಗುವುದರಿಂದ, ಆ ಪ್ರತಿನಿಧಿಗಳು ಯಾರಾಗಬೇಕೆನ್ನುವುದನ್ನು ನಿರ್ಧರಿಸುವ ಹೊಣೆಗಾರಿಕೆಯನ್ನು ಹೊಂದಿರುವ ಮತದಾರರು ತಮ್ಮ ಹಕ್ಕನ್ನು ವಿವೇಚನೆಯಿಂದ ಚಲಾಯಿಸಬೇಕಾಗಿರುತ್ತದೆ. ನಾಳೆಗಳ ಆಗುಹೋಗುಗಳನ್ನು ನಿಭಾಯಿಸಬೇಕಾದ ಪ್ರತಿನಿಧಿಗಳ ಆಯ್ಕೆ ಸಮರ್ಪಕವಾಗಿಲ್ಲದೆ ಹೋದರೆ, ಅದರ ಪರಿಣಾಮಗಳನ್ನು ಮತದಾರರೇ ಅನುಭವಿಸಬೇಕಾಗುತ್ತದೆ. ಮತದಾನ ಎನ್ನುವುದು ಮುಂದಿನ ಐದು ವರ್ಷಗಳ ಸುಗ್ಗಿಯನ್ನು ಇಂದೇ ನಿರ್ಣಯಿಸುವ ಬಿತ್ತನೆಯಿದ್ದಂತೆ. ಬಿತ್ತಿದಂತೆ ಬೆಳೆ ಎನ್ನುವುದು ಚುನಾವಣೆಯೇ ಕೇಂದ್ರವಾಗಿರುವ ರಾಜಕಾರಣಕ್ಕೂ ಒಪ್ಪುವ ಮಾತು.



ಕರ್ನಾಟಕದ ಮತದಾರರು ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ಕಲ್ಪಿಸದೆ, ಅಂತಃಸಾಕ್ಷಿಗೆ ಓಗೊಟ್ಟು ಮತ ಚಲಾಯಿಸುವ ಅವಕಾಶವನ್ನು ಬಿಟ್ಟುಕೊಡಬಾರದು

ಚುನಾವಣೆ ಎನ್ನುವ ಮತದಾರರ ಹಬ್ಬದಲ್ಲಿ ಸಂಭ್ರಮವಷ್ಟೇ ಇರುವುದಿಲ್ಲ; ಹೊಣೆಗಾರಿಕೆಯೂ ಇರುತ್ತದೆ. ತಾನು ಚಲಾಯಿಸುವ ಮತ ಮೌಲ್ಯಯುತವಾದುದು ಎನ್ನುವ ಅರಿವು ಮತದಾರರಿಗೆ ಅಗತ್ಯ. 'ಮತ ಚಲಾವಣೆ' ಎನ್ನುವ ಪರಿಕಲ್ಪನೆ ಹೊಣೆಗಾರಿಕೆಯನ್ನೇ ಸೂಚಿಸುತ್ತದೆ. ಅಭ್ಯರ್ಥಿಯ ಯೋಗ್ಯತೆಯನ್ನು ಪರಿಶೀಲಿಸಿ ನೀಡಬೇಕಾದ ಮತವನ್ನು ಮತದಾರರು ವಿವೇಚನೆಯಿಂದ ಬಳಸಿದಾಗಷ್ಟೇ ಪ್ರಜಾಪ್ರಭುತ್ವದ ಆರೋಗ್ಯ ಸ್ವಸ್ಥವಾಗಿರಬಲ್ಲದು. ಚಲಾವಣೆಗೊಳ್ಳುವ ಪ್ರತಿಯೊಂದು ಮತವೂ ಪ್ರಜಾಪ್ರಭುತ್ವ ವ್ಯವಸ್ಥೆಯ ಕಟ್ಟಡವನ್ನು ಬಲಪಡಿಸುತ್ತಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಅಭ್ಯರ್ಥಿಗಳ ಅರ್ಹತೆಗಿಂತಲೂ ಅವರ ಧನಬಲ ಹಾಗೂ ಜಾತಿಬಲಗಳೇ ಚುನಾವಣಾ ಕಣದಲ್ಲಿ ಹೆಚ್ಚು ಸುದ್ದಿ ಮಾಡುತ್ತಿವೆ. ಪ್ರಜ್ಞಾವಂತ ಮತದಾರರು ಅಭ್ಯರ್ಥಿಗಳು ಒಡ್ಡುವ ಯಾವುದೇ ರೂಪದ ಆಮಿಷಗಳಿಗೆ ಮರುಳಾಗದೆ, ತಮ್ಮ ಮತದ ಮೌಲ್ಯ ಉಳಿಸಿಕೊಳ್ಳುವುದು ಅಗತ್ಯ. ಸಾರ್ವಜನಿಕ ವಲಯದಲ್ಲಿ ನೈತಿಕತೆ ನಿರೀಕ್ಷಿಸುವವರು ವೈಯಕ್ತಿಕ ಹಂತದಲ್ಲೂ ನೈತಿಕತೆಯನ್ನು ಅನುಸರಿಸುವುದು ಅಗತ್ಯ. ಪ್ರಸಕ್ತ ಚುನಾವಣೆಯಲ್ಲಿ ಮೌಲ್ಯಯುತ ಮತದಾನವನ್ನು ಸಾಧ್ಯವಾಗಿಸುವ ಜವಾಬ್ದಾರಿ ಎಲ್ಲ ಮತದಾರರ ಮುಂದಿದೆ. ನಾಡಿನ ವಿವೇಕವನ್ನು ದೇಶದ ಮುಂದೆ ಮತ್ತೊಮ್ಮೆ ಅನಾವರಣಗೊಳಿಸಲಿಕ್ಕೆ ಇರುವ ಅವಕಾಶವನ್ನು ಕನ್ನಡಿಗರು ಕಳೆದುಕೊಳ್ಳಬಾರದು.

ಜನಸಾಮಾನ್ಯರಿಗೆ ಮತದಾನದ ಅರಿವನ್ನು ಮೂಡಿಸಲು ಚುನಾವಣಾ ಆಯೋಗ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರೂ, ಇತ್ತೀಚಿನ ಚುನಾವಣೆಗಳಲ್ಲಿ ಮತದಾನದ ಪ್ರಮಾಣ ಕಡಿಮೆಯಾಗುತ್ತಿರುವುದು ಆತಂಕ ಹುಟ್ಟಿಸುವ ಸಂಗತಿ. ಮತದಾನದ ಬಗ್ಗೆ ನಿರಾಸಕ್ತಿ ವ್ಯಕ್ತಪಡಿಸುವವರಲ್ಲಿ ವಿದ್ಯಾವಂತರು ಹಾಗೂ ನಗರ ಪ್ರದೇಶದವರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಚುನಾವಣೆಯ ದಿನ ಮತಕೇಂದ್ರಗಳಲ್ಲಿ ಜನರ ಸಾಲು ಕಾಣಿಸಿಕೊಳ್ಳುವ ಬದಲು, ಪ್ರವಾಸಿ ತಾಣಗಳಲ್ಲಿ ಜನಸಂದಣಿ ಉಂಟಾಗುತ್ತಿದೆ. ಸಣ್ಣಪುಟ್ಟ ನೆಪಗಳನ್ನು ಹೇಳಿಕೊಂಡು ವೋಟು ಹಾಕದಿರುವವರೂ ಇದ್ದಾರೆ. ಯಾರು ಅಧಿಕಾರಕ್ಕೆ ಬಂದರೂ ಪರಿಸ್ಥಿತಿಯಲ್ಲಿ ಏನೂ ಸುಧಾರಣೆಯಾಗದು ಎನ್ನುವ ನಿರಾಶಾಭಾವವೂ ಮತ ಚಲಾವಣೆಯಿಂದ ದೂರವುಳಿಯಲು ಕಾರಣಗಳಲ್ಲೊಂದಾಗಿದೆ. ಆದರೆ, ಇಂಥ ಯಾವ ಕಾರಣಗಳೂ ಚುನಾವಣೆಯಿಂದ ದೂರ ಉಳಿಯಲಿಕ್ಕೆ ಸಮರ್ಥನೆ ಆಗಬಾರದು. ಸಂವಿಧಾನ ಕಲ್ಪಿಸಿರುವ ಪರಮೋಚ್ಚ ಹಕ್ಕನ್ನು ಚಲಾಯಿಸುವುದು ಮತದಾರರ ಕರ್ತವ್ಯ. ಆ ಕರ್ತವ್ಯದಿಂದ ವಿಮುಖವಾಗುವುದು ನಮಗೆ ನಾವು ಮಾಡಿಕೊಳ್ಳುವ ವಂಚನೆಯಷ್ಟೇ ಅಲ್ಲ, ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಅಳ್ಳಕಗೊಳಿಸುವ ಪ್ರಯತ್ನವೂ ಹೌದು. ಬಂಧುಮಿತ್ರರೊಂದಿಗೆ ಹಬ್ಬವನ್ನು ಮನೆಗಳಲ್ಲಿ ಆಚರಿಸುವಂತೆ, 'ಚುನಾವಣಾ ಹಬ್ಬ'ವನ್ನು ಸಾರ್ವಜನಿಕವಾಗಿ ಸಂಭ್ರಮಿಸಬೇಕು. ಕುಟುಂಬವರ್ಗ ಹಾಗೂ ಸ್ನೇಹಿತರು ಮತದಾನ ಮಾಡುವಂತೆ ನೋಡಿಕೊಳ್ಳುವುದು ಕೂಡ ಜವಾಬ್ದಾರಿಯುತ ನಾಗರಿಕನ ಕರ್ತವ್ಯವಾಗಿದೆ. ಚುನಾವಣಾ ಸಂದರ್ಭವು ಪುಂಡು ಪೋಕರಿಗಳ ಚಟುವಟಿಕೆಗಳಿಗೆ ಹಾಗೂ ಸಾಮಾಜಿಕ ಸೌಹಾರ್ದ ಕದಡುವುದರಲ್ಲಿ ಲಾಭ ಕಂಡುಕೊಳ್ಳುವ ಕಿಡಿಗೇಡಿಗಳಿಗೆ ಅಖಾಡವೂ ಹೌದು. ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ಕಲ್ಪಿಸದೆ, ವದಂತಿಗಳಿಗೆ ಕಿವಿಗೊಡದೆ, ಪ್ರಲೋಭನೆಗಳಿಗೆ ಮಾರುಹೋಗದೆ ಅಂತಃಸಾಕ್ಷಿಗೆ ಓಗೊಟ್ಟು ಮತ ಚಲಾಯಿಸುವುದರ ಮೂಲಕ ಕರ್ನಾಟಕದ ಮತದಾರರು ಪ್ರಜ್ಞಾವಂತಿಕೆಯನ್ನು ಮೆರೆಯುವ ಅವಕಾಶವನ್ನು ಬಿಟ್ಟುಕೊಡಬಾರದು. ಈ ಚುನಾವಣೆ, 'ಸರ್ವ ಜನಾಂಗದ ಶಾಂತಿಯ ತೋಟ' ಎನ್ನುವ ಮಾತು ಬರಿಯ ವಿಶೇಷಣವಾಗಿರದೆ, ಈ ನಾಡಿನ ಜೀವನವಿಧಾನವೇ ಆಗಿದೆ ಎನ್ನುವುದನ್ನು ಸಾಬೀತುಪಡಿಸಲು ಮತದಾರರಿಗೆ ದೊರೆತಿರುವ ಅವಕಾಶವೂ ಹೌದು.

ದಿನದ ಟ್ವೀಟ್

ಹೇಳಿಕೆ ಬಿಡುಗಡೆಯಾಗಲಿ



ಅಮೆರಿಕದಲ್ಲಿನ ಸಾಮೂಹಿಕ ಗುಂಡಿನ ದಾಳಿ ಮತ್ತು ಬಂದೂಕು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಭಾರತವು ಹೇಳಿಕೆಯನ್ನು ಬಿಡುಗಡೆ ಮಾಡಬೇಕು. 'ಗನ್ ವಯಲೆನ್ಸ್ ಆರ್ಕೈವ್'ನ ಪ್ರಕಾರ, ಈ ವರ್ಷದಲ್ಲೇ ಅಮೆರಿಕದಲ್ಲಿ ಇದುವರೆಗೆ ನಡೆದ 202 ಸಾಮೂಹಿಕ ಗುಂಡಿನ ದಾಳಿಗಳಲ್ಲಿ 276 ಮಂದಿ ಮೃತಪಟ್ಟಿದ್ದಾರೆ. ಇವರಲ್ಲಿ, ಡಲ್ಲಾಸ್ ದಾಳಿಯಲ್ಲಿ ಸಾವಿಗೀಡಾದ ಭಾರತದ ಪ್ರಜೆ ಐಶ್ವರ್ಯಾ ತಾಟಿಕೊಂಡ ಸಹ ಸೇರಿದ್ದಾರೆ.

ಶಿವ್ ಅರೂರ್, ಪತ್ರಕರ್ತ, ಲೇಖಕ

ಕಿಡಿನುಡಿ



ಕುನೊ ರಾಷ್ಟ್ರೀಯ ಉದ್ಯಾನದ ಬಫರ್ ವಲಯದಲ್ಲಿ ನಾನು ವಾಸಿಸುತ್ತಿದ್ದೇನೆ. ಕುನೊದಲ್ಲಿ ಎಲ್ಲವೂ ಸರಿಯಾಗಿಲ್ಲ. ಚೀತಾಗಳಿಗೆ ಅದು ಸೂಕ್ತವಾದ ಆವಾಸಸ್ಥಾನ ಅನಿಸುವುದಿಲ್ಲ. ತಾಪಮಾನ ಮತ್ತು ಸಸ್ಯಸಂಕುಲಕ್ಕೆ ಸಂಬಂಧಿಸಿದ ಕೆಲವು ಭೌಗೋಳಿಕ ಸಮಸ್ಯೆಗಳು ಅಲ್ಲಿವೆ. ಆದರೆ ಗಂಭೀರವಾದ ದುರಾಡಳಿತ ಇವಕ್ಕೆಲ್ಲ ಕಾರಣವಾಗಿದೆ. ತಕ್ಷಣ ಗಮನ ಹರಿಸಬೇಕಾದ ಅಗತ್ಯವಿದೆ.

ಧಾಕಡ್, ಎಂಜಿನಿಯರ್

25 ವರ್ಷಗಳ ಹಿಂದೆ

ಭಾನುವಾರ, 10-5-1998

● **'ತಾಯಿ ಸಾಹೇಬ' ಚಿತ್ರಕ್ಕೆ ಸ್ವರ್ಣ ಕಮಲ**

ನವದೆಹಲಿ, ಮೇ 9 (ಪಿಟಿಐ)– ಗಿರೀಶ್ ಕಾಸರವಳ್ಳಿ ನಿರ್ದೇಶಿಸಿದ 'ತಾಯಿ ಸಾಹೇಬ' ಕನ್ನಡ ಚಿತ್ರ ಈ ಬಾರಿಯ ಅತ್ಯುತ್ತಮ ಕಥಾ ಚಿತ್ರಕ್ಕಾಗಿ ಸ್ವರ್ಣಕಮಲ ಪ್ರಶಸ್ತಿ ಪಡೆದಿದೆ.

45ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಇಂದು ಪ್ರಕಟಿಸಲಾಗಿದ್ದು, ಮಲಯಾಳಂ ನಿರ್ದೇಶಕ ಜಯರಾಂ ಅವರು, 'ಕಲಿಯಾಟ್ಟಂ' ಚಿತ್ರದ ನಿರ್ದೇಶನಕ್ಕಾಗಿ ಉತ್ತಮ ನಿರ್ದೇಶಕ ಪ್ರಶಸ್ತಿ ಗಳಿಸಿದ್ದಾರೆ.

ಕನ್ನಡದ 'ತಾಯಿ ಸಾಹೇಬ' ಚಿತ್ರವನ್ನು ನಟಿ ಜಯಮಾಲ ನಿರ್ಮಿಸಿದ್ದು, ಅದೇ ಚಿತ್ರದ ನಾಯಕಿ ಪಾತ್ರಕ್ಕೆ ಅವರಿಗೆ ಆಯ್ಕೆ ಸಮಿತಿಯ ವಿಶೇಷ ಪ್ರಶಸ್ತಿ ದೊರೆತಿದೆ. ಈ ಚಿತ್ರದ ಕಲಾ ನಿರ್ದೇಶಕ ರಮೇಶ್ ದೇಸಾಯಿ ಅವರಿಗೆ ಉತ್ತಮ ಕಲಾ ನಿರ್ದೇಶಕ ಪ್ರಶಸ್ತಿ ದೊರೆತಿದೆ.

ಎಸ್.ವಿ. ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ 'ಮುಂಗಾರಿನ ಮಿಂಚು' ಉತ್ತಮ ಕನ್ನಡ ಚಿತ್ರ ಎಂದು ಪರಿಗಣಿಸಲ್ಪಟ್ಟಿದೆ.

● **ಭೂಸುಧಾರಣೆ ತಿದ್ದುಪಡಿ ವಿಧೇಯಕ ಅಂಗೀಕಾರ**

ಬೆಂಗಳೂರು, ಮೇ 9– ಕರ್ನಾಟಕ ಭೂಸುಧಾರಣೆಗಳ (ತಿದ್ದುಪಡಿ) ವಿಧೇಯಕ 1997ಕ್ಕೆ ವಿಧಾನಸಭೆ ಇಂದು ಧ್ವನಿಮತದಿಂದ ಅಂಗೀಕಾರ ನೀಡಿತು.

1974ರ ಮಾರ್ಚ್ 1ರಂದು ಮತ್ತು ಅದಕ್ಕೆ ಮುನ್ನ ಯಾವುದೇ ಗೇಣಿದಾರ ತಾನು ಸಾಗುವಳಿ ಮಾಡುತ್ತಿದ್ದ ಜಮೀನಿನ ಒಡೆತನಕ್ಕಾಗಿ ಅರ್ಜಿ ಸಲ್ಲಿಸದೇ ಇದ್ದು, ಈಗಲೂ ಆ ಜಮೀನಿನ ಮೇಲೆ ಸ್ವಾಧೀನ ಹೊಂದಿ ಸಾಗುವಳಿ ಮಾಡುತ್ತಿದ್ದರೆ, ಅಂಥ ಗೇಣಿದಾರರಿಗೆ ಜಮೀನಿನ ಒಡೆತನ ಪಡೆಯಲು ಸಂಬಂಧಪಟ್ಟ ಅಧಿಕಾರಿಗೆ ಅರ್ಜಿ ಸಲ್ಲಿಸಲು ತಿದ್ದುಪಡಿ ಮಸೂದೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 10-5-1973

● **ಕಪ್ಪುಹಣ, ತೆರಿಗೆಗಳ್ಳತನ ತಡೆಗಟ್ಟಲು ಆದಾಯ ತೆರಿಗೆ ಅಧಿಕಾರಿಗಳಿಗೆ ಹೆಚ್ಚು ಅಧಿಕಾರ**

ನವದೆಹಲಿ, ಮೇ 9– ಕಪ್ಪುಹಣದ ವೃದ್ಧಿ ಹಾಗೂ ತೆರಿಗೆಗಳ್ಳತನ ತಡೆಗಟ್ಟಲು ಆದಾಯ ತೆರಿಗೆ ಅಧಿಕಾರಿಗಳಿಗೆ ಪತ್ತೆಹಚ್ಚಿ ವಶಪಡಿಸಿಕೊಳ್ಳಲು ವ್ಯಾಪಕ ಅಧಿಕಾರ ನೀಡಲು ಉದ್ದೇಶಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವ ವೈ.ಬಿ.ಚವಾಣ್ ಅವರು ಇಂದು ಲೋಕಸಭೆಗೆ ತಿಳಿಸಿದರು.

ಈ ಬಗ್ಗೆ 1973ರ ತೆರಿಗೆ ಕಾನೂನು ತಿದ್ದುಪಡಿ ವಿಧೇಯಕವೊಂದನ್ನು ಅರ್ಥ ಸಚಿವರು ಸಭೆಯಲ್ಲಿ ಮಂಡಿಸಿದರು.

ಪ್ರತ್ಯೇಕ ತೆರಿಗೆ ಬಗ್ಗೆ ವಾಂಛೂ ಸಮಿತಿಯ ವರದಿ, ಸಾಮಾಜಿಕ ಹಾಗೂ ಆರ್ಥಿಕ ಅಪರಾಧಗಳಿಗೆ ಸಂಬಂಧಿಸಿದ ಕಾನೂನು ಆಯೋಗದ ವರದಿಯ ಬಹುತೇಕ ಶಿಫಾರಸುಗಳು ಈ ವಿಧೇಯಕದಲ್ಲಿ ಅಡಕವಾಗಿವೆ.

ಈ ಶ್ವೇತಖಂಡವು ಕಾನೂನಿನಿಂದಲೇ ಅಸ್ತಿತ್ವ ಉಳಿಸಿಕೊಳ್ಳಬೇಕಾದ ಸ್ಥಿತಿ ತಲುಪುತ್ತಿದೆ

ಅಂಟಾರ್ಕ್ಟಿಕದ ಜೀವಿಉದ್ಯಾನಗಳ ಭವಿಷ್ಯ



ವಿಶ್ಲೇಷಣೆ

ಟಿ.ಆರ್. ಅನಂತರಾಮು

ಜಗತ್ತಿನ ಯಾವೊಂದು ದೇಶಕ್ಕೂ ಸೇರಿರದ ಅಥವಾ ದೇಶಗಳೇ ಇಲ್ಲದ ಏಕೈಕ ಖಂಡ ಭೂಗೋಳದ ದಕ್ಷಿಣ ತುದಿಯಲ್ಲಿರುವ ಅಂಟಾರ್ಕ್ಟಿಕ. ಶ್ವೇತಖಂಡ, ಬಿರುಗಾಳಿಯ ತವರು, ಹಿಮಖಂಡ, ಶೀತಲಖಂಡ, ಉನ್ನತಖಂಡ ಎಂಬ ವಿಶೇಷಣಗಳೆಲ್ಲವೂ ಇದಕ್ಕೆ ಸಲ್ಲುತ್ತವೆ. ಈ ಖಂಡಕ್ಕೆ ಅದರದೇ ಆದ ಜನರೂ ಇಲ್ಲ. ಈಗ ಇರುವವರೆಲ್ಲ ಸಂಶೋಧನೆಗಾಗಿ ಅಲ್ಲಿಗೆ ಬಂದಿರುವ ವಿಜ್ಞಾನಿಗಳು. ಐದು ದಶಕಗಳಿಂದ ತಮ್ಮ ತಮ್ಮ ದೇಶದ ಸಂಶೋಧನಾ ಕೇಂದ್ರಗಳನ್ನು ತೆರೆದು, ಸರ್ವಋತುವಿನಲ್ಲೂ ಈ ಖಂಡದಲ್ಲಿ ವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿದ್ದಾರೆ.

1983ರಲ್ಲಿ ಇಲ್ಲಿನ ಉಷ್ಣತೆ ಮೈನಸ್ 89.6 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದ್ದುಂಟು. ಜಗತ್ತಿನ ಹವಾಮಾನವನ್ನೇ ನಿಯಂತ್ರಿಸುವಷ್ಟು ಸಾಮರ್ಥ್ಯ ಈ ಖಂಡಕ್ಕಿದೆ. ಜಗತ್ತಿನ ಶೇ 90ರಷ್ಟು ಸಿಹಿನೀರು ಬರ್ಫದ ರೂಪದಲ್ಲಿ ಇಲ್ಲಿ ಸಂಚಯನವಾಗಿದೆ.

ಮನುಷ್ಯನ ಸಾಹಸವನ್ನು ಪರೀಕ್ಷಿಸಲು ಅಂಟಾರ್ಕ್ಟಿಕ ಖಂಡ ಸದಾ ಪಂಥಾಹ್ವಾನವನ್ನು ನೀಡುತ್ತಲೇ ಬಂದಿದೆ. 1911ರಲ್ಲಿ ನಾರ್ವೆಯ ಅಮುಂಡ್‌ಸನ್, ದಕ್ಷಿಣ ಧ್ರುವವನ್ನು ಮೆಟ್ಟಿನಿಂತ ಮೇಲೆ ದೊಡ್ಡ 'ಹೀರೊ' ಆದ. ಅಲ್ಲಿಂದ ಶುರುವಾಯಿತು ಅಲ್ಲಿನ ನೆಲದ ಆಕರ್ಷಣೆ. ವಾಸ್ತವವಾಗಿ ಅಲ್ಲಿ ನೆಲವನ್ನು ಮೂರು ಕಿಲೊಮೀಟರ್ ಮಂದದ ಹಿಮಸ್ತರಗಳು ಮುಚ್ಚಿಬಿಟ್ಟಿವೆ. ಆದರೆ ಅದರ ಕೆಳಗೆ ಅಡಗಿರಬಹುದಾದ ದೊಡ್ಡ ಪ್ರಮಾಣದ ಚಿನ್ನವೂ ಸೇರಿದಂತೆ ವಿವಿಧ ಲೋಹಗಳು, ಅದಕ್ಕಿಂತಲೂ ಹೆಚ್ಚಿನದಾಗಿ ದೊಡ್ಡ ದೊಡ್ಡ ತೈಲ ಭಂಡಾರಗಳ ಆಕರ್ಷಣೆಯಿಂದ ಎಲ್ಲ ದೇಶಗಳೂ ತಮ್ಮ ಹೀರೊಗಳನ್ನು ಅಲ್ಲಿಗೆ ಅಟ್ಟಿದವು. ಸಾವು, ನೋವನ್ನು ಲೆಕ್ಕಿಸದೆ ವಿಶೇಷವಾಗಿ ಯುರೋಪಿನ ದೇಶಗಳು ಅಲ್ಲಿಗೆ ಲಗ್ಗೆಹಾಕಿ 'ಇದು ನಮ್ಮ ಜಾಗ' ಎಂದು ನಕ್ಷೆಗಳಲ್ಲಿ ಅವುಗಳನ್ನು ಮೂಡಿಸಿ, ಅವುಗಳ ಸ್ವಾಮ್ಯವನ್ನು ಘೋಷಿಸಿದವು. ಈ ಪೈಕಿ ಬ್ರಿಟನ್, ನಾರ್ವೆ, ಫ್ರಾನ್ಸ್‌ನಂತಹ ಹನ್ನೆರಡು ದೇಶಗಳು ತಮ್ಮ ಬಾವುಟವನ್ನೂ ಹಾರಿಸಿದವು.

ಈ ಸ್ಪರ್ಧೆಗೆ ಕಡಿವಾಣ ಹಾಕಲೇಬೇಕಾಗಿತ್ತು. ಇದು ಎಷ್ಟು ಅತಿರೇಕಕ್ಕೆ ಹೋಯಿತೆಂದರೆ, ಅರ್ಜೆಂಟೀನವು ಅಂಟಾರ್ಕ್ಟಿಕದ ತನ್ನ ಸಂಶೋಧನಾ ಕೇಂದ್ರಕ್ಕೆ ಗರ್ಭಿಣಿಯೊಬ್ಬರನ್ನು ಕಳಿಸಿ, ಅಲ್ಲಿಯೇ ಹೆರಿಗೆಯಾಗುವಂತೆ ನೋಡಿಕೊಂಡು, ಹುಟ್ಟಿದ ಮಗು ಅಂಟಾರ್ಕ್ಟಿಕ ಖಂಡದ ಮೊದಲ ಪ್ರಜೆ ಎಂದು ಘೋಷಿಸಿತು. ಅಲ್ಲಿನ ಅಮೂಲ್ಯ ಸಂಪತ್ತನ್ನು ಕೊಳ್ಳೆ ಹೊಡೆಯಲು ಸಾಧ್ಯವಾಗದಂತೆ ವೈಜ್ಞಾನಿಕ ಸಂಶೋಧನೆಗೆ ಮಾತ್ರ ಮೀಸಲಾಗಿಡುವಂತೆ ಜಾಗತಿಕ ಒತ್ತಡ ಬಂದು, 1959ರಲ್ಲಿ 'ಅಂಟಾರ್ಕ್ಟಿಕ ಕೂಟ' ಅಸ್ತಿತ್ವಕ್ಕೆ ಬಂತು. ಈ ಹಿಂದೆ ಸ್ವಾಮ್ಯ ಘೋಷಿಸಿದ್ದ ರಾಷ್ಟ್ರಗಳ ಎಲ್ಲ ಹಕ್ಕನ್ನೂ ಇದು ಅನೂರ್ಜಿತಗೊಳಿಸಿತು. ಇದರ ಹಿಂದೆಯೇ ಜೀವಿ ಸಂಪನ್ಮೂಲದ ಅತಿ ಶೋಷಣೆಯನ್ನು ತಡೆಯಲು 1982ರಲ್ಲಿ ಅಂಟಾರ್ಕ್ಟಿಕ ಸಾಗರ ಜೀವಿ ಸಂಪನ್ಮೂಲ ಸಂರಕ್ಷಣಾ ಸಮಿತಿ (ಸಿಸಿಎಎಂಎಲ್‌ಆರ್) ಅಸ್ತಿತ್ವಕ್ಕೆ ಬಂದು ಇಡೀ ಖಂಡದ ನಿರ್ವಹಣೆಯ ನೀಲಿನಕ್ಷೆಯನ್ನು ತಯಾರಿಸಿತು.

ಈಗ ಅಂಟಾರ್ಕ್ಟಿಕ ಒಪ್ಪಂದಕ್ಕೆ 56 ರಾಷ್ಟ್ರಗಳು ಸಹಿ ಹಾಕಿವೆ. ಇದೇ ಜೂನ್ ತಿಂಗಳಲ್ಲಿ ಚಿಲಿಯ ಸ್ಯಾಂಟಿಯಾಗೊದಲ್ಲಿ ಪ್ರತಿನಿಧಿಗಳು ಭಾಗವಹಿಸುತ್ತಿದ್ದಾರೆ. 1950ರಿಂದ ಈಚೆಗೆ ಈ ಖಂಡ ಮತ್ತು ಅದರ ಸುತ್ತಣ ದಕ್ಷಿಣ ಸಾಗರ ಮೂರು ಡಿಗ್ರಿ ಸೆಲ್ಸಿಯಸ್ ಹೆಚ್ಚುವರಿ ಉಷ್ಣತೆಗೆ ತುತ್ತಾಗಿವೆ. ಅಂಟಾರ್ಕ್ಟಿಕದ ಹಿಮ ಕರಗಿದರೆ, ಅದು ಜಾಗತಿಕ ಮಟ್ಟದ ವಾಯುಗೋಳದಲ್ಲಿ ತರಬಹುದಾದ ಬದಲಾವಣೆ ಕುರಿತು ಗಂಭೀರ ಸ್ವರೂಪದ ಚರ್ಚೆ ಆಗಲಿದೆ.

ಅಂಟಾರ್ಕ್ಟಿಕ ಖಂಡದ ರಕ್ಷಣೆ ಎಂದರೆ ಈಗಿನ ಪರಿಸ್ಥಿತಿಯಲ್ಲಿ ಖಂಡಕ್ಕಿಂತ ಮುಖ್ಯವಾಗಿ ಅದನ್ನು ಆವರಿಸಿರುವ ದಕ್ಷಿಣ ಸಮುದ್ರದ ಜೀವಿಗಳ ರಕ್ಷಣೆ. ಎಲ್ಲ ದೇಶಗಳೂ ಈಗಾಗಲೇ ತಮ್ಮ ತಮ್ಮ ಸಾಗರ ಭಾಗದ ಜೀವಿಗಳ ರಕ್ಷಣೆಗಾಗಿಯೇ 'ಸಾಗರ ರಕ್ಷಿತ ಪ್ರದೇಶ' (ಎಂಪಿಎ) ಎಂದು ಆಯಕಟ್ಟಿನ ಜಾಗಗಳನ್ನು ಗುರುತಿಸಿವೆ. ಈ ಪರಿಕಲ್ಪನೆ ಮೂಡಿದ್ದು 1962ರಲ್ಲಿ 'ರಾಷ್ಟ್ರೀಯ ಉದ್ಯಾನಗಳ ಜಾಗತಿಕ ಕಾಂಗ್ರೆಸ್'ನಲ್ಲಿ. ಈಗ 2030ರ ಹೊತ್ತಿಗೆ ಶೇ 30ರಷ್ಟು ಭಾಗವು ಸಾಗರ ರಕ್ಷಿತ ಪ್ರದೇಶವಾಗಿ ಘೋಷಣೆಯಾಗಬೇಕೆಂಬುದು ವಿಶ್ವಸಂಸ್ಥೆಯ ಆಶಯ ಕೂಡ.

ಅಂಟಾರ್ಕ್ಟಿಕ ಖಂಡಕ್ಕೆ ಈ ಯೋಜನೆಯನ್ನು ವಿಸ್ತರಿಸುವುದರಲ್ಲಿ ಹೆಚ್ಚಿನ ಅರ್ಥವಿದೆ. ಏಕೆಂದರೆ ಈಗಿನ 56 ಸದಸ್ಯ ರಾಷ್ಟ್ರಗಳಿಗೆ ಈಗಾಗಲೇ ಒಂದು ಅಂಶ ಮನದಟ್ಟಾಗಿದೆ. ಅಂಟಾರ್ಕ್ಟಿಕ ಖಂಡ ಇಡೀ ಮನುಕುಲಕ್ಕೆ ಸೇರಿದ್ದು ಎಂದು ಘೋಷಣೆಯಾಗಿದ್ದರೂ ಸದ್ದಿಲ್ಲದೆ ಅಲ್ಲಿನ ಜೀವಿ ಸಂಪನ್ಮೂಲವನ್ನು ಲಪಟಾಯಿಸುತ್ತಿವೆ. ವಿಶೇಷವಾಗಿ 'ಕ್ರಿಲ್' ಎಂಬ ಸೀಗಡಿ ದಕ್ಷಿಣ ಸಾಗರದ ಆಹಾರ ಸರಪಳಿಗೆ ಮೂಲಕೊಂಡಿ. ಹೆಚ್ಚಿನ ಪ್ರೋಟೀನ್ ಇರುವುದರಿಂದ ಅಲ್ಲಿನ ತಿಮಿಂಗಿಲ, ಸೀಲ್, ಕಡಲಹಕ್ಕಿಗಳು, ಪೆಂಗ್ವಿನ್ ಎಲ್ಲಕ್ಕೂ ಕ್ರಿಲ್ ಬೇಕು. ಸದ್ಯ ಇಡೀ ಅಂಟಾರ್ಕ್ಟಿಕದ ಸುತ್ತಣ ಸಾಗರದಲ್ಲಿ ಎರಡು ಭಾಗಗಳು ಮಾತ್ರ 'ರಕ್ಷಿತ ಪ್ರದೇಶ'ದ ಅಡಿಯಲ್ಲಿ ಬರುತ್ತವೆ. ಅಲ್ಲಿ ಕ್ರಿಲ್ ದೋಚುವಂತಿಲ್ಲ.

2021ರಲ್ಲೇ ನಾರ್ವೆ, ಚೀನಾ, ಚಿಲಿ, ದಕ್ಷಿಣ ಕೊರಿಯಾ ಒಟ್ಟಾರೆ 1,61,722 ಟನ್ ಕ್ರಿಲ್ ಸಂಪನ್ಮೂಲವನ್ನು ಅರಕ್ಷಿತ ಪ್ರದೇಶದಿಂದ ಸಂಗ್ರಹಿಸಿದ್ದವು. ವಾಸ್ತವವಾಗಿ ದಕ್ಷಿಣ ಸಾಗರದಲ್ಲಿ ಇರುವ ಕ್ರಿಲ್ ಸಂಪನ್ಮೂಲದ ಶೇ 1ರಷ್ಟನ್ನು ಮಾತ್ರ ಹಿಡಿಯಲು ಅವಕಾಶ ಕೊಡಲಾಗಿದೆ. ಆದರೆ ಈ ದೇಶಗಳು ಆಹಾರಕೊಂಡಿಯ ಸರಪಳಿಯನ್ನೇ ತುಂಡರಿಸುತ್ತಿವೆ. ಇಡೀ ಅಂಟಾರ್ಕ್ಟಿಕ ಖಂಡದ ಅಂಚಿನಲ್ಲಿ ಇನ್ನೂ ಮೂರು ರಕ್ಷಿತ ಸಾಗರ ಪ್ರದೇಶಗಳನ್ನು ಸೃಷ್ಟಿಸಬೇಕಾಗಿದೆ. 2012ರಲ್ಲೇ ಸದಸ್ಯ ರಾಷ್ಟ್ರಗಳು ಇದಕ್ಕೆ ಒಪ್ಪಿಗೆ ನೀಡಿದ್ದರೂ ಅಂಟಾರ್ಕ್ಟಿಕ ಖಂಡದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿರುವ ಸಮಿತಿ ಕಾರ್ಯೋನ್ಮುಖವಾಗಿಲ್ಲ. ಏಕೆಂದರೆ ಉತ್ಸಾಹ ತೋರಿದ ದೇಶಗಳು ಜೀವಿ ಉದ್ಯಾನಗಳನ್ನು ನಿರ್ವಹಿಸಲು ಬೇಕಾದ ಆರ್ಥಿಕ ನೆರವನ್ನು ಕೊಡುತ್ತಿಲ್ಲ. ಇದು ಒಂದು ರೀತಿಯ ಅವಗಣನೆಗೆ ತುತ್ತಾಗಿದೆ. ಇದೇ ಅಲಕ್ಷ್ಯವನ್ನು ಮುಂದುವರಿಸಿದರೆ, ಮುಂದೆ ದಕ್ಷಿಣ ಸಾಗರದ ಜೀವಿವೈವಿಧ್ಯಕ್ಕೇ ಕುತ್ತು ಬರುವಷ್ಟು ಜೀವಿ ಸಂಪನ್ಮೂಲವನ್ನು ಸದಸ್ಯ ರಾಷ್ಟ್ರಗಳೇ ದೋಚುವ ಸಂಭವವಿದೆ.

ಯೋಜಿಸಿದಂತೆ ಇನ್ನು ಮೂರು ಪ್ರದೇಶಗಳು ಜೀವಿ-ಉದ್ಯಾನಗಳ ಸುರಕ್ಷಿತ ತಾಣಗಳಾಗಿ ಸಂರಕ್ಷಿತವಾದರೆ ಸುಮಾರು 36 ಲಕ್ಷ ಚದರ ಕಿಲೊಮೀಟರ್ ಪ್ರದೇಶದಲ್ಲಿ ಯಾವ ಮಾನವ ಚಟುವಟಿಕೆಗಳಿಗೂ ಅವಕಾಶ ಇರುವುದಿಲ್ಲ. ಆದರೆ ಅಂಟಾರ್ಕ್ಟಿಕದ ಮಟ್ಟಿಗೆ ಇದು ಒಡನೆಯೇ ಕೈಗೂಡುವುದಿಲ್ಲ. ರಷ್ಯಾ ಮತ್ತು ಚೀನಾ 'ಸಾಗರ ಸಂರಕ್ಷಿತ ಪ್ರದೇಶ' ಎಂಬ ಪರಿಕಲ್ಪನೆಯನ್ನೇ ಪ್ರಶ್ನಿಸುತ್ತಿವೆ. ನಾಶದ ಭೀತಿಯಲ್ಲಿರುವ ಪಟ್ಟಿಯಲ್ಲಿ ಕ್ರಿಲ್ ಸಂಪನ್ಮೂಲ ಬರುತ್ತಿಲ್ಲ, ಅದು ದಂಡಿಯಾಗಿರುವಾಗ, ಸರಿಯಾದ ರೀತಿಯಲ್ಲಿ ಬಳಕೆಯಾದರೆ ತಪ್ಪೇನು ಎನ್ನುತ್ತಿವೆ. ಇದರ ಅರ್ಥ, ಈ ಯೋಜನೆಗೆ ಆರ್ಥಿಕ ಬೆಂಬಲವನ್ನು ಅವು ನೀಡುವ ಸಾಧ್ಯತೆ ಇಲ್ಲ. ಆದರೆ ಇದೇ ವೇಳೆ, ಸದಸ್ಯ ರಾಷ್ಟ್ರವಾಗಿರುವ ಭಾರತ ಅತ್ಯಂತ ಹೆಚ್ಚು ಜೀವಿವೈವಿಧ್ಯವಿರುವ, ವಿಶೇಷವಾಗಿ ಕ್ರಿಲ್ ಸಂಪನ್ಮೂಲವಿರುವ ಅಂಟಾರ್ಕ್ಟಿಕ ಖಂಡದ ವೆಡೆಲ್ ಸಮುದ್ರ ಮತ್ತು ಪೂರ್ವ ಅಂಟಾರ್ಕ್ಟಿಕದ ಕೊಕ್ಕಿನಂತಿರುವ ಭಾಗದಲ್ಲಿ ಎರಡು ಸಾಗರ ಸಂರಕ್ಷಿತ ಪ್ರದೇಶಗಳನ್ನು ಗುರುತಿಸಲು ಮುಂದೆ ಬಂದಿದೆ.

ಅಂಟಾರ್ಕ್ಟಿಕ ಖಂಡ ಇಡೀ ಮನುಕುಲದ ಆಸ್ತಿ ಎನ್ನುವಾಗ ಅದರ ದುರ್ಬಲಕೆಯೂ ಆಗುತ್ತದೆ. ಏಕೆಂದರೆ ಯಾವೊಂದು ರಾಷ್ಟ್ರಕ್ಕೂ ಅದರ ಮೇಲೆ ಹಕ್ಕಿಲ್ಲ. ಪ್ರತಿಬಾರಿಯೂ ಸದಸ್ಯ ದೇಶಗಳು ಸಭೆ ಸೇರಿ ನಿರ್ಣಯಗಳನ್ನು ಮಂಡಿಸಬೇಕು, ಒಪ್ಪಿಗೆ ಪಡೆದು ಅನುಷ್ಠಾನಗೊಳಿಸಬೇಕು. ಒಂದು ಅರ್ಥದಲ್ಲಿ ಇಡೀ ಈ ಶ್ವೇತಖಂಡ ನಾವು ರೂಪಿಸುವ ಕಾನೂನಿನಿಂದಲೇ ಅದರ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದ ಅನೂಹ್ಯ ಸ್ಥಿತಿಯನ್ನು ತಲುಪುತ್ತಿದೆ. ನಿಸರ್ಗ ನಮ್ಮ ಕಾನೂನುಗಳಿಗಾಗಿ ಕಾಯುತ್ತದೆಯೇ?



ಚುರುಮುರಿ



ಮತ ಮುಹೂರ್ತ

● ಮಣ್ಣೆರಾಜು

'ಮತ ಮುಹೂರ್ತಕ್ಕೆ ಹೋಗಲು ಯಾವ ಸೀರೆ ಉಡಬೇಕು ಅಂತ ಕನ್‌ಫ್ಯೂಸ್ ಆಗಿದೇರೀ, ನನ್ನ ಹತ್ರ ಒಳ್ಳೆ ಸೀರೆಗಳೇ ಇಲ್ಲ...' ಸೀರೆಗಳನ್ನು ಹರಡಿಕೊಂಡು ಕುಳಿತಿದ್ದ ಸುಮಿ ಸಂಕಟಪಟ್ಟಳು.

'ಹೊಸ ಸೀರೆ ಉಟ್ಟು, ಅಲಂಕಾರ ಮಾಡಿಕೊಳ್ಳಲು ನಾವು ಹೋಗುತ್ತಿರುವುದು ಮತದಾನಕ್ಕೆ, ಮದುವೆ, ಗೃಹ ಪ್ರವೇಶಕ್ಕಲ್ಲ, ಮತ ಕೇಂದ್ರದಲ್ಲಿ ನಾವು ಯಾರಿಗೂ ಮುಯ್ಯಿ ಕೊಡುವಂತಿಲ್ಲ, ನಮಗೆ ಯಾರೂ ತಾಂಬೂಲ ಕೊಡುವುದಿಲ್ಲ. ಅಲ್ಲಿ ನಿನ್ನ ಸೀರೆ, ಒಡವೆ, ಅಲಂಕಾರವನ್ನು ಯಾರೂ ಗಮನಿಸುವುದಿಲ್ಲ. ಹಿಂದಿನ ಚುನಾವಣೆಯಲ್ಲಿ ಉಟ್ಟಿದ್ದ ಸೀರೆ ಉಟ್ಟುಕೊಂಡು ಹೋದರೂ ಸಾಕು' ಎಂದ ಶಂಕ್ರಿ.

'ಐದು ವರ್ಷಕ್ಕೆ ಸರ್ಕಾರದ ವಾಯಿದೇನೆ ಮುಗಿಯುತ್ತೆ, ಆಗ ಉಟ್ಟಿದ್ದ ಸೀರೆಯ ಬಣ್ಣ, ಗುಣ ಹಾಳಾಗಿದೆ...'

'ಹಾಗಂತ ಮತ ಮುಹೂರ್ತಕ್ಕೂ ಹೊಸ ಸೀರೆ ಕೊಳ್ಳಬೇಕಾಗಿತ್ತಾ?'

'ಹೌದೂರೀ, ಚುನಾವಣೆ ಅಭ್ಯರ್ಥಿಗಳು ಕೆಲವರಿಗೆ ಸೀರೆ ಹಂಚಿ, ಬ್ಲೌಸ್ ಹೊಲಿಸಿಕೊಳ್ಳಲು ದುಡ್ಡೂ ಕೊಟ್ಟಿದ್ದಾರಂತೆ. ಅವರೆಲ್ಲಾ ಎಲೆಕ್ಷನ್ ಸೀರೆ ಉಟ್ಟುಕೊಂಡು ಮತ ಚಲಾಯಿಸಲು ಬರುವಾಗ ನಾನು ಹಳೆ ಸೀರೆ ಉಟ್ಟು ಹೋಗೋದು ಸರಿನಾ?'

'ಹೊಸ ಸೀರೆ ಉಟ್ಟು ಸಂಭ್ರಮಪಡಲು ಮತದಾನದ ದಿನವು ಹಬ್ಬಹರಿದಿನವಲ್ಲ...'

'ಮತದಾನ ದಿನವನ್ನೂ ಹಬ್ಬಗಳಂತೆ ಸಂಭ್ರಮದಿಂದ ಆಚರಿಸಬೇಕೂರೀ... ಇಲ್ಲಿರುವ ಸೀರೆ ರಾಶಿಯಲ್ಲಿ ಮತದಾನಕ್ಕೆ ಉಡಲು ಯೋಗ್ಯವಾದ ಸೀರೆ ಆರಿಸೋದು ಕಷ್ಟವಾಗಿದೆ'.

'ಯೋಗ್ಯ ವರನಿಗೆ ಕನ್ಯಾದಾನ, ಯೋಗ್ಯ ಅಭ್ಯರ್ಥಿಗೆ ಮತದಾನ ಮಾಡಿದರೆ ಸಂಸಾರ, ಸರ್ಕಾರ ಸುಖವಾಗಿರುತ್ತವೆ. ಸೀರೆ ಆರಿಸುವ ಮುತುವರ್ಜಿಯನ್ನು ಅಭ್ಯರ್ಥಿ ಆರಿಸುವ ಬಗ್ಗೆ ತೋರಿಸು'.

'ಸೀರೆ ಆರಿಸುವ ವಿಚಾರದಲ್ಲಿ ನಾನು ಎಷ್ಟೇ ಜಾಣೆಯಾದರೂ ಗಂಡನನ್ನು ಆರಿಸುವ ವಿಚಾರದಲ್ಲಿ ಆ ಜಾಣತನ ತೋರಲಿಲ್ಲ, ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಯಾಮಾರುವುದಿಲ್ಲಾರೀ...' ಎಂದು ಸುಮಿ ಒಂದು ಸೀರೆ ಆರಿಸಿ ಉಡಲು ಹೋದಳು.

ಸಂಗತ

ಮತದಾನ ಬಹಿಷ್ಕಾರ ಜಾಣ್ಮೆಯಲ್ಲ

ಅರ್ಹತೆಯಿದ್ದೂ ವೋಟು ಮಾಡದ ಉದ್ದೇಶಪೂರ್ವಕ ಔದಾಸೀನ್ಯದಿಂದ ಮುಂದಿನ ಪೀಳಿಗೆಗಳಿಗೂ ಅಹಿತಕರ ಸಂದೇಶ ರವಾನೆಯಾಗುವುದು

● ಬಿ.ಎಸ್.ಭಗವಾನ್

ರಾಜಕೀಯ ಸ್ವಾತಂತ್ರ್ಯದ ದ್ಯೋತಕವಾದ ಚುನಾವಣೆಯ ಮೌಲ್ಯವನ್ನು ಪ್ರಜೆಗಳು ಮನಗಾಣಬೇಕು. ಅಧಿಕ ಸಂಖ್ಯೆಯಲ್ಲಿ ಅವರು ಮತ ಚಲಾಯಿಸಲು ಮುಂದಾಗಬೇಕು. ಯಾವುದೇ ದೇಶದಲ್ಲೂ ಪ್ರಜಾಪ್ರಭುತ್ವ ಇಂದಿಗೂ ಪರಿಪೂರ್ಣ ಯಶಸ್ಸು ಕಂಡಿಲ್ಲ, ಪ್ರಾಯೋಗಿಕ ಹಂತದಲ್ಲೇ ಇದೆ. ಯಾವುದೇ ರಾಷ್ಟ್ರ ತನ್ನದು ಪರಿಪಕ್ವ ಪ್ರಜಾಸತ್ತೆ ಎಂದು ಬೀಗುವಂತಿಲ್ಲ. ಸ್ವಯಂಚಾಲಿತ ಪ್ರಜಾಪ್ರಭುತ್ವ ಎನ್ನುವುದಿಲ್ಲ. ಉತ್ತು ಬಿತ್ತರೇನೆ ಹೊಲ ಎನ್ನುವಂತೆ, ಜನರ ಸಕ್ರಿಯ ಸಹಭಾಗಿತ್ವವಿಲ್ಲದೆ ಪ್ರಜಾಸತ್ತೆ ಎಂಬ ದೋಣಿ ಸಾಗದು.

ಬೆಲ್ಜಿಯಂ, ಬ್ರೆಜಿಲ್, ಈಕ್ವೆಡಾರ್, ಸಿಂಗಪುರದಂತಹ ದೇಶಗಳಲ್ಲಿ ಮತದಾನವನ್ನು ಪೌರರ ನ್ಯಾಯಸಮ್ಮತ ಅಗತ್ಯ ಎಂದು ಘೋಷಿಸಲಾಗಿದೆ. ತೈವಾನ್, ಸಿಪ್ರಸ್, ಹಾಂಕಾಂಗ್‌ನಲ್ಲಂತೂ ಚುನಾವಣೆಯನ್ನು ಹಬ್ಬದಂತೆಯೇ ಸಡಗರಿಸಲಾಗುತ್ತದೆ. ಕುಂದುಕೊರತೆಗಳನ್ನೇ ಕಾರಣವಾಗಿಟ್ಟುಕೊಂಡು ಮತದಾನ ಬಹಿಷ್ಕರಿಸುವುದು ಬಾಲಿಶ. ಮತದಾನ ಸದ್ಯ ಇರುವ ಆಡಳಿತಕ್ಕಿಂತ ಉತ್ತಮ ಆಡಳಿತ ತರುವ ಅವಕಾಶವನ್ನು ಒದಗಿಸುತ್ತದೆ.

ಮತದಾನ ಬಹಿಷ್ಕಾರಕ್ಕೆ ಕಾರಣಗಳ ಸರಮಾಲೆಯನ್ನೇ ಕಟ್ಟಬಹುದು. ಬಡಾವಣೆಗೆ ಸಮರ್ಪಕ ರಸ್ತೆಯಿಲ್ಲ, ಒಳಚರಂಡಿ ಕಾಮಗಾರಿ ಅರ್ಧಕ್ಕೇ ಸ್ಥಗಿತವಾಗಿದೆ, ನೀರು ಮತ್ತು ವಿದ್ಯುತ್ ಸರಬರಾಜು ಸರಿಯಿಲ್ಲ, ನಾಯಿಗಳ ಉಪಟಳವಿದೆ, ಶಾಲೆಯ ಕುಸಿದ ಚಾವಣಿ ದುರಸ್ತಿಗೆ ಕಾದಿದೆ, ದವಾಖಾನೆಯ ಕಟ್ಟಡ ವಿಸ್ತರಿಸಬೇಕಿದೆ... ಒಂದೇ? ಎರಡೇ? ಬಾಧೆ, ನ್ಯೂನತೆಗಳು ಮತದಾನದಿಂದ ಹಿಂದೆ ಸರಿಯುವುದನ್ನು ಸಮರ್ಥಿಸವು. ಅರ್ಹತೆಯಿದ್ದೂ ವೋಟು ಮಾಡದ ಉದ್ದೇಶಪೂರ್ವಕ ಔದಾಸೀನ್ಯದಿಂದ ಮುಂದಿನ ಪೀಳಿಗೆಗಳಿಗೂ ಅಹಿತಕರ ಸಂದೇಶ ರವಾನೆಯಾಗುವುದು.

ಜನತಂತ್ರ ವ್ಯವಸ್ಥೆಯನ್ನು ಸರಿಯಾಗಿ ಗ್ರಹಿಸದಿದ್ದರೆ ಒಬ್ಬರ ಅಜ್ಞಾನ ಎಲ್ಲರ ಭದ್ರತೆಗೆ ಸಂಚಕಾರ ತರುತ್ತದೆ ಎಂದರು ಅಮೆರಿಕದ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿ. ತನ್ನೊಂದು ವೋಟಿನಿಂದ ಏನಾಗಬೇಕಿದೆ ಎನ್ನುವುದಕ್ಕೆ ಬದಲಾಗಿ, ಏನೆಲ್ಲ ಸಾಧ್ಯವೆನ್ನುವ ಸಕಾರಾತ್ಮಕ ಧೋರಣೆ ಮೇಲುಗೈ ಸಾಧಿಸಬೇಕಿದೆ. ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಯತ್ತ ತೆರಳುವ ಇಂಗಿತ ಜನಕ್ಕಿದ್ದರೆ ಚುನಾವಣಾ ಪ್ರಚಾರದ ವಿನ್ಯಾಸವೇ ಬದಲಾಗುವುದು. ಉಮೇದುವಾರರ ಚಿತ್ತ ಮತದಾರರನ್ನೂ ಮೀರಿ ಜನರ ಬವಣೆ, ಪ್ರಲಾಪಗಳತ್ತ ಹರಿಯುತ್ತದೆ.

ದುರ್ದೈವವೆಂದರೆ, ಚುನಾವಣೆಗಳು ರಾಜಕೀಯದ ಪಳೆಯುಳಿಕೆಗಳಾಗಿಬಿಟ್ಟಿವೆ. ಪ್ರಜಾಪ್ರಭುತ್ವ ಎಂದರೆ ಜನಪ್ರತಿನಿಧಿಗಳ ಆಯ್ಕೆ ಎನ್ನುವ ಸೀಮಿತ ಅರ್ಥ ಬಂದಿದೆ. ಮುಂದಿನ ಚುನಾವಣೆಯಲ್ಲಿ ಮತ್ತೆ ಗೆಲ್ಲುವುದರತ್ತಲೇ ಅಧಿಕಾರಸ್ಥರ ಯೋಜನೆಯೇ ವಿನಾ ತಾವಿತ್ತ ಭರವಸೆಗಳ ಈಡೇರಿಕೆ ಮೇಲಲ್ಲ. ರಾಜಕೀಯವು ಅರ್ಥವಾಗದ ಗೌಜು, ಗೊಂದಲಗಳ ಬೀಡು, ರಾಜಕಾರಣಿಗಳದು ಪೂರ್ವನಿಯೋಜಿತ ಅಧಿಕಾರದ ಅನುಭೋಗ ಎಂದು ಭಾವಿಸುವ ಯುವವರ್ಗವಿದೆ. ಅವರ ನಿಲುವು ವಾಸ್ತವಕ್ಕಿಂತ ತೀರಾ ಭಿನ್ನವೇನಲ್ಲ. ಇನ್ನು ಯಾವ ಶ್ರದ್ಧೆಯಿಂದ ಮತ ಚಲಾಯಿಸಲು ಅವರು ಮತಗಟ್ಟೆಗೆ ಹೋದಾರು? ಅಷ್ಟಾದರೂ ಮತಗಟ್ಟೆಗೆ ಹೋಗೆವು ಎಂದು ಹಟ ಹಿಡಿದಿರುವವರನ್ನು ಶತಾಯ ಗತಾಯ ಮನವೊಲಿಸಬೇಕಿದೆ. ವಿಶೇಷವಾಗಿ ಯುವಕರಿಗೆ ಮಾರ್ಗದರ್ಶನದ ಅಗತ್ಯವಿದೆ. ಏಕೆಂದರೆ ಚುನಾವಣೆಯೆಂದರೆ ಮೂಗು ಮುರಿಯುವ ಯುವಕರ ಸಂಖ್ಯೆ ದೊಡ್ಡದೇ ಇದೆ. ಅವರು ಮತಪೆಟ್ಟಿಗೆಯ ಶಕ್ತಿಯನ್ನು ಅರಿಯಬೇಕು, ಅವರು ಅದರ ಹೊಳಪಾಗಬೇಕು. ಒಂದು ಅರ್ಥದಲ್ಲಿ ಚುನಾವಣೆ ಬಹಿಷ್ಕಾರಕ್ಕೆ ಮುಂದಾಗಿರುವವರೇ ದಕ್ಷ ಸರ್ಕಾರ ತರುವ ಸಮರ್ಥರಾಗಬಲ್ಲರು!

ಚುನಾವಣೆಗೆ ನಿಂತ ಉಮೇದುವಾರ ತನಗೆ ಅಥವಾ ತನ್ನ ಸಹ ಉಮೇದುವಾರರಿಗೆ ಮತ ಹಾಕಬೇಡಿ ಎಂದರೂ ಮತದ ಹಕ್ಕನ್ನು ಅಪಮಾನಿಸಿದಂತೆ. ಸ್ಪರ್ಧಿಸಿದವರಲ್ಲಿ ಎಲ್ಲರೂ ಅನರ್ಹರೆನ್ನಿಸಿದರೆ ಎರಡು ಆಯ್ಕೆಗಳಿದ್ದೇ ಇವೆ. ಒಂದು, ಕಡಿಮೆ ಅನರ್ಹರೆನ್ನಿಸಿದವರಿಗೆ ಮತ ನೀಡಬಹುದು, ಇನ್ನೊಂದು, 'ಸ್ಪರ್ಧಿಸಿರುವವರ ಪೈಕಿ ಯಾರೂ ಅರ್ಹರಲ್ಲ' (ನೋಟಾ) ಎಂಬ ಅಭಿಪ್ರಾಯ ಚಲಾಯಿಸಬಹುದು. ಅಂತೂ ನಮ್ಮ ಪ್ರಜಾಪ್ರಭುತ್ವದಲ್ಲಿ ಪಾಲ್ಗೊಂಡಂತಾಯ್ತಲ್ಲ, ಅದು ಮುಖ್ಯ.



ಎರಡು ನಿದರ್ಶನಗಳು ಉಲ್ಲೇಖನೀಯ. 1989ರಲ್ಲಿ ಪೋಲೆಂಡ್‌ನಲ್ಲಿ ಹಾಗೂ 1991ರಲ್ಲಿ ರಷ್ಯಾದಲ್ಲಿ ಸರ್ಕಾರಗಳ ಬದಲಾವಣೆಗೆ 'ನೋಟಾ' ಮತದಾನ ನಿರ್ಣಾಯಕ ಪಾತ್ರ ವಹಿಸಿತ್ತು. ನಾಳೆ ಸರ್ಕಾರ ರಚನೆಗೊಂಡು ಏನಾದರೊಂದು ಅನನುಕೂಲ, ಲೋಪ ಗಮನಿಸಿ 'ಅಯ್ಯೋ, ನಾನು ಮತ್ತು ನನ್ನಂಥವರು ವೋಟು ಹಾಕಿದ್ದರೆ ಹೀಗಾಗುತ್ತಿರಲಿಲ್ಲ' ಎನ್ನುವ ಪರಿತಾಪ ತಪ್ಪುತ್ತದೆ. ಅದಕ್ಕಾಗಿಯಾದರೂ ಮತದಾನ ಬಹಿಷ್ಕರಿಸಬಾರದು, ನಮ್ಮ ಅಸ್ಮಿತೆಯನ್ನು ಅಲಕ್ಷಿಸಬಾರದು, ನೈತಿಕ ಬದ್ಧತೆಯನ್ನು ನಿರ್ವಹಿಸಬೇಕು. ರಾಜಕೀಯ ವಿಜ್ಞಾನ ಬರೀ ತರಗತಿಗಳಲ್ಲಿ, ಸಂಶೋಧನಾ ಪ್ರಬಂಧಗಳಲ್ಲಿ ಇರದೆ ಪ್ರಜೆಗಳ ಕಣ್ಣು ತೆರೆಸುತ್ತಿರಬೇಕು.

'ಗ್ಯಾಸ್ ಇಲ್ಲ... ವೋಟಿಲ್ಲ', 'ಗೊಬ್ಬರವಿಲ್ಲ... ವೋಟಿಲ್ಲ', 'ಸೇತುವೆಯಿಲ್ಲ... ವೋಟಿಲ್ಲ' ಎಂಬಂತಹ ಗೊಣಗಾಟಗಳು ಮತಗಟ್ಟೆಗೆ ಹೋಗುವುದನ್ನು ತಪ್ಪಿಸಬಾರದು. ಮತದಾನವು ಅಧಿಕಾರ ಹಿಡಿದ ರಾಜಕೀಯ ನಾಯಕರ ಮೇಲೆ ನಿಗಾ ಇಡಬಲ್ಲ ಶಾಂತಿಯುತ ಮತ್ತು ಪರಿಣಾಮಕಾರಿ ಅಸ್ತ್ರ. ತಾವೆಲ್ಲಿ ಮತ್ತೆ ಆರಿಸಿಬರುವುದಿಲ್ಲವೋ ಎನ್ನುವ ಆತಂಕ ಕುರ್ಚಿ ಹಿಡಿದವರನ್ನು ಕಾಡುವುದು. ಅವರು ಪ್ರಮಾದ ಎಸಗುವುದರಿಂದ ಸ್ವಲ್ಪಮಟ್ಟಿಗಾದರೂ ದೂರವಿದ್ದಾರು.

ಮತ ಚಲಾವಣೆಗೆ ನಾವು ಒಮ್ಮನಸ್ಸಿನಿಂದ ಕಾರ್ಯಪ್ರವೃತ್ತರಾದರೆ ಯಾವುದೇ ಆಮಿಷ, ದುರ್ಬೋಧೆ ನಮ್ಮನ್ನು ತಡೆಯದು.

ವಾಚಕರ ವಾಣಿ

ಯುಪಿಎಸ್‌ಸಿ: ಒಕ್ಕೂಟಧರ್ಮ ಪಾಲನೆಯಾಗಲಿ

ಬಿಜೆಪಿ ನಾಯಕರಾದ ಗೃಹ ಸಚಿವ ಅಮಿತ್ ಶಾ ಅವರು ಖಾಸಗಿ ಸುದ್ದಿವಾಹಿನಿಯೊಂದರಲ್ಲಿ ಮಾತನಾಡುತ್ತಾ, 'ಯುಪಿಎಸ್‌ಸಿ ಪರೀಕ್ಷೆಯನ್ನು ನಮ್ಮ ಸರ್ಕಾರ ಕನ್ನಡದಲ್ಲಿ ಕೊಡುತ್ತಿದೆ. ಅದೂ ನಮ್ಮ ಸರ್ಕಾರ ಬಂದ ಮೇಲೆಯೇ ಇದು ಸಾಧ್ಯವಾಗಿದ್ದು' ಎಂದು ಹೇಳಿದ್ದಾರೆ. ಇದು ಸಂಪೂರ್ಣ ತಪ್ಪು ಮಾಹಿತಿ. ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆಯನ್ನು ಇಂದಿಗೂ ಇಂಗ್ಲಿಷ್ ಜೊತೆಗೆ ಹಿಂದಿ ಮಾಧ್ಯಮದಲ್ಲಿ ಮಾತ್ರ ಬರೆಯಲು ಅವಕಾಶವಿದೆ. ಇದೇ 28ರಂದು ಒಕ್ಕೂಟ ಭಾರತದಾದ್ಯಂತ ಈ ಪರೀಕ್ಷೆ ನಡೆಯುತ್ತಿದೆ. ಈ ಪರೀಕ್ಷೆಯನ್ನು ಹಿಂದಿಯಲ್ಲಿ ಬರೆಯಲು ಅವಕಾಶ ಕೊಟ್ಟಂತೆ ಕನ್ನಡದಲ್ಲಿಯೂ ಬರೆಯಲು ಅವಕಾಶ ಕೊಡಬೇಕು. ಅದು ಒಕ್ಕೂಟಧರ್ಮ ಕೂಡ.

ರಾಜ್ಯಗಳು ರಚನೆಯಾಗಿರುವುದು ಭಾಷೆಗಳ ಆಧಾರದ ಮೇಲೆ. ಆಯಾ ರಾಜ್ಯ ಭಾಷೆಗಳಲ್ಲಿ ಆಡಳಿತ ನಡೆಸುವುದು, ಪರೀಕ್ಷೆಗೆ ಅವಕಾಶ ಕಲ್ಪಿಸುವುದು, ಜನಲಕ್ಷಣವನ್ನು ಉಳಿಸಿಕೊಳ್ಳುವುದು, ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ಒಕ್ಕೂಟ ಭಾರತ ಸರ್ಕಾರದ ಪ್ರಾಥಮಿಕ ಕೆಲಸ. ಸ್ವಾತಂತ್ರ್ಯ ಬಂದು ಏಳು ದಶಕಗಳು ಕಳೆದರೂ ನಾವು ಇಂತಹ ವಿಷಯಗಳಲ್ಲಿ ಸಂಪೂರ್ಣರಾಗದಿರುವುದು ದೊಡ್ಡ ದೌರ್ಭಾಗ್ಯವೇ ಸರಿ. ಕನ್ನಡ ಅಸ್ಮಿತೆಯನ್ನು ಗುರುತಾಗಿ ಇಟ್ಟುಕೊಂಡಿದ್ದೇವೆ ಎಂದು ಹೇಳಿಕೊಳ್ಳುವ ಪಕ್ಷಗಳು ಮತ್ತು ಸಂಘಟನೆಗಳು ಈ ವಿಚಾರವಾಗಿ ಧ್ವನಿ ಎತ್ತಲಿ.

ಗಿರೀಶ್ ಮತ್ತೇರ, ಯರಗಟ್ಟಿಹಳ್ಳಿ, ಚನ್ನಗಿರಿ

ಹಕ್ಕು- ದಿಕ್ಕು

ಮತದಾನ ನಮ್ಮ ಹಕ್ಕು
ಮನಸು ಮಾಡಿದರೆ
ತೋರಬಹುದು ನಮ್ಮ ಮತ
ಪ್ರಜಾಪ್ರಭುತ್ವಕ್ಕೆ
ಸೂಕ್ತ ದಿಕ್ಕು!

ಮ.ಗು.ಬಸವಣ್ಣ
ನಂಜನಗೂಡು

ಉಡೀಸ್ ಎಂಬ ಉಡಾಫೆ

ಉಕ್ರೇನ್ ಮತ್ತು ರಷ್ಯಾ ನಡುವೆ ಒಂದು ವರ್ಷದಿಂದಲೂ ಯುದ್ಧ ನಡೆಯುತ್ತಿದೆ. ಆದರೂ ಅದು ಇನ್ನೂ ಮುಕ್ತಾಯ ಆಗದಿರುವುದು ಆತಂಕಕಾರಿ ಸಂಗತಿ. ಎರಡೂ ರಾಷ್ಟ್ರಗಳು ವೈಯಕ್ತಿಕ ಅಹಮ್ಮಿಗೆ ಬಿದ್ದಿವೆ. ಇವುಗಳ ಹಿಂದೆ ಬಲಾಢ್ಯ ರಾಷ್ಟ್ರಗಳು ಇರುವುದು ಗುಟ್ಟಾಗೇನೂ ಉಳಿದಿಲ್ಲ. ಈ ನಡುವೆ ಅಣುಬಾಂಬ್ ಬಳಕೆಯ ಮಾತುಗಳು ಕೇಳಿಬರುತ್ತಿರುವುದರಿಂದ ಇಡೀ ವಿಶ್ವವೇ ಆತಂಕಕ್ಕೆ ಒಳಗಾಗಿದೆ. ಇದು ಅತ್ಯಂತ ಸೂಕ್ಷ್ಮ ಸಂಗತಿಯಾಗಿದೆ.

ಕನ್ನಡ ಸುದ್ದಿ ವಾಹಿನಿಯೊಂದು ಇತ್ತೀಚೆಗೆ 'ಉಕ್ರೇನ್ ಉಡೀಸ್' ಎಂದು ಬೇಜವಾಬ್ದಾರಿಯಿಂದ ಸುದ್ದಿ ಬಿತ್ತರ ಮಾಡಿದ್ದು ಖಂಡನೀಯ. ಅಣುಬಾಂಬ್ ಬಳಕೆಯಿಂದ ಆಗುವ ಅನಾಹುತಗಳ ಬಗ್ಗೆ ಅರಿವು ಮೂಡಿಸುವ ಬದಲು ಇಂತಹ ಬೇಜವಾಬ್ದಾರಿ ಹೇಳಿಕೆ ಮತ್ತು ಸುದ್ದಿ ಪ್ರಸಾರವನ್ನು ಮಾಧ್ಯಮಗಳು ನಿಲ್ಲಿಸಲಿ. ಒಮ್ಮೆ ಅಣುಬಾಂಬ್ ಬಳಕೆಯಾದರೆ ಸುದ್ದಿ ಓದುವವರು ಮತ್ತು ನೋಡುವವರು ಯಾರೂ ಇರುವುದಿಲ್ಲ ಎಂಬ ಸಂಗತಿ ಅರ್ಥ ಆಗಲಿ.

ಡಾ. ರುದ್ರೇಶ್ ಅದರಂಗಿ, ಬೆಂಗಳೂರು

ಉತ್ತಮ ಫಲಿತಾಂಶ ಮತ್ತು ಒತ್ತಡ

ಈ ಬಾರಿ ರಾಜ್ಯದಲ್ಲಿನ ಎಸ್‌ಎಸ್‌ಎಲ್‌ಸಿ ಉತ್ತಮ ಫಲಿತಾಂಶದ ಬಗ್ಗೆ ಸಂಪಾದಕೀಯದ ಸಕಾರಾತ್ಮಕ ವಿಶ್ಲೇಷಣೆ (ಪ್ರ.ವಾ., ಮೇ 9) ಸ್ವಾಗತಾರ್ಹ. ಆದರೆ ಬರೀ ಶೇಕಡಾವಾರು ಅಂಕಿ ಅಂಶಗಳ ವಿಶ್ಲೇಷಣೆಯು ಒಟ್ಟಾರೆ ಶಿಕ್ಷಣ ವ್ಯವಸ್ಥೆಯ ಕೈಗನ್ನಡಿ ಎಂದು ಭಾವಿಸಲಾಗದು. ಮಕ್ಕಳು ಪಾಸಾದರೆಂಬ ಸಂತೋಷಕ್ಕಿಂತ ಅವರ ಮುಂದಿನ ಓದು, ಉದ್ಯೋಗಕ್ಕೆ ಹಣ ಹೊಂದಿಸುವ ಬಗ್ಗೆ ತಲೆ ಮೇಲೆ ಕೈಹೊತ್ತು ಕುಳಿತ ಮಧ್ಯಮ ವರ್ಗದ ತಾಯ್ತಂದೆಯರ ಸಂಖ್ಯೆ ಮಾತ್ರ ಅಪಾರವಾಗಿರುತ್ತದೆ!

ಇದು ನಿಜಕ್ಕೂ ಕಲ್ಯಾಣ ರಾಜ್ಯದ (ವೆಲ್‌ಫೇರ್ ಸ್ಟೇಟ್) ಲಕ್ಷಣ ಅಲ್ಲ. ಸಾಮಾನ್ಯ ಶಿಕ್ಷಣ (ಜನರಲ್ ಎಜುಕೇಷನ್) ರಾಜ್ಯ ಸರ್ಕಾರದ ಕಡ್ಡಾಯ ಜವಾಬ್ದಾರಿ. ನಮ್ಮ ತಲೆಮಾರಿನಂತೆ ಈಗ ಸಾಮಾನ್ಯ ಶಿಕ್ಷಣವೆನ್ನುವುದು ಓದುವುದು ಬರೆಯುವುದಕ್ಕಷ್ಟೇ ಸೀಮಿತವಲ್ಲ. ಕಂಪ್ಯೂಟರ್ ಸಾಕ್ಷರತೆ ಸಹ ಇದರಲ್ಲಿ ಸೇರಿರುತ್ತದೆ. ಅಂದಮಾತ್ರಕ್ಕೆ ಶಿಕ್ಷಣದ ವೆಚ್ಚ ಜಾಸ್ತಿಯಾಗಿಬಿಡುತ್ತದೆ, ಅದು ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಮಾತ್ರ ಸಾಧ್ಯ ಎನ್ನುವುದು ಭ್ರಮೆ. ಅದನ್ನೂ ವಿದ್ಯಾವಿಹೀನ ಬೇಜವಾಬ್ದಾರಿಯುತ ಸರ್ಕಾರಗಳೇ ಹುಟ್ಟುಹಾಕಿರುವುದು! ಶಾಲಾ ಶಿಕ್ಷಣದ ಪಠ್ಯವನ್ನು ಕಾಲಮಾನಕ್ಕೆ ತಕ್ಕಂತೆ ಸುಧಾರಿಸಬೇಕು ಮತ್ತು ಪ್ರಾಥಮಿಕ ಶಿಕ್ಷಣ ಕ್ಷೇತ್ರವನ್ನು ಖಾಸಗಿ ವಲಯದಿಂದ ಹೊರತಾಗಿಸಬೇಕು. ಇದು ಸಾಧ್ಯವಾಗಬಹುದೇ?

ಆರ್.ಕೆ.ದಿವಾಕರ, ಬೆಂಗಳೂರು

ಭ್ರಮೆ ಕಳಚುವವರೆಗೆ ಸಮಸ್ಯೆಗೆ ಪರಿಹಾರವಿಲ್ಲ

ಕೃಷಿಕ ಗಂಡುಗಳಿಗೆ ಮದುವೆಗೆ ಹೆಣ್ಣು ಸಿಗದಿರುವುದರ ಬಗ್ಗೆ ಡಾ. ಜ್ಯೋತಿ ಅವರು ತಮ್ಮ ಲೇಖನದಲ್ಲಿ (ಪ್ರ.ವಾ., ಮೇ 9) ದೀರ್ಘವಾಗಿ ಚರ್ಚಿಸಿದ್ದಾರೆ. ಲೇಖನದಲ್ಲಿ ಪ್ರಸ್ತಾಪಿಸಿರುವಂತೆ, ಕನ್ಯಾಪಿತೃಗಳು ಇಷ್ಟೊಂದು ಆಳವಾಗಿ ವಿಷಯ ವಿಶ್ಲೇಷಣೆ ಮಾಡುವಷ್ಟು ಪ್ರಬುದ್ಧರಲ್ಲ. ವರನ ಆಯ್ಕೆಯಲ್ಲಿ ಅವರು ಬಹಳ ಸರಳ ಮತ್ತು ನೇರ. ವರ ಡಾಕ್ಟರಾಗಿರಬೇಕು, ಎಂಜಿನಿಯರ್ ಆಗಿರಬೇಕು, ಇಲ್ಲವೇ ಸರ್ಕಾರದಲ್ಲಿ ಕಾಯಂ ಉದ್ಯೋಗಿಯಾಗಿರಬೇಕು. ಅಂದರೆ ಯಾವುದೇ ಅಡೆತಡೆಗಳಿಲ್ಲದೆ ಆದಾಯ ತರುವ ಗಂಡು ಪೋಷಕರ ಮೊದಲ ಪ್ರಾಶಸ್ತ್ಯ. ಜೊತೆಗೆ ವಿದ್ಯಾವಂತ ಹೆಣ್ಣುಗಳು ಉದ್ಯೋಗಕ್ಕೆ ಸೇರಿದ ಮೇಲೆ ತಮಗೆ ಸರಿಸಮಾನರಾದ ಜೀವನ ಸಂಗಾತಿಯನ್ನು ಆರಿಸಿಕೊಳ್ಳುವುದೂ ಉಂಟು. ಹೀಗಾಗಿ ಕೃಷಿಕ ಗಂಡುಗಳಿಗೆ ಹೆಣ್ಣು ಸಿಗುವುದು ಕಷ್ಟವಾಗುತ್ತಿದೆ.

ಹಳ್ಳಿಯ ಕೃಷಿಕ ಗಂಡುಗಳಿರಲಿ, ನಗರಗಳಲ್ಲಿ ಸ್ವಂತ ಉದ್ಯೋಗ ಮಾಡುವ ಗಂಡುಗಳಿಗೂ ಹೆಣ್ಣು ಲಭ್ಯವಿಲ್ಲ. ಶಿಕ್ಷಣ ಅಂದರೆ ಇಂಗ್ಲಿಷ್ ಶಿಕ್ಷಣ, ಉನ್ನತ ವ್ಯಾಸಂಗ ಅಂದರೆ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ, ಉದ್ಯೋಗ ಅಂದರೆ ಸರ್ಕಾರಿ ಉದ್ಯೋಗ ಎಂಬ ಭ್ರಮೆ ಎಲ್ಲಿಯವರೆಗೆ ಜನರನ್ನು ಆವರಿಸಿರುತ್ತದೋ ಅಲ್ಲಿಯವರೆಗೆ ಸಮಸ್ಯೆಗೆ ಪರಿಹಾರವಿಲ್ಲ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು



‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ಕ್ಕೆ ದಿನಗಣನೆ ಶುರು

‘ಪ್ರಜಾವಾಣಿ’ ಪತ್ರಿಕೆಯು ಚಿತ್ರರಂಗದ ಮಹತ್ವದ ಬೆಳವಣಿಗೆಗಳನ್ನು ಸೂಕ್ಷ್ಮ ವಿವರಗಳೊಂದಿಗೆ ವಿಶ್ಲೇಷಿಸುತ್ತಾ ಬಂದಿರುವುದಷ್ಟೆ ಅಲ್ಲ, ಸುದ್ದಿರೂಪದಲ್ಲಿಯೂ ಅವುಗಳನ್ನು ದಾಖಲಿಸಿರುವುದಕ್ಕೆ ಅಗಣಿತ ದಾಖಲೆಗಳಿವೆ. ಅದರಲ್ಲಿ ಒಂದೆರಡು ಆಸಕ್ತಿಕರ ಉದಾಹರಣೆಗಳು ಇಲ್ಲಿವೆ...

ಭಾರತೀಯ ಚಲನಚಿತ್ರಗಳಲ್ಲಿ ಚುಂಬನ ಇರಲೇಬೇಕೆಂಬ ಖೋಸ್ಲಾ ಸಮಿತಿ ಅಭಿಪ್ರಾಯವನ್ನು ಮೈಸೂರು ನಗರದ ಹನ್ನೆರಡು ಕಾಲೇಜುಗಳ 2624 ವಿದ್ಯಾರ್ಥಿಗಳು ವಿರೋಧಿಸಿದ್ದಾರೆ. ಈ ಪೈಕಿ 349 ವಿದ್ಯಾರ್ಥಿನಿಯರೂ ಸೇರಿದ್ದಾರೆ– ಇಂಥದೊಂದು ಸುದ್ದಿ 1970ರ ಫೆಬ್ರುವರಿ 5ರ ‘ಪ್ರಜಾವಾಣಿ’ ಸಂಚಿಕೆಯಲ್ಲಿ ಪ್ರಕಟವಾಗಿತ್ತು.

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತು ಐದು ಪ್ರಶ್ನೆಗಳನ್ನು ಒಳಗೊಂಡ ಒಂದು ಫಾರ್ಮ್ ಅನ್ನು ವಿವಿಧ ಕಾಲೇಜುಗಳಲ್ಲಿ ನೀಡಿ, ವಿದ್ಯಾರ್ಥಿಗಳಿಂದ ಅಭಿಪ್ರಾಯ ಸಂಗ್ರಹಿಸಿತ್ತು. ಒಟ್ಟು 4006 ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದು, ಆ ಪೈಕಿ 1383 ವಿದ್ಯಾರ್ಥಿಗಳು ಚಲನಚಿತ್ರಗಳಲ್ಲಿ ಚುಂಬನ ಇರಲೇಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಇವರಲ್ಲಿ 58 ವಿದ್ಯಾರ್ಥಿನಿಯರೂ ಸೇರಿದ್ದದ್ದು ಆಗ ವಿಶೇಷ ಸುದ್ದಿ ಎನಿಸಿಕೊಂಡಿತ್ತು.

ಸಿನಿಮಾ ಸಂಸ್ಕೃತಿಯ ವಿಷಯದಲ್ಲಿ ಆಗುತ್ತಿದ್ದ ಪಲ್ಲಟವನ್ನು, ಚುಂಬನ ದೃಶ್ಯ ಚಲನಚಿತ್ರಗಳಲ್ಲಿ ಇರಬೇಕು ಎಂದು ನಿರ್ಧರಿಸಲು ಒಂದು ಸಮಿತಿಯನ್ನು ಆಗ ರಚಿಸಿದ್ದು ಇವೆಲ್ಲ ಮಹತ್ವದ ಮಾಹಿತಿ ಇಂತಹ ಸುದ್ದಿಯಲ್ಲಿ ದಕ್ಕುತ್ತದೆ.

1955ರ ಫೆಬ್ರುವರಿಯ ಸಂಚಿಕೆಯೊಂದರಲ್ಲಿ ‘ಕನ್ನಡಕಂಠದ ಮಲಯಾಳಿ ಚಿತ್ರ’ ಎನ್ನುವ ಪುಟ್ಟದಾದರೂ ಆಸಕ್ತಿಕರವಾದ ಸುದ್ದಿಯೊಂದು ಪ್ರಕಟವಾಗಿತ್ತು. ಅದರ ಪ್ರಾರಂಭ ಹೀಗಿತ್ತು: ‘ನೀಲಾ ಪ್ರೊಡಕ್ಷನ್ಸ್‌ರವರ ಮಲಯಾಳಂ ಚಿತ್ರ ‘ಅವನ್‌ಯಾರ್’ ಕನ್ನಡದಲ್ಲಿ ಡಬ್ ಆಗಲಿದೆ. ಡಬ್ಬಿಂಗ್ ಮಾಡಲು ಶ್ರೀ ಎ.ಪಟ್ಟಾಭಿರಾಮನ್ ಅವರು ತಿರುವನಂತಪುರಕ್ಕೆ ತೆರಳಿದ್ದಾರೆ. ಅಲ್ಲಿಯ ಮೆರ್ರಿಲ್ಯಾಂಡ್ ಸ್ಟುಡಿಯೊವಿನಲ್ಲಿಯೇ ಡಬ್ಬಿಂಗ್ ಕಾರ್ಯ ನಡೆಯಲಿದೆ...’



‘ನಾಗರಹಾವು’ ಸಿನಿಮಾ ತಯಾರಾಗುತ್ತಿದ್ದಾಗ ‘ಪ್ರಜಾವಾಣಿ’ಯಲ್ಲಿ ಪ್ರಕಟವಾಗಿದ್ದ ವಿಷ್ಣುವರ್ಧನ್, ಆರತಿ ಸ್ಥಿರಚಿತ್ರ

ಒಂದು ಕಾಲದಲ್ಲಿ ಡಬ್ ಆಗಿ ಸಿನಿಮಾವೊಂದು ಕನ್ನಡ ಭಾಷೆಗೆ ಬಂದದ್ದರ ಸಣ್ಣಪುಟ್ಟ ವಿವರಗಳಿರುವ ಬರಹವಿದು. ಆಮೇಲೆ ಡಬ್ಬಿಂಗ್ ವಿರುದ್ಧ ಕನ್ನಡ ಚಿತ್ರರಂಗ ನಡೆಸಿದ ಅಭಿಯಾನ, ಮತ್ತೆ ಡಬ್ಬಿಂಗ್ ಲಗ್ಗೆ ಇಟ್ಟಾಗ ಅರ್ಥಪೂರ್ಣ ಸಂವಾದಗಳನ್ನೂ ‘ಪ್ರಜಾವಾಣಿ’ ಪ್ರಕಟಿಸಿದೆ.

ಇದು ಹಿರಿತೆರೆಯ ಮಾತಾಯಿತು. ಕಿರುತೆರೆಯಲ್ಲಿ ಜನಪ್ರಿಯ ಧಾರಾವಾಹಿಗಳು ಮೂಡಿಬಂದಾಗಲೂ ಪತ್ರಿಕೆಯು ಅದಕ್ಕೂ ಸ್ಪಂದಿಸಿದೆ. ‘ಮಹಾಭಾರತ’ ಧಾರಾವಾಹಿಯು ವಾರಕ್ಕೊಮ್ಮೆ ಪ್ರಸಾರವಾಗುತ್ತಿದ್ದಾಗ, 1989ರಲ್ಲಿ ಅದರ ಪ್ರತಿ ಕಂತಿನ ದೃಶ್ಯಗಳನ್ನು ಹಿಂದಿಯಿಂದ ಕನ್ನಡಕ್ಕೆ ಅನುವಾದ ಮಾಡಿಸಿ, ಅಷ್ಟೂ ಸಂಭಾಷಣೆಯನ್ನು ವಾರಕ್ಕೊಮ್ಮೆ ಪ್ರಕಟಿಸಿತ್ತು. ಹಿಂದಿ ಭಾಷೆ ಗೊತ್ತಿಲ್ಲದವರೂ ಭಾವುಕರಾಗಿ ನೋಡುತ್ತಿದ್ದ ಈ ಧಾರಾವಾಹಿಯ ಸಾರಾಂಶವನ್ನು, ಪಾತ್ರಗಳ ನಡುವಿನ ಸಂವಾದವನ್ನು ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಇದು ನೆರವಾಗಿತ್ತು.

ಹೀಗೆ ಕಾಲಾಂತರದಲ್ಲಿ ಸಿನಿಮಾ ಹಾಗೂ ಸಂಸ್ಕೃತಿಯಲ್ಲಿ ಆದ ಮನರಂಜನೆಯ ಸ್ಥಿತ್ಯಂತರಗಳಿಗೆ ‘ಪ್ರಜಾವಾಣಿ’ ಉತ್ಸಾಹದಿಂದ ಸ್ಪಂದಿಸುತ್ತಾ ಬಂದಿದೆ. ಅದರ ವಿಸ್ತರಣೆಯ ರೂಪದಲ್ಲಿ ಈಗ ‘ಪ್ರಜಾವಾಣಿ ಸಿನಿ ಸಮ್ಮಾನ’ ಪ್ರಾರಂಭಿಸುತ್ತಿದೆ. ಕನ್ನಡ ಚಿತ್ರರಂಗದ ಪ್ರತಿಭೆಗಳನ್ನು ಗುರುತಿಸಿ, ಸನ್ಮಾನಿಸುವ ಈ ಪರಿಪಾಟದ ಪ್ರಕ್ರಿಯೆ ಅದಾಗಲೇ ಚಾಲ್ತಿಯಲ್ಲಿದೆ. ಪ್ರಜಾವಾಣಿ@75ರ ಸಂಭ್ರಮಕ್ಕೆ ಇದು ಬಂಗಾರದ ಗರಿಯೇ ಹೌದು.



ಅಭಿಮನ್ಯುವಿಗೆ ಕೃಷ್ಣನಿಂದ ಸಮರ ಕಲೆ ಶಿಕ್ಷಣ

ಮಹಾಭಾರತ

ಪರಿಸರ ವಾಹನೋದ್ಯಮಗಳ ದುರ್ಗತಿ ★ ಹೇಮಂತಕುಮಾರ್

1989ರ ಅಕ್ಟೋಬರ್ 6ರ ಸಂಚಿಕೆಯಲ್ಲಿ ಪ್ರಕಟವಾದ ಮಹಾಭಾರತ ಧಾರಾವಾಹಿಯ ಕನ್ನಡ ಅನುವಾದ

ಸಿನಿ ಸಮ್ಮಾನದ ವಿವರಗಳಿಗೆ ನೋಡಿ: https://www.prajavani.net/cinesamman

ಪತ್ರಿಕೆ ನಮ್ಮ ಕನ್ನಡ ಸಿನಿಮಾದ ಸಹಯಾತ್ರಿ



ನಾನು ಆರಂಭದಿಂದ ಗಮನಿಸಿರುವ ಉತ್ತಮಾಂಶವೆಂದರೆ ಪ್ರಜಾವಾಣಿಯು ಒಂದು ಕ್ಷೇತ್ರ ಅಥವಾ ಒಬ್ಬ ವ್ಯಕ್ತಿಗೆ ಅತಿಯಾಗಿ ಅಂಟಿಕೊಳ್ಳದೆ ಮತ್ತು ಆತುಕೊಳ್ಳದೆ ಸಮದೃಷ್ಟಿಯಿಂದ, ಒಂದು ನಿರ್ದಿಷ್ಟ ಅಂತರದಿಂದ ನೋಡುವ ಕ್ರಮ. ಅದು ಸದೂರ ಉಳ್ಳ ಸಮಚಿತ್ತದ ಆರೋಗ್ಯಕರ ನೋಟ ಕೂಡಾ. ಇದು ಪ್ರಜಾವಾಣಿಗೂ ಕನ್ನಡ ಸಿನಿಮಾಗೂ ಅನ್ವಯ. ಕನ್ನಡ ಸಿನಿಮಾದ ಅಂದಿನ ‘ಕಲಾತ್ಮಕ ಹೊಸ ಅಲೆ’ ಮತ್ತು ಇಂದಿನ ‘ಕಮರ್ಶಿಯಲ್ ಹೊಸ ಅಲೆ’ಗಳೆರಡೂ ವಿಶ್ವದ ಗಮನ ಸೆಳೆದಿವೆ. ಇದಕ್ಕೆ ನಾವು ಹೆಮ್ಮೆಪಡುತ್ತಲೇ ಎಚ್ಚರದಿಂದ ಇರಬೇಕಾಗಿದೆ. ಕೆಜಿಎಫ್ ಮತ್ತು ಕಾಂತಾರಗಳಂಥ ಚಿನ್ನದ ನವಿಲುಗಳನ್ನು ನೋಡಿ ಬಡಕೆಂಬೂತಗಳು ಪುಕ್ಕ ಕಿತ್ತುಕೊಳ್ಳಬಾರದು. ಗುಣಮಟ್ಟವೊಂದೇ ನಮಗಿರುವ ಏಕೈಕ ಉಳಿವಿನ ಮಾರ್ಗ. ಉಳಿದದ್ದು ಪ್ರೇಕ್ಷಕ,ಕಾಲ ಮತ್ತು ಮಾಧ್ಯಮಗಳಿಗೆ ಬಿಟ್ಟದ್ದು. ಪ್ರಜಾವಾಣಿ ನಮ್ಮ ಕನ್ನಡ ಸಿನಿಮಾದ ಸಹಯಾತ್ರಿಯೂ ಹೌದು; ಹಿತೈಷಿಯೂ ಹೌದು. ಈ ಪತ್ರಿಕೆ ಸಿನಿ ಸಮ್ಮಾನ ಪ್ರಾರಂಭಿಸಿರುವುದು ಖುಷಿಯ ಸಂಗತಿ.

ನಾಗತಿಹಳ್ಳಿ ಚಂದ್ರಶೇಖರ್, ನಿರ್ದೇಶಕ

ಚಿತ್ರರಂಗದ ಪುಣ್ಯ



‘ಪ್ರಜಾವಾಣಿ’ ಸಿನಿ ಸಮ್ಮಾನ ಪ್ರಾರಂಭಿಸಿರುವುದಕ್ಕಿಂತ ಸಂತೋಷ ಏನಿದೆ? ನಮ್ಮ ಪ್ರಜಾವಾಣಿ ಗೌರವದ ಸಂಕೇತ. ಪತ್ರಿಕೆ ಪ್ರತಿ ದಿನ ಬೆಳಿಗ್ಗೆ ನಮ್ಮ ಮನೆ ಟೇಬಲ್‌ನಲ್ಲಿದ್ದರೆ ನಮಗೆ ಒಂದು ರೀತಿಯ ಗೌರವ. ಪ್ರತಿ ವರ್ಗವನ್ನು ತಲುಪಿರುವ ಪತ್ರಿಕೆಯಿದು. ರಾಜ್ಯ ಪ್ರಶಸ್ತಿಯೇ 4–5 ವರ್ಷಗಳಿಗೊಮ್ಮೆ ಸಿಗುವ ಕಾಲಘಟ್ಟದಲ್ಲಿ ಪತ್ರಿಕೆ ಪ್ರತಿ ವರ್ಷ ಚಿತ್ರರಂಗವನ್ನು ಗೌರವಿಸಲು ಮುಂದಾಗಿರುವುದು ನಮ್ಮೆಲ್ಲರ ಪುಣ್ಯ. ಚಿತ್ರರಂಗದ ಹೆಮ್ಮೆ. ಬಹಳ ಒಳ್ಳೆಯ ಕೆಲಸ ಇದು. ಆಯ್ಕೆ ಮಾನದಂಡಗಳನ್ನು ನೋಡಿದರೆ ಪ್ರಶಸ್ತಿ ಮೌಲ್ಯ ತಿಳಿಯುತ್ತದೆ. ತೀರ್ಪುಗಾರರ ಮಂಡಳಿಯಲ್ಲಿ ಬಹಳ ಹಿರಿಯರು ಹಾಗೂ ಅರ್ಹರಿದ್ದಾರೆ. ಹೀಗಾಗಿ ಉತ್ತಮ ಸಾಧಕರಿಗೆ ಪ್ರಶಸ್ತಿ ಲಭಿಸುತ್ತದೆ. ಈ ಪ್ರಶಸ್ತಿ ಸಿನಿಮಾ ರಂಗದವರನ್ನು ಎಲ್ಲ ವರ್ಗದವರಿಗೂ ತಲುಪುವಂತೆ ಮಾಡುತ್ತದೆ. 75 ವರ್ಷ ಪೂರೈಸಿರುವ ಪತ್ರಿಕೆ, ಈ ಸಮಯದಲ್ಲಿ ಇಂತಹ ಒಂದು ಸುಂದರ ಪ್ರಶಸ್ತಿಯನ್ನು ನೀಡುತ್ತಿರುವುದಕ್ಕೆ ನನ್ನ ಹೃದಯಪೂರ್ವಕ ಅಭಿನಂದನೆಗಳು.

ಜಯಮಾಲಾ, ನಟಿ

ಕಲಾವಿದರ ಬೆನ್ನುತಟ್ಟುವ ಕೆಲಸ



75 ವರ್ಷ ಪೂರೈಸಿರುವ ‘ಪ್ರಜಾವಾಣಿ’ ಪತ್ರಿಕೆಗೆ ಹೃತ್ಪೂರ್ವಕ ಅಭಿನಂದನೆಗಳು. ನಾನು ವೈಯಕ್ತಿಕವಾಗಿ ಚಿತ್ರೋದ್ಯಮದ ಹಿನ್ನೆಲೆಯಿಂದ ಬಂದವಳಲ್ಲ. ಆದರೆ ನನ್ನನ್ನು ಚಿತ್ರರಂಗದಲ್ಲಿ ಪರಿಚಯಿಸಿದ್ದು ‘ಪ್ರಜಾವಾಣಿ’. ನನ್ನ ನಟನೆಯ ವಿಷಯದಿಂದ ಹಿಡಿದು ಚಿತ್ರದ ಮಾಹಿತಿ, ಸಿನಿಮಾಗಳ ವಿಮರ್ಶೆಯನ್ನು ಜನರಿಗೆ ತಲುಪಿಸಿದ್ದು ಈ ಪತ್ರಿಕೆ. ಪತ್ರಿಕೆಗೆ ಅಗಾಧವಾದ ಅನುಭವವಿದೆ. ಇಂತಹ ಪತ್ರಿಕೆ ಈಗ ಪ್ರಶಸ್ತಿ ನೀಡಲು ಮುಂದಾಗಿರುವುದು ಅತ್ಯಂತ ಸಂತಸದ ಸಂಗತಿ. ಈ ಪ್ರಶಸ್ತಿಯಿಂದ ನಮ್ಮಂತಹ ಕಲಾವಿದರ ಬೆನ್ನುತಟ್ಟುವ ಕೆಲಸವಾಗಲಿದೆ. ಚಿತ್ರೋದ್ಯಮದಲ್ಲಿ ನಮ್ಮ ಜವಾಬ್ದಾರಿಯನ್ನು ಹೆಚ್ಚಿಸುವ ಪ್ರಶಸ್ತಿಯಿದು. ಪ್ರಶಸ್ತಿ ಪ್ರಾರಂಭಿಸಿರುವುದು ತುಂಬ ಉತ್ತಮವಾದ ಹೆಜ್ಜೆ. ಇದು ಹೀಗೆಯೇ ಮುಂದುವರಿಯಲಿದೆ ಎನ್ನುವ ವಿಶ್ವಾಸವೂ ನನಗಿದೆ.

ಹರಿಪ್ರಿಯಾ, ನಟಿ

ಕನ್ನಡ ಸಿನಿಮಾಗಳು ವಿಶ್ವ ಮಟ್ಟದಲ್ಲಿ ಸೆಟೆದು ನಿಲ್ಲಬೇಕು



‘ಪ್ರಜಾವಾಣಿ’ ಪತ್ರಿಕೆ ದೊಡ್ಡ ಇತಿಹಾಸ ಇರುವಂಥದ್ದು. ಚಿತ್ರರಂಗದ ಕೊಡುಗೆ ನಾಡಿಗೆ ಹೇಗೆ ಇದೆಯೋ, ಪತ್ರಿಕೆಯ ಕೊಡುಗೆ ಕೂಡ ಅಷ್ಟೇ ಮುಖ್ಯವಾದದ್ದು. ನಾನು ಚಿಕ್ಕಂದಿನಿಂದಲೂ ಪತ್ರಿಕೆಯ ಸಿನಿಮಾ ರಂಜನೆ ಹಾಗೂ ಚಿತ್ರ ವಿಮರ್ಶೆಗಳನ್ನು ಓದಲು ಕಾತರನಾಗಿ ಇರುತ್ತಿದ್ದೆ. ‘ಪ್ರಜಾವಾಣಿ’ ಯಾವತ್ತೂ ಇದಮಿತ್ಥಂ ಎನ್ನುವಂಥ ವರದಿಗಳನ್ನೇ ನೀಡುತ್ತದೆ. ಸಾಂಪ್ರದಾಯಿಕವಾದ, ಉತ್ಪ್ರೇಕ್ಷೆ ಇಲ್ಲದ ದನಿ ಇದು. ಈ ಪತ್ರಿಕೆ ಸಿನಿ ಸಮ್ಮಾನದ ಮೂಲಕ ಚಿತ್ರರಂಗವನ್ನು ಗೌರವಿಸುತ್ತಿರುವುದು ಹೆಮ್ಮೆಯ ವಿಷಯ. ಕಳೆದ ಎರಡು ಮೂರು ವರ್ಷಗಳಿಂದ ಕನ್ನಡದವರನ್ನು ಪ್ರಮುಖ ಚಿತ್ರೋತ್ಸವಗಳಿಗೆ ತೀರ್ಪುಗಾರರನ್ನಾಗಿ ನಿಯಮಿತವಾಗಿ ಕರೆಯುತ್ತಿದ್ದಾರೆ. ಹಿಂದೆ ಈ ಪರಿಪಾಠ ಈಗಿನಷ್ಟು ವ್ಯಾಪಕವಾಗಿ ಇರಲಿಲ್ಲ. ಕನ್ನಡ ಸಿನಿಮಾದವರ ಕುರಿತು ಉತ್ತರ ಭಾರತದವರ ಧೋರಣೆ ಬದಲಾಗುತ್ತಿರುವುದಕ್ಕೆ ಇದು ಒಂದು ಉದಾಹರಣೆ. ವಿಶ್ವ ಮಟ್ಟದಲ್ಲಿ ಕನ್ನಡದ ಸಿನಿಮಾಗಳು ಸೆಟೆದು ನಿಲ್ಲುವ ಸ್ಥಿತಿ ಬರಬೇಕು. ಮಲಯಾಳಂನಲ್ಲಿ ಈ ವರ್ಷ 60 ಸಿನಿಮಾಗಳು ವಿವಿಧ ವಿಭಾಗಗಳ ಪ್ರಶಸ್ತಿಗೆ ಪರಿಗಣಿತವಾಗುತ್ತಿವೆ. ಇಷ್ಟೇ ಸಂಖ್ಯೆಯಲ್ಲಿ ಹಿಂದಿ ಸಿನಿಮಾಗಳೂ ಇವೆ. ಕನ್ನಡದಲ್ಲಿ 46 ಸಿನಿಮಾಗಳು ಇದ್ದರೂ ಗುಣಮಟ್ಟದಿಂದಾಗಿ ಮೇಲೇರುವುದು ಎರಡೋ ಮೂರೋ. ಈ ಸ್ಥಿತಿ ರಾಷ್ಟ್ರ ಮಟ್ಟದಲ್ಲಿ ಬದಲಾಗಬೇಕು. ಆಗ ವಿಶ್ವಮಟ್ಟದಲ್ಲಿಯೂ ತಂತಾನೇ ಮನ್ನಣೆ ಸಿಗಲಿದೆ. ಬೆಂಗಳೂರಿನಲ್ಲಿ ಕಲಿತ ಗಿರೀಶ್ ಗಂಗಾಧರನ್ ಎಂಬ ಸಿನಿಮಾಟೊಗ್ರಾಫರ್ ಮಲಯಾಳಂನ ‘ಜಲ್ಲಿಕಟ್ಟು’ ಸಿನಿಮಾದ ಕಸುಬುದಾರಿಕೆಗಾಗಿ ರಾಷ್ಟ್ರಪ್ರಶಸ್ತಿ ಪಡೆದರು. ಈ ನೆಲ ಅಂತಹ ಪ್ರತಿಭೆಗಳನ್ನು ದೇಶಕ್ಕೆ ನೀಡಿದೆ. ‘ಕಾಂತಾರ’ ಈ ನೆಲದ ಸಿನಿಮಾ ಆಗಿ ಜನಪ್ರಿಯವಾಗಿದ್ದರೂ ಅದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಮೌಢ್ಯದ ಸಿನಿಮಾ ಎಂದು ನಿರಾಕರಿಸುವವರೂ ಇದ್ದಾರೆ.

ಅಶೋಕ್ ಕಶ್ಯಪ್, ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ಅಕಾಡೆಮಿ

‘ಎಲ್ಲಾ ನಿನಗಾಗಿ’ ಎಂದ ಧನ್ಯಾ

‘ನಿನ್ನ ಸನಿಹಕೆ’ ಚಿತ್ರದ ಮೂಲಕ ಚಂದನವನಕ್ಕೆ ಕಾಲಿಟ್ಟ ವರನಟ ರಾಜ್‌ಕುಮಾರ್ ಅವರ ಮೊಮ್ಮಗಳಾದ ಧನ್ಯಾ ರಾಮ್‌ಕುಮಾರ್ ಸದ್ಯ ಸಾಲು ಸಾಲು ಚಿತ್ರಗಳಿಗೆ ಹಸಿರು ನಿಶಾನೆ ನೀಡುತ್ತಿದ್ದಾರೆ.

ಅನೂಪ್ ರೇವಣ್ಣ ನಟಿಸಿರುವ ‘ಹೈಡ್ ಆ್ಯಂಡ್ ಸೀಕ್’, ರವಿಚಂದ್ರನ್ ಅವರ ಅಭಿನಯದ ‘ದಿ ಜಡ್ಜ್‌ಮೆಂಟ್’ ಸಿನಿಮಾಗಳ ಜೊತೆಗೇ ಇದೀಗ ‘ಎಲ್ಲಾ ನಿನಗಾಗಿ’ ಎನ್ನುವ ಸಿನಿಮಾ ಸೆಟ್‌ಗೆ ಧನ್ಯಾ ಪ್ರವೇಶಿಸಿದ್ದಾರೆ. ಈ ಸಿನಿಮಾವನ್ನು ‘ಮ್ಯಾಟ್ನಿ’ ಚಿತ್ರದ ನಿರ್ಮಾಪಕರೇ ನಿರ್ಮಾಣ ಮಾಡುತ್ತಿದ್ದಾರೆ. ಇತ್ತೀಚೆಗೆ ಚಿತ್ರದ ಮುಹೂರ್ತ ನಡೆಯಿತು. ನಟ ಶ್ರೀಮುರಳಿ ಸಮಾರಂಭದಲ್ಲಿ ಹಾಜರಿದ್ದರು.

ನೀನಾಸಂ ಸತೀಶ್ ನಾಯಕರಾಗಿ ನಟಿಸಿರುವ ‘ಮ್ಯಾಟ್ನಿ’ ಜೂನ್‌ನಲ್ಲಿ ಬಿಡುಗಡೆಯಾಗಲಿದೆ. ಈ ಸಿನಿಮಾ ಬಿಡುಗಡೆ ಹೊಸ್ತಿಲಲ್ಲೇ ಮತ್ತೊಂದು ಪ್ರಾಜೆಕ್ಟ್ ಕೈಗೆತ್ತಿಕೊಂಡಿದೆ ಎಫ್3 ಪ್ರೊಡಕ್ಷನ್ಸ್. ವಿದ್ಯಾ ಶ್ರೀಮುರಳಿ ಅವರೇ ಈ ಚಿತ್ರವನ್ನು ಅರ್ಪಿಸುತ್ತಿದ್ದಾರೆ.

ರಾಹುಲ್ ಆರ್ಕಾಟ್ ಹಾಗೂ ಧನ್ಯಾ ರಾಮಕುಮಾರ್ ಜೋಡಿಯ ಈ ಚಿತ್ರಕ್ಕೆ ಕಾಶಿ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಶೀಘ್ರದಲ್ಲೇ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ ಎಂದಿದೆ ಚಿತ್ರತಂಡ.



ಧನ್ಯಾ ರಾಮ್‌ಕುಮಾರ್

ತೆರೆಯಲ್ಲಿ ಆದಿತ್ಯ ‘ಟೆರರ್’

ನಟ ಆದಿತ್ಯ ಅವರ ಹೊಸ ಪ್ರಾಜೆಕ್ಟ್ ‘ಟೆರರ್’ ಗಾಂಧಿನಗರದಲ್ಲಿ ಸದ್ದು ಮಾಡಲಾರಂಭಿಸಿದೆ. ಇತ್ತೀಚೆಗೆ ಆದಿತ್ಯ ಅವರ ಜನ್ಮದಿನದಂದು ಚಿತ್ರದ ಟೀಸರ್ ಅನ್ನು ನಿರ್ದೇಶಕ–ನಿರ್ಮಾಪಕ ಆರ್.ಚಂದ್ರು ಬಿಡುಗಡೆಗೊಳಿಸಿದರು.

ಚಿತ್ರಕ್ಕೆ ರಂಜನ್ ಶಿವರಾಮ್ ಗೌಡ ಆ್ಯಕ್ಷನ್ ಕಟ್ ಹೇಳಿದ್ದಾರೆ. ‘ಸಿನಿಮಾದ ಶೀರ್ಷಿಕೆಯೇ ಗಮನ ಸೆಳೆಯುತ್ತದೆ. ಟೀಸರ್ ಮೂಲಕವೇ ದೊಡ್ಡ ಹಿಟ್ ಆಗುವ ಲಕ್ಷಣಗಳು ಕಾಣುತ್ತಿದೆ’ ಎನ್ನುತ್ತಾರೆ ಚಂದ್ರು. ‘ಸಿನಿಮಾದಲ್ಲಿ ಆದಿತ್ಯ ನಾಯಕರಾಗಿ ನಟಿಸುತ್ತಿದ್ದು, ಶ್ರೀನಗರ ಕಿಟ್ಟಿ ಅವರೂ ಪಾತ್ರವೊಂದರಲ್ಲಿ ಅಭಿನಯಿಸುತ್ತಿದ್ದಾರೆ. ಕೋಟೆ ಪ್ರಭಾಕರ್, ಧರ್ಮ ಮೊದಲಾದವರು ಸಿನಿಮಾದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ. ಈಗಾಗಲೇ ಶೇ 30ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ಬೆಂಗಳೂರು ಸುತ್ತಮುತ್ತ ಸಿನಿಮಾದ ಬಹುತೇಕ ಚಿತ್ರೀಕರಣ ನಡೆಸಲಾಗಿದೆ’ ಎಂದರು ರಂಜನ್.

‘A’ ಸಿನಿಮಾದ ನಿರ್ಮಾಪಕ ಸಿಲ್ಕ್ ಮಂಜು ಅವರ ನಿರ್ಮಾಣದಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದೆ. ‘ಎ’ ಸಿನಿಮಾ ಬಿಡುಗಡೆಯಾಗಿ 25 ವರ್ಷ ಆದಮೇಲೆ ಮತ್ತೊಂದು ನಿರೀಕ್ಷಿತ ಸಿನಿಮಾ ಮಾಡುತ್ತಿದ್ದೇವೆ’ ಎಂದರು ಮಂಜು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮ.ಹರೀಶ್, ಶ್ರೀನಗರ ಕಿಟ್ಟಿ ಟೀಸರ್ ಬಿಡುಗಡೆ ಸಮಾರಂಭದಲ್ಲಿ ಉಪಸ್ಥಿತರಿದ್ದರು.



ಆದಿತ್ಯ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸರ್ಕಾರಿ ಶಾಲೆಯೊಂದರಲ್ಲಿ ಮುಸ್ಲಿಂ ಸಮುದಾಯದ ವ್ಯಕ್ತಿಯೊಬ್ಬರನ್ನು ಪೊಲೀಸರು ಬಂಧಿಸಿದ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ಶಾಲೆಯ ಕೋಣೆಯೊಂದರಲ್ಲಿ ಮಹಿಳೆಯರು, ಮಕ್ಕಳು ಕುಳಿತಿರುವ ಹಾಗೂ ಅಡುಗೆ ಮಾಡುತ್ತಿರುವ ದೃಶ್ಯ ಈ ವಿಡಿಯೊದಲ್ಲಿದೆ. ವ್ಯಕ್ತಿಯೊಬ್ಬರು ಮಕ್ಕಳಿಗೆ ಬೋಧಿಸುತ್ತಿರುವುದು ಕಾಣುತ್ತದೆ. ಶಾಲೆಯಲ್ಲಿ ಏನು ಚಟುವಟಿಕೆ ನಡೆಯುತ್ತಿದೆ ಎಂದು ಮತ್ತೊಬ್ಬ ವ್ಯಕ್ತಿ ಪ್ರಶ್ನಿಸುತ್ತಾರೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಶಾಲೆಗಳನ್ನು ಮದರಸಾಗಳನ್ನಾಗಿ ಪರಿವರ್ತಿಸುತ್ತಿದ್ದಾರೆ ಎಂದು ಟ್ವಿಟರ್ ಬಳಕೆದಾರರೊಬ್ಬರು ಈ ವಿಡಿಯೊ ಕುರಿತು ಬರೆದಿದ್ದಾರೆ. ಆದರೆ ಇದು ತಪ್ಪು ಮಾಹಿತಿ.



ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ಎರಡು ವರ್ಷ ಹಳೆಯದು ಹಾಗೂ ಉತ್ತರ ಪ್ರದೇಶದ ಗಾಜಿಯಾಬಾದ್‌ಗೆ ಸಂಬಂಧಿಸಿದ್ದು ಎಂದು ‘ದಿ ಲಾಜಿಕಲ್ ಇಂಡಿಯನ್’ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ಮಿರ್ಜಾಪುರದ ಭಾರತ್ ನಗರ ಪ್ರಾಥಮಿಕ ಶಾಲೆಯಲ್ಲಿ ದೀಪಾವಳಿ ಹಬ್ಬದ ದಿನ ಔತಣಕೂಟ ಏರ್ಪಾಡಿಸಲಾಗಿತ್ತು. ಸಾಮಾಜಿಕ ಕಾರ್ಯಕರ್ತ ಅಶುತೋಷ್ ಗುಪ್ತಾ ಎಂಬವರು ಈ ಬಗ್ಗೆ ವಿಡಿಯೊ ಮಾಡಿ, ಪೊಲೀಸರಿಗೆ ದೂರು ನೀಡಿದ್ದರು. ಆದರೆ ದೆಹಲಿಯ ಶಾಲೆಯನ್ನು ಮದರಸಾವನ್ನಾಗಿ ಪರಿವರ್ತಿಸಲಾಗುತ್ತಿದೆ ಎಂದು ತಪ್ಪಾಗಿ ಬಿಂಬಿಸಲಾಗಿದೆ ಎಂದು ‘ದಿ ಲಾಜಿಕಲ್ ಇಂಡಿಯನ್’ ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ವಿಪರೀತ ಆಸೆಯ ಫಲ

ತನ್ನಯ ಮನೋರಥಂಗಳ ಚಕ್ರವೇಗದಿನೆ |
ತನ್ನ ಮಣಿಹಾರಗಳ ಸಿಕ್ಕು ಬಿಗಿತದಿನೇ ||
ತನ್ನ ಸಂಕಲ್ಪ ವಿಪರೀತದಿನೆ ಮಾನವನ |
ಬೆನ್ನು ಮುರಿದೀತೇನೋ – ಮಂಕುತಿಮ್ಮ || **880** ||

ಪದ-ಅರ್ಥ: ಮನೋರಥಗಂಗಳ = ಮನಸ್ಸೆಂಬ ರಥದ,ಚಕ್ರವೇಗದಿನೆ = ಚಕ್ರ + ವೇಗದಿನೆ(ವೇಗದಿಂದ), ಬಿಗಿತದಿನೆ = ಬಿಗಿತದಿಂದ, ವಿಪರೀತದಿನೆ = ವಿಪರೀತದಿಂದ.

ವಾಚ್ಯಾರ್ಥ: ತನ್ನದೇ ಮನಸ್ಸಿನ ರಥಗಳ ಗಾಲಿಗಳ ವೇಗದಿಂದಲೋ, ತಾನು ಧರಿಸಿರುವ ಮುತ್ತಿನಹಾರದ ಸಿಕ್ಕು, ಬಿಗಿತಗಳಿಂದಲೋ, ತನ್ನ ವಿಪರೀತ ಸಂಕಲ್ಪಗಳಿಂದಲೋ ಮನುಷ್ಯನ ವ್ಯವಸ್ಥಿತ ಬದುಕು ಹಾಳಾದೀತೇನೋ?

ವಿವರಣೆ: ಮನುಷ್ಯರ ಆಸೆಗಳೆಂಬ ಕುದುರೆಗಳು ಓಡುವುದು ಮನೋವೇಗದಲ್ಲಿ. ಅವುಗಳಿಗೆ ಒಂದು ನಿಶ್ಚಿತವಾದ ಗುರಿಯಿಲ್ಲ, ನಿಲ್ದಾಣವೆಂಬುದೂ ಇಲ್ಲ. ಅವು ಅಪೇಕ್ಷೆಗಳ ರಥವನ್ನೆಳೆದು ಭರದಿಂದ ಓಡುವಾಗ ಅದರ ಚಕ್ರಗಳು ಈ ವೇಗವನ್ನು ತಾಳಿಕೊಂಡಾವೆಯೇ? ಮುರಿದುಹೋಗಲಿಕ್ಕಿಲ್ಲವೇ? ಹಾಗೆಂದರೆ, ಆಸೆಗಳನ್ನು ಪೂರೈಸಿಕೊಳ್ಳಲು ದಿಕ್ಕುದಿಕ್ಕಿಗೆ, ಹುಚ್ಚುಚ್ಚಾರ ವೇಗದಿಂದ ಚಲಿಸುವ ಮನಸ್ಸು ಕ್ಷೇಮದಿಂದಿರಲು ಸಾಧ್ಯವೇ? ಅವನೊಬ್ಬ ಬದುಕಿನುದ್ದಕ್ಕೂ ತುಂಬ ದುಡಿದು ಅಪಾರ ಸಂಪತ್ತು ಗಳಿಸಿದ್ದ. ಯಾರಿಗೂ ತಿಳಿಯದಂತೆ ನೆಲಮಾಳಿಗೆಯನ್ನು ಮಾಡಿಸಿ ಅಲ್ಲಿ ಹಣ ತುಂಬಿಟ್ಟಿದ್ದ. ಅದು ಗಾಳಿ ಬೆಳಕು ಬರದ ಕೋಣೆ. ಅ ಮನುಷ್ಯನಿಗೆ ಈಗ ಎಂಭತ್ತು ವರ್ಷ. ಇದುವರೆಗೂ ಯಾವ ಸುಖವನ್ನೂ ಪಡದೇ ಹಣ ಕೂಡಿಟ್ಟಿದ್ದಾನೆ. ಆಗಾಗ ಯಾರಿಗೂ ತಿಳಿಯದಂತೆ ರಾತ್ರಿ ಹೋಗಿ ಹಣ ರಾಶಿ ನೋಡಿ ಸಂತೋಷಪಟ್ಟು ಬರುತ್ತಾನೆ. ಒಂದು ರಾತ್ರಿ ಮನೆಯವರೆಲ್ಲ ಮಲಗಲು ಹೋದ ಮೇಲೆ, ರಹಸ್ಯದ ಬಾಗಿಲನ್ನು ತೆರೆದು ನೆಲಮಾಳಿಗೆಗೆ ಹೋದ. ತನ್ನ ಜೊತೆಗೆ ಒಂದು ದೊಡ್ಡ ಮೇಣದ ಬತ್ತಿಯನ್ನು ಒಯ್ದ. ಹಿಂದೆ ಬಾಗಿಲನ್ನು ಎಳೆದು ಮುಚ್ಚಿಕೊಂಡ. ದೀಪ ಹಚ್ಚಿಕೊಂಡು ಹಣದ ರಾಶಿಯನ್ನು ಮುಟ್ಟಿನೋಡಿದ. ಮತ್ತೆ ಮತ್ತೆ ಎಣಿಸಿದ. ಅದೆಷ್ಟು ಸಮಯ ಮೈಮರೆತು ಕುಳಿತಿದ್ದನೋ? ಮೇಣಬತ್ತಿ ಉರಿದು ಮುಗಿಯಬಂದಿತ್ತು. ಮತ್ತೊಂದನ್ನು ತರಲು ಬಾಗಿಲು ತೆರೆಯನೋಡಿದ. ಅದು ಬರುತ್ತಿಲ್ಲ. ಅವನು ಪರೀಕ್ಷಿಸಿ ನೋಡಿ ಗಾಬರಿಯಾದ. ಕೀಲಿಕೈಯನ್ನು ಹೊರಗೇ ಮರೆತು ಬಾಗಿಲು ಎಳೆದಿದ್ದಾನೆ. ಅದನ್ನು ತೆರೆಯುವುದು ಸಾಧ್ಯವಿಲ್ಲ. ಬಾಗಿಲು ಬಡಿದ, ಕೂಗಿದ. ಅದು ತಾನೇ ಮಾಡಿಸಿದ, ಹೊರಗೆ ಶಬ್ದ ಕೇಳದ ವ್ಯವಸ್ಥೆ. ದೀಪ ಆರಿತು. ಒಂದು ದಿನ ಕತ್ತಲೆಯಲ್ಲಿ ಉಪವಾಸ ಕಳೆದು, ಎದೆಯೊಡೆದು ಸತ್ತು ಹೋದ. ಈ ಮಾತನ್ನು ಕಗ್ಗ ಹೇಳುತ್ತದೆ. ತನ್ನ ಮನದಾಸೆಗಳ ವೇಗದಿಂದ, ಮನುಷ್ಯ ನುಗ್ಗಾಗುತ್ತಾನೆ. ಅವನ ಆಸೆಗಳ ಫಲಿತಗಳು ಆಭರಣಗಳಿದ್ದಂತೆ. ಅವು ಬಂಗಾರ, ಮುತ್ತು, ರತ್ನಗಳಿಂದಾಗಿದ್ದರೂ, ಅವು ಬಿಗಿಯಾದಾಗ ಉಸಿರುಗಟ್ಟಿಸುವುದಿಲ್ಲವೇ? ಚಿನ್ನದ ಸೂಜಿ ಚುಚ್ಚದಿರುತ್ತದೆಯೆ? ಇದಲ್ಲದೆ, ಮನುಷ್ಯ ಕೆಲವೊಮ್ಮೆ ವಿಪರೀತದ ಸಂಕಲ್ಪಗಳನ್ನು ಮಾಡುತ್ತಾನೆ. ತನ್ನ ಶಕ್ತಿಯ, ತಿಳಿವಳಿಕೆಯ ಮಿತಿಗಳನ್ನು ಮೀರಿ ನಿಲುಕದ ನಕ್ಷತ್ರಗಳಿಗೆ ಕೈ ಚಾಚುತ್ತಾನೆ. ಅದನ್ನು ನಿಲುಕಲು ಹೋಗಿ ಬಿದ್ದು ಹುಡಿಯಾಗುತ್ತಾನೆ. ಇದು ಮಿತಿಯನ್ನು ಮರೆತು ಆಸೆಗಳಿಗೆ ಬಲಿಯಾಗುವ ಮನುಷ್ಯನ ಕಥೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಮೇ 10, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಕೃಷ್ಣ ಪಂಚಮಿ ಗಂ. 13-50 ನಕ್ಷತ್ರ: ಪೂರ್ವಾಷಾಢ ಗಂ. 16-12, ಯೋಗ: ಸಾಧ್ಯಾ ಗಂ. 18-17 ಕರಣ: ತೈತಿಲ ಗಂ. 13-50, ಮೇಷ ಮಾಸದ 26 ನೇ ದಿನ,ಮಳೆನಕ್ಷತ್ರ: ಭರಣಿ 4. ರಾಹುಕಾಲ : ಮಧ್ಯಾಹ್ನ 12-00 – 01-30, ಸೂರ್ಯೋದಯ : 06-10 ಸೂರ್ಯಾಸ್ತ : 06-44, ಮುಸ್ಲಿಂ ದಿನಾಂಕ : 19 ಶವ್ವಾಲ್
ಅದೃಷ್ಟ ಸಂಖ್ಯೆ : 10, 9

ಮೇಷ: ಮನೆಯಲ್ಲಿ ವಿವಾಹಕ್ಕೆ ಸಂಬಂಧ ಮಾತುಕತೆಗಳು ಹಿರಿಯರಲ್ಲಿ ಚರ್ಚೆಗೆ ಬರಲಿದೆ. ನಿಮ್ಮ ಕರ್ತವ್ಯದ ಕೊರತೆಯು ಮೇಲಧಿಕಾರಿಗಳಿಗೆ ಎದ್ದು ಕಾಣಲಿದೆ. ವ್ಯಾಪಾರದ ವಿಚಾರದಲ್ಲಿ ಗಂಭೀರ ಚರ್ಚೆ ನಡೆಯಲಿದೆ.

ವೃಷಭ: ಮನುಷ್ಯ ಪ್ರಯತ್ನದ ಜೊತೆಯಲ್ಲಿ ದೇವರ ಕೃಪೆಗೆ ಪಾತ್ರರಾಗುವ ರೀತಿಯಲ್ಲಿ ನಡೆದುಕೊಂಡಾಗ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುವುದು. ವದಂತಿಗಳಿಗೆ ಬೆಲೆಕೊಟ್ಟು ಯಾವುದೇ ತೀರ್ಮಾನಕ್ಕೆ ಬರುವುದು ಸರಿಯಲ್ಲ.

ಮಿಥುನ: ಸದ್ಯ ಜೀವನ ಶೈಲಿಯಲ್ಲಿ ಬದಲಾವಣೆ ಬೇಡವೆಂದು ನಿಶ್ಚಯಿಸುವುದು ಉತ್ತಮ. ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರಿಂದ ಸಲಹೆ ಬರುವುದು. ರಾಜೇಶ್ವರಿಯನ್ನು ಆರಾಧಿಸಿ.

ಕರ್ಕಾಟಕ: ಮನೆಯಲ್ಲಿನ ಸಣ್ಣ ಮಕ್ಕಳ ಆರೋಗ್ಯದ ವಿಚಾರ ಖರ್ಚು ವೆಚ್ಚಗಳು ಕಾಣುವುದು. ಕಾರ್ಮಿಕ ವರ್ಗದವರ ಹೆಚ್ಚಿನ ಬೇಡಿಕೆಗಳು ವ್ಯವಸ್ಥಾಪಕರಿಂದ ಈಡೇರಲಿವೆ. ಜನಗಳ ದೃಷ್ಟಿ ದೋಷಕ್ಕೆ ಒಳಗಾಗದಂತೆ ಜಾಗ್ರತೆವಹಿಸಿ.

ಸಿಂಹ: ನಿಷ್ಠೆಯಿಂದ ಕೆಲಸಕಾರ್ಯದಲ್ಲಿ ತೊಡಗಿಸಿಕೊಂಡಲ್ಲಿ ನಿಧಾನವಾಗಿ ಯಶಸ್ಸು ಪ್ರಾಪ್ತಿಯಾಗುವುದು. ವಕೀಲೀ ವೃತ್ತಿಯವರಿಗೆ ಗೆಲುವು ಸಾಧಿಸಲು ಬೇಕಾದ ಅವಕಾಶ ಸಿಗಲಿದೆ. ದಿನಾಂತ್ಯದಲ್ಲಿ ಅಲ್ಪ ನೆಮ್ಮದಿ ಪ್ರಾಪ್ತಿಯಾಗಲಿದೆ.

ಕನ್ಯಾ: ಗಣಪತಿಗೆ ಸಂಬಂಧಿಸಿದಂತೆ ಹರಕೆಯ ರೂಪದಲ್ಲಿರುವ ಅಥವಾ ಅಂದುಕೊಂಡಿದ್ದ ದೇವರ ಕೆಲಸಗಳನ್ನು ಮುಗಿಸುವ ಪ್ರಯತ್ನಮಾಡಿ. ಹತ್ತಾರು ಕೆಲಸಗಳನ್ನು ಮಾಡುವ ಉತ್ಸಾಹ ನಿಮ್ಮಲ್ಲುಂಟಾಗುವುದು.

ತುಲಾ: ಜೀವನದ ಹಳೆಯ ನೆನಪುಗಳನ್ನು ಮರೆತು ಭವಿಷ್ಯದತ್ತ ಗಮನಹರಿಸುವುದು ಉತ್ತಮ. ಉದ್ಯಮದ ವಿಚಾರದಲ್ಲಿ ಹಿತಶತ್ರುಗಳ ಭಯ ಬಹಳವಾಗಿ ಕಾಡುತ್ತದೆ. ಕೇಟರಿಂಗ್ ಮತ್ತು ಹೋಟೆಲ್ ಉದ್ಯಮವರಿಗೆ ಶುಭದಿನ.

ವೃಶ್ಚಿಕ: ವ್ಯಕ್ತಿಗಳ ಅನುಪಸ್ಥಿತಿಯಿಂದಾಗಿ ಮಾಡುವ ಎಲ್ಲಾ ಕೆಲಸಗಳಲ್ಲಿ ಸಣ್ಣಪುಟ್ಟ ಗಡಿಬಿಡಿಗಳುಂಟಾಗುವುದು. ವೃತ್ತಿ ಜೀವನದಲ್ಲಿ ದೊರೆಯಬೇಕಾದ ಬಡ್ತಿಯು ಅನಿವಾರ್ಯ ಕಾರಣಗಳಿಂದಾಗಿ ಮುಂದೂಡಿಕೆ ಆಗುವುದು.

ಧನು: ಬಹುಜನರ ಅಭಿಪ್ರಾಯ ಕೇಳಿ ನೀವು ಆರಂಭಿಸಲು ಹೊರಟ ಕೆಲಸದಲ್ಲಿ ವಿಭಿನ್ನ ವ್ಯಕ್ತಿಗಳ ವಿಭಿನ್ನ ಅಭಿಪ್ರಾಯದಿಂದಾಗಿ ಗೊಂದಲಕ್ಕೆ ಒಳಗಾಗುವಿರಿ. ಮಿತ್ರರ ಸಹಕಾರದಿಂದ ಸ್ವಗೃಹ ನಿರ್ಮಾಣಕ್ಕೆ ಸಹಾಯಗಳು ಸಿಗುವವು.

ಮಕರ: ವಿದೇಶಿ ಪ್ರವಾಸದ ಕನಸಿಗೆ ಶುಭ ಮುಹೂರ್ತ ಕೂಡಿ ಬರುವುದು. ಮುಖ್ಯವಾದ ವಿಷಯವನ್ನು ಮುಖ್ಯವಾದ ವ್ಯಕ್ತಿಯ ಜೊತೆ ಮಾತನಾಡಲು ಮರೆತುದರಿಂದ ದಿನಚರಿಯಲ್ಲಿ ವಿಳಂಬತೆ ಅನುಭವಿಸುವಂತೆ ಆಗುವುದು.

ಕುಂಭ: ಸಂಗಾತಿಯ ಅಗಲುವಿಕೆಯು ತಾತ್ಕಾಲಿಕವಾದುದು ಎಂಬುದನ್ನು ಅರಿತುಕೊಳ್ಳುವಿರಿ. ಗುರುವಿನ ಸಾನ್ನಿಧ್ಯ ಹಾಗೂ ನಿಶ್ಚಲವಾದ ಭಕ್ತಿಯು ಮನಶ್ಯಾಂತಿಯನ್ನು ತಂದುಕೊಡುವುದು.

ಮೀನ: ಮನೆಯ ಹತ್ತಿರದಲ್ಲಿನ ಜನಸಂಖ್ಯೆ ಸೇರುವ ಕಾರ್ಯಕ್ರಮವು ಶಾಂತಚಿತ್ತತೆಗೆ ಭಂಗ ತರುವುದು. ಶುದ್ಧ ಮನಸ್ಸಿನಿಂದ ಮಾಡಿದ ಧರ್ಮ ಕಾರ್ಯದಿಂದ ಶ್ರೇಯೋಭಿವೃದ್ಧಿಯಾಗುವುದು.

ಪದಬಂಧ 5314

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಪತಿ ಕೊನೆಗಿದ್ದು ಮಾಡಿದ ಸಲ್ಲದ ವ್ಯವಹಾರ! (4)
5.ಮಾನವನ್ನು ಹೊಂದಿದ ಹುಟ್ಟು ಗುಣ (4)
6.ಕೊಂಕಿದ ಧಾರೆಯುಳ್ಳ ಕೊಯ್ಯುವ ಸಾಧನ (4)
8.ಅಗಸ ಇಲ್ಲಿದ್ದಾನೆ (4)
12.ಕಾಡಿನ ಹೂವಿದು (4)
14.ಯಾವುದೇ ಆಯುಧವಿಲ್ಲದಿರುವಿಕೆ (4)
15.ಮಾಯವಾಗುವಿಕೆ (4)
16.ಮರದಲ್ಲಿ ಹೊಸ ಯುಗ ಕಾಣುತ್ತಿದೆಯೇ? (4)

ಮೇಲಿಂದ ಕೆಳಕ್ಕೆ
1.ಶತೃವೇ ಹುಟ್ಟಿಲ್ಲದವನು (5)
2.ಸೇರುವಿಕೆಯನ್ನು ಹೀಗೆನ್ನಿ (4)
3.ಒತ್ತು ಕಳೆದುಕೊಂಡ ಕುಳ್ಳ ಕೊನೆಗಿದ್ದಾಗಲೇ ಈ ತೊಂದರೆ! (4)
4.ಮನಸ್ಸಿಗೆ ಬಂದಂತೆ ವರ್ತಿಸುವಿಕೆ (3)
7.ಸೆಣಬಿನ ಚೀಲ (2)
9.ವಾದ್ಯವನ್ನು ನುಡಿಸುವಿಕೆ (3)
10.ಮಂದಿಗೆ ಒಡೆಯನಾದವ ತಿರುಗಿ ನಿಂತಿದ್ದಾನಲ್ಲಾ (5)
11.ತಿರುಗಿದಾಗ ಕಾಣಿಸಿದ್ದು ರಾಜನ ಹೆಂಡತಿ (2)
12.ಅಪರಾಧಿಗಳನ್ನು ಕೊಲ್ಲಲು ನಿಯುಕ್ತನಾದವನು (4)
13.ಮನದೊಳಗಿರುವ ಕುಲ (4)
14.ಕೊನೆಗಿರುವ ಮಗ ತಿರುಗಿದಾಗ ವೇದ ಕಾಣುತ್ತಿದೆ (3)



5313ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆರೋಹಣ 3.ವ್ಯವಧಾನ
5.ಸಿತಾರ 7.ಪರಧನ
9.ದಪ್ಪಂ 10.ವಜ್ರ
11.ಜನಿವಾರ 13.ಸಂತತಿ
16.ಸರಸ್ವತಿ 17.ಅತಿಸಾರ

ಮೇಲಿಂದ ಕೆಳಕ್ಕೆ:
1.ಆಲಸಿ 2.ಹಗುರ
3.ವ್ಯವಹಾರ 4.ನಷೆ
6.ತಾರಾಪುಂಜ
7.ಪಗಾರ 8.ನವಜಾತ
12.ವಾಚಸ್ಪತಿ 13.ಸಂಗಾತಿ
14.ತಿಮಿರ 15.ಮಾಸ

ಸುಡೊಕು 5700


	4		2			6		1
				8		2	7	
			1		4			8
		4				1		
2	8		6	9	1		4	3
		7					6	5
	5			1				7
	1	6	8		2	5	3	
4	2			5			1	6

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5699 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2


ತಂತ್ರಜ್ಞಾನ



ವಿಶ್ವದ ಮೊದಲ ಮರದ ರೇಡಿಯೊ!



ಚುನಾವಣೆಗೂ ಬಂತು ಕೃತಕ ಬುದ್ಧಿಮತ್ತೆ



ಕ್ಷಮಾ. ವಿ. ಭಾನುಪ್ರಕಾಶ್

ಇದು ತಂತ್ರಜ್ಞಾನದ ಕಾಲ; ಸದ್ಯಕ್ಕೆ ಎಲೆಕ್ಷನ್ ಕಾಲವೂ ಹೌದು! ಪ್ರಚಾರದ ರ‍್ಯಾಲಿಗಳು, ರೋಡ್‌ಶೋಗಳು ಅನೂಚಾನಾಗಿ ನಡೆದಿದ್ದರೂ ಈಗಿನ ಚುನಾವಣೆಯ ಜುಟ್ಟು ತಂತ್ರಜ್ಞಾನದ ಕೈಲಿದೆ ಎಂಬುದನ್ನು ಎಲ್ಲರೂ ಬಲ್ಲರು. ಅದಕ್ಕಾಗಿಯೇ ಪ್ರತಿ ಪಕ್ಷವೂ ತನ್ನ ಕಡೆಯಿಂದ ಅಧಿಕೃತವಾಗಿ, ಅನಧಿಕೃತವಾಗಿ 'ಕೀಬೋರ್ಡ್ ವಾರಿಯರ್ಸ್' ಎಂದೇ ಕರೆಯಲಾಗುವ ಪಡೆಗಳನ್ನು ನೇಮಿಸಿರುತ್ತದೆ. ಅವರು ತಮ್ಮ ಪ್ರೀತಿಪಾತ್ರ ಪಕ್ಷ ಅಥವಾ ವ್ಯಕ್ತಿಯ ಪರವಾಗಿ ಹಾಗೂ ವಿರೋಧಿಗಳ ವಿರುದ್ಧವಾಗಿ ಪುಂಖಾನುಪುಂಖವಾಗಿ ಬರಹ, ಆಡಿಯೊ, ವಿಡಿಯೊ, ಮೀಮ್, ಪಾಡ್‌ಕಾಸ್ಟ್ – ಹೀಗೆ ತಂತ್ರಜ್ಞಾನದ ವಿವಿಧ ಮಾಧ್ಯಮಗಳ ಮೂಲಕ ವಿಷಯವನ್ನು ಹರಿಬಿಡುತ್ತಾರೆ; ವೈರಲ್ ಮಾಡುತ್ತಾರೆ. ಈಗ ತರಕಾರಿ ಮಾರುವವನಿಂದ ಮೊದಲ್ಗೊಂಡು ಬಸ್ ಕಂಡಕ್ಟರ್, ಧೋಬಿ, ಸಾಫ್ಟ್‌ವೇರ್ ಎಂಜಿನಿಯರ್, ಮನೆಕೆಲಸದವರು – ಹೀಗೆ ಎಲ್ಲರ ಕೈಲೂ ಸ್ಮಾರ್ಟ್‌ಫೋನ್. ಒಂದು ಕ್ಷಣ ಬಿಡುವು ಸಿಕ್ಕರೂ ಯೂಟ್ಯೂಬ್, ವಾಟ್ಸ್ ಆ್ಯಪ್ ತೆರೆದು ದಣಿವಾರಿಸಿಕೊಳ್ಳುತ್ತಾರೆ; ಮೈಮರೆತು ಜಗತ್ತಿನ ಎಲ್ಲಾ ಮೂಲೆಗಳಿಂದ ಬರುವ ಮಾಹಿತಿಗೆ ತೆರೆದುಕೊಳ್ಳುತ್ತಾರೆ. ಇಲ್ಲಿ ಲೇಖನಗಳನ್ನು ಓದಿಯೇ ತಿಳಿದುಕೊಳ್ಳಬೇಕಿಲ್ಲವಲ್ಲ. ಅನಕ್ಷರಸ್ಥರೂ ಕೂಡ ವಿಡಿಯೊಗಳ ಮೂಲಕ ಜಗತ್ತಿನ ಆಗುಹೋಗುಗಳನ್ನು ಗಮನಿಸುತ್ತಿರುತ್ತಾರೆ; ಅದರ ಭಾಗವಾಗುತ್ತಿರುತ್ತಾರೆ. ಹಾಗಾಗಿ, ವಿಷಯಗಳನ್ನು ಜನರಿಗೆ ತಲುಪಿಸುವುದು ಎಷ್ಟು ಸುಲಭವೋ, ಅಷ್ಟೇ ಸುಲಭ ಸುಳ್ಳುಸುದ್ದಿಗಳನ್ನು ಸತ್ಯ ಎಂಬಂತೆ ಬಿಂಬಿಸುವುದು ಕೂಡ.

ಯಾರಾದರೂ ರಾಜಕಾರಣಿಯೋ ಉದ್ಯಮಿಯೋ ಏನೋ ತಪ್ಪು ಮಾಡಿ ಸಿಕ್ಕಿಬಿದ್ದಾಗ, ಅಲ್ಲಿರುವ ಫೋಟೋವನ್ನು, ಆಡಿಯೊವನ್ನು ನಕಲಿ ಎನ್ನುವುದು, ತನಗೂ ಇದಕ್ಕೂ ಸಂಬಂಧವೇ ಇಲ್ಲವೆನ್ನುವುದು ಸರ್ವೇಸಾಮಾನ್ಯವಾಗಿಬಿಟ್ಟಿದೆ. ಮೊಬೈಲ್‌ಗಳಲ್ಲಿ ಲಭ್ಯವಿರುವ ವಾಯ್ಸ್ ಆ್ಯಪ್‌ಗಳ ಮೂಲಕ, ಒಬ್ಬರ ಧ್ವನಿಯನ್ನು ಮತ್ತೊಬ್ಬರ ಧ್ವನಿಯಂತೆ ಮಾರ್ಪಡಿಸುವುದು ಕೆಲವು ಕ್ಷಣಗಳಲ್ಲಿಯೇ ಸಾಧ್ಯ. ಇನ್ನು, ಫೋಟೊ ಅಥವಾ ವಿಡಿಯೊದಲ್ಲಿ ಒಬ್ಬರ ಮುಖದ ಬದಲು ಮತ್ತೊಬ್ಬರದ್ದು ಅಂಟಿಸುವುದೂ ಕಷ್ಟದ ಕೆಲಸವೇನಲ್ಲ. ದಿನದಿನಕ್ಕೂ ಸುಧಾರಣೆ ಕಾಣುತ್ತಿರುವ ಮೊಬೈಲ್ ಆ್ಯಪ್‌ಗಳು ಇದನ್ನೆಲ್ಲ ಸುಲಭಸಾಧ್ಯವಾಗಿಸಿವೆ. ಇನ್ನು, ತಂತ್ರಜ್ಞಾನ ಜಗತ್ತಿನ ಪ್ರಬಲ ಅಸ್ತ್ರ ಎಂದರೆ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (ಎ.ಐ.). ಅನೇಕ ಬಾರಿ ಮನುಷ್ಯರ ಹಸ್ತಕ್ಷೇಪವೂ ಇಲ್ಲದಂತೆ ಕಾರ್ಯನಿರ್ವಹಿಸಬಲ್ಲ ಎ.ಐ. ತಂತ್ರಜ್ಞಾನವು ಬಳಕೆಯಾಗುವ ಎಲ್ಲಾ ಕ್ಷೇತ್ರಗಳಲ್ಲಿ ಸಂಚಲನ ಸೃಷ್ಟಿಸಿದಂತೆ ಚುನಾವಣೆಗೆ ಸಂಬಂಧಿಸಿದಂತೆಯೂ ತನ್ನ ವೈಶಿಷ್ಟ್ಯವನ್ನು ತೋರಿದೆ. ಎ.ಐ. ಆಟೋಬಾಟ್‌ಗಳು, ಚ್ಯಾಟ್‌ಜಿಪಿಟಿಯಂತಹ ತಂತ್ರಜ್ಞಾನಗಳ ಮೂಲಕ ತ್ವರಿತ ಪ್ರತಿಕ್ರಿಯೆ ನೀಡಲು, ಭಾರತವೂ ಸೇರಿದಂತೆ ಅನೇಕ ದೇಶಗಳ ರಾಜಕೀಯ ಪಕ್ಷಗಳ ಸೈಬರ್‌ಸೆಲ್‌ಗಳು ಈಗಾಗಲೇ ಪ್ರಾರಂಭಿಸಿವೆಯಂತೆ. ಒಬ್ಬರ ಪ್ರಣಾಳಿಕೆಗೋ, ಪ್ರಚಾರದ ಪರಿಗೋ ನೀಡುವ ಪ್ರತಿಕ್ರಿಯೆಗೆ ತಗಲುವ ಸಮಯ ಕಡಿಮೆಯಾಗಿದ್ದು, ಒಂದು ಪ್ರತಿಕ್ರಿಯೆಯು ಮತ್ತೊಂದು ಕ್ರಿಯೆಯನ್ನು ತತ್‌ಕ್ಷಣವೇ ಹುಟ್ಟುಹಾಕುತ್ತಿದೆ. ಇದರ ಪರಿಣಾಮವಾಗಿ ರಾಜಕೀಯ ಕ್ಷೇತ್ರದಲ್ಲಿ ಹೊಸ ಬೆಳವಣಿಗೆಗಳ ವೇಗ ಏರುತ್ತಲೇ ಸಾಗಿದೆ. ರಾಜಕಾರಣಿಗಳು ತಮ್ಮ ಭಾಷಣ ತಯಾರಿಗೂ ಕೂಡ ಯಾರ ಮೇಲೂ ಅವಲಂಬಿತರಾಗಬೇಕಿಲ್ಲ. ಎ.ಐ. ಇದೆಯಲ್ಲ? ಪ್ರಾದೇಶಿಕ ವಿಶೇಷತೆಗಳು, ಈ ಬಾರಿಯ ಸಾಧನೆ, ಮುಂದಿನ ಬಾರಿಗೆ ಬೇಕಿರುವ ಆಶ್ವಾಸನೆ, ಜೊತೆಗೊಂದಷ್ಟು ಕವನ, ಸೂಕ್ತಿ, ಹಾಸ್ಯಚಟಾಕಿ – ಹೀಗೆ ಎಲ್ಲವನ್ನೂ ಸೇರಿಸಿ ಭಾಷಣವನ್ನೂ ತಯಾರಿಸುತ್ತದೆ. ಈ ತಂತ್ರಜ್ಞಾನ. ವಿರೋಧಿಗಳ ಪ್ರಣಾಳಿಕೆಯನ್ನು ಎ.ಐ.ಗೆ ನೀಡಿದರೆ, ಅದನ್ನು ಕೂಲಂಕಷವಾಗಿ ವಿಶ್ಲೇಷಿಸಿ, ಬಿಡಿಬಿಡಿಯಾಗಿ ಅವಲೋಕಿಸಿ, ಅದರಲ್ಲಿರುವ ಸಮಸ್ಯೆಗಳನ್ನು, ಲೂಪ್‌ಹೋಲ್‌ಗಳನ್ನು ಕಂಡುಹಿಡಿದು ರಿಪೋರ್ಟ್ ಕೂಡ ಸಿದ್ಧಮಾಡಲು ಸಾಧ್ಯ. ಅದನ್ನು ಭಾಷಣದ ಭಾಗವಾಗಿಸಿಕೊಂಡರೆ, ಎದುರಾಳಿಗೆ ಮರ್ಮಾಘಾತವೇ ಸರಿ.

ಇನ್ನು ಪ್ರಣಾಳಿಕೆಯನ್ನು ಸಿದ್ಧಪಡಿಸಲು ಕೂಡ ಇಂತಹ ಎ.ಐ.ಗಳ ಸಹಾಯ ಪಡೆಯಬಹುದು. ಅದೂ, ಕೇವಲ ಆಶ್ವಾಸನೆಗಳ ಪಟ್ಟಿ ಸಿದ್ಧ ಮಾಡಲು ಮಾತ್ರವಲ್ಲ, ವಿನ್ಯಾಸರಚನೆ, ಪ್ರದರ್ಶನ ವಿಶೇಷತೆಗಳು ಇತ್ಯಾದಿ ಇತರ ಪ್ರಮುಖ ಅಂಶಗಳನ್ನೂ ಎ.ಐ.ನ ಮೂಲಕ ನಿರ್ವಹಿಸಬಹುದು. ಟ್ವಿಟರ್, ಫೇಸ್‌ಬುಕ್, ಇನ್ಸ್ಟಾಗ್ರಾಮ್‌ನಂತಹ ಸೋಷಿಯಲ್ ಮೀಡಿಯಾದಲ್ಲಿ ಯಾವ ರೀತಿಯ ವಿಷಯಗಳು ಟ್ರೆಂಡಿಂಗ್‌ನಲ್ಲಿವೆ, ಯಾವ ಬಗೆಯ ವಿಡಿಯೊಗಳನ್ನು ಜನರು ಸ್ಕಿಪ್ ಮಾಡದೆ ನೋಡುತ್ತಾರೆ, ಯಾರ ಮಾತುಗಳು ಹೆಚ್ಚು ವೈರಲ್ ಆದವು, ಯಾವ ಪಕ್ಷದ ಬಗ್ಗೆ, ಯಾವ ಧರ್ಮದ ಬಗ್ಗೆ, ಯಾವ ಸಿದ್ಧಾಂತದ ಬಗ್ಗೆ ಹೆಚ್ಚು ಜನರಿಗೆ ಒಲವಿದೆ ಎಂಬಂತಹ ಸೂಕ್ಷ್ಮ ವಿಷಯಗಳನ್ನು ಆಳವಾಗಿ ವಿಶ್ಲೇಷಣೆ ಮಾಡುತ್ತದೆ ಎ.ಐ. ತಂತ್ರಜ್ಞಾನ. ಅದು ಸಿದ್ಧಪಡಿಸುವ ರಿಪೋರ್ಟ್‌ಅನ್ನು ಆಧರಿಸಿ, ಅದು ತಮ್ಮ ರಾಜಕೀಯ ಪಕ್ಷದ ಪರವಾಗಿದೆಯೇ ಅಥವಾ ವಿರುದ್ಧವಾಗಿದೆಯೇ ಎಂಬುದನ್ನು ಅಂದಾಜಿಸಬಹುದು; ಅದರ ಆಧಾರದ ಮೇಲೆ, ಈಗ ಟ್ರೆಂಡಿಂಗ್‌ನಲ್ಲಿರುವಂತಹ ವಿಷಯವನ್ನು ಮತ್ತಷ್ಟು ಹಬ್ಬಿಸು ಅಂತಲೋ, ಅಥವಾ ಅದಕ್ಕೆ ವಿರೋಧವಾಗಿ ಕೆಲಸ ಮಾಡು ಅಂತಲೋ ಈ ತಂತ್ರಜ್ಞಾನದ ಅನೇಕ ವಿಭಾಗಗಳನ್ನು ಪ್ರೋಗ್ರಾಮ್ ಮಾಡಬಹುದು. ಇದು ಎಲ್ಲ ಪಕ್ಷಗಳೂ ಮಾಡುವುದರಿಂದ ಸೋಶಿಯಲ್ ಮೀಡಿಯಾ ಲೋಕದಲ್ಲಿ, ಜನಸಾಮಾನ್ಯರಿಗೆ ಅರ್ಥವಾಗದಂತೆ ಒಂದು ಸಂಚಲನ ಸೃಷ್ಟಿಯಾಗಿರುತ್ತದೆ.

ಟಿ.ವಿ ಮಾಧ್ಯಮವಾಗಲೀ, ಪತ್ರಿಕೆಗಳೇ ಆಗಲೀ, ಕೆಲವನ್ನು ಹೊರತುಪಡಿಸಿ, ಹಲವು ಚಾನೆಲ್‌ಗಳೂ ಪತ್ರಿಕೆಗಳೂ ಪತ್ರಿಕೋದ್ಯಮದ ಮೂಲನಂಬಿಕೆಯಂತೆ 'ನ್ಯೂಟ್ರಲ್' ಆಗಿರುವುದನ್ನು ಬಿಟ್ಟು, ಒಂದು ಸಿದ್ಧಾಂತ ಅಥವಾ ಪಕ್ಷದ ಕಡೆ ವಾಲುವುದನ್ನು ಅದರ ಸಂದರ್ಶನಗಳೂ ಲೇಖನಗಳೂ ಕಾರ್ಯಕ್ರಮಗಳೂ ಸಾರಿ ಸಾರಿ ಹೇಳುತ್ತವೆ. ಅವುಗಳ ಪ್ರತಿ ನಡೆಗೂ ಸೂಕ್ತ ಸಾಕ್ಷ್ಯಾಧಾರ ಇರಲಿಕ್ಕೂ ಸಾಕು. ಆದರೆ, 'ಅದರಲ್ಲಿ ಸತ್ಯ,ಯಾವುದು, ತಂತ್ರಜ್ಞಾನವನ್ನು ಬಳಸಿ ತಿರುಚಲಾಗಿರುವುದು ಯಾವುದು ಎಂದು ಹೇಳುವುದು ಹೇಗೆ?' ಅದೇ ಮಿಲಿಯನ್ ಡಾಲರ್ ಪ್ರಶ್ನೆ. ಇದಕ್ಕೆ ಉತ್ತರವನ್ನು ಕಂಡುಕೊಳ್ಳಲು ಕೆಲವು ವೆಬ್‌ಸೈಟ್‌ಗಳು ಸಹಾಯ ಮಾಡಬಲ್ಲವು; ಕೆಲವು ಸಾಫ್ಟ್‌ವೇರ್‌ಗಳು ಕೂಡ. ಇಲ್ಲಿ ಕೂಡ ಆರ್ಟಿಫೀಶಿಯಲ್ ಇಂಟೆಲಿಜೆನ್ಸ್ ನಮ್ಮ ಸಹಾಯಕ್ಕೆ ಬರುತ್ತದೆ. ಅದರ ಮೂಲಕ ಫೇಕ್‌ನ್ಯೂಸ್ ಯಾವುದು, ಸತ್ಯ ಯಾವುದು ಎಂಬುದನ್ನು ಅರಿಯಬಹುದಾದರೂ, ಅದಕ್ಕೂ ಮುನ್ನವೇ ಫೇಕ್‌ನ್ಯೂಸ್‌ಗಳು ವಾಟ್ಸ್ ಆ್ಯಪ್ 'ವಿಶ್ವವಿದ್ಯಾಲಯ'ದ ಮೂಲಕ ಮನೆಮನೆಗೂ ತಲುಪಿಯಾಗಿರುತ್ತದೆ! ಅದು 'ಫೇಕ್' ಎಂಬ ಸತ್ಯ ಅಷ್ಟು ವೈರಲ್ ಆಗುವುದೇ ಇಲ್ಲ. ಹಾಗಾಗಿ, ಬದಲಾಗುತ್ತಿರುವ ರಾಜಕೀಯ ವಾತಾವರಣದಲ್ಲಿ, ನಮ್ಮ ವಿವೇಚನೆಯನ್ನು ಬಳಸಿ, ವಿವರಗಳನ್ನು ಆಳವಾಗಿ ವಿಮರ್ಶಿಸಿ, ಆ ಬಳಿಕವಷ್ಟೆ ನಿರ್ಧಾರಕ್ಕೆ ಬರುವ ಬುದ್ಧಿ ನಮ್ಮ ಕೈಲಿದ್ದರೆ ನಮಗೇ ಒಳಿತು.



ಸಾಂಕೇತಿಕ ಚಿತ್ರ

ನೇಸರ ಕಾಡನಕುಪ್ಪೆ

1896ರಲ್ಲಿ ಮಾರ್ಕೋನಿ ರೇಡಿಯೊವನ್ನು ಕಂಡುಹಿಡಿದಾಗ ಅದು ಸಾಧಾರಣವೂ ಸರಳವೂ ಆಗಿತ್ತು. ಅದರ ಬಹುತೇಕ ಒಳ-ಹೊರ ಸಾಮಗ್ರಿಗಳಲ್ಲಿ ಲೋಹ, ಅಲೋಹಗಳ ಬಳಕೆಯಾಗಿತ್ತು. ಹೊರಮೈ ಮಾತ್ರ ಮರದಿಂದ ನಿರ್ಮಾಣವಾಗಿತ್ತು. ಇದೀಗ ಸ್ವಾರಸ್ಯಕರ ಸಂಶೋಧನೆಯೊಂದು ನಡೆದಿದೆ. ಸ್ವೀಡನ್‌ನ ಲಿಂಕೋಪಿಂಗ್ ವಿಶ್ವವಿದ್ಯಾಲಯ ಹಾಗೂ ಕೆಟಿಎಚ್ ರಾಯಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿಜ್ಞಾನಿಗಳು ಸಂಪೂರ್ಣವಾಗಿ ಮರದಿಂದ ಕಾರ್ಯನಿರ್ವಹಿಸುವ ವಿಶ್ವದ ಮೊದಲ ಟ್ರಾನ್ಸಿಸ್ಟರ್ ಅನ್ನು ನಿರ್ಮಿಸಿ ಅಚ್ಚರಿ ಮೂಡಿಸಿದ್ದಾರೆ.

ಒಣಗಿದ ಮರದ ಮೂಲಕ ವಿದ್ಯುತ್ ಪ್ರವಹಿಸುವುದಿಲ್ಲ ಎನ್ನುವುದು ಎಲ್ಲರಿಗೂ ತಿಳಿದ ವಿಷಯವೇ. ಆದರೆ, ಮರದ ಮೂಲಕವೂ ವಿದ್ಯುತ್ ಸಂಜ್ಞೆಗಳನ್ನು ರವಾನೆ ಮಾಡಬಹುದು ಎನ್ನುವುದು ಈ ವಿಜ್ಞಾನಿಗಳ ವಾದ. ಅಮೆರಿಕ ಮೂಲದ ಬಲ್ಸಾ ಮರವನ್ನು ಇದಕ್ಕಾಗಿ ಆಯ್ಕೆ ಮಾಡಿಕೊಂಡು ಅದಕ್ಕೊಂದಿಷ್ಟು ಮಾರ್ಪಾಟುಗಳನ್ನು ಮಾಡಿ ವಿದ್ಯುತ್ ವಾಹಕವಾಗಿ ಪರಿವರ್ತಿಸಿದ್ದಾರೆ. ಬಳಿಕ ಅದರ ಮೂಲಕ ರೇಡಿಯೋ ಸಂಜ್ಞೆಗಳನ್ನು ಬಿತ್ತರಿಸಿ ಒಂದು ಪರಿಸರಪ್ರೇಮಿ ಮಾದರಿಯನ್ನು ರೂಪಿಸಿದ್ದಾರೆ.

ಥಾರ್ ಹೈರ್ಡಾಲ್ ರ 'ಕೊಂಟಿಕಿ ಎಕ್ಸ್ ಪಿಡಿಷನ್' ಕೃತಿಯನ್ನು ಓದಿದವರಿಗೆ ಬಲ್ಸಾ ಮರದ ಪರಿಚಯ ಇರಬಹುದು. ಈ ಮರದಿಂದ ತಯಾರಿಸಿದ ತೆಪ್ಪದಲ್ಲಿ ಪೆಸಿಫಿಕ್ ಮಹಾಸಾಗರವನ್ನು ಸಾಹಸಿಗಳ ತಂಡವೊಂದು ದಾಟುತ್ತದೆ. ಬಲ್ಸಾ ಮರವು ಅತಿ ಹಗುರವೂ ಅತಿ ಗಟ್ಟಿಯೂ ಆದ ಗುಣಲಕ್ಷಣಗಳುಳ್ಳ ಮರವಾಗಿ ಈ ಕೃತಿಯ ಒಂದು ಪಾತ್ರವೇ ಆಗಿದೆ. (ಈ ಕೃತಿಯನ್ನು ಪ್ರದೀಪ ಕೆಂಜಿಗೆ ಅವರು 'ಅದ್ಭುತ ಯಾನ'ವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ.)

ಸ್ವೀಡನ್‌ನ ವಿಜ್ಞಾನಿಗಳ ತಂಡವು ಇದೇ ಬಲ್ಸಾ ಮರವನ್ನು ತಮ್ಮ ನೂತನ ಸಂಶೋಧನೆಯನ್ನು ಸಾಬೀತುಗೊಳಿಸಲು ಆಯ್ಕೆ ಮಾಡಿಕೊಂಡಿದ್ದಾರೆ. ಸಾಮಾನ್ಯವಾಗಿ ಯಾವುದೇ ಮರದ ತುಂಡೊಂದನ್ನು ತೆಗೆದುಕೊಂಡರೂ ಅದರಲ್ಲಿ ಸಣ್ಣ ಸಣ್ಣನೆಯ ಚುಕ್ಕಿ (ಗ್ರೈನ್) ಮಾದರಿಯ ರಚನೆ ಇರುತ್ತದೆ. ಇದು ಮರದ ಗುಣಲಕ್ಷಣವನ್ನು ನಿರ್ಧರಿಸುತ್ತದೆ. ಈ ಚುಕ್ಕಿಗಳ ಸಾಂದ್ರತೆಯ ಮೇಲೆ ಮರದ ಗಟ್ಟಿತನ ನಿರ್ಧಾರವಾಗುತ್ತದೆ. ಆದರೆ ಈ ಚುಕ್ಕಿಗಳು ಮರವನ್ನು ವಿದ್ಯುತ್ ಅವಾಹಕವಾಗಿಯೂ ಮಾಡುತ್ತದೆ. ಆದರೆ, ಬಲ್ಸಾ ಮಾತ್ರ ಇದಕ್ಕೆ ವಿರುದ್ಧ. ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ ಪ್ರಮಾಣದಲ್ಲಿ ಬಲ್ಸಾ ಮರದಲ್ಲಿ ಚುಕ್ಕಿಗಳಿರುತ್ತವೆ. ಈ ಮರವನ್ನು ಆಯ್ಕೆ ಮಾಡಿಕೊಂಡು ಅತಿ ತೆಳುವಾದ ಪದರಗಳನ್ನು ಸಿದ್ಧಪಡಿಸಿಕೊಂಡು ಟ್ರಾನ್ಸಿಸ್ಟರ್‌ಗೆ ವೇದಿಕೆಯನ್ನು ನಿರ್ಮಿಸಿಕೊಂಡಿದ್ದಾರೆ.

'ತೆಳುವಾದ ಬಲ್ಸಾ ಪದರಗಳ ಮೇಲೆ 'ಪಿಡಾಟ್: ಪಿಎಸ್‌ಎಸ್' ಎನ್ನುವ ಪಾಲಿಮರ್ ರಾಸಾಯನಿಕವನ್ನು ಲೇಪಿಸಿದೆವು. ಈ ಲೇಪನದಿಂದಾಗಿ ಬಲ್ಸಾ ಮರವು ನಿರಂತರವಾಗಿ ವಿದ್ಯುತ್ ಅನ್ನು ತನ್ನ ಮೂಲಕ ಹಾದು ಹೋಗಲು ಅವಕಾಶ ಮಾಡಿಕೊಟ್ಟಿತು. ಈ ಟ್ರಾನ್ಸಿಸ್ಟರ್ ತಯಾರಾದ ಕೂಡಲೇ ನಾವು ರೇಡಿಯೋ ಸಂಜ್ಞೆಗಳನ್ನು ಇದರ ಮೂಲಕ ಹಾಯಿಸಿ ಧ್ವನಿಯನ್ನು ಪಡೆಯಲು ಯಶಸ್ವಿಯಾಗಿದ್ದೇವೆ' ಎಂದು ಜೈವಿಕ ಎಲೆಕ್ಟ್ರಾನಿಕ್ಸ್ ಹಿರಿಯ ಸಹ ಪ್ರಾಧ್ಯಾಪಕ ಐಸಾಕ್ ಎಂಗ್ವಿಸ್ಟ್ ತಿಳಿಸಿದ್ದಾರೆ.

'ಈ ಅನ್ವೇಷಣೆ ಕೇವಲ ರೇಡಿಯೋಗಳ ನಿರ್ಮಾಣಕ್ಕಷ್ಟೆ ಸೀಮಿತ ಮಾಡಿಕೊಳ್ಳಕೂಡದು. ನಾವು ಇಂದು ಬಳಸುವ ಬಹುತೇಕ ಎಲ್ಲ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಸಿಲಿಕಾನ್ ಆಧರಿತ ಚಿಪ್‌ಗಳ ಬಳಕೆ ಇರುತ್ತದೆ. ಅಲ್ಲದೇ, ಕಂಡಕ್ಟರ್‌ಗಳು, ಸೆಮಿಕಂಡಕ್ಟರ್‌ಗಳಲ್ಲಿ ಲೋಹ ಹಾಗೂ ರಾಸಾಯನಿಕಗಳ ಬಳಕೆ ಇರುತ್ತದೆ. ಇವೆಲ್ಲವೂ ಪರಿಸರಕ್ಕೆ ಹಾನಿ ಮಾಡುವಂಥವು. ನಮ್ಮ ಈ ಸಂಶೋಧನೆಯಿಂದ ಲೋಹ ಹಾಗೂ ರಾಸಾಯನಿಕ ಬಳಕೆಯನ್ನು ಕಡಿಮೆ ಮಾಡಬಹುದು. ಇದರಿಂದ ಪರಿಸರದ ಮೇಲಿನ ಹಾನಿ ಕ್ಷೀಣವಾಗುತ್ತದೆ' ಎನ್ನುತ್ತಾರೆ ಐಸಾಕ್.

ಬಲ್ಸಾ ಮರದಂತೆ ಇನ್ನೂ ಅನೇಕ ಜಾತಿಯ ಮರಗಳಿವೆ. ಅವುಗಳನ್ನೂ ಈ ಟ್ರಾನ್ಸಿಸ್ಟರ್ ನಿರ್ಮಾಣಕ್ಕೆ ಬಳಸಬಹುದು. ಈ ಬಗೆಯ ಮರಗಳನ್ನು ನೆಡುತೋಪುಗಳಲ್ಲಿ ಕೃತಕವಾಗಿ ಬೆಳೆಸಿ ಬಳಿಕ ಬಳಸಬಹುದು. ಇದರಿಂದ ಪರಿಸರದಲ್ಲಿ ಆಮ್ಲಜನಕದ ಪ್ರಮಾಣವೂ ಹೆಚ್ಚುತ್ತದೆ ಎಂದು ವಿಜ್ಞಾನಿಗಳು ತಮ್ಮ ಸಂಶೋಧನೆಯನ್ನು ವ್ಯಾಖ್ಯಾನಿಸಿದ್ದಾರೆ.

ಮರದ ಟ್ರಾನ್ಸಿಸ್ಟರ್‌ಗೆ ಅದರದೇ ಆದ ವೇಗ, ಬಾಳಿಕೆಯಂತಹ ಇತಿಮಿತಿಗಳಿರಬಹುದು. ಈ ತಂತ್ರಜ್ಞಾನವನ್ನು ಮತ್ತಷ್ಟು ಸುಧಾರಿಸಿ ಇತಿಮಿತಿಗಳಿಂದ ಆಚೆ ಬರಲು ಸಾಧ್ಯವಿದೆ ಎಂದು ವಿಜ್ಞಾನಿಗಳು ಪರಿಹಾರೋಪಾಯವನ್ನೂ ಸೂಚಿಸಿದ್ದಾರೆ.

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು


PHYSICS

79) When a potential difference of 10^3V is applied between A and B, a charge of 0.75 mC is value of C is (in μ F)

Expln- In given circuit, 2 μ F & 2 μ F capacitors are in series

$$\therefore C_s = \frac{2\times2}{2+2} = 1\mu F$$

So, equivalent circuit will be



Now C μ F and 1 μ F are in parallel which is in series with 1 μ F

$$\therefore C_{eff} = \frac{(C+1)\times1}{(C+1)+1} = \frac{C+1}{C+2}$$


Given, $q = 0.75\times10^{-3} C = 750\times10^{-6} C, V = 10^3 V$

So, $C_{eff} = \frac{q}{V}$

$$\Rightarrow \frac{C+1}{C+2} = \frac{750\times10^{-6}}{10^3} = 750\times10^{-3} F = 0.75\ \mu F$$

$$\Rightarrow 0.75 = \frac{C+1}{C+2} \Rightarrow \frac{3}{4} = \frac{C+1}{C+2} \Rightarrow 3C+6 = 4C+4 \Rightarrow C = 2\mu F$$

80) In the circuit diagram, heat produces in R, 2R and 1.5 R are in the ratio of



(a) 4 : 2 : 3 **(b) 8 : 4 : 27**
(c) 2 : 4 : 3 **(d) 27 : 8 : 4**

Ans:- (b)

Expln– We have $I_1 = \frac{I\times 2R}{3R} = \frac{2I}{3}$

$$\therefore H_1 = I_1^2 R = \frac{4I^2}{9}\times R \text{ ....(i)}$$

Also, $I_2 = \frac{I\times R}{3R} = \frac{I}{3}$

$$\therefore H_2 = I_2^2(2R) = \frac{I^2}{9}\times 2R \text{ ....(ii)}$$

and $H_3 = I^2(1.5\ R)$ .... (iii)

From Eqns. (i), (ii) and (iii),

$$H_1 : H_2 : H_3 = \frac{4I^2}{9}\times R : \frac{I^2}{9}\times 2R : I^2 \times 1.5\ R$$


$$= \frac{4}{9} : \frac{2}{9} : 1.5 = 4:2:13.5 = 8:4:27$$

81) The output of an OR gate is connected to both the inputs of a NAND gate. The combination will serve as....................

(a) AND gate (b) NOT gate
(c) NAND gate (d) NOR gate

Ans:- (d)

Expln- The given situation can be shown as



The output $Y' = \overline{A+B}$ is the output of NOR gate.

82) White light reflected from a soap film (RI=1.5) has a maxima at 600 nm and a minima at 450 nm with no minimum in between. Then the thickness of the film is

(a) 1 **(b) 2**
(c) 3 **(d) 4**

Ans:- (c)

Expln- We know for maxima

$$2\mu t \cos r = \frac{(2n+1)\lambda_1}{2} \text{ ....(i)}$$

For minima $2\mu t \cos r = (n+1)\lambda_2$ ...(ii)

Given here, $\lambda_1 = 600$ nm and $\lambda_2 = 450$ nm

Dividing Eq. (i) by (ii) and substituting values of λ_1 and λ_2, we get

$$\frac{(2n+1)\lambda_1}{2(n+1)\lambda_2} = 1$$

$$\Rightarrow 90n + 90 = 60n + 60$$

$$30n = 30 \Rightarrow n = 1$$

Using one of the equation, we get

In given condition $2\mu t = (2n+1)\frac{\lambda}{2}$

$$2\times1.5\times t = (2\times1+1)\frac{600}{2}$$

$$3t = \frac{3\times600}{2}$$

$$\Rightarrow t = 300nm = 3\times10^{-6} m = 3units$$

83) A small oil drop of mass 10^{-6} kg is hanging in at rest between two plates separated by 1 mm having a potential difference of 500 V. The charge on the drop is (g = 10 ms^{-2})

(a) 2×10^{-9} C **(b) 2×10^{-11} C**
(c) 2×10^{-6} C **(d) 2×10^{-9} C**

Ans:- (b)

Expn:-Given, the drop rests between the two plates

$$\therefore qE = mg$$

$$(or)\ q\frac{V}{r} = mg \quad \left(\because E = \frac{V}{r}\right)$$

$$\Rightarrow q = \frac{mgr}{V}$$

Here, m = 10^{-6} kg, g = 10 m/s^2, r = 1 mm = 10^{-3} m & V = 500 V

Substituting all the values, we get

$$q = \frac{10^{-6}\times10\times10^{-3}}{500} = 2\times10^{-11}\ C$$

MATHEMATICS

MULTIPLE CHOICE QUESTIONS

81) A bag contains 3 white, 4 black, 2 red balls. If 2 balls are drawn at random, then the probability that both the balls are white is.........

(A) $\frac{1}{18}$ (B) $\frac{1}{36}$
(C) $\frac{1}{12}$ (D) $\frac{1}{24}$

Ans : (C) $\frac{1}{12}$

Expln:- Total no. of balls = 9.

Any two can be chosen in $9C_2$ ways.

From 3 white, any 2 white balls can be chosen in $3C_2$ ways.

$$\therefore \text{Required probability} = \frac{3C_2}{9C_2} = \frac{3}{\frac{9.8}{1.2}} = \frac{3}{36} = \frac{1}{12}.$$

82) The Contrapositive statement of the statement " If *x* is a prime number, then *x* is odd" is

A) If *x* is not a Prime number, then *x* is not odd
B) If *x* is a Prime number, then *x* is not odd
C) If *x* is not a Prime number, then *x* is odd
D) If *x* is not odd, then *x* is not a prime number

Ans:-D

Expln:- Let P : x is a prime number
Q : let x be odd
Contrapositive statement is $\sim q \rightarrow \sim p$

i.e. if x is not an odd number then x is not a prime number

83) The distance of the point(-2, 4, -5) from the line $\frac{x+3}{3} = \frac{y-4}{5} = \frac{z-4}{6}$ is

(A) $\frac{\sqrt{37}}{10}$ (B) $\sqrt{\frac{37}{10}}$
(C) $\frac{37}{\sqrt{10}}$ (D) $\frac{37}{10}$

Ans : (B) $\sqrt{\frac{37}{10}}$

Expln :–Any point on the line given is of the form 3r – 3, 5r + 4, 6r – 8

Let R be the foot of ⊥r from P(–2, 4, –5) on the line given Then R = (3r – 3, 5r + 4, 6r – 8)

$\therefore 3(3r-1)+5r+4, 6r-8$

The direction cosinnes of the line PR are proportional to 3r – 1, 5r, 6r – 3 PR is ⊥r to the line given

$$\therefore 3(3r-1) + 5 \times 5r + 6(6r-3) = 0$$

ie $9r - 3 + 25r + 36r - 18 = 0$

$70r = 21 \therefore r = \frac{21}{70} = \frac{3}{10}$

$\therefore$ The coordinates of R are $\left(\frac{9}{10}-3, \frac{15}{10}+4, \frac{18}{10}-8\right)$

i.e, $R = \left(-\frac{21}{10}, \frac{55}{10}, \frac{62}{10}\right)$

The distance between P(–2, 4, –5) and R $\left(-\frac{21}{10}, \frac{55}{10}, \frac{62}{10}\right)^2$

is given by $PR^2 = \left(\frac{21}{10}+2\right)^2 + \left(\frac{55}{10}-4\right)^2 + \left(-\frac{62}{10}+5\right)^2$

$$= \frac{1}{100} + \frac{15^2}{100} + \frac{12^2}{100} = \frac{1+225+144}{100} = \frac{370}{100} = \frac{37}{10}$$

$$PR = \sqrt{\frac{37}{10}}$$

84) If two sets A and B have 99 elements in common, then the number of elements common to the sets A × B and B × A is

(A) 2^{99} (B) 99^2
(C) 100 (D) 18

Ans: (B) 99^2

Expln:- Let A and B be two non-empty sets having n elements in common.

Then A×A, B× A will have n^2 elements in common.

85) If f (x) = e^x and g (x) = log e^x, then which of the following is true?

(A) f {g(x)} ≠ g {f(x)}
(B) f {g(x)} = g {f(x)}
(C) f {g(x)} + g {f(x)} = 0
(D) f {g(x)} – g {f(x)} = 1

Ans: (B) f {g(x)} = g {f(x)}

Expln:- f (x) = e^x, g (x) = log e^x = x i.e., g (x) = x
f {g(x)} = f (x) = e^x
g {f(x)} = g (e^x) = e^x
∴ f {g(x)} = g {f(x)}.

86) The number of bijective functions from the set A to itself, if A contains 108 elements is

(A) 108 (B) 108!
(C) $(108)^2$ (D) 2^{108}

Ans: (B) 108!

Expln:-The number of bijections from set A to itself is 108!

87) $\int_1^e \log x\ dx =$

(A) 1 (B) e – 1 ***(Contd...)***